KARNATAKA

Kavya Kalanidhi Series.

# VATSA RAJANA KATHE

BY

KRISHNARAJA WODEYAR III.

MAHARAJA OF MYSORE.

**VOLUME I.**

ಶ್ರೀಮನ್ಮಹೀಶೂರ ಸಂಸ್ಥಾನಾಧೀಶ

ಮುಮ್ಮಡಿ ಕೃಷ್ಣರಾಜ ಒಡೆಯರವರಿಂದ

ವಿರಚಿತವಾದ

# ವತ್ಸರಾಜನ ಕಥೆ.

ಪ್ರಥಮ ಭಾಗ.

EDITED BY

**S. G. NARASIMHACHAR**

AND

**M. A. RAMANUJA IYENGAR.**

K83
N46V
pt I

THE G. T. A. PRESS, MYSORE.

1904.

UNIVERSAL
LIBRARY
OU_198970
UNIVERSAL
LIBRARY

ಕರ್ಣಾಟಕ ಕಾವ್ಯಕಲಾನಿಧಿ. ನಂ|| ೭೭.

ಶ್ರೀಮನ್ಮಹೀಶೂರ ಮಹಾಸಂಸ್ಥಾನಾಧೀಶ

ಶ್ರೀಮದ್ರಾಜಾಧಿರಾಜ

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರು

ಲೋಕೋಪಕಾರಾರ್ಥವಾಗಿ ನವರಸಭರಿತವಾಗಿ

ಕರ್ಣಾಟಕ ಭಾಷೆಯಿಂದ ವಿರಚಿಸಿದ

ಶ್ರೀ ಕೃಷ್ಣರಾಜಸೂಕ್ತಿ ಮುಕ್ತಾವಳಿ ಗ್ರಂಥದೊಳ್

# ವತ್ಸರಾಜನ ಕಥೆ.

ಪ್ರಥಮಭಾಗಂ (ಅಧ್ಯಾಯ, ೧-೨೦)

ಶ್ರೀಮನ್ಮಹಾರಾಜಾಧಿರಾಜ

ಶ್ರೀ ಕೃಷ್ಣರಾಜೇಂದ್ರ ಒಡೆಯರವರ

ಅಪ್ಪಣೆಯಂ ಪಡೆದು

ಎಸ್. ಜಿ. ನರಸಿಂಹಾಚಾರ್ಯ್ಯರ್,

ಗವರ್ನಮೆಂಟ್ ಕನ್ನಡ ಟ್ರಾನ್ಸ್ಲೇಟರ್, ಎಜುಕೇಷನ್ ಡಿಪಾರ್ಟ್ಮೆಂಟು, ಮೈಸೂರು.

ಎಂ. ಎ. ರಾಮಾನುಜಯ್ಯಂಗಾರ್,

ವೆಸ್ಲಿಯನ್ ಹೈಸ್ಕೂಲ್ ಅ. ಮಾಸ್ಟರ್ ಮೈಸೂರು.

ಇವರುಗಳಿಂದ ಪರಿಶೋಧಿತವಾಗಿ

ಮೈಸೂರು— ಜಿ. ಟಿ. ಎ. ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

೧೯೦೪

# ವಿಷಯಾನುಕ್ರಮಣಿಕೆ.

ಪುಟ.

ಪ್ರಥಮ ಗುಚ್ಛಂ. ... .. ... ೧—೭

ವತ್ಸರಾಜನ ದೇಶವರ್ಣನ, ಕೌಶಾಂಬೀನಗರಿಗೆ ವಿಕ್ರಮಬಾಹುರಾಯನ ಪುರೋಹಿತನ ಪ್ರವೇಶ, ಅವನೊಡನೆ ಯೌಗಂಧರಾಯಣನೆಂಬ ಮಂತ್ರಿಯ ಪತ್ರಿಕೆಯಿಂ ತೆಗೆದುಕೊಂಡು ಚಾರನ ಸಿಂಹಳದೇಶ ಪ್ರವೇಶ, ಪುರೋಹಿತನ ವಚನದಿಂದ ಸಭಾಮಧ್ಯಕ್ಕೆ ಚಾರನ ಕರೆಯೆಂದು ಮಂತ್ರಿಗೆ ವಿಕ್ರಮಬಾಹುರಾಯನು ಆಜ್ಞೆಯನ್ನಿತ್ತ ವೃತ್ತಾಂತಕಥನ ಸಹ.

ದ್ವಿತೀಯ ಗುಚ್ಛಂ. ... ... ... ೮—೧೪

ವಿಕ್ರಮಬಾಹುರಾಯನು ಅಂತಃಪುರವಂ ಪೊಂದಿ ಪತ್ನಿಯಿಂದೊಡಗೂಡಿ, ತನ್ನ ಮಂತ್ರಿ ಪುರೋಹಿತರಂ ಕರೆಯಿಸಿ, ಕೌಶಾಂಬೀನಗರಿಯಿಂದ ಬಂದ ಯೌಗಂಧರಾಯಣನ ಪತ್ರಿಕೆಯ ಅಭಿಪ್ರಾಯವನ್ನು ಆಲೋಚಿಸಿ, ರತ್ನಾವಳಿಯನ್ನು ವತ್ಸರಾಜನಿಗೆ ಕೊಡುವಲ್ಲಿ ಪುತ್ರರಾದ ವಿಂದಾನುವಿಂದರ ಸಮ್ಮತಿಯಿಂ ಕೇಳಬೇಕೆಂದು ಇಚ್ಛೈಸುತ್ತಿರ್ದ ವೃತ್ತಾಂತ.

ತೃತೀಯ ಗುಚ್ಛಂ. ... ... ... ೧೫—೨೨

ರತ್ನಾವಳಿಯು ಸರ್ವಾಲಂಕಾರಭೂಷಿತಳಾಗಿ ಹಡಗನ್ನೇರಿ ಪೋಗುತ್ತ, ಮಧ್ಯಮಾರ್ಗದಲ್ಲಿ ಹಡಗು ಪರ್ವತಕ್ಕೆ ತಗಲಿ ಚೂರ್ಣವಾಗಲಾಗಿ, ದೈವಯೋಗದಿಂದ ದೊರಕಿದ ಹಲಗೆಯಲ್ಲಿ ರತ್ನಾವಳಿಯು ಕುಳಿತು ಸಮುದ್ರದಲ್ಲಿ ತೇಲುತ್ತ ಹಂಬಲಿಸುತ್ತಿರ್ದಳೆಂಬ ವೃತ್ತಾಂತ.

ಚತುರ್ಥ ಗುಚ್ಛಂ. ... .. ... ೨೨—೩೧

ಧನಗುಪ್ತನೆಂಬ ವರ್ತಕನು ರತ್ನಾವಳಿಯನ್ನು ಸಮುದ್ರಮಧ್ಯದಿಂದ ಕರೆದುಕೊಂಡು ಬಂದು, ತನ್ನ ಮನೆಯಲ್ಲಿ ಕೆಲವುದಿವಸ ಸಂರಕ್ಷಿಸುತ್ತಿರ್ದು, ಆ ಬಳಿಕ ಮಂತ್ರಿಯಾದ ಯೌಗಂಧರಾಯಣನ ಬಳಿಗೆ ಕರೆದುಕೊಂಡು ಬರಲು, ಅವನು ರತ್ನಾವಳಿಯಿಂ ನೋಡಿ, ಆಶ್ಚರ್ಯವಂ ಪೊಂದಿ, ಇವಳು ಸಿಂಹಳದೇಶದ ರಾಯನ ಮಗಳಾಗಿರಬೇಕೆಂದು ಯೋಚಿಸುತ್ತಿದ್ದನೆಂಬ ವೃತ್ತಾಂತ.

ಪಂಚಮ ಗುಚ್ಛಂ. .. ... ... ೩೧—೩೮

ಇವಳನ್ನು ದೇವಿಯ ಸನ್ನಿಧಾನಕ್ಕೆ ಒಪ್ಪಿಸುವುದು ಯುಕ್ತವೆಂದು ನಿಶ್ಚಯಿಸಿ, ಯೌಗಂಧರಾಯಣನು ರತ್ನಾವಳಿಯನ್ನು ಗೋಪ್ಯವಾಗಿ ಅಂತಃಪುರಕ್ಕೆ ಕರೆ

ತಂದು ವಾಸವದತ್ತಾದೇವಿಯಲ್ಲಿ ಬಿಡಲು; ವಾಸವದತ್ತಾದೇವಿಯು, ಇವಳಿಗೆ ಸಾಗರಿಕೆಯೆಂಬ ಹೆಸರನ್ನು ಕೊಟ್ಟು ಪಕ್ಷಿಶಾಲೆಗೆ ಗೊತ್ತುಗಾತಿಯಾಗಿ ಮಾಡಿ, ಬಳಿಕ ಇವಳ ವೃತ್ತಾಂತವನ್ನು ತಿಳಿಯಲೋಸುಗ ಬರುತ್ತ, ಕಾಂಚನಮಾಲೆಯ ಚಾಡಿಮಾತುಗಳಂ ಕೇಳಿ, ಯಾವುದಾದರೂ ಒಂದು ನೆವಂಗೆಯ್ದು ಇವಳನ್ನು ಅಂತಃಪುರದಿಂದ ಹೊರಡಿಸಬೇಕೆಂದು ನಿಶ್ಚಯಿಸಿಕೊಂಡು ಬಂದು, ಮರೆಯಾಗಿ ನಿಂತು ರತ್ನಾವಳಿಯ ಕಾರ್ಯವನ್ನು ನೋಡುತ್ತಿದ್ದ ವೃತ್ತಾಂತ.

ಆರನೆಯ ಗುಚ್ಛಂ. ... ... ... ೩೯—೪೬

ವಾಸವದತ್ತಾದೇವಿಯು ಸಾಗರಿಕೆಯ ಸರಸೋಕ್ತಿಗಳಿಗೆ ಸಂತೋಷವಂ ಪೊಂದಿ, ಪಕ್ಷಿವಿಚಾರಣೆಯಂ ಗೆಯ್ಯುತಿರ್ದು, ವತ್ಸರಾಜನು ಬಂದನೆಂಬ ವಾರ್ತೆಯಂ ಕೇಳಿ ಸಕಲರಂ ಸಂಗೀತಶಾಲೆಯಂ ಪೊಂದಿಸುತ್ತಿರುವಲ್ಲಿ, ರಾಯನು ಸಾಗರಿಕೆಯ ಹಿಂಬಾಗವಂ ಕಂಡು, ಕಳವಳವಂ ಪೊಂದಿ ವಿದೂಷಕನೊಡಗೊಂಡವನಾಗಿ ಶಯನಗೃಹವಂ ಪೊಂದಿದನೆಂಬ ವೃತ್ತಾಂತ.

ಏಳನೆಯ ಗುಚ್ಛಂ. ... ... ... ೪೭—೫೪

ವತ್ಸರಾಜನು ವಿದೂಷಕನೊಡನೆ ಸಾಗರಿಕೆಯ ಹಿಂಬಾಗವಂ ಕಂಡು ಚಂಚಲನಾಗಿರುವ ತನ್ನ ಅಭಿಪ್ರಾಯವಂ ಪೇಳುತಿದ್ದು, ವಾಸವದತ್ತಾದೇವಿಯು ಅಪ್ಪಣೆಯಿಂದ ಪ್ರಾರಂಭವಾದ ವಸಂತೋತ್ಸವದ ಸಂತೋಷದಿಂ ಕ್ರೀಡಿಸುತ್ತಿರುವ ಕಾಮಿನಿಯರ ವಿಲಾಸವಂ ಚಂದ್ರಶಾಲೆಯನ್ನೇರಿ ನೋಡುತ್ತಿದ್ದನೆಂಬ ವೃತ್ತಾಂತ.

ಎಂಟನೆಯ ಗುಚ್ಛಂ. ... ... ... ೫೪—೬೦

ವಾಸವದತ್ತಾದೇವಿಯು ಮಕರಂದೋದ್ಯಾನವಂ ಪೊಂದಿ, ಸಾಗರಿಕೆಯಂ ಸಂಶಯದಿಂದ ಪಕ್ಷಿಶಾಲೆಗೆ ಕಳುಹಿಸಲು, ಅವಳು ಲತೆಗಳ ಮರೆಯಂ ಸೇರಿ ತಾನೂ ಮನ್ಮಥನಂ ಪೂಜಿಸುವೆನೆಂದು ಪುಷ್ಪಾಪಚಯವಂ ಮಾಡುತ್ತಿದ್ದಳೆಂಬ ವೃತ್ತಾಂತ.

ಒಂಬತ್ತನೆಯ ಗುಚ್ಛಂ. ... ... ... ೬೧—೬೮

ದೇವಿಯು ಮನ್ಮಥನ ಪೂಜೆಯಂ ಗೆಯ್ಯುತ್ತಲಿರುವ ಸ್ಥಾನವಂ ಸಾಗರಿಕೆಯು ಪೊಂದಿ, ವತ್ಸರಾಜನಂ ಕಂಡು, ವಿರಹಾತುರಳಾಗಿ, ಶುಕಪಿಕಮಾರುತರಂ ನಿಂದಿಸುತ್ತಿದ್ದಳೆಂಬ ವೃತ್ತಾಂತ.

ಹತ್ತನೆಯ ಗುಚ್ಛಂ. ... ... ... ೬೮—೭೫

ಸೂರ್ಯಾಸ್ತ ಚಂದ್ರೋದಯವರ್ಣನ, ಸಾಗರಿಕೆಯ ಅವಸ್ಥೆ, ಚಂದ್ರದೂಷಣ ಕಥನ.

ಹನ್ನೊಂದನೆಯ ಗುಚ್ಛಂ. ... ... ... ೭೫—೮೫

ಚಂದ್ರಾಸ್ತ ಸೂರ್ಯೋದಯವರ್ಣನ, ರಾಜಭಾವಚಿತ್ರಲೇಖನ, ಸಾಗರಿಕೆಯ ವೃತ್ತಾಂತಕಥನ.

ಹನ್ನೆರಡನೆಯ ಗುಚ್ಛಂ. . ... ... ೮೫—೧೦೦

ರಾಯನು ಉಪವನವಂ ಪೊಂದಿ, ಶಾರಿಕೆಯ ಮುಖವಚನದಿಂ ಸಾಗರಿಕೆಯ ಚಿತ್ರಪಟದ ವೃತ್ತಾಂತವಂ ತಿಳಿದು, ಕದಳೀಗೃಹದಲ್ಲಿ ಬಿದ್ದಿದ್ದ ಚಿತ್ರಪಟದಲ್ಲಿದ್ದ ಅವಳ ಭಾವಚಿತ್ರವಂ ಕಂಡು, ಸುಸಂಗತೆಯಿಂದ ಅವಳ ಹಸ್ತವಂ ಪಿಡಿದು, ವಿದೂಷಕನ ವಾಕ್ಯದಿಂದ ಭಯಭ್ರಾಂತನಾಗಿ ಸಾಗರಿಕೆಯ ಹಸ್ತವಂ ಬಿಟ್ಟು ಭಯಗ್ರಸ್ತನಾಗಿದ್ದನೆಂಬ ವೃತ್ತಾಂತ.

ಹದಿಮೂರನೆಯ ಗುಚ್ಛಂ. ... .. ... ೧೦೧—೧೧೩

ರಾಯನು ಮನ್ಮಥಾವಸ್ಥೆಯಂ ಪೊಂದುತಲಿದ್ದು ಸುಸಂಗತೆಯು ದೇವಿಯ ವೇಷವಂ ಧರಿಸಿ ಸಾಗರಿಕೆಯಂ ಕರೆದುಕೊಂಡು ಬರುವ ಸಂಗತಿಯಂ ವಿದೂಷಕನಿಂದ ತಿಳಿದು ಮಾಧವೀಮಂಟಪಕ್ಕೆ ಪೋಗಲಿಚ್ಛಿಸುತ್ತಿದ್ದನೆಂಬ ವೃತ್ತಾಂತ.

ಹದಿನಾಲ್ಕನೆಯ ಗುಚ್ಛಂ. ... ... ... ೧೧೩—೧೨೩

ಸುಸಂಗತೆಯೂ ವಿದೂಷಕನೂ ಸಹ ಮಾಡಿದ ಭೇದೋಪಾಯವು ಭಂಗವಾಗಲಾಗಿ, ಸಾಗರಿಕೆಯು ಪ್ರಾಣತ್ಯಾಗವಂ ಗೆಯ್ಯುವೆನೆಂದು ಮಕರಂದೋದ್ಯಾನವಂ ಪೊಕ್ಕ ವೃತ್ತಾಂತ

ಹದಿನೈದನೆಯ ಗುಚ್ಛಂ. .. ... .. ೧೨೪—೧೩೪

ಸಾಗರಿಕೆಯ ನಿಗಳಬಂಧನ, ಸುಸಂಗತೆಗೆ ವಿದೂಷಕನಿಗೆ ಸಹ ಬಾಹುಬಂಧನ ಹೇಳಿರುವುದು.

ಹದಿನಾರನೆಯ ಗುಚ್ಛಂ. ... ... ... ೧೩೪—೧೪೫

ಸಾಗರಿಕೆಯನ್ನು ಸಂಕಲೆಗಳಿಂದ ಅಂಕಿತವಂ ಗೈದು ಸೆರೆಮನೆಯಲ್ಲಿರಿಸಿದ ಸಂಗತಿಯನ್ನು ಸುಸಂಗತೆಯು ವಿದೂಷಕನೊಡನೆ ವಿಸ್ತರಿಸಲವನು ರಾಯನಿಗೆ ವಿಸ್ತರಿಸಲು, ರಾಯನು ವಿರಹಾತುರನಾಗಿರುವ ಸಮದಲ್ಲ ಉಜ್ಜಯಿನೀ ಪಟ್ಟಣದಿಂದ ಇಂದ್ರಜಾಲವಿದ್ಯಾವಂತನು ಬಂದನೆಂಬ ವೃತ್ತಾಂತ.

ಹದಿನೇಳನೆಯ ಗುಚ್ಛಂ. ... ... .. ೧೪೫—೧೫೭

ಸಿಂಹಳದೇಶದ ಮಂತ್ರಿಯ ಆಗಮನ, ರತ್ನಾವಳಿಯ ಪರಿಜ್ಞಾನಪೂರ್ವಕ ನಿಗಳಬಂಧಮೋಚನ.

ಹದಿನೆಂಟನೆಯ ಗುಚ್ಛಂ. ... .. ... ೧೫೭—೧೬೮

ಯೌಗಂಧರಾಯಣನು ತಾನು ಮಾಡಿದ ಕಾರ್ಯನಿರೂಪಣ, ಸಿಂಹಳದೇಶ

ದಿಂಡ ಪಿಂದಾನುಪಿಂದರ ಆಗಮನ, ರತ್ನಾವಳಿಯ ಪ್ರಯಾಣಪ್ರಸಕ್ತಿಯೂ ಬಣ್ಣಿಸಿರುವುವು.

ಹತ್ತೊಂಬತ್ತನೆಯ ಗುಚ್ಛಂ. .. ... .. ೧೬೮—೧೭೭

ರತ್ನಾವಳಿಯು ಪಿಂದಾನುಪಿಂದರಿಂದೊಡಗೂಡಿ ಸ್ವದೇಶಕೆ ಪೋದುದು, ವಿವಾಹಾರ್ಥವಾಗಿ ವತ್ಸರಾಜನು ಸಮಸ್ತ ಸೈನ್ಯದಿಂದೊಡಗೂಡಿ ರತ್ನಪುರಿಗೆ ಪೋಗಲೋಸುಗ ಪೊರಮಟ್ಟು ಸಮುದ್ರತೀರದಲ್ಲಿ ಕಟಕರಚನೆಯುಂಗೆಯ್ದಿರ್ದುದು.

ಇಪ್ಪತ್ತನೆಯ ಗುಚ್ಛಂ. ... .. .. ೧೭೮—೧೮೫

ಸಿಂಹಳದೇಶಕ್ಕೆ ವತ್ಸರಾಜನ ಆಗಮನವು, ರತ್ನಾವಳಿಯ ಪಾಣಿಗ್ರಹಣ ನಿಮಿತ್ತ ಗಜಾರೋಹಣವಾಗಿ ಬೀದಿಯ ಪ್ರದಕ್ಷಿಣೆಯು, ರತ್ನಾವಳಿಯ ಸರ್ವಾಂಗ ವರ್ಣನೆಯು, ವಿವಾಹಪ್ರಸ್ತವು. †

† ಈ ಗುಚ್ಛಕಥಾಸಂಗ್ರಹಗಳು ಆಯಾ ಗುಚ್ಛಗಳ ಗದ್ಯಾಂತಗಳಲ್ಲಿ ಮಾತ್ರಿಕೆಗಳಲ್ಲಿ ಕೊಟ್ಟಿವೆ.

ಗಿಂಡಿ ಕುಚಾಯಿಗಳ ಸಾಲುಗಳಿಂ ಮೇಲಾಗಿ ನೇತ್ರಗಳಿಗೆ ಸೊಗಸನುಂಟುಮಾಡುತ್ತ, ಅಲ್ಲಲ್ಲಿ ಒಪ್ಪುತ್ತಿರುವ ಅಗಣಿತಂಗಳಾದ ಅರವಟ್ಟಿಗೆಗಳಿಂದಲೂ;...ಅಲ್ಲಲ್ಲಿ ನಿರ್ಮಿಸಿರುವ ಜಲದುರ್ಗಸ್ಥಲ ಭೂದುರ್ಗಸ್ಥಲಗಳೆಂಬ ದುರ್ಗಭೇದಗಳಿಂದಲೂ ; ಮತ್ತು ಕೋಮಲಗಳಾಗಿ ಬೆಳೆದಿರುವ ಕಮಲ ಕಲ್ಹಾರ ಮುಂತಾದ ಪುಷ್ಪಗಳ ಸಾಲುಗಳಲ್ಲಿ ಲೀಲೆಯಿಂದೊಪ್ಪುವ ಹಂಸಕಾರಂಡವ ಮೊದಲಾದ ಜಲಪಕ್ಷಿಗಳ ಕಲಕಲಧ್ವನಿಗಳಿಗೆ ನೆಲೆವನೆಯಾಗಿ, ಸುಧೆಯಂ ಸೋಲಿಸುವ ರುಚಿಯಿಂದೊಪ್ಪುತ್ತ, ನಿರ್ಮಲಂಗಳಾದ ಜಲಗಳಿಂದ ಮೆರೆಯುವ ನದೀನದತಟಾಕಸರೋವರ ಮುಂತಾದ ಜಲಾಶ್ರಯಗಳಿಂದಲೂ ; ಶಿವ ವಿಷ್ಣು ದುರ್ಗಾ ಗಣಪತಿ ಮುಂತಾದ ದೇವಾಲಯಗಳಿಂದಲೂ ; ದರ್ಶನಮಾತ್ರದಲ್ಲಿಯೆ ಪಂಚಮಹಾಪಾತಕಂಗಳಂ ಸಂಹರಿಸುತ್ತ ಶೋಭಿಸುವ ಅನೇಕವಾದ ತೀರ್ಥಗಳಿಂದಲೂ ; ಋಷಿಗಳಿಂದ ಪರಿವೃತವಾದ ಪುಣ್ಯಾರಣ್ಯಂಗಳಿಂದಲೂ ; ನವರತ್ನಗಳ ಉತ್ಪತ್ತಿಗೆ ಕಾರಣವಾದ ಸ್ಥಾನಗಳಿಂದ ಮನೋಹರವಾಗಿ, ಅಂಬರವನು ಅವಲಂಬಿಸಿರುವ ಶೃಂಗಗಳಿಂದ ಸಂಗತವಾದ ಅನೇಕ ಪರ್ವತಗಳಿಂದಲೂ ರಮಣೀಯವಾಗಿರುವ ದಶಾರ್ಣದೇಶವೆಂಬ ಕಮಲಕ್ಕೆ ಕರ್ಣಿಕೆಯಂತೊಪ್ಪುತ್ತ, ಭೂದೇವಿಯ ಹಣೆಯ ಮಾಣಿಕದ ಬೊಟ್ಟಿನಂತೆ ಪೊಳೆಯುತ್ತ, ಸ್ವರ್ಗದ ಸೊಗಸನ್ನು ಸೂರೆಗೊಳುತ್ತ, ಭೋಗಾವತಿಯ ಭಾಗ್ಯವಂ ಬಯಲುಗೆಯ್ಯುತ್ತ, ಸಕಲವಾದ ಸಂಪತ್ತುಗಳಿಗೂ ವಾಸಭೂಮಿಯಾಗಿ ಮೆರೆಯುತ್ತಿರುವ, ಕೌಶಾಂಬಿಯೆಂಬ ಪಟ್ಟಣವು ಲೋಕಕ್ಕೆ ಕೌತುಕವಂ ಬೀರುತ್ತಿರುವುದು.

ಆ ಪಟ್ಟಣದಲ್ಲಿ ಆಜಾನುದೀರ್ಘಬಾಹುವಾಗಿ ವಿಶಾಲವಕ್ಷಸ್ಸ್ಥಲನಾಗಿ ಅಂಗಂಗಳಿಂದೊಡಗೂಡಿದ ಮನ್ಮಥನೋ ಎಂಬಂತೆ ಮಂಗಳಾಂಗನಾಗಿ, ಭುಜಬಲದಿಂದ ವೈರಿಗಳ ಪೊತ್ತುವಂ ಕತ್ತರಿಸಿ ಎತ್ತೆತ್ತಲೂ ತನ್ನ ಕೀರ್ತಿಯೆಂಬ ಬೆಳುದಿಂಗಳಂ ಬೀರುತ್ತ, ರಾಜನೀತಿಗನುಸಾರವಾಗಿ ಧರ್ಮದಿಂ ಪ್ರಜೆಗಳಂ ಸಲಹುತ್ತ, ದಯಾದಾಕ್ಷಿಣ್ಯಾದಿ ಸದ್ಗುಣಗಳಿಗೆ ಸಮುದ್ರನಾಗಿ, ರೂಪಿನಲ್ಲಿ ರತಿಗಿಂತಲೂ ಅತಿಶಯಳಾಗಿ ಪತಿವ್ರತಾಶಿರೋಮಣಿಯಾಗಿ ಪಟ್ಟಮಹಿಷಿಯಾದ ವಾಸವದತ್ತಾದೇವಿಯೆಂಬ ಪತ್ನಿಯಿಂದಲೂ, ಸಮಸ್ತ ನೀತಿಗಳಂ ತಿಳಿದು ರಾಯನ ಹೆಚ್ಚುಗೆಯಂ ಬಯಸುತ್ತ ಕುಲಕ್ರಮಾಗತನಾಗಿ ಬಂದ ಯೌಗಂಧರಾಯಣನೆಂಬ ಮಂತ್ರಿಯಿಂದಲೂ ನಡೆಗೊಂಡು, ಕುಲಕ್ರಮಾಗತವಾಗಿ ಬಂದ ರತ್ನಸಿಂಹಾಸನವನ್ನೇರಿ, ಅರಸುಗಳಿಂದ ಕಪ್ಪವನ್ನೊಪ್ಪಿಸಿಕೊಳುತ್ತ, ರಾಜಾಧಿರಾಜನೆಂಬ ಪ್ರಸಿದ್ಧಿಯಂ ವಹಿಸಿದ ವತ್ಸರಾಜೇಂದ್ರನು ಸದಾ ಸಂತೋಷಭರಿತನಾಗಿ ರಾಜ್ಯಪರಿಪಾಲನಂ ಗೆಯ್ಯುತ್ತಲಿದ್ದು, ಮಧ್ಯಾಹ್ನಕಾಲವಂ ಸೂಚಿಸುವ ಶಂಖಧ್ವನಿಯಂ ಕೇಳಿ, ರತ್ನಸಿಂಹಾಸನದಿಂದೆದ್ದು, ಅಂತಃಪುರಕ್ಕೆ ಅಭಿಮುಖನಾಗಿ ಹೋಗುತ್ತ, ಮಂತ್ರಿಯ ಕೈಲಾಗವಂ ಪಿಡಿದು, “ಅಯ್ಯಾ, ಮಂತ್ರಿಶ್ರೇಷ್ಠನೆ! ಕಪ್ಪಗಳಂ ತಂದ ದೇಶಾಧೀಶ್ವರರ

ಮಾನಕೆ ಅನುಗುಣವಾದ ಮರ್ಯ್ಯಾದೆಗಳನ್ನು ಂಟುಮಾಡುವನಾಗು" ಎಂದು ಅಪ್ಪಣೆ ಯನಿತ್ತು, ಅಂತಃಪುರವ ಪೊಕ್ಕು ವಾಸವದತ್ತಾದೇವಿಯಿಂದೊಡಗೊಂಡು, ಮಜ್ಜನ ಭೋಜನಂಗಳಂ ಗೈದು, ಮಣಿಹಜಾರದಲ್ಲಿರುವ ರತ್ನಪೀಠದಲ್ಲಿ ಕುಳಿತು—"ಎಲೆ ವಾಸವದತ್ತೆ, ನಿನ್ನ ಊಳಿಗದ ಹೆಣ್ಣುಗಳು ಅಂಚೆಯ ಮರಿಗಳಿಗೆ ನಡೆಗಳನ್ನೂ, ಐದು ಬಣ್ಣದಿಂದಂಕಿತಂಗಳಾದ ಗಿಳಿಮರಿಗಳಿಗೆ ಕಾಮಸೂತ್ರವನ್ನೂ, ನವಿಲುಮರಿಗಳಿಗೆ ಕವಲು ದೊರೆದಂತೆ ನಾಟ್ಯಗಳನ್ನೂ ಸಹ ಕಲಿಸುವ ಚಮತ್ಕಾರವು ಬಹು ಚೆನ್ನಾದು"ದೆಂದು ಸರಸ ವಚನಗಳಂ ನುಡಿಯುತ್ತಿರಲು—

ಇತ್ತಲು ಮಂತ್ರಿಶ್ರೇಷ್ಠನಾದ ಯೌಗಂಧರಾಯಣನು ರಾಯನು ಅಪ್ಪಣೆ ಯನ್ನಿತ್ತಂತೆ ಕಾರ್ಯ್ಯವಂ ನಡೆಯಿಸಿ, ತನ್ನ ಮನೆಯಂ ಕುರಿತು ಬರುತ್ತಿರಲು ;

ಮಧ್ಯಮಾರ್ಗದಲ್ಲಿ ವಿಭೂತಿರುದ್ರಾಕ್ಷಿಗಳಿಂದಲೂ ರುದ್ರಾಕ್ಷಿಯ ಜಪಮಾಲೆ ಯಿಂದಲೂ ದರ್ಭೆಯ ಪವಿತ್ರದಿಂದಲೂ ಅಲಂಕೃತನಾಗಿ, ಸೂರ್ಯನಂತೆ ಅತ್ಯಂತ ತೇಜೋಮಯನಾಗಿ, ಹಸ್ತಗಳಲ್ಲಿ ಪ್ರಶಸ್ತವಾದ ಫಲಗಳಂ ಪಿಡಿದು ನಿಂತಿರುವ ವಿಕ್ರಮಬಾಹುರಾಯನ ಪುರೋಹಿತನು ಮಂತ್ರಿಯಂ ಕುರಿತು—"ಎಲೈ, ಪೂಜ್ಯನಾದ ಮಂತ್ರಿಯೇ ! ದೇವಾಧಿಪತಿಯಾದ ಇಂದ್ರನು ಮಂತ್ರಿಯಾದ ಬೃಹಸ್ಪತಿಯಿಂದ ಹೇಗೆ ಸಂತೋಷವಂ ಪೊಂದಿ ಶತ್ರುಗಳಾದ ರಾಕ್ಷಸರಂ ಜಯಿಸಿ ಸುಖದಲ್ಲಿರುವನೋ, ರಾಜಾಧಿರಾಜನಾದ ಈ ವತ್ಸರಾಜನೂ ನಿನ್ನಿಂದ ಅದೇರೀತಿಯಿಂದ ಸಂತೋಷಕ್ಕೆ ಪಾತ್ರನಾಗಿ ನೀತಿಮಾರ್ಗವನ್ನು ಅನುಸರಿಸಿ ಶತ್ರುಗಳಂ ಜಯಿಸಿ ಧರ್ಮದಿಂ ಪ್ರಜಾಪಾಲನೆಯಂ ಗೆಯ್ಯುವನೆಂಬ ವಾರ್ತೆಯನ್ನು ರಾಯನ ಕೀರ್ತಿ ಕಾಂತೆಯಿಂದ ಕೇಳಿ, ಪ್ರತ್ಯಕ್ಷವಾಗಿ ನೋಡಲಿಚ್ಛೆಯಿಂದ ಇಲ್ಲಿಗೆ ಬಂದಿರುವೆ" ನೆಂದು ನುಡಿಯಲು ; ಮಂತ್ರಿಯು ತೇಜೋನಿಧಿಯಾದ ಆ ಬ್ರಾಹ್ಮಣನಂ ನೋಡಿ ಒತ್ತಿನಲ್ಲಿ ಬರುವ ಮಾಧವನೆಂಬ ಚಾರನಂ ಕುರಿತು—"ಎಲೈ, ಮಾಧವನೇ, ಮುಂದುಗಡೆಯಲ್ಲಿ ನಿಂತಿರುವ ಈ ಬ್ರಾಹ್ಮಣನನ್ನು ನಮ್ಮ ಮನೆಗೆ ಕರೆದುಕೊಂಡು ಬರುವನಾಗು" ಎಂದು ಹೇಳಿ. ತನ್ನ ಮನೆಯಂ ಹೊಂದಿ, ಸ್ನಾನಭೋಜನವಂ ಗೈದು, ಹಜಾರಕ್ಕೆ ಬಂದು ಕುಳಿತು, ಚಾರನು ಕರೆದುಕೊಂಡು ಬಂದ ಬ್ರಾಹ್ಮಣನಿಗೆ ವಂದನೆಯಂ ಗೈದು, ಅವನು ಆಶೀರ್ವಾದಂಗೈದು ಕೊಟ್ಟ ಫಲವನ್ನು ಭಕ್ತಿಯಿಂದ ಎರಡು ಹಸ್ತಗಳಲ್ಲಿ ತೆಗೆದುಕೊಂಡು ಅವನಂ ಪೀಠದಲ್ಲಿ ಕುಳ್ಳಿರಿಸಿ "ಎಲೈ, ಬ್ರಾಹ್ಮಣೋತ್ತಮನೇ ! ನೀನು ಯಾರು ? ಯಾವ ದೇಶದಿಂದ ಏನು ನಿಮಿತ್ತವಾಗಿ ಇಲ್ಲಿಗೆ ಬಂದಿರುವೆ ? ನಿನ್ನ ವೃತ್ತಾಂತವೆಲ್ಲವನು ಪೇಳುವನಾಗು" ಎಂದು ನುಡಿಯಲಾಬ್ರಾಹ್ಮಣನು ಮಂತ್ರಿಯ ಮೃದುನುಡಿಗಳಂ ಕೇಳಿ, ಸಂತೋಷವಂ ತಾಳಿ—ಲೋಕದಲ್ಲಿ ಐಶ್ವರ್ಯವುಳ್ಳಂಥ ಪುರುಷರಿಗೆ ಪೂಜ್ಯರಲ್ಲಿ ಭಕ್ತಿಯೂ, ವಿನಯವೂ ಸಹ ಪುಟ್ಟುವುದು ದುರ್ಲಭವಾಗಿರುವುದು ; ಇಷ್ಟು ಐಶ್ವರ್ಯವಿದ್ದರೂ

ಈ ಮಂತ್ರಿಯಲ್ಲಿ ಸದ್ಗುಣಗಳೇ ಸಂಪೂರ್ಣವಾಗಿರುವುದೆಂದು ತನ್ನ ಮನದಲ್ಲಿ ಆಲೋಚಿಸಿ, ಮಂತ್ರಿಯಂ ಕುರಿತು—“ ಎಲೈ, ರಾಜಪೂಜ್ಯನಾದ ಮಂತ್ರಿಶ್ರೇಷ್ಠನೇ, ಕೇಳು. ನಾನು ಸಮುದ್ರಮಧ್ಯದಲ್ಲಿ ವಿರಾಜಿಸುವ ಸಿಂಹಳದೇಶಾಧಿಪತಿಯಾದ ವಿಕ್ರಮಬಾಹುರಾಯನ ಪುರೋಹಿತನು, ಎನ್ನನ್ನು ದೇವಶರ್ಮನೆಂದು ಜನಗಳು ಕರೆಯುತ್ತಿರುವರು. ನಾನು ಸಕಲದೇಶಗಳಲ್ಲಿರುವ ಪುಣ್ಯಕ್ಷೇತ್ರಗಳ ಯಾತ್ರೆಯಂ ಗೆಯ್ಯುತ್ತ ಬರುವಲ್ಲಿ, ನಿಮ್ಮ ರಾಯನ ಸದ್ಗುಣಗಳನ್ನೂ, ಸಮಸ್ತವಾದ ಸಾಮದಾನಭೇದದಂಡಗಳೆಂಬ ಉಪಾಯಂಗಳಲ್ಲಿಯೂ ಮಾಯೆ ಉಪೇಕ್ಷೆ ಇಂದ್ರಜಾಲಂಗಳೆಂಬ ಕಿರಿದಾದ ಉಪಾಯಂಗಳಲ್ಲಿಯೂ ರಾಜನೀತಿಗಳಲ್ಲಿಯೂ ಬಲ್ಲಿದನಾಗಿ ಸುರಗುರುವಿನಂತೆ ಪರಿಶೋಭಿಸುತ್ತಿರುವ ನಿನ್ನ ಪ್ರಖ್ಯಾತಿಯನ್ನೂ ಸಹ ಕೇಳಿ, ಈ ನಿಮ್ಮ ಇಬ್ಬರ ಸಂದರ್ಶನವಂ ಗೆಯ್ದು ಪೋಗಲಿಚ್ಛೆಯಿಂದ ಈ ಕೌಶಾಂಬೀಪಟ್ಟಣಕ್ಕೆ ಬಂದೆ ” ನೆಂದು ನುಡಿಯಲು ; ಮಂತ್ರಿಯು—“ ಎಲೈ ದೇವಶರ್ಮನೆ ! ನಿಮ್ಮ ವಿಕ್ರಮಬಾಹುರಾಯನಿಗೆ ಪುತ್ರರುಗಳೂ ಪುತ್ರಿಯರುಗಳೂ ಎಷ್ಟುಜನವಿರುವರು ? ” ಎಂದು ಬೆಸಗೊಳಲು ; ಆ ಬ್ರಾಹ್ಮಣನು—“ ಎಲೈ ಮಂತ್ರಿಯೇ ! ಕೇಳು. ವಿಂದನೆಂತಲೂ ಅನುವಿಂದನೆಂತಲೂ ಇಬ್ಬರು ಪುತ್ರರುಗಳು ಬಲಿಷ್ಠರಾಗಿ ರಾಜ್ಯತಂತ್ರವನ್ನು ವಿಚಾರಿಸುತ್ತ, ತಂದೆಯ ಅಜ್ಞೆಯನ್ನು ಶಿರಸ್ಸಿನಲ್ಲಿ ವಹಿಸುತ್ತ, ಪ್ರಜಾಸಮ್ಮತರಾಗಿ ಇರುವರು. ಜನಕರಾಯನಿಗೆ ಸೀತಾದೇವಿಯಂತೆ, ವೃಷಪರ್ವರಾಯನಿಗೆ ಶರ್ಮಿಷ್ಠೆಯಂತೆ, ಶುಕ್ರಾಚಾರ್ಯರಿಗೆ ದೇವಯಾನೆಯಂತೆ, ದ್ರುಪದರಾಯನಿಗೆ ದ್ರೌಪದಿಯಂತೆ, ಹಿಮವಂತನಿಗೆ ಪಾರ್ವತಿಯಂತೆ, ಕ್ಷೀರಸಮುದ್ರಕ್ಕೆ ಲಕ್ಷ್ಮಿಯಂತೆ, ಇಂದ್ರನಿಗೆ ದೇವಸೇನೆಯಂತೆ, ನಮ್ಮ ರಾಯನಿಗೆ ರತ್ನಾವಳಿಯೆಂಬ ಒಬ್ಬ ಕನ್ಯೆಯೂ ಜನಿಸಿರುವಳು. ಮತ್ತಂ ಆ ರತ್ನಾವಳಿಯು ರೂಪಿನಿಂದಲೂ ಸದ್ಗುಣಗಳಿಂದಲೂ ಸೃಷ್ಟಿಕರ್ತನಾದ ಬ್ರಹ್ಮನ ಬುದ್ಧಿ ಕೌಶಲವಂ ಲೋಕಕ್ಕೆ ತೋರಿಸುತ್ತ, ಸಮಸ್ತ ವಿದ್ಯೆಗಳಲ್ಲಿಯೂ ಶಾರದೆಯಂ ಮೀರುತ್ತ, ಪುಷ್ಪದಲ್ಲಿ ಪುಟ್ಟಿದ ಮಕರಂದದಂತೆ, ಮುತ್ತಿನಲ್ಲಿ ಪುಟ್ಟಿದ ಕೆನ್ನೀರಿನಂತೆ, ದಿನಕೊಂದು ಬಗೆಯಾಗಿ ಏರೇರಿ ಬರುವ ಯೌವನದಿಂದ ಭೂಷಿತಳಾಗಿರುವಳು ಎಲೈ ಮಂತ್ರಿಶ್ರೇಷ್ಠನೆ, ಕೇಳು. ಗಾಲವನೆಂಬ ಮಹಾಮುನಿಯು ಈ ರತ್ನಾವಳಿಯಂ ನೋಡಿ—ಈ ಪುತ್ರಿಯನ್ನು ಯಾವ ರಾಜಪುತ್ರನು ಪಾಣಿಗ್ರಹಣವಂ ಗೆಯ್ಯುತ್ತಲಿರುವನೋ ಅವನು ಶಾಶ್ವತವಾಗಿ ಭೂಮಂಡಲಾಧಿಪತ್ಯವಂ ಗೆಯ್ಯುವನೆಂದು ಅಪ್ಪಣೆಯನಿತ್ತಿರುವನು. ಮುಖ್ಯವಾದ ವಾಕ್ಯವನ್ನು ಪೇಳುವೆನು, ಕೇಳು. ಆ ರತ್ನಾವಳಿಯ ರೂಪವನ್ನು, ಸದ್ಗುಣಂಗಳನ್ನು, ವಿದ್ಯಾಕೌಶಲವನ್ನು, ಹಾವಭಾವ ಮೊದಲಾದ ವಿಲಾಸಗಳನ್ನು ಸಹ ವಿಸ್ತಾರವಾಗಿ ವಿವರಿಸುವುದಕ್ಕೆ ಎನ್ನ ಮುಖದಲ್ಲಿ ಎರಡು ಸಾಸಿರ ನಾಲಗೆಯಿಲ್ಲದೆ ಒಂದೇ ನಾಲಗೆ ಇರುವುದರಿಂದ ಸಮರ್ಥನಾಗ

ಲಾರೆ" ನೆಂದು ನುಡಿಯಲು ; ಮಂತ್ರಿಯು ಆವಾಕ್ಯವನ್ನು ಕೇಳಿ—ಈ ಬ್ರಾಹ್ಮಣನ ಆಕಾರವನ್ನು ನೋಡಿದಲ್ಲಿ ಇವನ ವಾಕ್ಯಗಳೆಲ್ಲವೂ ಸತ್ಯವಾಗಿ ತೋರುವುದಲ್ಲದೆ ಅಪದ್ಧವಾಗಿ ತೋರಲಾರದು. ಮತ್ತು ಈ ರೀತಿಯಿಂದ ವೃದ್ಧನಾದ ನನ್ನಲ್ಲಿ ಆ ರಾಜಪುತ್ರಿಯ ಗುಣಗಳನ್ನು ಬಣ್ಣಿಸುವುದಕ್ಕೂ ನಿಮಿತ್ತವಿಲ್ಲ, ನಿಜವಾಗಿರುವುದರಿಂದಲೆ ಪೇಳಿರುವನು. ಆ ರತ್ನಾವಳಿಯನ್ನು ಯಾವ ರಾಯನ ಮಗನು ವಿವಾಹವಾದರೂ ಅವನು ಅಖಂಡಲಭುವನಕ್ಕೆ ಅಧಿಪತಿಯಾಗುವನೆಂದು ಗಾಲವ ಋಷಿಯು ನುಡಿದಿರುವನೆಂದೂ ಪೇಳಿರುವನು. ಸೂರ್ಯನ ಗತಿ ತಪ್ಪಿದರೂ ಋಷಿಗಳಾಡಿದ ವಾಕ್ಯವು ತಪ್ಪಲಾರದು. ಯಾವ ಪ್ರಕಾರದಲ್ಲಾದರೂ ನಮ್ಮ ರಾಜೇಂದ್ರನಿಗೆ ಆ ರತ್ನಾವಳಿಯನ್ನು ವಿವಾಹ ಮಾಡಿಸಿದಲ್ಲಿ ಸಮಸ್ತ ಭೂಮಂಡಲಾಧಿಪತ್ಯವೂ ಇದರಕಿಂತಲೂ ಹೆಚ್ಚಾಗಿ ದೊರಕುವುದಲ್ಲದೆ ಅಕ್ಕತಂಗಿಯರು ಒಂದೇ ಸ್ಥಲದಲ್ಲಿ ಸವತಿಯರಾಗಿ ಸೌಖ್ಯದಲ್ಲಿರುವರು. ಆದುದರಿಂದ ಆ ರಾಯನಿಗೆ ಪುರೋಹಿತನಾದ ಈ ಬ್ರಾಹ್ಮಣನ ಮಧ್ಯಸ್ಥದಿಂದಲೇ ಕಾರ್ಯವಂ ನಡೆಸಿದಲ್ಲಿ ಮನದ ಬಯಕೆಯು ಕೈಗೂಡುವುದರಲ್ಲಿ ಸಂದೇಹವು ತೋರಲಾರದು, ಎಂದು ತನ್ನ ಮನದಲ್ಲಿ ಆಲೋಚಿಸಿ, ಬ್ರಾಹ್ಮಣನಂ ಕುರಿತು—"ಎಲೈ, ವಿಪ್ರೋತ್ತಮನೇ, ನಿಮ್ಮ ರಾಯನು ತನ್ನ ಮಗಳಾದ ರತ್ನಾವಳಿಯನ್ನು ಯಾವ ದೇಶದ ರಾಜಪುತ್ರನಿಗೆ ಕೊಟ್ಟು ಮದುವೆಯಂಗೆಯ್ಯಬೇಕೆಂದು ನಿಶ್ಚಯಿಸಿರುವನು, ಪೇಳು" ಎನಲು ; ದೇವಶರ್ಮನು—"ಎಲೈ, ಪೂಜ್ಯನೇ, ಕೇಳು. ನಮ್ಮ ರಾಯನು ಮಗಳಿಗೆ ಯೌವನವು ಪುಟ್ಟಿ ಬರುವುದಂ ಕಂಡು ಇವಳಿಗೆ ತಕ್ಕ ವರನನ್ನು ನಿಶ್ಚಯಂಗೆಯ್ಯಬೇಕೆಂದು ತನ್ನ ಮಂತ್ರಿಯಾದ ವಸುಭೂತಿಯಂ ಕರೆದು—ಎಲೈ ಮಂತ್ರಿಯೇ, ನೀನು ನಮ್ಮ ರತ್ನಾವಳಿಯ ಭಾವಚಿತ್ರವಂ ತೆಗೆದುಕೊಂಡು, ಮಿತವಾದ ಸೇನೆಯಿಂದೊಡಗೊಂಡು, ದೇಶದ ಮೇಲೆ ಇರುವ ರಾಜಪುತ್ರರ ಭಾವಚಿತ್ರವನ್ನೂ ಅವರುಗಳ ದೇಶಕೋಶದ ವಿಸ್ತಾರಗಳನ್ನೂ ಸಹ ಬರೆದುಕಳುಹಿಸುವನಾಗೆಂದು ಅಪ್ಪಣೆಯನಿತ್ತು ಕಳುಹಿಸಲಾಮಂತ್ರಿಯು ಅದೇರೀತಿಯಿಂದ ಪೋಗಿ ಕಳುಹಿಸಿದ ರಾಜಕುಮಾರರುಗಳ ಭಾವಚಿತ್ರಗಳಿಗೂ ರತ್ನಾವಳಿಯ ಭಾವಚಿತ್ರಕ್ಕೂ ಸರಿಹೋಲಿಸುವಲ್ಲಿ ಸೂರ್ಯನಿಗೂ ದೀಪಕ್ಕೂ, ಸಮುದ್ರಕ್ಕೂ ಪಾಳುಗಟ್ಟಿಗೂ ಎಷ್ಟು ತಾರತಮ್ಯವಿರುವುದೋ ಅದೇ ರೀತಿಯಾದ ಹೆಚ್ಚುಕಡಮೆಯು ಪುಟ್ಟಿದುದಂ ನೋಡಿ ತನ್ನ ಧರ್ಮಪತ್ನಿಯಾದ ಕಮಲಾವಳಿಯಂ ಕುರಿತು—ನಮ್ಮ ರತ್ನಾವಳಿಗೆ ನನ್ನ ತಮ್ಮನ ಮಗಳಾದ ವಾಸವದತ್ತಾದೇವಿಗೆ ಪತಿಯಾದ ವತ್ಸರಾಜನೊಬ್ಬನು ರೂಪಿನಲ್ಲೂ ಗುಣದಲ್ಲೂ ಸಮಾನವಾಗಿ ತೋರುವನಲ್ಲದೆ ಈ ಭೂಮಂಡಲದಲ್ಲಿ ಮತ್ತೊಬ್ಬ ರಾಜಪುತ್ರನನ್ನೂ ಕಾಣದಿರುವನೆಂದು ನುಡಿದಿರುವನು. ಆ ನಮ್ಮ ರಾಜೇಂದ್ರನಿಗೆ ಅಳಿಯನಾದವನು ವತ್ಸರಾಜನೋ, ಮತ್ತೊರ್ವನೋ, ತಿಳಿಯೆನು." ಎಂದು ನುಡಿಯಲಾಮಂತ್ರಿಯು—ರೋಗಿಯು

ಬಯಸಿದ ಹಾಲಿನನ್ನನ್ನು ವೈದ್ಯನೂ ಪೇಳಿದಂತೆ, ಮೊದಲೇ ಆ ರತ್ನಾವಳಿಯನ್ನು ನಮ್ಮ ರಾಯನಿಗೆ ಮದುವೆಯಂ ಗೆಯ್ಯಬೇಕೆಂದಿರುವ ಎನಗೆ ಈ ಬ್ರಾಹ್ಮಣನ ಹಿತಕರವಾದ ವಾಕ್ಯದಿಂದ ಅಧಿಕ ಸಂತೋಷವುಂಟಾದುದೆಂದು ಆಲೋಚಿಸಿ, ಏಕಾಂತಸ್ಥಾನವಾದ ತನ್ನ ಶಯ್ಯಾಗೃಹಕ್ಕೆ ಆ ಬ್ರಾಹ್ಮಣನಂ ಕರೆದುಕೊಂಡು ಪೋಗಿ— "ಎಲೈ, ಬ್ರಾಹ್ಮಣೋತ್ತಮನಾದ ದೇವಶರ್ಮನೇ, ಕೇಳು. ಈ ನಮ್ಮ ರಾಜೇಂದ್ರನೇ ವಾಸವದತ್ತಾದೇವಿಗೆ ಪತಿಯಾದ ವತ್ಸರಾಜನೆನಿಸುವನು. ಆದರೂ ಈಗ ನನ್ನ ಹೆಸರಿನಿಂದ ಒಂದು ಪತ್ರಿಕೆಯನ್ನೂ ಒಬ್ಬ ಚಾರನನ್ನೂ ನಿಮ್ಮ ರಾಯನ ಬಳಿಗೆ ನಿನ್ನೊಡನೆ ಕಳುಹಿಸಿಕೊಡುವೆನು. ಈ ನಮ್ಮ ರಾಜೇಂದ್ರನ ವೃತ್ತಾಂತವನ್ನು ತಿಳಿಯದನಂತೆ ಇದ್ದುಕೊಂಡು ನಾನು ಬರೆದಿರುವ ಪತ್ರಿಕೆಯನ್ನು ನಿಮ್ಮರಾಯನಿಗೆ ಮುಟ್ಟಿಸಿ, ಈ ನಮ್ಮ ವತ್ಸರಾಜನಿಗೂ ಆ ರತ್ನಾವಳಿಗೂ ಸಂಬಂಧವುಂಟಾಗುವಂತೆ ಸಂವಿಧಾನವನ್ನು ಗೆಯ್ದೆಯಾದರೆ ನಮ್ಮ ರಾಜ್ಯದಲ್ಲಿ ಅನೇಕವಾದ ಭೂಮಿಯಂ ರತ್ನರಾಶಿಯನ್ನು ಸಹ ನಿನಗೆ ಕೊಡಿಸುವುದರಲ್ಲಿ ಸಂದೇಹವಿಲ್ಲ" ವೆಂದು ನುಡಿದು, ಆಬ್ರಾಹ್ಮಣನ ಮನ ದಣಿಯುವಂತೆ ರತ್ನಾಭರಣಪೀತಾಂಬರಗಳನ್ನೂ, ಗಣನೆಯಿಲ್ಲದ ದ್ರವ್ಯವನ್ನೂ ಸಹ ಕೊಟ್ಟು, ಸಂತೋಷವನ್ನುಂಟುಮಾಡಿ, ತನ್ನ ಹೆಸರಿನ ಪತ್ರಿಕೆಯಂ ಬರೆದು, ಮಾಧವನೆಂಬ ಚಾರನ ಕೆಯ್ಯಲ್ಲಿ ಕೊಟ್ಟು, ಆಬ್ರಾಹ್ಮಣನೊಡನೆ ಕಳುಹಿಸಿಕೊಡಲು—

ಆ ದೇವಶರ್ಮನು ಮಂತ್ರಿಯು ಮಾಡಿದ ಮನ್ನಣೆಗೆ ಮನದಲ್ಲಿ ಬಲವಾದ ಸಂತೋಷವಂ ತಾಳಿ, ಯಾವ ವಿಧದಿಂದಲಾದರೂ ಆ ರತ್ನಾವಳಿಯನ್ನು ರಾಜೋತ್ತಮನಾದ ಈ ವತ್ಸರಾಜನಿಗೆ ವಿವಾಹವಂ ಮಾಡಿಸಬೇಕೆಂದು ಮನದಲ್ಲಿ ಆಲೋಚಿಸುತ್ತ, ಮಾಧವನೆಂಬ ಚಾರನಿಂದೊಡಗೊಂಡು, ಮಂತ್ರಿಯಿಂದ ಅಪ್ಪಣೆಯಂ ಪಡೆದು ಸಿಂಹಳದೇಶಕ್ಕೆ ಅಭಿಮುಖನಾಗಿ ಬಂದು, ಹಡಗನ್ನೇರಿ ಸಮುದ್ರವಂ ದಾಂಟಿ, ತನ್ನ ದೇಶವಂ ಪೊಂದಿ, ಮಾಧವಚಾರನಂ ಕುರಿತು—"ಎಲೈ ಚಾರನೇ, ನೀನು ನಮ್ಮ ರಾಯನ ಅರಮನೆಯ ಬಾಗಿಲಲ್ಲಿ ಕಾದಿರುವನಾಗು. ನಾನು ನಮ್ಮ ರಾಯನ ಸಂದರ್ಶನವಂ ಗೈದ ಬಳಿಕ ನಿನ್ನನ್ನೂ ರಾಜಸನ್ನಿಧಿಗೆ ಕರೆಯಿಸುತ್ತಲಿದ್ದೇನೆ." ವೆಂದು ನುಡಿದು, ದೇಶಾಂತರದಿಂದ ತಂದ ಅಪೂರ್ವ ವಸ್ತುಗಳನ್ನೂ, ದೇವತಾತೀರ್ಥಪ್ರಸಾದ ಮುಂತಾದ ದ್ರವ್ಯಗಳನ್ನೂ, ಅನೇಕವಾದ ಫಲಗಳಿಂದ ಪೂರಿತವಾದ ತಟ್ಟೆಗಳನ್ನೂ ಸಹ ತೆಗೆಯಿಸಿಕೊಂಡು, ವಿಕ್ರಮಬಾಹುರಾಯನ ಸಭೆಯಂ ಪ್ರವೇಶಿಸಲು ;—

ಆ ರಾಯನು ತನ್ನ ಅಜ್ಞೆಯಂ ಪಡೆದು ತೀರ್ಥಯಾತ್ರೆಗೆ ಪೋಗಿ ಬಂದಪುರೋಹಿತನಂ ಕಂಡು, ಸಂತೋಷವಂ ತಾಳಿ, ಅವನು ತಂದ ತೀರ್ಥಪ್ರಸಾದದ್ರವ್ಯಗಳನ್ನು ಭಕ್ತಿಯಿಂದೆದ್ದು ಎರಡು ಕೈಗಳಿಂದಲೂ ತೆಗೆದುಕೊಂಡು, ತನ್ನ ಮಸ್ತಕದಲ್ಲಿ ಇರಿಸಿ,

ಕೊಂಡು, ಕಣ್ಣುಗಳಿಗೆ ಒತ್ತಿಕೊಂಡು, ಕುಶಲಪ್ರಶ್ನೆಯಂ ಬೆಸಗೊಂಡು, ಒತ್ತಿನಲ್ಲಿ ಕುಳ್ಳಿರಿಸಿಕೊಂಡು—" ಅಯ್ಯಾ ಪುರೋಹಿತರೇ, ನೀವು ತೀರ್ಥಯಾತ್ರೆಗೆ ಹೋಗಿ ಬಹುದಿವಸವಾದುದು. ಯಾವಯಾವ ದೇಶದಲ್ಲಿ ಯಾವಯಾವ ದೊರೆಗಳು ಎಂತು ರಾಜ್ಯವಂ ಪರಿಪಾಲಿಸುತ್ತಿರುವರು, ಅವರ ಗುಣಂಗಳನ್ನೂ, ಅಲ್ಲಲ್ಲಿರುವಂಥ ಮಹಿಮೆಗಳನ್ನೂ ಹೇಳುವರಾಗುವಿರಿ" ಎಂದು ಬೆಸಗೊಳಲಾಪುರೋಹಿತನು ಸಮಸ್ತವಾದ ದೊರೆಗಳ ವೃತ್ತಾಂತವನ್ನು ಹೇಳುವ ಕಾಲದಲ್ಲಿ ವತ್ಸರಾಜನ ದೇಶಸಂಪತ್ತನ್ನೂ ಅವನ ಗುಣಾತಿಶಯಗಳನ್ನೂ ಸಹ ಕೊನೆಯಿಲ್ಲದಂತೆ ಹೆಚ್ಚಾಗಿ ವಿಸ್ತರಿಸಿ ಹೇಳಲಾರಾಯನು—" ಅಯ್ಯಾ, ಪುರೋಹಿತರೇ, ವತ್ಸರಾಜನನ್ನು ಕಂಡಿದ್ದಿರಾ ? ಕುಶಲದಲ್ಲಿರುವನೆ !" ಎಂದು ನುಡಿಯಲಾಪುರೋಹಿತನು—" ಎಲೈ, ಸ್ವಾಮಿಯೇ, ಆ ವತ್ಸರಾಜನ ದೇಶದಲ್ಲೇ ಬಂದೆನಲ್ಲದೆ, ಅವನ ಪಟ್ಟಣಕ್ಕೆ ಹೋಗಿ ಸಂದರ್ಶನವಂ ಗೈದು ಬರಲಿಲ್ಲ. ಈಗ ನಾನು ಸ್ವಾಮಿಯವರ ಸಂದರ್ಶನಕ್ಕೆ ಬರುವಾಗ ಅರಮನೆಯ ಬಾಗಿಲಲ್ಲಿ ಒಬ್ಬಾನೊಬ್ಬ ಚಾರನು ಪತ್ರಿಕೆಯನ್ನು ಕರದಲ್ಲಿ ಪಿಡಿದು ನಿಂದು ಎನ್ನಂ ಕುರಿತು—ಎಲೈ ಬ್ರಾಹ್ಮಣೋತ್ತಮನೇ, ನಾನು ವಿದಿಶಾಧಿಪತಿಯಾದ ವತ್ಸರಾಜನ ಮಂತ್ರಿಯಾದ ಯೌಗಂಧರಾಯಣನು ಬರೆದುಕೊಟ್ಟ ಪತ್ರಿಕೆಯಂ ತಂದು ವಿಕ್ರಮಬಾಹುರಾಜೇಂದ್ರನ ಚರಣವಂ ಕಾಣಬೇಕೆಂದು ಇರುವೆನು. ಈ ವೃತ್ತಾಂತವನ್ನು ರಾಜೇಂದ್ರನಿಗೆ ವಿಜ್ಞಾಪಿಸಬೇಕೆಂದು ಹೇಳಿದನು. ಅಪ್ರಸ್ತುತ ಬಂದುದರಿಂದ ವಿಜ್ಞಾಪನೆಯಂ ಗೈದೆನು " ಎನ್ನಲು; ರಾಯನು ವಸುಭೂತಿಯಾದ ಮಂತ್ರಿಯಂ ಕುರಿತು—" ಅಯ್ಯಾ ಮಂತ್ರಿಯೇ, ವಿದಿಶಾದೇಶದಿಂದ ಬಂದಿರುವ ಚಾರನಂ ಕರೆಯಿಸುವನಾಗು." ಎಂದು ನುಡಿದನು.

ಎಂಬಲ್ಲಿಗೆ

ಶ್ರೀ ಕೃಷ್ಣರಾಜ ಒಡೆಯರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ಪ್ರಥಮಗುಚ್ಛಂ ಸಂಪೂರ್ಣಂ.

# ದ್ವಿತೀಯ ಗುಚ್ಛಂ.

---

ಅನಂತರದಲ್ಲಿ ವಿಕ್ರಮಬಾಹುರಾಯನು ಮಂತ್ರಿಯಾದ ವಸುಭೂತಿಗೆ ಚಾರನಂ ಕರೆಯುವಂತೆ ಅಪ್ಪಣೆಯನ್ನಿತ್ತು, ನಾನಾವಾಗಲೂ ಕೌಶಾಂಬೀ ನಗರಿಯಿಂದ ಇದುವರೆಗೂ ಪತ್ರಿಕೆಯು ಬಂದುದಿಲ್ಲ, ಈಗ ಮಂತ್ರಿಯು ಬರೆದುಕಳುಹಿಸುವುದಕ್ಕೆ ಏನು ನಿಮಿತ್ತವಿರುವದೋ ಎಂದು ಆಲೋಚಿಸುತ್ತಿರಲು ; ಅಷ್ಟರಲ್ಲೇ ಮಾಧವನೆಂಬ ಚಾರನು ಮಂತ್ರಿಯ ಅನುಮತಿಯಿಂದ ಸಭಾಸ್ಥಾನಮಂ ಪೊಕ್ಕು, ರತ್ನಸಿಂಹಾಸನದ ಮಧ್ಯದಲ್ಲಿ ವಿರಾಜಿಸುವ ವಿಕ್ರಮಬಾಹುರಾಯನಂ ಕಂಡು, ಸಾಷ್ಟಾಂಗನಮಸ್ಕಾರವಂ ಮಾಡಿ,—" ಎಲೈ, ಮಹಾರಾಜೇಂದ್ರನೇ ! ನಮ್ಮ ಮಂತ್ರಿಯಾದ ಯೌಗಂಧರಾಯಣನು ತಮ್ಮ ಸನ್ನಿಧಿಗೆ ಪತ್ರಿಕೆಯನ್ನು ಬರೆದುಕೊಂಡು ಇರುವನು, ಪರಾಂಬರಿಸಬೇಕು " ಎಂದು ತನ್ನ ಕೈಯ್ಯಲ್ಲಿದ್ದ ಪತ್ರಿಕೆಯಂ ಅವನ ಮುಂದಿರಿಸಲು; ರಾಯನು ಆ ಪತ್ರಿಕೆಯಂ ತೆಗೆದುಕೊಂಡು ಮೇಲುಗಡೆಯಲ್ಲಿದ್ದ ಮುದ್ರಿಕೆಯನ್ನೊಡೆದು ನೋಡಲು ; ಅಲ್ಲಿ

" ರಾಜಾಧಿರಾಜನಾಗಿ ಸಮುದ್ರಮಧ್ಯದಲ್ಲಿ ಭೂದೇವಿಯು ಐರಾವತಿಯಂತೆ ಒಪ್ಪುವ ಸಿಂಹಳದೇಶಕ್ಕೆ ಅಧಿಪತಿಯಾದ ವಿಕ್ರಮಬಾಹುರಾಯನ ಸನ್ನಿಧಿಗೆ ಕೌಶಾಂಬೀನಗರಕ್ಕೆ ಅಧಿಪತಿಯಾದ ವತ್ಸರಾಜೇಂದ್ರನ ಮಂತ್ರಿಯಾದ ಯೌಗಂಧರಾಯಣನು ವಿಜ್ಞಾಪಿಸುವುದೇನೆಂದರೆ :—

ಮೊದಲು ನಮ್ಮ ರಾಜೇಂದ್ರನಿಗೆ ಕೊಟ್ಟು ಇದ್ದ ನಿಮ್ಮ ತಮ್ಮನ ಪುತ್ರಿಯಾದ ವಾಸವದತ್ತಾದೇವಿಯ ವಿಚಾರದಲ್ಲಿ ದೈವಕಟಾಕ್ಷವು ತಪ್ಪಿದುದರಿಂದಲೂ, ನಮ್ಮ ರಾಯನ ರೂಪಿಗೆ ತಕ್ಕ ರಾಜಪುತ್ರಿಯು ಈ ಭೂಮಂಡಲದಲ್ಲಿ ಇಲ್ಲವಾದುದರಿಂದಲೂ, ನಮ್ಮ ರಾಯನ ಚಿತ್ತದಲ್ಲಿ ಕೂಡಿದ ನಿಮ್ಮ ಬಂಧುತ್ವವನ್ನು ಇನ್ನು ಅಭಿವೃದ್ಧಿಹೊಂದಿಸಬೇಕೆಂಬ ಅಭಿಲಾಷೆಯು ಬಲವಾಗಿರುವುದರಿಂದಲೂ, ತಮ್ಮ ಮಗಳು ವಿವಾಹಕ್ಕೆ ಯೋಗ್ಯವಾದ ಯೌವನದಿಂದ ಯುಕ್ತಳಾಗಿ ಇದ್ದಾಳೆಂಬ ವಾರ್ತೆಯನ್ನು ಕೇಳಿದುದರಿಂದಲೂ, ಮುಂದೆ ಆಗತಕ್ಕ ಶುಭಕಾರ್ಯವಂ ನೋಡಬೇಕೆಂದು ಇಚ್ಛೈಸುತ್ತಿರುವೆನು. ತಾವು ಸದ್ಗುಣಗಳಿಂದಲೂ ರಾಜನೀತಿಯಿಂದಲೂ ಯುಕ್ತರಾಗಿರುವಲ್ಲಿ ತಮ್ಮ ಸನ್ನಿಧಾನಕ್ಕೆ ವಿಶೇಷವಾಗಿ ವಿಜ್ಞಾಪಿಸುವುದಕ್ಕೆ ಶಕ್ತನಲ್ಲ "

ಎಂದು ಬರೆದಿರುವ ಪತ್ರಿಕೆಯನ್ನು ಗುಟ್ಟಾಗಿ ನೋಡಿಕೊಂಡು, ಮನದಲ್ಲಿ ಕಳವಳವಂ ಪೊಂದಿ, ರಾಜ್ಯವಿಚಾರಣೆಯಂ ಬಿಟ್ಟು, ಆಲೋಚನೆಯಲ್ಲಿ ಮನವನಿಟ್ಟು, ಸಭಾಸ್ಥಾನದಿಂದೆದ್ದು, ಅಂತಃಪುರವಂ ಕುರಿತು ಪೋಗಿ, ಮಣಿಮಂಟಪದಲ್ಲಿ ಮಂಡಿಸಿರುವ ಧರ್ಮಪತ್ನಿಯಾದ ಕಮಲಾವಳೀದೇವಿಯ ಸಮೀಪವಂ ಸೇರುತ್ತಿರಲು ;

ಅಷ್ಟರಲ್ಲಿ ಕಲಾವತಿಯೆಂಬ ದ್ವಾರಪಾಲಕಳಾದ ಕಾಂತೆಯು ಶೀಘ್ರದಿಂ ಪೋಗಿ,—" ಎಲೌ, ದೇವಿಯೇ! ಪೂಜ್ಯನಾದ ಮಹಾರಾಜನು ಬರುವನು " ಎಂದು ವಿಜ್ಞಾಪಿಸಲಾಕಮಲಾವಳಿಯು ಇದಿರೆದ್ದು ಬರುತಿರಲು ;

ಅಷ್ಟರಲ್ಲಿ ರಾಯನು ಕಂದಿದ ಮುಖಕಮಲವುಳ್ಳವನಾಗಿ, ಒಂದು ಪೀಠದಲ್ಲಿ ಕುಳಿತು, ನಮಸ್ಕಾರವಂ ಗೈದ ಕಮಲಾವಳೀದೇವಿಯುಂ ನೋಡದೆ, ಕಲಾವತಿಯಂ ಕುರಿತು— ಎಲೌ, ಕಾಂತೆಯೇ, ಪುರೋಹಿತರನ್ನು ಇಲ್ಲಿಗೆ ಕರೆದುಕೊಂಡು ಬರುವಳಾಗೆಂದು ನುಡಿಯಲು; ಅವಳು—ಆಜ್ಞೆಯಾದಂತೆ ನಡೆದುಕೊಳ್ಳುವೆನೆಂದು ಆ ಪುರೋಹಿತನಂ ಕರೆದುಕೊಂಡುಬಂದು, ರಾಯನ ಸಮೀಪವಂ ಪೊಂದಿ,—"ಎಲೈ, ರಾಜೋತ್ತಮನೇ! ಮಂತ್ರಿಯಾದ ವಸುಭೂತಿಯು ಆಜ್ಞೆಯಾದಲ್ಲಿ ವಿಚಾರಣೆಗೋಸುಗವಾಗಿ ಬಂದಿದ್ದ ಪ್ರಜೆಗಳನ್ನೂ, ಸಾಮಾಜಿಕರುಗಳನ್ನೂ, ಸಾಮಂತರಾದ ಅರಸುಗಳನ್ನೂ ಸಹ ಅವರವರ ಬಿಡದಿಗೆ ಪೋಗುವಂತೆ ಆಜ್ಞಾಪಿಸುತ್ತೇನೆಂದು ವಿಜ್ಞಾಪಿಸುವುದಕ್ಕೆ ಬಂದಿರುವನು " ಎಂದು ಬಿನ್ನವಿಸಲು; ರಾಯನು—"ಎಲೌ, ಅದೇರೀತಿಯಿಂದ ಪೇಳುವಂತೆ ನುಡಿದು, ಆ ಮಂತ್ರಿಯನ್ನು ಇಲ್ಲಿಗೆ ಕರೆದುಕೊಂಡು ಬರುವಳಾಗು " ಎಂದು ಅಪ್ಪಣೆಯನ್ನೀಯಲು; ಅವಳು ಪೋಗಿ ಅದೇರೀತಿಯಿಂದ ನುಡಿದು ಮಂತ್ರಿಯಂ ಕರೆದುಕೊಂಡು ಬರಲು; ರಾಯನು ಮಂತ್ರಿಪುರೋಹಿತರುಗಳನ್ನು ಒತ್ತಿನಲ್ಲಿ ಕುಳ್ಳಿರುವಂತೆ ಅಪ್ಪಣೆಯನ್ನಿತ್ತು, ಕಮಲಾವಳಿಯ ಕರವನ್ನು ತನ್ನ ಕರದಿಂದ ಪಿಡಿದು ತನ್ನ ಸಮೀಪದಲ್ಲಿ ಕುಳ್ಳಿರಿಸಿಕೊಂಡು, ಕೌಶಾಂಬೀನಗರಿಯಿಂದ ಬಂದ ಮಂತ್ರಿಯ ಪತ್ರಿಕೆಯನ್ನು ತನ್ನ ಮಂತ್ರಿಯ ಹಸ್ತಕೆ ಕೊಟ್ಟು, " ಎಲೈ ಮಂತ್ರಿಯೇ, ಇಲ್ಲಿ ಇರುವ ನಾವು ಮಾತ್ರ ಕೇಳುವಂತೆ ಪತ್ರಿಕೆಯಂ ಓದುವನಾಗು" ಎಂದು ನುಡಿಯಲಾಮಂತ್ರಿಯು ಓದಲಾಪತ್ರಿಕೆಯ ಅಭಿಪ್ರಾಯವಂ ಕೇಳಿ ಕಮಲಾವಳಿಯು ರಾಯನಂ ಕುರಿತು, " ಎಲೈ ಸ್ವಾಮಿಯೇ, ವಾಸವದತ್ತಾದೇವಿಯ ವಿಚಾರದಲ್ಲಿ ದೈವಕಟಾಕ್ಷವು ತಪ್ಪಿದುದರಿಂದ-ಎಂದು ಬರೆದಿರುವ ವಾಕ್ಯದಿಂದ ಎನ್ನ ಮನದಲ್ಲಿ ಬಲವಾದ ಸಂಶಯವು ತಲೆದೋರಿರುವುದು " ಎಂದು ಬಿನ್ನೈಸಲು; ರಾಯನು ಪುರೋಹಿತನಂ ಕುರಿತು—" ಅಯ್ಯಾ, ಪುರೋಹಿತರೇ! ಈ ಪತ್ರಿಕೆಯ ಅಭಿಪ್ರಾಯವನ್ನು ತಿಳಿದ ನಿಮ್ಮ ಚಿತ್ತಕ್ಕೆ ಹೇಗೆ ತೋರುತ್ತಿರುವುದು? ನಮ್ಮ ವಾಸವದತ್ತಾದೇವಿಯು ಜೀವದಿಂದ ಇರುವಳೋ? ಇಲ್ಲವಾದಲ್ಲಿ ಪರಲೋಕದ ಸಿರಿಯಂ ಬಯಸಿರುವಳೋ? ಮತ್ತು ವತ್ಸರಾಜನಿಗೆ ನಮ್ಮ ರತ್ನಾವಳಿಯಂ ಕೊಟ್ಟು ಮದುವೆಯಂಗೆಯ್ಯುವುದು ನಿಮ್ಮ ಚಿತ್ತಕ್ಕೆ ಸಮವಾಗಿ ಇರುವುದೋ ಇಲ್ಲವೋ? ಚೆನ್ನಾಗಿ ಆಲೋಚಿಸಿ ಪೇಳುವವರಾಗಿ" ಎಂದು ನುಡಿಯಲಾ ಪೌರೋಹಿತನು—" ಎಲೈ ಸ್ವಾಮಿಯೇ, ಕೇಳು. ನಾನು ತೀರ್ಥಯಾತ್ರೆಯಂ ಗೈದು ಬರುವ ಕಾಲದಲ್ಲಿ ಆ ವತ್ಸರಾಜನ ದೇಶಕ್ಕಾಗಿ ಬರುತ್ತಾ ಅವನ ವೃತ್ತಾಂತವೆಲ್ಲವನ್ನೂ

ಕೌಶಾಂಬೀನಗರಿಯಿಂದ ಬರುವ ಬ್ರಾಹ್ಮಣರನ್ನು ಕೇಳುವಲ್ಲಿ ವತ್ಸರಾಜನಿಗೆ ವಾಸವದತ್ತಾದೇವಿಯೆಂಬ ಪತ್ನಿಯು ಇರುವಳೆಂದು ಪೇಳಿದರಲ್ಲದೆ ಮತ್ತೇನೂ ದುರ್ವಾರ್ತೆಯನ್ನು ಪೇಳಲಿಲ್ಲ. ಆ ವಾಸವದತ್ತೆಯಲ್ಲಿ ರಾಯನು ಯಾವುದಾದರೂ ಒಂದು ನಿಮಿತ್ತದಿಂದ ಕೋಪವಂ ತಾಳಿ ಇನ್ನೊಂದು ವಿವಾಹವಾಗಬೇಕೆಂದು ಇಚ್ಛೈಸಿರುವನಾಗಿ ತೋರುವುದು. ಇದಲ್ಲದೆ ಇದ್ದಲ್ಲಿ ದೊರೆಗಳಾದವರು ಬಹುವಲ್ಲಭರೆಂಬ ಶಾಸ್ತ್ರವೂ ನಡತೆಯೂ ಸಹ ಇರುವುದರಿಂದ ಪುತ್ರನಾಗಲಿಲ್ಲವೆಂಬ ಕುತೂಹಲದಿಂದಲೋ, ಇನ್ನೊಬ್ಬ ಕಾಂತೆಯನ್ನು ಮದುವೆಯಾಗಬೇಕೆಂಬ ಇಚ್ಛೆಯಂ ತಾಳಿದುದರಿಂದಲೋ, ವಾಸವದತ್ತೆಯಲ್ಲಿ ದೈವಕಟಾಕ್ಷವು ತಪ್ಪಿತೆಂದು ಮಂತ್ರಿಯು ಬರೆದಿರುವುದಾಗಿ ತೋರುವುದಲ್ಲದೆ ಇನ್ನೇನೂ ಸಂದೇಹವು ತೋರಲಾರದು. ಇದಲ್ಲದೆ ವಾಸವದತ್ತೆಯೇ ಪರಲೋಕದ ಸಿರಿಯನ್ನೇ ಬಯಸಿದವಳೇ ನಿಶ್ಚಯವಾಗಿದ್ದಲ್ಲಿ ಆ ವಾರ್ತೆಯು ಲೋಕಪ್ರಸಿದ್ಧವಾಗದೆ ಬಿಡದು. ಮತ್ತು ಕೌಶಾಂಬೀನಗರಿಯಲ್ಲಿರುವ ನಿಮ್ಮ ಕಡೆಯ ಗೂಢಚಾರರುಗಳು ಇಂಥ ವೃತ್ತಾಂತವನ್ನು ಬರೆಯದೆ ಇರರು. ಆದುದರಿಂದ ಆ ಮಂತ್ರಿಯು ಬರೆದಿರುವ ಪತ್ರಿಕೆಗೆ ನಾನು ಪೇಳಿದುದೇ ತಾತ್ಪರ್ಯವಾಗಿರುವುದು. ದಂಪತಿಗಳಾದ ನೀವಿಬ್ಬರೂ ವಾಸವದತ್ತಾದೇವಿಯ ವಿಚಾರದಲ್ಲಿ ವ್ಯಸನವಂ ಪೊಂದತಕ್ಕುದಲ್ಲ. ಮತ್ತು ನಮ್ಮ ರತ್ನಾವಳಿಯನ್ನು ಆ ವತ್ಸರಾಜನಿಗೆ ಕೊಟ್ಟು ವಿವಾಹಂಗೆಯ್ವುದೇ ಯುಕ್ತವಾಗಿರುವುದು. ಏತಕ್ಕೆಂದರೆ—ಆ ವತ್ಸರಾಜನು ರಾಜಾಧಿರಾಜನಾಗಿ ಸಮಸ್ತ ಭೂಮಂಡಲಕ್ಕೆ ಅಧಿಪತಿಯಾಗಿ ಇರುವುದರಿಂದಲೂ, ರೂಪದಲ್ಲಿ ಮನ್ಮಥನಿಗೂ ಮನ್ಮಥನಾಗಿರುವುದರಿಂದಲೂ, ಮೊದಲೇ ಅವನ ಸದ್ಗುಣಾತಿಶಯವನ್ನೂ ಸದ್ವಂಶವನ್ನೂ ಸಹ ಪರೀಕ್ಷಿಸಿ ವಾಸವದತ್ತಾದೇವಿಯನ್ನು ಕೊಟ್ಟು ಬಂಧುತ್ವವನ್ನು ಬಳೆಯಿಸಿ ಇರುವುದರಿಂದಲೂ, ಈ ನಮ್ಮ ರತ್ನಾವಳಿಯು ಯೌವನದಿಂದ ಭೂಷಿತಳಾಗಿ ಸಕಲವಾದ ಸಂಗೀತ ಸಾಹಿತ್ಯ ಮೊದಲಾದ ವಿದ್ಯೆಗಳಲ್ಲಿ ಪಾರಂಗತಳಾಗಿದ್ದರೂ ಇವಳಿಗೆ ತಕ್ಕ ವರನಿಲ್ಲವೆಂದು ದಂಪತಿಗಳಾದ ನೀವಿಬ್ಬರೂ ಅಹೋರಾತ್ರಿಯಲ್ಲೂ ವ್ಯಸನವನ್ನು ಹೊಂದುತ್ತಲಿರುವುದರಿಂದಲೂ, ಈಗ ರತ್ನಾವಳಿಯನ್ನು ವಿವಾಹವಾಗಬೇಕೆಂಬ ಇಚ್ಛೆಯು ಆ ವತ್ಸರಾಜನಿಗೆ ಬಲವಾಗಿ ಇರುವ ತಾತ್ಪರ್ಯವನ್ನು ಮಂತ್ರಿಯು ತನ್ನ ಪತ್ರಿಕೆಯಲ್ಲಿ ಸೂಚಿಸಿ ಇರುವುದರಿಂದಲೂ, ಮತ್ತು ಸೇನೆಯಿಂದಲೂ ರಾಜ್ಯದಿಂದಲೂ ಪರಾಕ್ರಮದಿಂದಲೂ ಬಲಿಷ್ಠನಾದ ಆ ವತ್ಸರಾಜನ ಚಿತ್ತಾನುಸಾರವಾಗಿ ನಡೆಯದೆ ಅವನ ಇಚ್ಛೆಗೆ ಭಂಗವನ್ನುಂಟುಮಾಡಿದಲ್ಲಿ ಮುಂದೆ ರಾಜಕಾರ್ಯಗಳಲ್ಲಿ ಪ್ರಮಾದವು ತೋರುವುದರಿಂದಲೂ, ನಿಮ್ಮ ಪುತ್ರಿಯನ್ನು ಕೊಟ್ಟು ವತ್ಸರಾಜನ ಚಿತ್ತವನ್ನು ಸಂತೋಷಪಡಿಸುವುದು ಸರ್ವೋತ್ತಮಕಾರ್ಯವಹುದೆಂದು ನನ್ನ ಬುದ್ಧಿಗೆ ತೋರುತ್ತಿರುವುದು.” ಎಂದು ಬಿನ್ನವಿಸಲು; ವಿಕ್ರಮಬಾಹುರಾಯನು ಮಂತ್ರಿಯಂ ಕುರಿತು—“ಎಲೈ, ಮಂ

ತ್ರಿಯೇ, ಈಗ ಪುರೋಹಿತರು ಪೇಳಿದ ವಾಕ್ಯವು ನಿನ್ನ ಬುದ್ಧಿಗೆ ಹೇಗೆ ತೋರು ವುದು? ನಿನ್ನ ಅಭಿಪ್ರಾಯವೇಂತಿರುವುದು? ಪೇಳುವನಾಗು" ಎಂದು ಆಜ್ಞೆಯನ್ನೀಯಲಾ ಮಂತ್ರಿಯು—"ಎಲೈ, ಸ್ವಾಮಿಯೇ! ಪುರೋಹಿತರು ರಾಜನೀತಿಗೂ ವ್ಯವಹಾ ರಕ್ಕೂ ಸಹ ಸಮ್ಮತವಾದ ವಾಕ್ಯವನ್ನೇ ಬಿನ್ನೈಸಿರುವರು. ಇವರು ಪೇಳಿದಂತೆ ಕಾರ್ಯವಂ ನಡೆಯಿಸುವುದು ಯುಕ್ತವಾಗಿರುವುದು. ಇಲ್ಲವಾದಲ್ಲಿ ಬಲಿಷ್ಠನಾದ ಆ ವತ್ಸರಾಜನಿಂದ ನಮಗೆ ಹಾನಿಯು ಸಂಭವಿಸದೆ ಇರದು." ಎಂದು ವಿಜ್ಞಾಪಿಸಲು; ಕಮಲಾವಳೀದೇವಿಯು—"ಎಲೈ ಸ್ವಾಮಿಯೇ, ಈಗ ಪುರೋಹಿತರು ಪೇಳಿದ ವಾಕ್ಯವೂ ಅದಕ್ಕೆ ಮಂತ್ರಿಯು ಸಹ ಸಮ್ಮತಿಸಿರುವ ನೀತಿಯೂ ಸಹ ಯುಕ್ತವಾ ಗಿಯೇ ಇರುವುವು. ಆದರೂ ನಮ್ಮ ವಾಸವದತ್ತಾದೇವಿಯಲ್ಲಿ ಎನಗೆ ಸಂದೇಹ ತೋರುತ್ತಾ ಇರುವು"ದೆಂದು ಬಿನ್ನೈಸಲು; ಪುರೋಹಿತನು—"ಎಲೌ ದೇವಿಯೇ, ಲೋಕದಲ್ಲಿ ಯಾವ ಸ್ಥಳದಲ್ಲಿ ವಿಶ್ವಾಸವಿರುವುದೋ ಆ ಸ್ಥಳದಲ್ಲಿ ಮೊದಲಾಗಿ ಜನ ರುಗಳಿಗೆ ಸಂದೇಹವೇ ಬಲವಾಗಿ ತೋರುವುದು ಯುಕ್ತವೇ ಸರಿ. ಆದರೆ ನನ್ನ ವಾಕ್ಯದಲ್ಲಿ ಇನ್ನೂ ನಿಮಗೆ ನಿಶ್ಚಯಜ್ಞಾನವು ಉಂಟಾಗದೇ ಇದ್ದಲ್ಲಿ ಈಗ ಕೌಶಾಂ ಬಿಯ ಪಟ್ಟಣದಿಂದ ಬಂದಿರುವ ಚಾರನಂ ಕರೆದು ಈ ವೃತ್ತಾಂತವನ್ನು ವಿಚಾರಿಸಬ ಹುದು" ಎಂದು ನಿರೂಪಿಸಲಾವಾಕ್ಯಕ್ಕೆ ದೇವಿಯೂ ರಾಯನೂ ಮಂತ್ರಿಯೂ ಸಹ ಸಮ್ಮತಿಸಲು; ರಾಯನು ದ್ವಾರಪಾಲಕಿಯಂ ಕರೆದು-"ಎಲೌ ಕಾಂತೆಯೆ, ಕೌಶಾಂ ಬೀನಗರದಿಂದ ಬಂದಿರುವ ಚಾರನನ್ನು ಇಲ್ಲಿಗೆ ಕರೆದುಕೊಂಡು ಬರುವಳಾಗು" ಎಂದು ಅಪ್ಪಣೆಯನ್ನೀಯಲು; ಆ ಮಂಜರಿಯು—ಅಜ್ಞಾನುಸಾರವಾಗಿ ನಡೆದುಕೊಳ್ಳುವೆ ನೆಂದು, ಪೋಗಿ, ಆ ಚಾರನನ್ನು ಕರೆದುಕೊಂಡು ಬರುತ್ತಾ—"ಎಲೈ ಚಾರನೇ, ಇತರರಾದ ದೊರೆಗಳ ಸಮೀಪವನ್ನು ಪೊಂದುವಂತೆ ನಮ್ಮ ರಾಯನ ಸನ್ನಿಧಿಯು ಪೊಂದತಕ್ಕುದಲ್ಲ. ನಮ್ಮ ರಾಯನು ಮಹಾತೇಜೋನಿಧಿಯಾಗಿರುವನಾದುದರಿಂದ ಭಯಭಕ್ತಿ ಯುಕ್ತನಾಗಿ ಬರುವನಾಗು" ಎಂದು ನುಡಿಯಲು; ಆ ಚಾರನು-"ಎಲೌ ಸ್ತ್ರೀಯೇ, ದೊರೆಗಳು ದೇವಾಂಶಪುರುಷರಾಗಿರುವರೆಂಬುದನ್ನು ಬಲ್ಲೆನು. ರಾಜ ಸೇವೆಯಿಂದಲೆ ಎನ್ನ ಶರೀರವು ಬಾಲ್ಯದಿಂದಲೂ ಬಳೆದಿರುವುದೆಂದು ತಿಳಿಯುವ ಳಾಗು. ಮತ್ತು ಲೋಕದಲ್ಲಿ ದೊರೆಗಳೂ ಅಗ್ನಿಯೂ ಸ್ತ್ರೀಯರೂ ಸಹ ಅತಿದೂ ರವಲ್ಲದೆ ಅತಿಸಮೀಪವಲ್ಲದೆ ಮಧ್ಯಭಾಗದಲ್ಲಿ ಸೇವಿಸುವುದಕ್ಕೆ ಯೋಗ್ಯರೆಂಬು ದನ್ನೂ ತಿಳಿದಿರುವೆನು" ಎಂದು ನುಡಿಯುತ್ತಾ, ಅಂತಃಪುರವನ್ನು ಪೊಕ್ಕು, ಅಲ್ಲಿರುವ ವಿಚಿತ್ರತರವಾದ ವಸ್ತುಗಳನ್ನೂ ಎಣಿಕೆಗೂ ಅಳವಡದೆ, ವರ್ಣನೆಗೆ ಒಳಗಾಗದೆ, ಜೀವದಿಂದೊಡಗೂಡಿ ಅಂಗಂಗಳಿಂ ಕೂಡಿ ಸಂಚರಿಸುವ ಮಿಂಚಿನ ಬಳ್ಳಿಗಳೋ ಎಂಬ ಸಂದೇಹಂಬಡಿಸುತ್ತಿರುವ ಸ್ತ್ರೀಯರುಗಳನ್ನೂ, ಮತ್ತು ಅಲ್ಲಲ್ಲಿ ಸಲ್ಲೀಲೆಯಿಂದೊಡ ಗೂಡಿ ಅವರುಗಳು ಮಾಡುವ ನಾಟ್ಯಗಳನ್ನೂ, ಪೇಳುವ ಸಂಗೀತಗಳನ್ನೂ ಸಹ

ಕೇಳಿ, ಇಲ್ಲಿರುವ ಊಳಿಗದ ಹೆಣ್ಣುಗಳು ನೋಡಿದವರ ಕಣ್ಮನಗಳನ್ನು ಕೈಸೂರೆಯಂ ತೆಗೆದುಕೊಳ್ಳುವರು. ಈ ರಾಯನು ನಮ್ಮ ವತ್ಸರಾಜೇಂದ್ರನಿಗೆ ಮಾವನಾಗಿರುವುದೇ ಯುಕ್ತವಾಗಿ ತೋರುವುದೆಂದು ತನ್ನ ಮನದಲ್ಲಿ ಯೋಚಿಸುತ್ತಾ ಬರಲು, ದ್ವಾರಪಾಲಕಿಯು ಮುಂಬಾಗವನ್ನು ಸೇರಿ,—“ ಎಲೈ ರಾಜೇಂದ್ರನೇ! ಕೌಶಾಂಬೀನಗರಿಯ ಚಾರನು ಬಂದಿರುವನು ” ಎಂದು ಬಿನ್ನೈಸಲು; ಕಮಲಾವಳಿಯು ಒತ್ತಿನಲ್ಲಿರುವ ಸರಿಗೆಯ ತೆರೆಯ ಮರೆಯನ್ನು ಸೇರಲು; ರಾಯನು ಪುರೋಭಾಗದಲ್ಲಿರುವ ಚಾರನಂ ಕುರಿತು—“ ಎಲೈ ಚಾರನೇ, ನಿಮ್ಮ ವತ್ಸರಾಜನು ಪತ್ನಿಯಾದ ವಾಸವದತ್ತಾದೇವಿಯಿಂದೊಡಗೂಡಿ ಸುಖದಲ್ಲಿರುವನೆ? ಮಂತ್ರಿಯಾದ ಯೌಗಂಧರಾಯಣನು ರಾಜಕಾರ್ಯದಲ್ಲಿ ನಿರತನಾಗಿ ಪ್ರಜೆಗಳಿಗೆ ಸಮ್ಮತನಾಗಿ ಚತುರೋಪಾಯಗಳಲ್ಲಿ ಕುಶಲನಾಗಿರುವನೆ? ರುಮಣ್ವಂತನೆಂಬ ಸೇನಾಪತಿಯು ವೈರಿಗಳಂ ಜಯಿಸುವುದರಲ್ಲಿ ಸಮರ್ಥನಾಗಿ ಐಶ್ವರ್ಯದಲ್ಲಿಯೂ ತನ್ನ ದೇಹಸೌಖ್ಯದಲ್ಲಿಯೂ ಸಹ ಪ್ರೀತಿಯುಳ್ಳವನಲ್ಲದೇ ಇರುವನೆ? ವಾಸವದತ್ತಾದೇವಿಯು ಹಿತವಾದ ಕಾರ್ಯವಂಗೆಯ್ಯುತ್ತ ತನ್ನ ಪತಿಗೆ ಸಮ್ಮತಳಾಗಿರುವಳೆ? ದೇಶದಲ್ಲಿ ಕಾಲಕಾಲಕ್ಕೆ ಆಗುವಂಥ ಮಳೆಗಳಿಂದ ವೃದ್ಧಿಯಂ ಹೊಂದಿದ ಬೆಳೆಗಳ ಸಂಪತ್ತಿನಿಂದ ಪ್ರಜೆಗಳೆಲ್ಲರೂ ಯುಕ್ತರಾಗಿ, ಸಂತಾನಗಳಿಂದ ಸಂಗತರಾಗಿ, ರಾಯನ ಅಭಿವೃದ್ಧಿಯನ್ನು ಬಯಸುತ್ತ, ಇತರ ಬಾಧೆಗಳಿಲ್ಲದೆ ಇರುವರೆ? ಪರಿಜನ ಪುರಜನರೆಲ್ಲರೂ ತಮ್ಮ ಇಷ್ಟಪ್ರಾಪ್ತಿಗಳಿಂದ ಸಂತುಷ್ಟರಾಗಿರುವರೆ? ” ಎಂದು ಬೆಸಗೊಳ್ಳಲಾಮಾಧವನೆಂಬ ಚಾರನು—“ ಎಲೈ ಸ್ವಾಮಿಯೇ, ಎಲ್ಲರೂ ಸಂತೋಷಯುಕ್ತರಾಗಿ ಸ್ವಾಮಿಭಕ್ತಿಯಿಂದ ಇರುವರು. ನೀವು ಅಪ್ಪಣೆಯನ್ನಿತ್ತ ಒಂದು ವಾಕ್ಯಕ್ಕೆ ಮಾತ್ರ ನಾನು ಪ್ರತ್ಯುತ್ತರವನ್ನು ಬಯಸುವುದಕ್ಕೆ ಯೋಗ್ಯನಾಗಲಾರೆನು ” ಎಂದು ನುಡಿಯಲಾವಾಕ್ಯವಂ ಕೇಳ್ದು ರಾಯನೂ ಕಮಲಾವಳೀದೇವಿಯೂ ಸಹ ಅಂತರಂಗದಲ್ಲಿ ಮಹತ್ತರವಾದ ಕಳವಳವಂ ಹೊಂದುತ್ತಿರಲು; ಪುರೋಹಿತನು-ನಾನು ವಾಸವದತ್ತೆಯ ವಿಚಾರವನ್ನು ಚೆನ್ನಾಗಿ ತಿಳಿಯದೆ ಇದ್ದರೂ ಮಂತ್ರಿಯ ಪತ್ರದಿಂದ ವ್ಯಸನವಂ ಹೊಂದುತ್ತಲಿದ್ದ ಈ ರಾಜದಂಪತಿಗಳಿಗೆ ಸಂತೋಷವಂ ಪುಟ್ಟಿಸುವುದಕ್ಕೋಸುಗ ಎನ್ನ ಬುದ್ಧಿಯಿಂದ ನಾನಾಪ್ರಕಾರವಾದ ವಾಕ್ಯಗಳನ್ನು ಕಲ್ಪಿಸಿ ಪೇಳಿದುದಲ್ಲದೆ ಚಾರನನ್ನು ಕರೆದು ವಿಚಾರಿಸಿದಲ್ಲಿ ಸಮಸ್ತವಾದ ಸಂದೇಹವೂ ಪರಿಹಾರವಾಗುವುದೆಂದು ನುಡಿದಿರುವೆನು. ಈ ಚಾರನಾದರೋ ಬಲವಾದ ಸಂದೇಹದಿಂದೊಡಗೂಡಿದ ವಾಕ್ಯವನ್ನು ನುಡಿಯುತ್ತಿರುವನು. ಮುಂದೆ ಇನ್ನೇನು ನುಡಿಯುತ್ತಿರುವನೋ, ನಾನು ಪೇಳಿದ ವಾಕ್ಯವು ಎಲ್ಲಿ ಅಪದ್ಧವಾಗುವುದೋ, ತಿಳಿಯೆನು-ಎಂದು ಯೋಚಿಸುತ್ತಿರಲು; ಮಂತ್ರಿಯು—“ ಎಲೈ, ಚಾರನೇ, ನೀನು ಯಾವ ವಾಕ್ಯಕ್ಕೆ ಪ್ರತ್ಯುತ್ತರವನ್ನು ಪೇಳುವುದಕ್ಕೆ ಶಕ್ತಿಯಿಲ್ಲವೆಂದು ಬಿನ್ನೈಸಿರುವೆ. ಆ ವಾಕ್ಯವು ಯಾವುದು ನುಡಿ? ” ಎಂದು ಪೇಳಲಾ

ಚಾರನು—“ ಅಯ್ಯಾ, ಮಂತ್ರಿಗಳೇ, ಕೇಳಿ. ವಾಸವದತ್ತಾದೇವಿಯು ಹಿತವಾದ ಕಾರ್ಯವಂಗೆಯ್ಯುತ್ತ ತನ್ನ ಪತಿಗೆ ಸಮ್ಮತಳಾಗಿರುವಳೇ ಎಂದು ದೊರೆಗಳು ಅಪ್ಪಣೆಯನ್ನಿತ್ತರು. ನಾನು ಅಂತಃಪುರದ ಸಂಚಾರಕ್ಕೆ ಯೋಗ್ಯನಲ್ಲವಾದುದರಿಂದ ಆ ಪ್ರಶ್ನೆಗೆ ಉತ್ತರವಂ ಪೇಳಲಾರೆನೆಂದು ಬಿನ್ನವಿಸಿದೆನು ” ಎನ್ನಲು; ರಾಯನು ಈ ಚಾರನ ವಾಕ್ಯದಿಂದ ವಾಸವದತ್ತಾದೇವಿಯು ಕ್ಷೇಮದಲ್ಲಿ ಇದ್ದಾಳೆಂಬ ವಾಕ್ಯವು ವ್ಯಕ್ತವಾಗಿ ತೋರಲಿಲ್ಲವೆಂದು ಮನದಲ್ಲಿ ಯೋಚಿಸಿ,—“ ಎಲೈ ಚಾರನೇ, ನೀನು ಅಂತಃಪುರದ ಸಂಚಾರಕ್ಕೆ ಯೋಗ್ಯನಲ್ಲದೆ ಇದ್ದರೂ ಆ ವಾಸವದತ್ತೆಯು ಅಂತಃಪುರದಲ್ಲಿ ಕ್ಷೇಮವಾಗಿದ್ದಾಳೆಂಬ ವಾರ್ತೆಯನ್ನಾದರೂ ಕೇಳಿಬಲ್ಲೆಯಾ? ” ಎಂದು ನುಡಿಯಲು; ಚಾರನು—“ ಅಯ್ಯಾ, ರಾಜೇಂದ್ರನೇ, ನಮ್ಮ ವಾಸವದತ್ತಾದೇವಿಯರು ವಸಂತಕಾಲವಾದುದರಿಂದ ಮನ್ಮಥನಂ ಪೂಜಿಸಲೋಸುಗ ಕೌಶಾಂಬೀನಗರಿಯ ಬತ್ತಿನಲ್ಲಿ ಇರುವ ಸುಂದರವಾದ ವನಕ್ಕೆ ಅನೇಕವಾದ ಸುಂದರಿಯರಿಂದೊಡಗೂಡಿ ಮಂಗಳಕರವಾದ ಪಲ್ಲಕ್ಕಿಯನ್ನೇರಿ ಸ್ವಾರಿಯನ್ನು ಪೋಗಿ ಬಂದಿರ್ಪುದಂ ಕಂಡಿರುವೆನು. ಅಂತಃಪುರದಲ್ಲಿ ನಮ್ಮ ದೇವಿಯು ಸಂತೋಷದಲ್ಲಿ ಇರುವಳೆಂಬುದರಲ್ಲಿ ಸಂದೇಹವು ಎಳ್ಳಷ್ಟಾದರೂ ತೋರುವುದಿಲ್ಲ ” ಎಂದು ಬಿನ್ನೈಸಲಾವಾಕ್ಯವಂ ಕೇಳಿ, ಎಲ್ಲರೂ ಸಂತೋಷಭರಿತರಾಗಿರಲು; ರಾಯನು—“ ಎಲೈ, ಚಾರನೇ, ನಾವು ಅಪ್ಪಣೆಯನ್ನೀಯುವವರೆಗೂ ಇಲ್ಲೇ ಇದ್ದುಕೊಂಡು ಇರುವವನಾಗು” ಎಂದು ಅಪ್ಪಣೆಯನ್ನಿತ್ತು ಕಳುಹಲು; ಪುರೋಹಿತನು—“ ಅಯ್ಯಾ ರಾಜೇಂದ್ರನೇ, ನಾನು ವಿಜ್ಞಾಪನೆಯಂಗೈದ ವಾಕ್ಯವು ಈಗಲಾದರೂ ನಿನ್ನ ಚಿತ್ತಕ್ಕೆ ಯಥಾರ್ಥವಾಗಿ ತೋರಿತೆ? ಮುಂದೆ ಏನು ಅಪ್ಪಣೆಯನ್ನೀಯುತ್ತಿರುವೆ? ” ಎಂದು ಬಿನ್ನೈಸಲು ರಾಜೇಂದ್ರನು ಬತ್ತಿನಲ್ಲಿದ್ದ ಪತಿವ್ರತಾಶಿರೋಮಣಿಯಾದ ಕಮಲಾವಳಿಯ ಮುಖವಂ ನೋಡಲು, ಕಮಲಾವಳೀದೇವಿಯು, ರಾಯನ ಅಭಿಪ್ರಾಯವಂ ತಿಳಿದು,—“ ಎಲೈ ಸ್ವಾಮಿಯೇ, ಆ ವತ್ಸರಾಜಂಗೆ ಪುತ್ರಿಯನ್ನು ಕೊಡುವುದು ನಿಮ್ಮ ಚಿತ್ತಕ್ಕೆ ಸಮ್ಮತವಾದಲ್ಲಿ ಎನಗೂ ಅದೇ ವಾಕ್ಯವು ಸಮ್ಮತವೇ ಸರಿ ” ಎಂದು ಬಿನ್ನೈಸಲು; ಮಂತ್ರಿಯು ಕೈಗಳಂ ಮುಗಿದು—“ ಎಲೈ, ಸ್ವಾಮಿಯೇ, ನಿನ್ನ ಚಿತ್ತಕ್ಕೆ ಬೇಸರವು ತೋರದೆ ಇದ್ದಲ್ಲಿ ಒಂದು ವಾಕ್ಯವಂ ಬಿನ್ನೈಸುವೆನು ” ಎಂದು ನುಡಿಯಲು; ರಾಯನು— “ ಎಲೈ, ಮಂತ್ರಿಯೇ, ನೀನಾಡಿದ ವಾಕ್ಯದಲ್ಲಿ ಎಂದಿಗೂ ನನಗೆ ಬೇಸರವು ತೋರಲಾರದು. ಏನಿದ್ದರೂ ಭಯವಿಲ್ಲದೆ ಬಿನ್ನೈಸುವನಾಗು ” ಎಂದು ನುಡಿಯಲು; ಮಂತ್ರಿಯು—“ ಎಲೈ ಸ್ವಾಮಿಯೇ, ನಿಮ್ಮ ಪುತ್ರರಾದ ವಿಂದಾನುವಿಂದರುಗಳು ಆರಟ್ಟದೇಶಾಧಿಪತಿಯಾದ ಜಯವರ್ಮರಾಯನಲ್ಲಿ ಬಹಳವಾದ ಮಿತ್ರತ್ವವನ್ನು ಬಳೆಯಿಸಿ ಈ ರತ್ನಾವಳೀದೇವಿಯನ್ನು ಅವನ ಮಗನಾದ ಕೀರ್ತಿವರ್ಮನಿಗೆ ಕೊಟ್ಟು ವಿವಾಹವನ್ನು ವಿರಚಿಸುತ್ತೇವೆಂದು ಪ್ರತಿಜ್ಞೆಯನ್ನು ಮಾಡಿರುವರೆಂಬುದಾ

ಗಿಯೂ, ಅವನ ಪುತ್ರಿಯರನ್ನು ತಾವು ಮದುವೆಯಂ ಮಾಡಿಕೊಳ್ಳಬೇಕೆಂಬುದಾಗಿಯೂ ನಿಶ್ಚಯಮಂ ಗೈದಿರುವರೆಂಬ ವರ್ತಮಾನವಂ ಕೇಳಿರುವೆನು. ಲೋಕದಲ್ಲಿ ಮಕ್ಕಳು ಯೌವನಸ್ಥರಾದ ಬಳಿಕ ಮಿತ್ರರೋಪಾದಿಯಲ್ಲಿ ಕಾಣಬೇಕೆಂಬ ಮರ್ಯಾದೆಯೂ ಇರುವುದರಿಂದ ಈಗ ಸ್ವಾಮಿಯವರು ಯೋಚಿಸಿರುವ ಕಾರ್ಯವನ್ನು ಅವರೊಡನೆ ಆಲೋಚಿಸಿ, ಅವರ ಅಭಿಪ್ರಾಯವನ್ನೂ ತಿಳಿದ ಬಳಿಕ, ಮುಂದಣ ಶುಭಕಾರ್ಯದಲ್ಲಿ ಪ್ರಯತ್ನವಂಗೆಯ್ಯಬಹುದಾಗಿ ತೋರುತ್ತಿರುವುದು. ಇದರ ಮೇಲೆ ಸರ್ವಜ್ಞರಾದ ಸ್ವಾಮಿಯವರ ಚಿತ್ತಕ್ಕೆ ಹೇಗೆ ಸಮ್ಮತವೋ ಆರೀತಿಯಾಗಿ ನಡೆದುಕೊಳ್ಳುವೆನು" ಎಂದು ನುಡಿಯಲು; ರಾಯನು—"ಅಯ್ಯಾ ಪುರೋಹಿತರೇ, ನಾವು ಮಾಡುವ ಕಾರ್ಯವನ್ನು ಆ ಪುತ್ರರೊಡನೆ ಆಲೋಚನೆಯಂ ಮಾಡುವುದು ನಿಮ್ಮ ಚಿತ್ತಕ್ಕೆ ಯುಕ್ತವಾಗಿ ತೋರುವುದೇ?" ಎನ್ನಲು; ಆ ಪುರೋಹಿತನು—"ಎಲೈ, ರಾಜೇಂದ್ರನೇ, ಮಂತ್ರಿಯಾದ ವಸುಭೂತಿಯು ಯುಕ್ತವಾಗಿಯೇ ವಿಜ್ಞಾಪನವಂಗೆಯ್ದಿರುವನು." ಎಂದು ಬಿನ್ನೈಸುತಿರ್ದನು.

ಎಂಬಲ್ಲಿಗೆ

ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್

ದ್ವಿತೀಯಗುಚ್ಛಂ ಸಂಪೂರ್ಣಂ.

# ತೃತೀಯ ಗುಚ್ಛಂ.

---

ಅನಂತರದಲ್ಲಿ ವಿಕ್ರಮಬಾಹುರಾಯನು ಮಂತ್ರಿ ಪುರೋಹಿತರ ವಾಕ್ಯವನ್ನು ಕೇಳಿ ಅದೇಮೇರೆಯಲ್ಲಿ ಪುತ್ರರಾದ ವಿಂದಾನುವಿಂದರ ಅನುಮತಿಯಂ ತಿಳಿದು ಕಾರ್ಯವಂ ನಡೆಸುವೆನೆಂದು ನುಡಿಯುತ್ತಿರಲು; ಕಮಲಾವಳೀದೇವಿಯು—" ಎಲೈ ಸ್ವಾಮಿಯೇ, ಆರಟ್ಟದೇಶದ ಜಯವರ್ಮನಿಗೂ ವತ್ಸರಾಜನಿಗೂ ಅಜಗಜನ್ಯಾಯವಾದ ತಾರತಮ್ಯವಿರುವುದರಿಂದ ವತ್ಸರಾಜನಿಗೆ ನಮ್ಮ ರತ್ನಾವಳಿಯನ್ನು ಕೊಡುವುದು ನ್ಯಾಯವಾಗಿಯೂ ಅತ್ಯಂತ ಸಂತೋಷಕರವಾಗಿಯೂ ಇದ್ದರೂ ಮಕ್ಕಳುಗಳನ್ನು ಕರೆದು ಕೇಳಬಹುದು." ಎಂದು ವಿಜ್ಞಾಪಿಸುತ್ತಿರಲು;

ಅಷ್ಟರಲ್ಲೇ ದ್ವಾರಪಾಲಕಿಯಾದ ಕಲಾವತಿಯು ಬಂದು—" ಎಲೈ ಮಹಾರಾಜನೇ, ಸೂರ್ಯಚಂದ್ರರುಗಳು ಏಕಕಾಲದಲ್ಲಿ ಬಂದು ಇರುವರೋ ಎಂಬಂತೆ ನಿಮ್ಮ ಪುತ್ರರುಗಳಾದ ವಿಂದಾನುವಿಂದ ರಾಯರುಗಳು ರಾಜ್ಯಕಾರ್ಯವನ್ನು ವಿಜ್ಞಾಪನೆಯ ಮಾಡುವುದಕ್ಕಾಗಿ ಬಂದು ಸುಂದರ ಹಜಾರದ ಬಾಗಿಲಲ್ಲಿ ನಿಂದಿರುವರು." ಎಂದು ವಿಜ್ಞಾಪಿಸಲು; ರಾಯನು—" ಎಲೌ ಕಲಾವತಿಯೇ, ಶೀಘ್ರದಿಂದ ಅವರನ್ನು ಕರೆದುಕೊಂಡು ಬರುವಳಾಗು" ಎಂದು ಆಜ್ಞಾಪಿಸಲು;

ಅವಳು ಪೋಗಿ ತ್ವರೆಯಿಂದ ಆ ರಾಜಪುತ್ರರುಗಳಿಂದೊಡಗೂಡಿ ರಾಯನ ಮುಂದುಗಡೆಯನ್ನು ಬಂದು ಸೇರಲು; ರಾಮಲಕ್ಷ್ಮಣರುಗಳಂತೆ ಪರಿಶೋಭಿಸುವ ಆ ವಿಂದಾನುವಿಂದರುಗಳು ರಾಯನಿಗೆ ಸಾಷ್ಟಾಂಗವಾಗಿ ನಮಸ್ಕರಿಸುತ್ತ ನಿಂದಿರಲು;

ರಾಯನು—ಈಗ ತಾವು ಆಲೋಚಿಸಿ ಇರುವ ಕಾರ್ಯವನ್ನು ಮಕ್ಕಳಿಗೆ ತಿಳಿಸುವಂತೆ ಮಂತ್ರಿ ಪುರೋಹಿತರುಗಳಿಗೆ ಸಂಜ್ಞೆಯಂಗೆಯ್ಯಲು;

ಅವರಿರ್ವರು ರಾಜಪುತ್ರರುಗಳನ್ನು ಮಣಿಹಜಾರದ ಪಾರ್ಶ್ವಭಾಗವಂ ಪೊಂದಿಸಿ, ಅವರುಗಳಂ ಕುರಿತು,—" ಎಲೈ, ರಾಜಪುತ್ರರುಗಳಿರಾ! ನಿಮ್ಮ ಸಹೋದರಿಯಾದ ರತ್ನಾವಳಿಯು ಸಮಸ್ತವಿದ್ಯೆಗಳಲ್ಲಿ ಕುಶಲಳಾಗಿ ಯೌವನದಿಂದ ವಿಭೂಷಿತಳಾಗಿದ್ದರೂ ಅವಳ ರೂಪಿಗೆ ತಕ್ಕ ವರನು ಎಲ್ಲಿಯೂ ಇಲ್ಲದುದರಿಂದ ನಿಮ್ಮ ಮಾತಾಪಿತೃಗಳಿಗೆ ಬಲವತ್ತರವಾದ ವ್ಯಸನವು ಪ್ರಾಪ್ತವಾಗಿರುವ ಸಂಗತಿಯು ನಿಮ್ಮ ಚಿತ್ತಕ್ಕೆ ವೇದ್ಯವಾಗಿ ಇದೆಯಷ್ಟೆ. ಈಗ ಕೌಶಾಂಬೀನಗರಿಗೆ ಅಧಿಪತಿಯಾಗಿ ನಿಮ್ಮ ಚಿಕ್ಕಪ್ಪನಾದ ಪ್ರದ್ಯೋತರಾಯನ ಪುತ್ರಿಯಾದ ವಾಸವದತ್ತಾದೇವಿಗೆ ಪತಿಯಾದ ವತ್ಸರಾಜನು ರೂಪಿನಿಂದಲು ಗುಣದಿಂದಲು ವಿಭೂಷಿತನಾಗಿ ಬಹುದೇಶಕ್ಕೆ ಅಧಿಪತಿಯಾಗಿರುವನೆಂಬುದು ನಿಮಗೂ ವಿದಿತವಾಗಿಯೇ ಇರಬಹುದು. ಈಗ ಆ ವತ್ಸರಾಜನು ನಮ್ಮ ರಾಜೇಂದ್ರನ ಬಳಿಗೆ, ರತ್ನಾವಳಿಯನ್ನು ಕೊಟ್ಟು ಮದುವೆಯನ್ನು

ಮಾಡಿಕೊಡಬೇಕೆಂದೊಂದು ಪತ್ರಿಕೆಯನ್ನು ಬರೆದುಕೊಂಡಿರುವನು. ಅವನಿಗೆ ಕೊಡುವುದು ಯುಕ್ತವೆಂದು ರಾಜೇಂದ್ರನ ಚಿತ್ತಕ್ಕೂ ದೇವಿಯರ ಚಿತ್ತಕ್ಕೂ ತೋರಿರುವುದು. ಲೋಕದಲ್ಲಿ ಪುತ್ರರಾದವರುಗಳು ತಾಯಿತಂದೆಗಳ ಮಾತುಗಳಂ ಕೇಳಿ ಅವರುಗಳಿಗೆ ಸಂತೋಷವನ್ನುಂಟುಮಾಡುವುದೇ ಯುಕ್ತಧರ್ಮವು. ಮತ್ತು ರಾಮಚಂದ್ರ, ಪರಶುರಾಮ, ಪೂರುಚಕ್ರವರ್ತಿ—ಇವರುಗಳ ಕಥೆಗಳನ್ನು ಕೇಳಿರುವಿರಿ. ಪ್ರಜ್ಞಾಶಾಲಿಗಳಾದ ನಿಮಗೆ ವಿಶೇಷ ವಾಕ್ಯಗಳನ್ನು ವಿಜ್ಞಾಪಿಸುವುದಕ್ಕೆ ಶಕ್ತರಾಗಲಾರೆವು" ಎಂದು ಬಿನ್ನೈಸಲಾವಿಂದಾನುವಿಂದರುಗಳು ಮಂತ್ರಿ ಪುರೋಹಿತರುಗಳ ವಾಕ್ಯಗಳಂ ಕೇಳಿ ಕೋಪದಿಂ ಕಣ್ಣುಗಳಂ ಕೆಂಪುಗೂಡಿಸಿ—"ಎಲೈ, ಮಂತ್ರಿಯೇ! ಕೇಳು. ಪೂಜ್ಯರಾದ ತಾಯಿತಂದೆಗಳು ಒಪ್ಪಿದ ಬಳಿಕ ಬಾಲಕರಾದ ನಮ್ಮನ್ನು ಕೇಳತಕ್ಕ ಪ್ರಕೃತವೇ ಇಲ್ಲ. ಐಶ್ವರ್ಯವು ಬಲವಾಗಿರುವುದೆಂದು ಆ ವತ್ಸರಾಜನಿಗೆ ಎಷ್ಟುಜನ ಪುತ್ರಿಯರನ್ನು ಕೊಟ್ಟರೂ ಕೊಡಬಹುದು." ಎಂದು ಹೇಳಿ ಅಲ್ಲಿ ನಿಲ್ಲದೆ ತಮ್ಮ ಅರಮನೆಯಂ ಕುರಿತು ಪೋಗಲು;

ಮಂತ್ರಿ ಪುರೋಹಿತರಿಬ್ಬರೂ ಖಿನ್ನಹೃದಯರಾಗಿ ಬರುತ್ತ, ಮಂತ್ರಿಯು ಪುರೋಹಿತನಂ ಕುರಿತು—"ಎಲೈ ಪುರೋಹಿತರೇ, ಈ ವಿಂದಾನುವಿಂದರುಗಳು ಮಾಡಿರುವ ದುರಾಲೋಚನೆಯನ್ನು ಮೊದಲೇ ನಾನು ಹೇಳಿದೆನಷ್ಟೆ. ಅದಕ್ಕೆ ಸರಿಯಾದ ಉತ್ತರವನ್ನು ಹೇಳಿಹೋದರು. ಈಗ ಈ ವಾರ್ತೆಯನ್ನು ಕೇಳಿದ ನಮ್ಮ ರಾಯನು ಮಕ್ಕಳಲ್ಲಿ ವಾತ್ಸಲ್ಯವಂ ಬಿಟ್ಟು ಅವರಿಗೆ ತಕ್ಕ ಶಿಕ್ಷೆಯನ್ನುಂಟುಮಾಡದೆ ಬಿಡನು. ಮತ್ತು ರಾಜಾಜ್ಞೆಯಂ ಮೀರಿದವನು ತಂದೆಯಾದರೂ ಮಗನಾದರೂ ತಮ್ಮನಾದರೂ ಸರಿ, ಅವರುಗಳಿಗೆ ದಾಕ್ಷಿಣ್ಯವಿಲ್ಲದೆ ಬಲವಾದ ದಂಡನೆಯನ್ನುಂಟುಮಾಡುವುದು ರಾಜನೀತಿಗೆ ಮುಖ್ಯಧರ್ಮವಾಗಿರುವುದು. ಈಗ ವಿಂದಾನುವಿಂದರುಗಳು ಸಮ್ಮತರಾಗದೆ ಉತ್ತರವನ್ನು ಚೆನ್ನಾಗಿ ಕೊಡದೆ ಕೋಪವನ್ನು ತಾಳಿ ಪೋದರೆಂದು ರಾಯನೊಡನೆ ಹೇಳಿದಲ್ಲಿ, ಏನು ಅನರ್ಥವಾದ ಕಾರ್ಯವು ಕೈಸೇರುವುದೋ ತಿಳಿಯಲಾಗದು." ಎಂದು ನುಡಿಯಲಾಪುರೋಹಿತನು—"ಅಯ್ಯಾ ಮಂತ್ರಿಗಳೇ, ನಡೆದ ಕಾರ್ಯವನ್ನು ವಂಚಿಸದೆ ರಾಯನಿಗೆ ವಿಜ್ಞಾಪಿಸುವುದು ನಮಗೆ ಮುಖ್ಯಧರ್ಮವು" ಎಂದು ನುಡಿಯುತ್ತ, ರಾಯನ ಸನ್ನಿಧಾನವಂ ಸೇರಿ ತಲೆಯಂ ತಗ್ಗಿಸಿ ನಿಲ್ಲಲು;

ಆರಾಯನು ಏನೋ ಒಂದು ಪರಿಯಾಗಿ ಪ್ರತ್ಯುತ್ತರವನ್ನು ಹೇಳದೆ ಭಯವನ್ನು ಪೊಂದಿರುವ ಮಂತ್ರಿ ಪುರೋಹಿತರುಗಳ ಮುಖವಂ ನೋಡಿ—"ಎಲೈ, ಮಂತ್ರಿ ಪುರೋಹಿತರೇ! ಪುತ್ರರಾದ ವಿಂದಾನುವಿಂದರುಗಳು ಎನ್ನ ಅಭಿಮತವನ್ನು ಅಂಗೀಕರಿಸದೆ ಪೋದರೆಂಬ ಅಭಿಪ್ರಾಯವು ನಿಮ್ಮ ಮುಖಗಳನ್ನು ನೋಡಿದಮಾತ್ರದಿಂದಲೇ ತಿಳಿಯಲಾದುದು" ಎಂದು ಅಪ್ಪಣೆಯನ್ನೀಯಲು; ಅವರಿಬ್ಬರೂ

ಭಾವಜ್ಞರಾದ ಸ್ವಾಮಿಯವರಿಗೆ ವಿಶೇಷವಾಗಿ ವಿಜ್ಞಾಪಿಸುವುದಕ್ಕೆ ಸಾಮರ್ಥ್ಯವಿಲ್ಲ" ವೆಂದು ಬಿನ್ನೈಸಲು ; ರಾಯನು—" ಎಲೈ ಮಂತ್ರಿಯೇ, ನೀನು ಪೇಳಿದ ವಾಕ್ಯವೇ ಯಥಾರ್ಥವಾದುದು. ಆದರೆ ಮುಂದೆ ಮಾಡತಕ್ಕ ಕಾರ್ಯವು ಹೇಗೆ?" ಎಂದು ನುಡಿಯಲು ; ದೇವಶರ್ಮನು—" ಅಯ್ಯಾ, ರಾಜೋತ್ತಮನೇ, ಕೇಳು. ಈಗ ನಿನ್ನ ಆಜ್ಞೆಯನ್ನು ಅತಿಕ್ರಮಿಸಿದಂಥ ನಿನ್ನ ಪುತ್ರರುಗಳಿಗೆ ಶಿಕ್ಷೆಯನ್ನುಂಟುಮಾಡಿ, ಆಬಳಿಕ ವಿವಾಹ ಕಾರ್ಯದಲ್ಲಿ ಉದ್ಯುಕ್ತನಾಗುವುದು ಯುಕ್ತವಲ್ಲ. ಈ ನಿನ್ನ ಪುತ್ರರುಗಳು ತಿಳಿಯದಂತೆ ರತ್ನಾವಳಿಯನ್ನು ಮಂತ್ರಿಯೊಡಗೂಡಿಸಿ ಹಡಗನ್ನು ಹತ್ತಿಸಿ ಗೋಪ್ಯವಾಗಿ ಕೌಶಾಂಬೀನಗರಿಗೆ ಕಳುಹಿಸಿ ವಿವಾಹಕಾರ್ಯವಂ ಬೆಳೆಯಿಸುವುದು ಯುಕ್ತವು. ಆ ಬಳಿಕ ನಿನ್ನ ಮಕ್ಕಳಾಗಲಿ ಇನ್ನಾರೇ ಆಗಲಿ ಏನನ್ನೂ ಮಾಡಲಾರರು. ಇದಲ್ಲದೆ ವಿಂದಾನುವಿಂದರುಗಳು ತಿಳಿಯುವಂತೆ ಕಳುಹಿಸಿದಲ್ಲಿ ಏನಾದರೂ ಒಂದು ವಿಪರೀತವಾದ ಕಾರ್ಯವನ್ನು ನಡೆಯಿಸದೆ ಬಿಡರು. ಮತ್ತು ಗೃಹಕೃತ್ಯದಲ್ಲಿ ಕಲಹವನ್ನುಂಟುಮಾಡಿಕೊಂಡಲ್ಲಿ ಶತ್ರುಗಳಾದ ರಾಯರು ಈ ವಾರ್ತೆಯಂ ಕೇಳಿ ಹಾಸ್ಯವಂ ಗೆಯ್ಯದೆ ಇರರು. ಯಾವ ಕಾರ್ಯವನ್ನಾದರೂ ಉಪಾಯದಿಂದಲೇ ನಡೆಯಿಸುವುದು ಯುಕ್ತವಾಗಿರುವುದು" ಎಂದು ವಿಜ್ಞಾಪಿಸಲು ; ಆ ಪುರೋಹಿತನಾಡಿದ ವಾಕ್ಯಕೆ ರಾಯನೂ ಕಮಲಾವಳೀದೇವಿಯೂ, ಮಂತ್ರಿಯೂ ಸಹ ಸಂತೋಷಭರಿತರಾಗಲು ; ರಾಯನು ಭಾವಜ್ಞೈದುನನಾಗಿ ಮಂತ್ರಿಯಾಗಿರುವ ವಸುಭೂತಿಯಂ ಕುರಿತು—" ಎಲೈ, ಮಂತ್ರಿಯೇ, ನೀನು ಪೋಗಿ ನಿನಗೆ ಆಪ್ತರಾದ ಸೇವಕರನ್ನು ಕರೆದುಕೊಂಡು ಒಂದು ಹಡಗನ್ನು ಸನ್ನಾಹವಂ ಗೆಯ್ಯಿಸಿ ಸಮುದ್ರ ತೀರದಲ್ಲಿ ಕಾದಿರುವನಾಗು" ಎಂದು ಅಪ್ಪಣೆಯನ್ನೀಯಲು ; ಮಂತ್ರಿಯು ಆಜ್ಞೆಯಾದಂತೆ ನಡೆದುಕೊಳ್ಳುವೆನೆಂದು ನುಡಿದು ಪೋಗಲು ; ರಾಯನು—" ಅಯ್ಯಾ, ಪುರೋಹಿತರೇ, ಕೌಶಾಂಬೀನಗರಿಯಿಂದ ಬಂದಿರುವ ಚಾರನಿಗೆ ಬಹುಮಾನವಂ ಗೈದು ಮಂತ್ರಿಯೊಡಗೂಡಿಸಿ ಹಡಗನ್ನು ಹತ್ತಿಸುವರಾಗಿ" ಎಂದು ಅಪ್ಪಣೆಯನ್ನಿತ್ತು ಕಳುಹಿಸಿ, ಮನ್ಮಥನ ಸೌಭಾಗ್ಯದೇವತೆಯಂತೆ ಮಂಗಳಕರಳಾಗಿ ಮೆರೆಯುತ್ತಿರುವ ರತ್ನಾವಳೀದೇವಿಯಂ ಕರೆಯಿಸಿ ಬತ್ತಿನಲ್ಲಿ ಕುಳ್ಳಿರಿಸಿಕೊಂಡು ಮುಂಡೆಯಂ ಸವರುತ್ತ—" ಎಲೌ ಪುತ್ರಿಯೇ, ನಿನಗೆ ಅಕ್ಕನಾದ ವಾಸವದತ್ತಾದೇವಿಗೆ ಪತಿಯಾದ ವತ್ಸರಾಜನಿಗೆ ನಿನ್ನಂ ಕೊಟ್ಟು ಮದುವೆಯಂ ಗೆಯ್ಯಬೇಕೆಂದು ಇಚ್ಛೈಸಿರುವೆನು. ನೀನೂ ನಿನ್ನ ಅಣ್ಣಂದಿರುಗಳಾದ ವಿಂದಾನುವಿಂದರುಗಳಂತೆ ನನ್ನ ಆಜ್ಞೆಯನ್ನು ಮೀರತಕ್ಕವಳೋ, ಆಜ್ಞಾನುಸಾರವಾಗಿ ನಡೆಯತಕ್ಕವಳೋ ಪೇಳು" ಎಂದು ನುಡಿಯಲು ; ಆ ರತ್ನಾವಳಿಯು ಸಮೀಪದಲ್ಲಿ ಕುಳಿತಿರುವ ತಾಯಾದ ಕಮಲಾವಳಿಯ ಮುಖವಂ ನೋಡಿ—" ಎಲೈ ಸ್ವಾಮಿಯೇ, ನಿಮ್ಮ ಆಜ್ಞೆಯನ್ನು ಮೀರಿ ನಡೆದು ನಿಮ್ಮ ಚಿತ್ತಕ್ಕೆ ವ್ಯಸನವನ್ನುಂಟುಮಾಡುವ ನಾನು ಪುಟ್ಟಿ ಪ್ರಯೋಜನ

ವೇನು"? ಎಂದು ನುಡಿಯಲು ; ಆ ವಾಕ್ಯವಂ ಕೇಳ್ದು ರಾಯನು ಅಧಿಕ ಸಂತೋಷಭರಿತನಾಗಿ, ಆ ರತ್ನಾವಳಿಯ ಮುಖಕಮಲವಂ ಮುದ್ದಿಸಿ, ಕಮಲಾವಳಿಯಂ ಕುರಿತು—"ಎಲೌ ದೇವಿಯೇ, ನಿನ್ನ ಪುತ್ರಿಯಾದ ರತ್ನಾವಳಿಯನ್ನು ಸರ್ವಾಭರಣಗಳಿಂದಲೂ ಅಲಂಕರಿಸುವಳಾಗು" ಎಂದು ನುಡಿದು, "ಎಲೌ ಪುತ್ರಿಯೇ, ನಿನ್ನ ಮುಖವು ಎನಗೆ ಇನ್ನು ದುರ್ಲಭವಾಗಿರುವುದು. ಲೋಕದಲ್ಲಿ ಹೆಣ್ಣುಮಕ್ಕಳುಗಳನ್ನು ಹೆತ್ತವರಿಗೆ ದುಃಖವು ಸಿದ್ಧವಾಗಿರುವುದೆಂಬ ಪೂಜ್ಯರ ವಾಕ್ಯವು ಯಥಾರ್ಥವೇ ಸರಿ" ಎಂದು ಕಂಬನಿಯಂ ಬಿಡುತ್ತಿರಲು ; ಕಮಲಾವಳೀದೇವಿಯು ರತ್ನಾವಳಿಯನ್ನು ಸರ್ವಾಭರಣಗಳಿಂದ ಅಲಂಕರಿಸಿ, ತನ್ನ ತೊಡೆಯಲ್ಲಿ ಕುಳ್ಳಿರಿಸಿ—"ಎಲೌ ಪುತ್ರಿಯೇ, ಪುಟ್ಟಿದು ಮೊದಲಾಗಿ ಇದುವರೆಗೂ ಒಂದು ದಿನವಾದರೂ ಎನ್ನ ಮಗ್ಗುಲಂ ಬಿಟ್ಟು ಮಲಗಿದವಳಲ್ಲ. ಹೆಣ್ಣುಮಕ್ಕಳಂ ಪೆತ್ತಮೇಲೆ ಪರಪುರುಷನಿಗೆ ಕೊಟ್ಟು ಪುಣ್ಯವಂತರಾದವರು ನೇತ್ರಾನಂದವನ್ನು ಅನುಭವಿಸುತ್ತಿರುವರು. ಮಂದಭಾಗ್ಯಳಾದ ನಾನು ಅಂಥ ಪುಣ್ಯಕೆ ಯೋಗ್ಯಳಾಗಲಿಲ್ಲ!" ಎಂದು ಮಗಳನ್ನು ತಬ್ಬಿಕೊಂಡು, ರೋದನವಂ ಗೆಯ್ಯಲುದ್ಯುಕ್ತಳಾಗಲು ; ರಾಯನು ದೇವಿಯಂ ಏಕಾಂತ ಸ್ಥಳಕ್ಕೆ ಕರೆದು—"ಎಲೌ ಕಾಂತೆಯೇ, ಕೇಳು. ಈ ಸಮಯದಲ್ಲಿ ಮಗಳಿಗೆ ದುಃಖವು ಪುಟ್ಟದಂಥ ಮಾತುಗಳನ್ನು ಪೇಳಿ ಕಳುಹಿಸಬೇಕಲ್ಲದೆ ನೀನು ರೋದನವಂ ಗೆಯ್ಯುವುದು ನ್ಯಾಯವಲ್ಲ. ಒತ್ತಿನಲ್ಲಿರುವ ಊಳಿಗದ ಪೆಣ್ಣುಗಳು ನೀನು ಅಳುವುದಂ ಕಂಡು ಏನೋ ಒಂದು ಸಂದೇಹವಂ ಪೊಂದುವರು. ಈ ಕಾಲಕ್ಕೆ ಸರಿಯಾಗಿ ಧೈರ್ಯವನ್ನು ಅವಲಂಬಿಸಬೇಕು" ಎಂದು ನುಡಿಯಲು ; ದೇವಿಯು ವ್ಯಸನವಂ ತೊರೆದು ರತ್ನಾವಳಿಯಂ ಕುರಿತು—"ಎಲೌ ಪುತ್ರಿಯೇ, ಕೌಶಾಂಬಿಯ ಪಟ್ಟಣವಂ ಪೊಂದಿ ವಿವಾಹವಾದ ಮೇಲೆ ಪತಿಯಾದ ವತ್ಸರಾಜನಲ್ಲಿ ಗರ್ವವನ್ನು ತಾಳದೆ, ಸ್ವಪ್ನದಲ್ಲಾದರೂ ಪತಿಯಲ್ಲಿ ಭಕ್ತಿಯಂ ಬಿಡದೆ, ದುಷ್ಟರಾದ ಸತಿಯರ ದುರ್ನೀತಿಗೆ ಕಿವಿಯಂ ಕೊಡದೆ, ಸವತಿಯಾದ ವಾಸವದತ್ತಾದೇವಿಯಲ್ಲಿ ವೈರವಂ ಸಂಪಾದಿಸದೆ, ಹಿಂದಾದ ಐಶ್ವರ್ಯದ ಮೋಡಿಯಂ ವಹಿಸದೆ, ಸೇವಕರಾದ ಸ್ತ್ರೀಯರಿಗೆ ಹೇರಳವಾದ ಆಯಾಸವಾದರೂ ಬೀರದೆ, ಮರೆತಾದರೂ ಪತಿಯಲ್ಲಿ ಸುಳ್ಳುಮಾತುಗಳಂ ನುಡಿಯದೆ, ಗುರುಹಿರಿಯರ ವಾಕ್ಯಗಳನ್ನು ಮೀರಿ ನಡೆಯದೆ, ಪತಿಹಿತಕರವಾದ ನಾರಿಯಲ್ಲಿ ವೈರವಂ ತಾಳದೆ, ಪ್ರಾಣಕಷ್ಟವಾದರೂ ಪಾತಿವ್ರತ್ಯಕ್ಕೆ ಹಾನಿಯಂ ಸಂಪಾದಿಸದೆ, ಪತಿಯೇ ಪರಲೋಕ ಬಂಧುವೆನುತಲೂ ಅವನ ಮುಖದರ್ಶನವೇ ಸಮಸ್ತವಾದ ದೇವತಾದರ್ಶನವೆನುತಲೂ ಅವನಿಗೆ ವಿಹಿತವಾದ ಕಾರ್ಯವಂ ಗೆಯ್ಯುವುದೇ ಪುಣ್ಯಕರವಾದ ವ್ರತಾಚರಣೆಯೆನುತಲೂ ಅವನ ಕಥೆಯನ್ನು ಕೇಳುವುದೇ ಪುರಾಣಶ್ರವಣವೆನುತಲೂ ಅವನ ಗುಣಗಳನ್ನು ಪೊಗಳುವುದೇ ಮಂತ್ರಜಪವೆನುತಲೂ ಅವನಿಗೋಸುಗ ಸಂಚಾರವಂ ಗೆಯ್ಯುವುದೇ ಪುಣ್ಯ

ಯಾತ್ರೆಯೆನುತಲೂ ಮನೋವಾಕ್ಕಾಯಕರ್ಮಗಳಲ್ಲಿ ತಿಳಿದು ನಡೆದೆಯಾದರೆ ಪತಿವ್ರತಾಶಿರೋಮಣಿಯೆಂದು ಲೋಕದಲ್ಲಿ ಪ್ರಸಿದ್ಧಿಯಂ ಪಡೆದು ಇಹಪರಲೋಕಗಳ ಸೌಖ್ಯಕ್ಕೂ ಯೋಗ್ಯಳಾಗುತ್ತ ಇದ್ದೀಯೆ. ಪತಿಭಕ್ತಿಯಂ ತಾಳಿ ನಡೆದ ಅನಸೂಯೆ ಅರುಂಧತಿ ಮೊದಲಾದ ಪತಿವ್ರತಾಸ್ತ್ರೀಯರ ಕಥೆಯಂ ಕೇಳಿರುವೆಯಷ್ಟೆ. ಲೋಕದಲ್ಲಿ ಯಾವ ಸ್ತ್ರೀಯು ಪತಿಯಲ್ಲಿ ವಿರೋಧವಂ ಸಂಪಾದಿಸಿಕೊಂಡು ವ್ರತಾಚರಣೆ ತೀರ್ಥಯಾತ್ರೆ ದಾನಧರ್ಮಗಳನ್ನು ಮಾಡುತ್ತಿರುವಳೋ ಅವುಗಳೆಲ್ಲಾ ಬೂದಿಯಲ್ಲಿ ಹೋಮವಂ ಮಾಡಿದಂತೆ ನಿಷ್ಫಲಂಗಳಾಗುತ್ತಿರುವುವು. ಆದುದರಿಂದ ಯಾವ ಸ್ತ್ರೀಯರಿಗೂ ಪತಿಭಕ್ತಿಯೇ ಮುಖ್ಯವಾಗಿರುವುದು. ತಾಯಿತಂದೆಗಳಾದ ನಾವು ಯೌವನ ಬರುವವರೆಗೂ ಸಂರಕ್ಷಕರೇ ಹೊರತು ಆಬಳಿಕ ಸಂರಕ್ಷಿಸಲಾರೆವು. ನೀನು ಸಮಸ್ತ ವ್ಯಸನವಂ ತೊರೆದು ಪತಿಯಂ ಸೇರಿ ಸುಖದಲ್ಲಿರುವ ಮಾರ್ಗವನ್ನು ಅನುಸರಿಸುವಳಾಗು " ಎಂದು ನೀತಿಮಾರ್ಗವಂ ಬೋಧಿಸಲು ; ರತ್ನಾವಳಿಯು ತಾಯಿಯ ಮುಖವಂ ನೋಡಿ ಮುತ್ತಿನ ಸರದಂತೆ ಕಣ್ಣೀರುಗಳಂ ಬಿಡುತ,—" ಎಲೆ ತಾಯೆ, ನಾನು ಸಾಕಿದ ಗಿಳಿಯುಮರಿ ಹುಲ್ಲೆ ಕೋಗಿಲೆ ಅಂಚೆ ನವಿಲು ಪಾರಿವಾಳ ಚಕ್ರವಾಕ ಮುಂತಾದ ಪಕ್ಷಿಗಳನ್ನೂ, ಪ್ರಮೋದ ವನದಲ್ಲಿ ಸಾಕಿದ ಸೀಮಾವು ಸುರಗಿ ಸುರಹೊನ್ನೆ ಮುಂತಾದ ಮರಗಳನ್ನೂ, ಜಾಜಿ ಸೇವಂತಿಗೆ ಮೊಲ್ಲೆ ಮಲ್ಲಿಗೆ ಮುಂತಾದ ಲತೆಗಳನ್ನೂ ಒಂದು ಬಾರಿ ನೋಡಿ ಬರುವೆನು " ಎಂದು ನುಡಿದು, ಪೋಗುತ್ತಿರಲು ; ಕಮಲಾವಳಿಯು ಮಗಳ ಸರ್ವಾಂಗವಂ ನೋಡಿ ದೃಷ್ಟಿ ತಾಗುವುದೆಂದು ತನ್ನ ನೇತ್ರಗಳನ್ನು ಹಿಂದಿರುಗಿಸಿ, —ಈ ನನ್ನ ಪುತ್ರಿಯು ವತ್ಸರಾಜನೊಡನೆ ಸೌಖ್ಯದಲ್ಲಿ ಬಾಳುವುದನ್ನು ನೋಡಿದೆನಾದರೆ ನನ್ನ ಜನ್ಮವು ಸಾರ್ಥಕವಾಗುವುದೆಂದು ಪತಿಯಾದ ವಿಕ್ರಮಬಾಹುರಾಯನೊಡನೆ ನುಡಿಯುತ್ತಿರಲು—

ರತ್ನಾವಳಿಯು ಪಕ್ಷಿಶಾಲೆಗೆ ಪೋಗಿ ಬರುತ್ತಾ ಅಲ್ಲಿ ಗೊತ್ತುಗಾತಿಯಾಗಿರುವ ಮಣಿಮಾಲೆಯಂ ಕರೆದು—" ಎಲೆ ಬಾಲೆ, ನಾನು ಅಂತಃಪುರದಲ್ಲಿದ್ದುಕೊಂಡು ಗೌರಿಯ ನೋಂಪಿಯನ್ನು ಮಾಡಬೇಕಾಗಿ ಇರುವುದರಿಂದ ನಾನು ಮರಳಿ ಇಲ್ಲಿಗೆ ಬರುವವರೆಗು ಸುತ್ತಲೂ ಮುತ್ತಿನ ಬಲೆಗಳಂ ಬಿಟ್ಟು ಎತ್ತಲೂ ಹಾರಿ ಹೋಗದಂತೆ ಈ ಪಕ್ಷಿಗಳನ್ನು ಸಾಕುವುದಲ್ಲದೆ, ನವಿಲುಗಳಿಗೆ ನಾಟ್ಯವನ್ನೂ, ಗಿಳಿಗಳಿಗೆ ನಡೆಯನ್ನೂ, ಪಾರಿವಾಳಗಳಿಗೆ ದೂರವಾಗಿ ಹಾರುವ ಆಟಗಳನ್ನೂ, ಹಂಸೆಯ ಮರಿಗಳಿಗೆ ನಡೆಯನ್ನೂ ಕಲಿಸುತ್ತ ಕಾಲಕಾಲಕ್ಕೆ ಮೇವುಗಳನ್ನು ಹಾಕಿ ಸಲಹುತ್ತಿರುವುದು" ಎಂದು ಅಪ್ಪಣೆಯನ್ನಿತ್ತು, ಅಲ್ಲಿಂದ ಪ್ರಮೋದವನಕ್ಕೆ ಪೋಗಿ ಸಮಸ್ತ ವೃಕ್ಷಲತೆಗಳಂ ಪಾಲಿಸುವ ನೀಲಾವತಿಯಂ ಕರೆದು—" ಎಲೆ ಕಾಂತೆಯೆ, ಇನ್ನುಮೇಲೆ ನಾನು ಇತ್ತಲು ಬರುವುದಕ್ಕೆ ಕಾರಣವನ್ನು ಪಕ್ಷಿಶಾಲೆಯ ಮಣಿಮಾಲೆಗೆ ಪೇಳಿರುವೆನು. ಆದರೆ ಇನ್ನುಮೇಲೆ ವೃಕ್ಷಲತೆಗೆ ಕಾಲಕಾಲವರಿತು ಮಾಡುವ ದೋಹಳಕ್ರಿಯೆ

ಗಳಂ ಮಾಡದೆ ಮರೆತಿರುವೆಯಾದರೆ ತಕ್ಕ ಶಿಕ್ಷೆಗೆ ಒಳಗಾಗುವೆ'' ಎಂದು ಕಟ್ಟು ಮಾಡಿ, ತಾನು ಸಾಕಿದ ದುಂಡುಮಲ್ಲಿಗೆಯ ಬಳ್ಳಿಯಲ್ಲಿ ಮೂರುನಾಲ್ಕು ಪುಷ್ಪಗಳನ್ನು ಕೊಯ್ದು ಕರದಲ್ಲಿ ಪಿಡಿದು ಹಿಂದಿರುಗಿ ಬರುತ್ತಾ, "ಎಲೆ, ರಂಭೆಯಂತೆ ರಾಜಿಸುವ ರತ್ನಾವಳಿಯೆ, ಗುಟುಕುದಂಬುಲವನ್ನೀಯದೆ ಸಲ್ಲೀಲೆಯಿಂದ ಮೆಲ್ಲಮೆಲ್ಲನೆ ಎಲ್ಲಿಗೆ ಪೋಗುತ್ತಿರುವೆ?'' ಎಂದು ನುಡಿಯುವ ಅರಗಿಳಿಗಳ ಮಾತುಗಳಂ ಕೇಳಿ, ಮನಮರುಗಿ—ಈ ರೀತಿಯಾದ ವಸ್ತುಗಳಂ ಬಿಟ್ಟು ಪೋಗುವುದು ಬಹುಕಷ್ಟವಾಗಿರುವುದು, ಕೆಟ್ಟ ದೈವವು ಸ್ತ್ರೀಯಾಗಿ ಎನ್ನನ್ನು ಏಕೆ ಪುಟ್ಟಿಸಿತೋ, ಎಂದು ಬಾರಿಬಾರಿಗೂ ಹೇರಳವಾದ ನಿಟ್ಟುಸಿರುಗಳಂ ಬಿಡುತ್ತಾ ಬಂದು, ತನ್ನ ನಡೆಗೆ ಕಡೆಯನ್ನುಂಟುಮಾಡಿ, ಅಲ್ಲಿರುವ ತಾನು ಸಾಕಿದ ಹುಲ್ಲೆಯ ಮರಿಯಂ ಪ್ರೈದಡಹಿ ಮಣಿಮಾಲೆಯಂ ಕರೆದು—"ಎಲೆ, ಕಾಂತೆಯೇ, ಸರ್ವಮಂಗಳೆಯೆಂಬ ಈ ಹುಲ್ಲೆಮರಿಯನ್ನು ಪಿಡಿದು ಮೃಗಶಾಲೆಯಂ ಪೊಂದಿಸು'' ಎಂದು ನುಡಿದು ಬರುತ್ತ, ಅಲ್ಲಲ್ಲಿ ನಿಂತು ಹಿಂದಿರುಗಿ, ತಾನು ಸಾಕಿದ ಗಿಣಿ ಕೋಗಿಲೆಗಳನ್ನು ನೋಡುತ್ತ, ಮೆಲ್ಲಮೆಲ್ಲನೆ ಹಜ್ಜೆಗಳನ್ನಿಡುತ್ತ ಬರುತ್ತಿರಲು;

ಇತ್ತಲು ವಿಕ್ರಮಬಾಹುರಾಯನು—"ಎಲೌ ದೇವಿಯೇ, ರತ್ನಾವಳಿಯು ಪೋಗಿ ಬಹಳ ಹೊತ್ತಾದುದು. ಪ್ರಯಾಣಲಗ್ನವು ಮೀರಿಹೋಗುವುದು'' ಎಂದು ನುಡಿಯಲು; ದೇವಿಯು ತಾನೇಪೋಗಿ ರತ್ನಾವಳಿಯನ್ನು ಕರೆತಂದು ಪೀಠದಲ್ಲಿ ಕುಳ್ಳಿರಿಸಿ, ಮುತ್ತುಗಳನ್ನು ಮರುಳುದುಂಬಿರಿಸಿ, ಅರಿಸಿನ ಕುಂಕುಮಗಳಿಂದಲಂಕರಿಸಿ, ಗಂಧ ತಾಂಬೂಲ ಫಲಪುಷ್ಪಗಳನ್ನಿತ್ತು, ಅಕ್ಷತೆಯಂ ಕರದಲ್ಲಿ ಪಿಡಿದು,—"ಮಾರ್ಗದಲ್ಲಿ ನಿನಗೆ ಶುಭವಾಗಲಿ! ವತ್ಸರಾಜನಿಗೆ ಪತ್ನಿಯಾಗಿ ಸರ್ವಸೌಖ್ಯವನ್ನೂ ಅನುಭವಿಸಿ ಪ್ರತಾಪಶಾಲಿಗಳಾದ ಪುತ್ರರನ್ನು ಪಡೆಯುವಳಾಗು!'' ಎಂದು ಅವಳ ಮಂಡೆಯಲ್ಲಿ ಅಕ್ಷತೆಗಳಂ ಚೆಲ್ಲಿ, ಮುಖದಲ್ಲಿ ಮುತ್ತನ್ನಿಟ್ಟು, ಸಂತೋಷವಾಗಿ ನೋಡುತ್ತಿರಲು;

ಅಷ್ಟರಲ್ಲೇ ಪುರೋಹಿತನು ಬಂದು—"ಎಲೈ ರಾಜೇಂದ್ರನೇ, ಸೂರ್ಯನು ಪಶ್ಚಿಮದಿಕ್ಕೆಂಬ ಕಾಂತೆಯನ್ನು ಪೊಂದಿ ಐದು ಗಳಿಗೆಯಾಗಿ ಲಗ್ನವು ಮೀರಿಪೋಗುತ್ತಿರುವುದು. ಮಂತ್ರಿಯು ನಿನ್ನ ಅಪ್ಪಣೆಯಾದಂತೆ ಹಡಗನ್ನು ಸನ್ನಾಹವಂ ಗೆಯ್ದು ಕಾದಿರುವನು. ಅಂತಃಪುರದ ಬಾಗಿಲಲ್ಲಿ ಪಾಲಕಿಯನ್ನು ತಂದು ಇರಿಸುವಂತೆ ಪೇಳಿರುವೆನು'' ಎಂದು ನುಡಿಯಲು; ದೇವಿಯು ಕುಲಕ್ರಮಾಗತವಾಗಿ ಪಾರ್ವತಿಯ ವರದಿಂದ ಬಂದ ರತ್ನಮಾಲೆಯನ್ನು ತಂದು ರತ್ನಾವಳಿಯ ಕತ್ತಿಗೆ ಹಾಕಿ ಆಪ್ತರಾದ ಕೆಲವು ಸಖಿಯರನ್ನು ಸಂಗಡ ಪೋಗುವಂತೆ ನೇಮಿಸಿ, ಅಡಿಗಡಿಗೂ ಮಗಳ ಆಲಿಂಗನವಂ ಗೈದು, ಮುದ್ದಾಡುತ್ತಿರಲು; ರಾಯನು—"ಎಲೆ ದೇವಿಯೇ, ಎಷ್ಟು ಆಲಿಂಗನವನ್ನು ಗೈದರೂ ಮನದಲ್ಲಿರುವ ಪ್ರೇಮವು ತಪ್ಪುವುದೇ? ಏಕೆ ತಡವಂ

ಮಾಡುತ್ತಿರುವೆ?" ಎನ್ನಲು; ರತ್ನಾವಳಿಯು ಕಣ್ಣುಗಳಲ್ಲಿ ನೀರನ್ನುತುಂಬಿ ತಂದೆ ತಾಯಿಗಳ ಪಾದಗಳಿಗೆ ವಂದನೆಯಂ ಗೈದು, ಪುರೋಹಿತನು ತೋರಿಸುವ ಮಾರ್ಗವನ್ನು ಅನುಸರಿಸಿ ಪೋಗುತ್ತಿರಲು; ರಾಯನು ಮಗಳ ಗಲ್ಲವಂ ಮುದ್ದಿಸಿ—"ಎಲೆ ತಾಯೆ, ನಮ್ಮ ವಂಶಕ್ಕೂ ನಿನ್ನ ಗಂಡನ ವಂಶಕ್ಕೂ ಸಂಪೂರ್ಣವಾದ ಕೀರ್ತಿಯನ್ನುಂಟುಮಾಡುತ್ತ ಬಾಳುವಳಾಗು!" ಎಂದು ಅವಳ ಕರವಂ ಪಿಡಿದು, ಕರಕೊಂಡು ಬಂದು, ಅಂತಃಪುರದಲ್ಲಿ ಇರುವ ಪಾಲಕಿಯಲ್ಲಿ ಕುಳ್ಳಿರಿಸಿ,—"ಅಯ್ಯಾ, ಪುರೋಹಿತರೇ, ಸಮುದ್ರಮಧ್ಯದಲ್ಲಿ ಹಡಗನ್ನು ನಡೆಸುವವನಂ ಜಾಗರೂಕನಾಗಿರತಕ್ಕದೆಂದು ಹೇಳುವಂತೆ ಮಂತ್ರಿಗೆ ಪೇಳಿ ಮಗಳನ್ನು ಹಡಗನ್ನು ಹತ್ತಿಸಿ ಬರುವರಾಗಿ" ಎಂದು ಅಪ್ಪಣೆಯನ್ನಿತ್ತು, ಮಗಳ ಅಗಲಿಕೆಯಿಂ ಪುಟ್ಟಿದ ಚಿಂತೆಯನ್ನು ಹೃದಯದಲ್ಲಿ ತಾಳಿ, ಕಣ್ಣೀರುಗಳನ್ನು ಕರವಸ್ತ್ರದಿಂದ ಒರಸುತ್ತ, ಅಂತಃಪುರವನ್ನು ಸೇರಲು; ಕಮಲಾವಳಿಯು ಮಗಳಂ ಸ್ಮರಿಸಿ ಪೇಳಬಾರದ ವ್ಯಸನವಂ ತಾಳಿ,—"ಎನ್ನ ಮಗಳು ಪಾರವಿಲ್ಲದ ಸಮುದ್ರವಂ ದಾಂಟಿ ವತ್ಸರಾಜನಿಗೆ ಪತ್ನಿಯಾದಳೆಂಬ ವಾರ್ತೆಯನ್ನು ಕೇಳಿದಲ್ಲದೆ ಎನ್ನ ಹೊಟ್ಟೆಯಲ್ಲಿ ಪುಟ್ಟಿದ ಉರಿಯು ಆರಲಾರದು!" ಎಂದು ಹಾಸಿಗೆಯಮೇಲೆ ಬಿದ್ದು ಹೊರಳುತ್ತಿರಲು;

ಇತ್ತಲು ಪುರೋಹಿತನು ಸಖಿಯರಿಂ ಸಹಿತಳಾದ ರತ್ನಾವಳಿಯನ್ನು ಅತಿ ಜಾಗರೂಕನಾಗಿ ಹಡಗನ್ನು ಹತ್ತಿಸಿ ಮಂತ್ರಿಯನ್ನು ಕುರಿತು—"ಅಯ್ಯಾ, ಮಂತ್ರಿಗಳೇ, ಸಮುದ್ರಮಧ್ಯದಲ್ಲಿ ಸಂಚರಿಸುವುದು ಅಧಿಕ ಪ್ರಯಾಸವೆಂಬುದು ನಿಮ್ಮ ಚಿತ್ತಕ್ಕೆ ವೇದ್ಯವಾಗಿರುವಲ್ಲಿ ಪೇಳತಕ್ಕುದೇನು?" ಎಂದು ನುಡಿದು, ಹಿಂದಿರುಗಿ, ಅರಮನೆಯಂ ಕುರಿತು ಬರಲು;

ಅತ್ತಲು ಮಂತ್ರಿಯು—ಧ್ವಜಪಟವನ್ನು ಎತ್ತಿಕಟ್ಟಿ, ಹಡಗನ್ನು ನಡೆಸುವಂತೆ ಅಪ್ಪಣೆಯನ್ನೀಯಲು; ರತ್ನಾವಳಿಯು ತನ್ನ ಬಲಗಣ್ಣು ಹಾರುವುದನ್ನು ತಿಳಿದು, ಹಡಗಿನ ಧ್ವಜಪಟದಲ್ಲಿ ಕುಳಿತು ಕೂಗುತ್ತಿರುವ ಗೂಗೆಯ ಧ್ವನಿಯಂ ಕೇಳಿ, ತನ್ನ ಸಮೀಪದಲ್ಲಿ ಕುಳಿತಿರುವ ಕಾತ್ಯಾಯನಿಯೆಂಬ ಕಾಂತೆಯಂ ಕುರಿತು—"ಎಲೆ ಕಾತ್ಯಾಯನಿಯೇ, ನನ್ನ ಬಲಗಣ್ಣು ಹಾರುವುದಕ್ಕೂ ಹಡಗಿನ ಧ್ವಜದಂಡದಲ್ಲಿ ಮಂಡಿಸಿ ಕೂಗುವ ಆ ಗೂಗೆಯ ಶಬ್ದಕ್ಕೂ ಏನು ದುಷ್ಟಫಲವು ಅನುಭವಿಸತಕ್ಕುದೋ ತಿಳಿಯಕೂಡದು!" ಎಂದು ನುಡಿಯಲು;

ಅಷ್ಟರಲ್ಲೇ ಪ್ರಳಯಕಾಲದ ಚಂಡಮಾರುತದಂತೆ ಬಿರುಸಾದ ಸುಳಿಗಾಳಿಯು ಬಂದು ಹಡಗನ್ನು ಮಾರ್ಗವಂ ತಪ್ಪಿಸಿ ಇನ್ನೊಂದು ಮಾರ್ಗವಾಗಿ ತೆಗೆದುಕೊಂಡು ಪೋಗಲು;

ಅಷ್ಟರಲ್ಲೇ ಆ ಹಡಗು ಸಮುದ್ರಮಧ್ಯದಲ್ಲಿರುವ ಮರ್ಮರವೆಂಬ ಪರ್ವತದ ಕೋಡುಗಲ್ಲಿಗೆ ಬಡಿದು ಕುಲಾಲಚಕ್ರದಂತೆ ತಿರುಗಿ ತುಂಡುತುಂಡಾಗಲು;

ಆಗ ಅಲ್ಲಿದ್ದ ರತ್ನಾವಳಿಯೂ ಮಂತ್ರಿಯೂ ಸಖಿಯರೂ ಸಹ ಸಮಸ್ತ ಜನರೂ ಸಮುದ್ರದಲ್ಲಿ ಮುಳುಗಿಹೋಗಲು ; ಅಗ್ನಿ ಅರಣ್ಯ ಬೆಟ್ಟ ಸಮುದ್ರ— ಇವುಗಳ ಮಧ್ಯದಲ್ಲಿಯಾಗಲಿ, ಇವಲ್ಲದೆ ಇನ್ನು ಯಾವ ದುಷ್ಟಸ್ಥಳದಲ್ಲಿಯಾಗಲಿ ಇದ್ದ ಮನುಜನನ್ನು ಪೂರ್ವಪುಣ್ಯವು ಸಂರಕ್ಷಿಸುವುದೆಂಬ ವಾಕ್ಯವನ್ನು ಯಥಾರ್ಥವಂ ಗೆಯ್ಯಲೋಸುಗ ಆ ರತ್ನಾವಳಿಯ ಪೂರ್ವಪುಣ್ಯವು ಒಡೆದ ಹಡಗಿನ ಒಂದು ಹಲಗೆಯನ್ನು ದೊರಕಿಸಲು ; ಆ ರತ್ನಾವಳಿಯು ಸ್ವಲ್ಪವಾದ ನೀರಂ ಕುಡಿದು ಮಹಾಭೀತಿಯಿಂದೊಡಗೂಡಿ ದಿಕ್ಕುದಿಕ್ಕುಗಳನ್ನು ನೋಡುತ್ತ, ಕಾಡುಗಿಚ್ಚಿನ ಮಧ್ಯದಲ್ಲಿ ದೊರಕಿದ ಹೆಣ್ಣುಹುಲ್ಲೆಯಂತೆ ಬಾಯಿಬಿಡುತ್ತ, ಬೇಡನ ಬಲೆಗೆ ಸಿಕ್ಕಿದ ಪೆಣ್ಗಿಳಿಯಂತೆ ನಡುಗುತ್ತ, ಭಯಂಕರವಾಗಿ ಬರುವ ಮೀನು ಮೊಸಳೆ ಮುಂತಾದ ಜಲಚರ ಪ್ರಾಣಿಗಳಂ ಕಂಡು ಹಾಹಾರವಂ ಗೆಯ್ಯುತ್ತ ಬೆಟ್ಟ ಬೆಟ್ಟಗಳಂತೆ ಹುಟ್ಟಿ ಬರುವ ತೆರೆಗಳ ಕರ್ಣಕಠೋರವಾದ ಧ್ವನಿಗೆ ಕಳವಳವಂ ಪೊಂದುತ್ತ, ತನಗೆ ಅಕಾರಣವಾಗಿ ಬಂದ ವಿಪತ್ತನ್ನೂ ದೈವಯೋಗದಿಂ ದೊರಕಿದ ಹಲಗೆಯನೂ ಸಹ ನೋಡಿ ಆಶ್ಚರ್ಯವಂ ಪೆತ್ತು,—“ ಎಲೈ ತಾಯಿತಂದೆಗಳಿರಾ! ಅಣ್ಣತಮ್ಮಂದಿರಿರಾ ! ಎನ್ನನ್ನು ಕಾಡುಪಾಲು ಮಾಡಿದಿರಾ? ಲೋಕದಲ್ಲಿ ದೈವವೇ ಕೆಡಿಸಲುದ್ಯುಕ್ತವಾದಲ್ಲಿ ದ್ರವ್ಯವಿದ್ದರೂ ಸಮಸ್ತಬಂಧುಗಳಿದ್ದರೂ ದೊರೆತನವಿದ್ದರೂ ಅವೆಲ್ಲವೂ ವ್ಯರ್ಥವಾಗುವುದೆಂಬ ವಾಕ್ಯವು ಎನಗೆ ನಿದರ್ಶನವಾಯಿತು ! ಪೂರ್ವಜನ್ಮದಲ್ಲಿ ಯಾವ ದೇವಾಲಯವಂ ಮುರಿದೆನೋ, ಯಾವ ಬ್ರಹ್ಮಹತ್ಯವಂ ಮಾಡಿದೆನೋ, ತಾಯಿತಂದೆಗಳಿಂದೊಡಗೂಡಿದ ಯಾವ ಮಕ್ಕಳಂ ಆಗಲಿಸಿದೆನೋ, ಯಾವ ಗಂಡಹೆಂಡಿರಿಗೆ ವಿರೋಧವನ್ನುಂಟುಮಾಡಿದೆನೋ ತಿಳಿಯದು ! ಅಂಥ ಮಹಾಪಾಪಂಗಳಂ ಮಾಡಿದುದರಿಂದಲೇ ತಂದೆತಾಯಿ ಮೊದಲಾದ ಸಂಪತ್ತನ್ನೂ ತೊರೆದು ಸಮುದ್ರಮಧ್ಯದಲ್ಲಿರುವ ಜಲಜಂತುಗಳ ಬಾಯ್ಗೆ ತುತ್ತಾದೆನು ! ಯಾರೊಡನೆ ಎನ್ನದುಃಖವಂ ಪೇಳಲಿ ! ಎನ್ನನು ಯಾರು ಕಾಪಾಡುವರು ? ಎಲ್ಲಿಗೆ ಹೋಗಲಿ ? ಎಲೆ ದುಷ್ಟನಾದ ಬ್ರಹ್ಮನೇ ! ಎನ್ನ ಫಣೆಯಲ್ಲಿ ಈ ರೀತಿಯಾದ ಅವಸ್ಥೆಯನ್ನು ಹೊಂದುವಂತೆ ಬರೆಯುವುದಕ್ಕೆ ನಿನಗೆ ನಾನು ಏನು ಅಪರಾಧವಂ ಗೈದೆನು, ಪೇಳು. ಆದರೆ ಈ ಹಡಗಲ್ಲಿದ್ದವರೆಲ್ಲರೂ ಈ ಜಲದಲ್ಲಿ ಮುಳುಗಿಹೋಗಿ ನಾನು ಮಾತ್ರ ಉಳಿದಿರುವುದನ್ನು ನೋಡಿದರೆ ಎನಗೆ ಇನ್ನೂ ಕೆಲವು ದಿವಸ ಭೂಮಿಯ ಋಣಾನುಬಂಧವು ಇರುವಂತೆ ತೋರುವುದು. ಯಾವ ಕಾಲದಲ್ಲಿ ಯಾವ ದೇಶದಲ್ಲಿ ಯಾವ ಕ್ಷಣದಲ್ಲಿ ಏನು ವಿಪತ್ತೋ, ಏನು ಸಂಪತ್ತೋ, ಅದೆಲ್ಲವೂ ದೈವಯೋಗದಿಂದ ಬಂದಲ್ಲದೆ ಬಿಡದೆಂದು ವಿದ್ವಾಂಸರು ಪೇಳುವ ವಾಕ್ಯವು ಯಥಾರ್ಥವೇ ಸರಿ! ” ಎಂದು ಚಿಂತಿಸುತ್ತಿರ್ದಳು.

ಎಂಬಲ್ಲಿಗೆ
ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ತೃತೀಯಗುಚ್ಛಂ ಸಂಪೂರ್ಣಮ್.

## ಚತುರ್ಥ ಗುಚ್ಛಂ.

ಅನಂತರದಲ್ಲಿ ರತ್ನಾವಳಿಯು ಭಯಮಂ ಪೊಂದಿ, ಆ ತೆರೆಗಳಲ್ಲಿ ನೀರಿನ ನಾರಿಯಂತೆ ತೇಲುತ್ತ ಪೋಗುವಲ್ಲಿ,—“ ಮೀನೂ ಮೊಸಳೆಗಳೂ ಎನ್ನನ್ನು ಭಕ್ಷಿಸಿದರಂತೂ ಬಹಳ ಸಂತೋಷವೇ ಸರಿ. ಅಲ್ಲಲ್ಲಿ ಹಡಗನ್ನು ಏರಿಬರುವ ವರ್ತಕರುಗಳ ಕೈಗೆ ಸಿಕ್ಕಿದಲ್ಲಿ ಯಾರ ಮಗಳೆಂದು ಪೇಳಲಿ! ಎನ್ನ ಪಾತಿವ್ರತ್ಯವನ್ನು ಹೇಗೆ ಸಂರಕ್ಷಿಸಲಿ! ಎನ್ನನ್ನು ಕಂಡ ಪುರುಷರು ಮೋಹಿಸದೆ ಹೇಗೆತಾನೆ ಸುಮ್ಮನಿರುವರು! ಕೆಟ್ಟದೈವವು ಎನಗೆ ಈ ರೂಪವನ್ನೂ ವಿದ್ಯಾಬುದ್ಧಿಗಳನ್ನೂ ಈ ಪ್ರಾಯವನ್ನೂ ಏಕೆ ಉಂಟುಮಾಡಿತೋ! ಇನ್ನು ವತ್ಸರಾಜನೆಂದರೇನು, ನಮ್ಮಿಬ್ಬರಿಗೆ ಸಂಘಟನೆ ಎಂದರೇನು? ಇನ್ನು ಅವನಿಗೆ ಪತ್ನಿಯಾಗುವೆನೆಂಬ ಚಿಂತೆಯು ಭ್ರಾಂತಿಯಾಗಿರುವುದು! ಮತ್ತು ಅಂಥ ಐಶ್ವರ್ಯದಲ್ಲಿದ್ದು ಈ ಅವಸ್ಥೆಯನ್ನು ಹೇಗೆ ಪೊಂದಿದೆನು? ಮುಂದೆ, ಇನ್ನೇನು ಅವಸ್ಥೆಯನ್ನು ಪೊಂದುವೆನು?” ಎಂದು ಯಾರು ಬಲ್ಲರು? ಇಂಥ ಸಮುದ್ರಮಧ್ಯದಲ್ಲಿ ಮುಳುಗಿದರೂ ಪ್ರಾಣವಂ ಬಿಡದೆ ದೈವಯೋಗದಿಂ ದೊರಕಿದ ಹಲಗೆಯನ್ನು ಹತ್ತಿ ಜೀವಿಸಿರುವುದನ್ನು ಆಲೋಚಿಸಿದಲ್ಲಿ ದೈವಕೃಪೆಯಿಂದ ವತ್ಸರಾಜನಿಗೆ ಪತ್ನಿಯಾದರೂ ಆಗಬಹುದು. ಮತ್ತು ದರಿದ್ರನು ಸೌಖ್ಯವಂ ಬಯಸುವಂತೆ, ನಪುಂಸಕನಿಗೆ ದೊರಕಿದ ನಾರಿಯು ಜಾಣ್ಮೆಯಂತೆ, ಎನ್ನ ಮನೋರಥವೆಲ್ಲವೂ ಅರಣ್ಯದಲ್ಲಿ ಬಿದ್ದ ಬೆಳುದಿಂಗಳಂತೆ ವ್ಯರ್ಥವಾಗಿ ತೋರುವುದು. ಇನ್ನೂ ಬಳಲಿ ಬಾಯಾರಿ ಬಗೆಬಗೆಯಾಗಿ ಹಂಬಲಿಸುತ್ತ ದಿಕ್ಕುಗಳಿಗೆ ಬಾಯಿಬಿಡುತ್ತ ರೋದನವಂ ಗೈದರೂ ಫಲವಂ ಕಾಣೆನು! ಸಂಪೂರ್ಣವಾಗಿ ‘ ಜಲದಲ್ಲಿ ಮುಳುಗಿದವನಿಗೆ ಚಳಿಯು ಗಾಳಿಯ ಭಯವೇನೆಂಬ ’ ನ್ಯಾಯವು ಎನಗೆ ಪ್ರಾಪ್ತವಾದುದು. ವಿಪತ್ತು ಬಂದಾಗ ಧೈರ್ಯವನ್ನೂ ಸಂಪತ್ತಿನಲ್ಲಿ ವಿನಯವನ್ನೂ ಅವಲಂಬಿಸಬೇಕೆಂದೂ, ಧೈರ್ಯವೇ ಸರ್ವಸೌಖ್ಯಕ್ಕೂ ಕಾರಣವಾಗುವುದೆಂದೂ ನೀತಿಯಂ ಬಲ್ಲವರು ಪೇಳುವ ವಾಕ್ಯವು ವ್ಯರ್ಥವಾಗಲಾರದು. ಆದುದರಿಂದ ನಾನು ಸಕಲವಾದ ವ್ಯಸನವಂ ತೊರೆದು, ಎದೆಯಂ

ಕೆಚ್ಚುಗೈದು, ದೈವವು ಸಮುದ್ರವಂ ನೋಡುವುದಕ್ಕೆ ಇದೊಂದು ವಿಲಾಸವಂ ವಿರಚಿಸಿದುದೋ!" ಎಂದು ನಾನಾಪ್ರಕಾರವಾಗಿ ಹಬ್ಬಿಹೋಗುತ್ತಿರುವ ಮನವನ್ನು ಬಿಗಿಗೈದು ತೇಲುತ್ತ ಬರುತ್ತಿರಲು;

ಅಷ್ಟರಲ್ಲೇ ಕೌಶಾಂಬೀನಗರಿಯ ಧನಗುಪ್ತನೆಂಬ ವರ್ತಕನು ರತ್ನದ್ವೀಪಗಳಿಂದ ರತ್ನಗಳಂ ತರುವೆನೆಂದು ಹಡಗನ್ನೇರಿ ಬರುತ್ತ, ಸಮುದ್ರಮಧ್ಯದಲ್ಲಿ ತೇಲಿ ಬರುತ್ತಿರುವ ರತ್ನಾವಳಿಯನ್ನು ದೂರದಲ್ಲೇ ಕಂಡು, ಚೆನ್ನಾಗಿ ದೂರದೃಷ್ಟಿಯ ಕೊಳವೆಯನ್ನಿಟ್ಟು ನೋಡಿ—ಇವಳಾರೋ ಒಬ್ಬ ಸ್ತ್ರೀಯಾಗಿ ಕಾಣುವಳು. ಅಗಾಧವಾದ ಸಮುದ್ರಮಧ್ಯದಲ್ಲಿ ಈ ರೀತಿಯಾಗಿ ಬರುವ ಸ್ತ್ರೀಯು ಯಾವವಳೊ ನೋಡುವೆನೆಂದು ಹಡಗನ್ನು ಅತ್ತಲಾಗಿ ತಿರುಗಿಸಿ, ಸಮೀಪವಂ ಸೇರಿ—ಸರ್ವಾಭರಣಗಳಿಂದಲೂ ಹೊಳೆಯುತ್ತ ಕಲ್ಪವೃಕ್ಷಗಳ ಚಿಗರುಗಳಿಗೆ ಕಾಂತಿಯನ್ನೀಯುತ್ತಿರುವ ಕಾಲುಬೆರಳುಗಳಿಂದಲೂ, ಆಮೆಯನ್ನು ಅಲಗಳೆಯುತ್ತಿರುವ ಮೇಗಾಲುಗಳಿಂದಲೂ, ಕೆಂದಾವರೆಯ ಅಂದವಂ ನಿಂದಿಸಿ ಹೆಚ್ಚಾಗಿ ರಕ್ತವಂ ಮುಕ್ಕುಳಿಸಿ ತೋರುವ ಪಾದಗಳಿಂದಲೂ, ವಿಸ್ತಾರವಾಗಿ ಬಳೆದ ನಿತಂಬಗಳ ಭಾರವನ್ನು ಕೊಬ್ಬಿನಿಂದ ಜಬ್ಬಿತೋರಿ ಕುಂಭಗಳ ದಂಭವನ್ನು ನಿಂದಿಸಿ ಮೆರೆದಿರುವ ಪಯೋಧರಗಳ ಭಾರವಂ ಹೊರಲಾರದೆ ಆಯಾಸದಿಂದ ನೀಡಿದ ಮೇಗಾಲೆಂಬ ಆನೆಗಳ ತಲೆಗಳೋ ಎಂಬಂತಿರುವ ಹಿಮ್ಮಡಿಗಳಿಂದಲೂ, ನಿನ್ನ ಮುಖದಿಂದ ನಮ್ಮ ಚಂದ್ರನಂ ಜಯಿಸಬೇಡವೆಂದು ಬಂದು ಎರಗಿದ ನಕ್ಷತ್ರಗಳೋ ಎಂಬಂತಿರುವ ಪಾದನಖಗಳಿಂದಲೂ, ಮೂರುಲೋಕವನ್ನೂ ಜಯಿಸಲೋಸುಗ ಸಾಣೆಗೈದು ಬಾಣಗಳಂ ತುಂಬಿ ಮಡಗಿದ ಮನ್ಮಥನ ಬತ್ತಳಿಕೆಗಳೋ ಎಂಬಂತೆ ಚಿತ್ತಾರವಾಗಿರುವ ಮೊಳಗಾಲುಗಳಿಂದಲೂ, ಮನ್ಮಥನ ಅರಮನೆಯ ಬಾಗಿಲಲ್ಲಿ ಕಟ್ಟಿದ ಬಾಳೆಗಂಭಗಳೋ ಎಂಬಂತೆ ಇಂಬಾಗಿರುವ ತೊಡೆಗಳಿಂದಲೂ, ಪರರ ಹೆಚ್ಚುಗೆಯಂ ನೋಡಿ ಅಸೂಯೆಯಿಂದ ಕೃಶನಾಗುವ ಮನುಜನಂತೆ ನಿತಂಬಗಳ ಬಳೆವಳಿಕೆಯನ್ನೂ ಕುಚಗಳ ವೃದ್ಧಿಯನ್ನೂ ಸಹ ನೋಡಿ ಬಡವಾದುದೋ ಎಂಬಂತೆ ಹಿಡಿಗೆ ಅಡಗುವುದಕ್ಕೆ ಯೋಗ್ಯವಾದ ನಡುವಿನಿಂದಲೂ, ಲಾವಣ್ಯವೆಂಬ ನದಿಯ ಸುಳಿಯಂತೆ ಮೆರೆಯುವ ನಾಭಿಯಿಂದಲೂ, ಹೃದಯದಲ್ಲಿ ವಾಸವಂ ಗೈದ ಮನ್ಮಥನ ಮದ್ದಾನೆಯ ಕುಂಭಸ್ಥಳಗಳೋ ಎಂಬಂತೆ ಶೋಭಿಸುವ ಕುಚಗಳಿಂದಲೂ, ಸಂಪಿಗೆಯ ದಂಡೆಗಳಿಗೆ ಪಗೆಯಾಗಿ ಸೊಗಸಾಗಿ ಶೋಭಿಸುವ ತೋಳುಗಳಿಂದಲೂ, ಚಿಗುರುಗಳು ಪುಷ್ಪವಂ ಪೆತ್ತುವೋ ಎಂಬಂತೆ ಒಪ್ಪುವ ಹಸ್ತದ ಉಗುರುಗಳಿಂದಲೂ, ಬಲಮುರಿಯ ಶಂಖದ ಬಿಂಕವಂ ಮುರಿಯುವ ಕತ್ತಿನಿಂದಲೂ, ಪವಳದ ಬಣ್ಣವಂ ಕಡೆಗೊತ್ತುವ ತುಟಿಯಿಂದಲೂ, ಎಳಹೂವಿನ ಏಳ್ಗೆಯಂ ಬರಿಗೈದು ಕಣ್ಣುಗಳ ಎಲ್ಲೆಗಟ್ಟಿನ ಸುವರ್ಣದ ಶಿಲೆಯೋ ಎಂಬಂತೆ ತೋರುವ ನಾಸಿಕದಿಂದಲೂ, ಕಬ್ಬಿನ ಬಿಲ್ಲುಗಳೋ ಎಂಬಂತೆ ತೋರುವ

ಹುಬ್ಬುಗಳಿಂದಲೂ, ಮನ್ಮಥನ ವಿಜಯಧ್ವಜದಲ್ಲಿ ಮುಂಡಿಸಿದ ಕನ್ನಡಿಗಳಂತೆ ತಳತಳಿಸುತ್ತಿರುವ ಕಪೋಲಗಳಿಂದಲೂ, ಅಷ್ಟಮಿಾಚಂದ್ರನಿಗೆ ಮುಟ್ಟುವಿಾರಿದ ಲಜ್ಜೆಯಂ ಪುಟ್ಟಿಸುತ್ತ ಹದವಾಗಿ ಶೋಭಿಸುವ ಹಣೆಯಿಂದಲೂ, ಕೃಷ್ಣಸರ್ಪದ ಕಾಂತಿಯನ್ನು ಕಡೆಗೊತ್ತಿ ಕಂಗೊಳಿಸುವ ಜಡೆಯಿಂದಲೂ, ಒಪ್ಪುತ್ತ ಸರ್ವಾಂಗಸುಂದರಿಯಾದ ಆ ರತ್ನಾವಳಿಯಂ ಕಂಡು, ತವರುಮನೆಯಂ ನೋಡಲು ಬಂದ ಆದಿಲಕ್ಷ್ಮಿಯೋ, ಭೂಲೋಕದ ಸೌಭಾಗ್ಯವನ್ನೂ ಸಮುದ್ರದ ವಿಸ್ತಾರವನ್ನೂ ಸಹ ನೋಡಲು ಬಂದ ಆದಿಶೇಷನ ಪತ್ನಿಯೋ, ಆಕಾಶದಲ್ಲಿ ಪೋಗುವ ವಿಮಾನಗತಿಯಿಂ ತಪ್ಪಿ ಸಮುದ್ರದಲ್ಲಿ ಬಿದ್ದಿರುವ ಶಚೀದೇವಿಯೋ, ಆ ಗಂಡನು ಅನಂಗನಾದ ಮೇಲೆ ಇನ್ನಿರಬಾರದೆಂದು ಸಮುದ್ರ ಪ್ರವೇಶವಂ ಗೆಯ್ಯಲೋಸುಗ ಬಂದಿರುವ ರತೀದೇವಿಯೋ, ಎನ್ನ ಪತಿಯು ಪೀರಿದುದಲ್ಲದೆ ಇನ್ನೆಷ್ಟು ವಿಷವಿರುವುದೋ ಎಂದು ಪರೀಕ್ಷೆಯಂ ಗೆಯ್ಯಲು ಬಂದ ಪಾರ್ವತಿಯೋ, ಎಂದು ನಾನಾ ಸಂದೇಹವಂ ಪೊಂದುತ್ತ, ಸಮಿಾಪಕ್ಕೆ ಬಂದು ಚೆನ್ನಾಗಿ ನೋಡಿ, ರೆಪ್ಪೆಯನ್ನಿಕ್ಕುವ ಕಣ್ಣುಗಳಿಂದ ಒಪ್ಪುತ್ತಿರುವುದರಿಂದ, —ಇವಳು ದೇವತಾ ಸ್ತ್ರೀಯಲ್ಲ, ಮನುಷ್ಯಪುತ್ರಿಯೇ ಸರಿ; ಯಾರಾದರೂ ಜಲದಲ್ಲಿ ಬಿದ್ದು ನರಳುತ್ತಿರುವವರನ್ನು ಶೀಘ್ರವಾಗಿ ಎತ್ತಿಸಲಹುವುದೇ ಮುಖ್ಯಧರ್ಮವು ಎಂದು, ತಾನೇ ಒಂದು ಕೈಹಡಗನ್ನೇರಿ ಪೋಗಿ, ಹಲಗೆಸಹಿತವಾಗಿ ಆ ರತ್ನಾವಳಿಯನ್ನು ಹಡಗನ್ನು ಹತ್ತಿಸಿ ದೊಡ್ಡ ಹಡಗನ್ನು ಸೇರಿಸಲು; ರತ್ನಾವಳಿಯು ಧನಗುಪ್ತನಂ ನೋಡಿ—“ಇವನು ವರ್ತಕನಾಗಿ ತೋರುವನು. ಎನಗೆ ಪ್ರಾಣೋಪಕಾರವಂ ಮಾಡಿದುದರಿಂದ ಎನಗೆ ಜನ್ಮಾಂತರದ ತಂದೆಯಾಗಿರುವನು. ಇವನು ದುಷ್ಟನೋ ಧರ್ಮಿಷ್ಠನೋ ತಿಳಿಯಲಾಗದು. ಮನುಷ್ಯರ ಶೀಲಸ್ವಭಾವವನ್ನು ತಿಳಿಯಬೇಕಾದಲ್ಲಿ ಬಹುಕಾಲದ ಪರಿಚರ್ಯವು ಬೇಕಾಗಿರುವುದು. ಒಡೆದುಹೋದ ಹಡಗು ಮರಳಿ ಸಮುದ್ರಮಧ್ಯದಲ್ಲಿ ದೊರಕುವುದಂಥದಾದುದು. ಮುಂದಣ ಕಾರ್ಯವು ಹೇಗೆ ಕೈಗೂಡಿ ಬರುವುದೋ ಕಾಣೆ” ಎಂದು, ಲಜ್ಜೆಯಿಂದಲೂ ಭಯದಿಂದಲೂ ತಲೆ ತಗ್ಗಿಸಿಕೊಳ್ಳುತ್ತಿರಲು; ಧನಗುಪ್ತನು ರತ್ನಾವಳಿಗೆ ರಮಣೀಯವಾದ ಹಾಸಿಗೆಯಂ ಹಾಸಿ, ಅವಳಂ ಕುರಿತು—“ಎಲೆ ತಾಯೇ, ನೀನು ಈ ದುಷ್ಟವಾದ ಹಲಗೆಯಂ ಬಿಟ್ಟು ಹಾಸಿಗೆಯಲ್ಲಿ ಕುಳಿತುಕೊಳ್ಳುವಳಾಗು” ಎಂದು ನುಡಿಯಲು; ರತ್ನಾವಳಿಯು-ಎಲೆ ತಾಯೇ, ಎಂದು ತನ್ನನ್ನು ಈ ವರ್ತಕನು ಕರೆದ ಶಬ್ದವಂ ಕೇಳಿ ಮನಸ್ಸಿನಲ್ಲಿ ಬಹಳವಾದ ಆನಂದವುಂಟಾದುದೆಂದು ಆ ಹಲಗೆಯಂ ಬಿಟ್ಟು, ಹಾಸಿಗೆಯಲ್ಲಿ ಕುಳಿತುಕೊಳ್ಳಲು; ಆ ಧನಗುಪ್ತನು—ಸರ್ವಾಲಂಕಾರಭೂಷಿತಳಾಗಿ ಬೆಲೆಯಿಲ್ಲದೆ ಇರುವ ರತ್ನದ ಹಾರವಂ ಧರಿಸಿ ಪೊಳೆಯುತ್ತಿರುವೀಬಾಲೆಯು ಯಾವನೋ ಒಬ್ಬ ದೇಶಾಧಿಪತಿಯ ಮಗಳಾಗಿ ತೋರುವಳು. ಇವಳ ಅಂಗಗಳಲ್ಲಿ ತೋರುವ ಅಲಂಕಾರದ ರೀತಿಯು ನಮ್ಮ ವತ್ಸರಾಜನ ಅಂತಃಪುರದ ಸ್ತ್ರೀಯರು ಅಲಂಕರಿಸುವ ಸೊಬಗನ್ನು ಅನುಸರಿಸುತ್ತಿರುವುದು.

ಇವಳು ರಾಜಪುತ್ರಿಯೇ ಆಗಿರಬೇಕು. ಅಲ್ಲದಿದ್ದರೆ ಯಾವನೊಬ್ಬನೋ ಧನಿಕನಾದವನ ಮಗಳಾಗಿರಬೇಕು. ಇವು ಎರಡು ಅಲ್ಲದೆ ಇದ್ದರೆ ಈರೀತಿಯಾದ ಕ್ರಯವಿಲ್ಲದ ರತ್ನಾಭರಣಗಳ ಪ್ರಾಪ್ತಿಗೆ ಮತ್ತೊಂದು ಕಾರಣವೂ ತೋರಲಾರದು. ಆದರೂ ಇವಳ ಮುಖವಚನದಿಂದ ಎಲ್ಲಾ ವೃತ್ತಾಂತವನ್ನು ತಿಳಿಯುವೆನೆಂದು, ಆಲೋಚಿಸಿ, ಆ ರತ್ನಾವಳಿಯಂ ಕುರಿತು,— " ಎಲೆ ತಾಯೇ, ನೀನು ಯಾರು ? ಯಾರ ಮಗಳು ? ನಿನಗೆ ಈ ಸಮುದ್ರಮಧ್ಯದಲ್ಲಿ ಈ ಅವಸ್ಥೆಯು ಹೇಗೆ ಪ್ರಾಪ್ತವಾಯಿತು ? ಇದೆಲ್ಲವನ್ನೂ ವಂಚಿಸದೆ, ನನ್ನ ಮೇಲಣ ಪ್ರೀತಿಯುಳ್ಳವಳಾಗಿ ಹೇಳು " ಎಂದು ಅತ್ಯಂತ ವಿನಯಾನ್ವಿತನಾಗಿ ಕೇಳಲು ; ರತ್ನಾವಳಿಯು— ನಾನು ರಾಜಪುತ್ರಿಯೆಂದು ನಿಜವಾಗಿ ಪೇಳುವುದು ಈಗಿನ ರೀತಿಗೆ ಯುಕ್ತವಲ್ಲ, ಒಬ್ಬ ವರ್ತಕನ ಮಗಳೆಂದು ಪೇಳಬೇಕೆಂದು, ತನ್ನ ಮನಸ್ಸಿನಲ್ಲಿ ಆಲೋಚಿಸಿ, ಉದ್ದವಾಗಿ ನಿಟ್ಟುಸಿರಂ ಬಿಡುತ್ತ, ಮುತ್ತಿನ ಮಣಿಗಳಂತೆ ಕಣ್ಣೀರಬಿಂದುಗಳನುಂಟುಮಾಡುತ್ತಿರಲು ; ಧನಗುಪ್ತನು —" ಎಲೆ ತಾಯೇ, ಕೇಳು. ಬ್ರಹ್ಮಾದಿ ಸಮಸ್ತಮುನಿಜನಗಳಿಗೂ ಯಾವಯಾವ ಕಾಲಕ್ಕೆ ಏನೇನು ಅನುಭವಿಸತಕ್ಕುದಾಗಿರುವುದೋ ಆ ಕಾರ್ಯವು ಬಂದಲ್ಲದೆ ಬಿಡದು. ಪ್ರಾರಬ್ಧಕರ್ಮಕ್ಕೆ ಅನುಭವದಿಂದಲೆ ನಾಶವಲ್ಲದೆ ದಾನಧರ್ಮತೀರ್ಥಯಾತ್ರೆ ಮುಂತಾದ ಸತ್ಕರ್ಮದಿಂದ ನಾಶವುಂಟಾಗಲಾರದು. ಸೀತಾದೇವಿ, ದ್ರೌಪದಿ ಮುಂತಾದವರಿಗೆ ಬಂದ ವಿಪತ್ತನ್ನು ಕೇಳಿ ಇಲ್ಲವೆ ? ಆಪ್ತರಾದವರಲ್ಲಿ ತನ್ನ ಕಷ್ಟವಂ ಪೇಳಿದಲ್ಲಿ ಅರ್ಧಶ್ರಮವು ಪರಿಹಾರವಾಗುವುದೆಂಬ ಲೋಕಮರ್ಯಾದೆ ಇರುವುದು. ಯಾವುದಕ್ಕೂ ಭಯವಂ ಪೊಂದದೆ ನಿನ್ನ ವೃತ್ತಾಂತವನ್ನು ಪೇಳುವಳಾಗು " ಎಂದು ನುಡಿಯಲು; ರತ್ನಾವಳಿಯು ಲಜ್ಜೆಯಿಂದ ತಲೆಯಂ ತಗ್ಗಿಸಿ, ಎಡದ ಮುಂಡಿಯಮೇಲೆ ತನ್ನ ಕಪೋಲವನ್ನಿಟ್ಟು, " ಅಯ್ಯಾ, ವರ್ತಕರೇ ! ಲೋಕದಲ್ಲಿ ಪುಣ್ಯವಂತರ ವಾರ್ತೆಯಂ ಕೇಳಬೇಕಲ್ಲದೆ ಭಾಗ್ಯಹೀನಳಾಗಿ ಪಾಪಿಯಾದ ನನ್ನ ವೃತ್ತಾಂತವನ್ನು ನಿಮ್ಮಂಥ ಪುಣ್ಯಶಾಲಿಗಳು ಕೇಳತಕ್ಕುದಲ್ಲ. ಆದರೂ ನೀವು ಪ್ರೀತಿಯಿಂ ಕೇಳಿದರೂ ಪ್ರತ್ಯುತ್ತರವನ್ನು ಪೇಳದೆ ಪೋದಳೆಂದು ನಿಮ್ಮ ಚಿತ್ತಕ್ಕೆ ಆಯಾಸವು ತೋರುವುದೆಂಬ ಶಂಕೆಯಿಂದ ಪೇಳುವೆನು, ಕೇಳಿ. ನಾನು ಕಾಶ್ಮೀರದೇಶದ ರತ್ನಪಾಲನೆಂಬ ವರ್ತಕನ ಮಗಳು. ನಮ್ಮ ತಂದೆ ನಾನು ಒಬ್ಬಳೇ ಮಗಳಾದುದರಿಂದ ನನ್ನಲ್ಲಿ ಅಧಿಕಪ್ರೇಮಶಾಲಿಯಾಗಿ ಯಾವ ಸ್ಥಳಕ್ಕೆ ತಾನು ಹೋಗಬೇಕಾದರೂ ಎನ್ನನ್ನು ಸಂಗಡಲೇ ಕರೆದುಕೊಂಡು ಪೋಗುತ್ತಿರುವ ಪದ್ಧತಿಯೊಂದುಂಟು. ಈಗ ಮೊದಲ ಮೇರೆಯಲ್ಲಿ ಎನ್ನನ್ನು ಸಂಗಡಲೇ ಕರೆದುಕೊಂಡು ಹಡಗನ್ನೇರಿ ದ್ವೀಪಾಂತರದ ವಸ್ತುಗಳನ್ನು ತರುವುದಕ್ಕೋಸುಗ ಪೋಗುತ್ತಿರುವಲ್ಲಿ, ದೈವಯೋಗದಿಂದ ಪುಟ್ಟಿದ ಕೆಟ್ಟಗಾಳಿಯ ವೇಗದಿಂದ ನಾವು ಕುಳಿತಿದ್ದ ಹಡಗು ಪರ್ವತಕ್ಕೆ ಬಡಿದು ತುಂಡುತುಂಡಾಗಲಾಗಿ, ಅಲ್ಲಿಂದ ನನ್ನ ತಂದೆ ಮೊದಲಾದ ಸಮಸ್ತಜನರೂ ಸಮುದ್ರದಲ್ಲಿ ಮುಳುಗಿಹೋಗಿ,

ಪಾಪಿಯಾದ ನಾನೊಬ್ಬಳೇ ಉಳಿದು ಬಂದೆನು. ತಂದೆಗೆ ಬದಲುತಂದೆಯಾದ ನಿಮ್ಮ ಹಸ್ತಕೆ ಸಿಕ್ಕಿರುವೆನು. ಎನ್ನ ಮಾನ ಪ್ರಾಣಗಳು ನಿಮ್ಮ ವಶಗಳಾಗಿರುವುವು" ಎಂದು ಮುಖಕ್ಕೆ ಸೀರೆಯ ಸೆರಗನ್ನು ಹೊಚ್ಚಿ, ಕುಚಗಳು ಕುಲಕುವಂತೆ ಬಿಕ್ಕಿಬಿಕ್ಕಿ ರೋದನವಂ ಗೆಯ್ಯುತ್ತಿರಲು ; ಧನಗುಪ್ತನು ಕರುಣಾಶಾಲಿಯಾಗಿ ಪುತ್ರರಹಿತನಾಗಿ ಇದ್ದುದರಿಂದ ಅವಳ ವಾಕ್ಯವನ್ನು ಕೇಳಿ, ಮನಮರುಗಿ—"ಎಲೆ, ತಾಯೆ, ನೀನು ಯಾವ ವಿಚಾರದಲ್ಲೂ ವ್ಯಸನವಂ ಪೊಂದಬೇಡ. ತಂದೆಗಿಂತಲೂ ಹೆಚ್ಚಾದ ಪ್ರೇಮದಿಂದ ನಿನ್ನನ್ನು ಸಲಹುತ್ತ ನಿನ್ನ ಇಚ್ಛೆಯಾದಂತೆ ನಡೆದುಕೊಳ್ಳುವೆನು" ಎನ್ನಲು ; ರತ್ನಾವಳಿಯು ಸಂತೋಷವಂ ತಾಳಿ, ತನ್ನ ಪುಣ್ಯದಿಂದ ವರ್ತಕನು ವತ್ಸರಾಜನ ಪಟ್ಟಣದವನೇ ಆದಲ್ಲಿ ತನ್ನ ಮನೋರಥವು ಸಿದ್ಧಿಸಬಹುದೆಂದು ಯೋಚಿಸಿ, "ಅಯ್ಯಾ, ವರ್ತಕರೇ, ನೀವು ಯಾವ ದೇಶದವರು ? ಈಗ ಎಲ್ಲಿಗೆ ಪೋಗುತಲಿದ್ದೀರಿ ? ನಿಮ್ಮ ನಾಮಧೇಯವೇನು ? ಇವೆಲ್ಲವನ್ನೂ ಮಗಳಾದ ನನ್ನ ಮೇಲಣ ಪ್ರೀತಿಯಿಂದ ಅಪ್ಪಣೆಯನ್ನೀಯಬೇಕು" ಎಂದು ವಿನಯಾನ್ವಿತಳಾಗಿ ಬೇಡಿಕೊಳ್ಳಲು ; ಅವನು "ಎಲೆ ಬಾಲಕಿಯೇ, ಕೇಳು. ದಶಾರ್ಣವ ದೇಶಕ್ಕೆ ಅಲಂಕಾರವಾದ ಕೌಶಾಂಬೀ ನಗರಿಗೆ ಅಧಿಪತಿಯಾದ ವತ್ಸರಾಜನಿಗೆ ಪ್ರೇಮಪಾತ್ರನಾದ ಎನ್ನನ್ನು ಧನಗುಪ್ತನೆಂದು ಪೇಳುತ್ತಿರುವರು. ನಮ್ಮ ದೊರೆಯು ಕೆಲವು ರತ್ನವಾಗಬೇಕೆಂದು ಪೇಳಿದುದರಿಂದ ಈಗ ರತ್ನದ್ವೀಪಕ್ಕೆ ಹೋಗುತ್ತಲಿದ್ದೆನು. ದರಿದ್ರನಿಗೆ ಭಾಗ್ಯಲಕ್ಷ್ಮಿಯೇ ಇದಿರುಗೊಂಡು ಬಂದಂತೆ ನಿನ್ನ ಸಂದರ್ಶನದಿಂದ ಸಂತೋಷಭರಿತನಾದೆನು" ಎಂದು ನುಡಿದು ತನ್ನ ಕಡೆಯವರನ್ನು ರತ್ನದ್ವೀಪಕ್ಕೆ ಕಳುಹಿಸಿ ಕೊಟ್ಟು, ತಾನು ಕುಳಿತಿದ್ದ ಹಡಗನ್ನು ಕೌಶಾಂಬೀಪುರಕ್ಕೆ ತಿರುಗಿಸಿ, ಯಾರೂ ತಿಳಿಯದಂತೆ ರಾತ್ರೀವೇಳೆಯಲ್ಲಿ ರತ್ನಾವಳಿಯನ್ನು ಪಾಲಕಿಯಲ್ಲಿ ಕುಳ್ಳಿರಿಸಿಕೊಂಡು, ತನ್ನ ಮಂದಿರವಂ ಪೊಂದಿ, ತನ್ನ ಪತ್ನಿಯಾದ ಸುನಂದೆಯಂ ಕರೆದು—"ಎಲೌ ಕಾಂತೆಯೇ, ನಿನ್ನ ಚಿತ್ತದಲ್ಲಿ ಪುತ್ರರಿಲ್ಲವೆಂಬ ಸಂದೇಹವು ಬಲವಾಗಿ ಇದ್ದುದರಿಂದ ನಮ್ಮ ಭಾಗದ ದೇವರು ಹೆಣ್ಣುಮಗಳನ್ನು ಕೊಟ್ಟಿರುವುದು." ಎಂದು ನುಡಿದು, ರತ್ನಾವಳಿಯಂ ತೋರಿಸಲು ; ಆ ಸುನಂದೆಯು ರತ್ನಾವಳಿಯಂ ನೋಡಿ, ಅತ್ಯಂತವಾದ ಆಶ್ಚರ್ಯವಂ ಪೊಂದಿ, ಅವಳು ದೊರಕಿದ ಪರಿಯನ್ನು ತನ್ನ ಪತಿಯಿಂದ ತಿಳಿದು, ಸಂತೋಷಸಮುದ್ರದಲ್ಲಿ ಮುಳುಗುತ್ತ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳಿಗಿಂತಲೂ ಅತಿಶಯವಾದ ವಿಶ್ವಾಸವಂ ತಾಳಿ, ರತ್ನಾವಳಿಯನ್ನು ಸಲಹುತ್ತಿರಲು ; ಧನಗುಪ್ತನೂ ಸುನಂದೆಯೂ ಮಾಡುವ ಉಪಚಾರಗಳಿಂದ ರತ್ನಾವಳಿಯು ತನ್ನ ತಾಯಿತಂದೆಗಳಂ ಮರೆತು, ಸುಖದಿಂದಿರುತ್ತಿರಲು ;

ಇತ್ತಲು, ಮಂತ್ರಿಯಾದ ವಸುಭೂತಿಯು ರತ್ನಾವಳಿಯಂತೆ ಒಂದು ಹಲಗೆಯನ್ನು ಅವಲಂಬಿಸಿ ಕೆಲವು ದಿವಸದ ಮೇಲೆ ಸಿಂಹಳದೇಶವನ್ನು ಪೊಂದಲು ;

ಮಂತ್ರಿಯಾದ ಯೌಗಂಧರಾಯಣನು ತಾನು ಬರೆದ ಪತ್ರಿಕೆಗೆ ಪ್ರತ್ಯುತ್ತರವೂ ಚಾರನೂ ಸಹ ಬಾರದೆ ಇದ್ದುದರಿಂದ—“ ಕಾರ್ಯವೇ ಕೈಗೂಡಲಿಲ್ಲವೋ, ಎನ್ನೊಡನೇ ಬ್ರಾಹ್ಮಣನೇ ಸುಳ್ಳುಮಾತುಗಳಂ ಪೇಳಿದನೋ, ವಾಸವದತ್ತೆಯು ಇರುವಲ್ಲಿ ತನ್ನ ಮಗಳಂ ಕೊಡುವುದು ನ್ಯಾಯವಲ್ಲವೆಂದು ನನ್ನ ಪತ್ರಿಕೆಯನ್ನು ತಿರಸ್ಕರಿಸಿದನೋ, ಯಾವ ವಾರ್ತೆಯೂ ತಿಳಿಯಲಿಲ್ಲ. ಆದರೂ ಸಿಂಹಳದೇಶದಲ್ಲಿ ಇನ್ನೊಂದು ವಾರ್ತೆಯನುಂಟುಮಾಡುವೆನು ” ಎಂದು, ಅವನು ಒಬ್ಬ ಚಾರನಂ ಕರೆದು ಅವನ ಕಿವಿಯಲ್ಲಿ ಒಂದು ವಾಕ್ಯವಂ ಪೇಳಿ, ಸಿಂಹಳದೇಶಕ್ಕೆ ಕಳುಹಿಸಿಕೊಡಲು;

ಇತ್ತಲು, ಧನಗುಪ್ತನು ಒಂದಾನೊಂದು ದಿನದಲ್ಲಿ ಇನ್ನೂ ರತ್ನಾವಳಿಗೆ ವಿವಾಹವಿಲ್ಲವೆಂಬ ಸಂಗತಿಯನ್ನು ತಿಳಿದು, ತನ್ನ ಪತ್ನಿಯನ್ನು ಏಕಾಂತಸ್ಥಳಕ್ಕೆ ಕರೆದು, “ಎಲೆ ಕಾಂತೆಯೇ, ಈ ಬಾಲೆಯು ರೂಪಿನಲ್ಲಿ ಲಕ್ಷ್ಮಿಯಂತೆಯೂ, ಬುದ್ಧಿಯಲ್ಲಿ ಸರಸ್ವತಿಯಂತೆಯೂ ಇರುವಳು. ಇವಳಿಗೆ ಸಮಾನನಾದ ವರನು ನಮ್ಮ ರಾಜೇಂದ್ರನೇ ಹೊರತು, ಮತ್ತೊಬ್ಬನೂ ಯೋಗ್ಯನಾಗಲಾರನು. ದಿನಕೊಂದು ಬಗೆಯಾಗಿ ಉಕ್ಕಿ ಬರುವ ಯೌವನವುಳ್ಳಂಥ ಈ ಬಾಲೆಯನ್ನು ಯೋಗ್ಯನಾದ ವರನಿಗೆ ಕೊಟ್ಟು ವಿವಾಹವಂ ಗೆಯ್ಯದೆ ಮನೆಯಲ್ಲಿ ಇರಿಸಿಕೊಂಡಿರುವುದು ನ್ಯಾಯವಲ್ಲ ” ಎಂದು ನುಡಿಯಲು; ಸುನಂದೆಯು, “ ಎಲೈ ಸ್ವಾಮಿಯೆ! ನೀವು ಪೇಳುವ ವಾಕ್ಯವು ಯುಕ್ತವೇ ಸರಿ. ಇವಳ ಮೃದುನುಡಿಗಳ ಚಮತ್ಕಾರವನ್ನೂ ಸಕಲ ವಿದ್ಯೆಗಳಲ್ಲಿರುವ ಜಾಣತನವನ್ನೂ ಸಹ ನೋಡುವಲ್ಲಿ ಒಂದು ಕ್ಷಣವಾದರೂ ಇವಳನ್ನು ಬಿಟ್ಟಿರುವುದಕ್ಕೆ ಸ್ತ್ರೀಯಾದ ಎನ್ನ ಮನಸ್ಸು ಒಡಂಬಡದೆ ಇರುವುದು. ಇನ್ನು ಪುರುಷರ ವಿಚಾರವನ್ನು ಪೇಳತಕ್ಕದ್ದೇನು? ” ಎಂದು ನುಡಿಯಲು; ಧನಗುಪ್ತನು “—ನಾನು ರಾಯನಿಂದಲೂ ಮಂತ್ರಿಯಿಂದಲೂ ಅಪ್ಪಣೆಯಂ ಪಡೆದು ರತ್ನದ್ವೀಪಕ್ಕೆ ಪೋಗುವೆನೆಂದು ಪೋಗಿ, ಮರಳಿ ಬಂದು ವರ್ತಮಾನವನ್ನು ಇದುವರೆಗೂ ಅವರಿಗೆ ಶ್ರುತಪಡಿಸದೆ ಇದ್ದಲ್ಲಿ ಏನು ಸಂದೇಹವಂ ಪೊಂದುವರೋ? ಮತ್ತು ಮಂತ್ರಿಯು ಶೀಘ್ರದಿಂದ ಧನಗುಪ್ತನು ಬರುವುದಕ್ಕೆ ನಿಮಿತ್ತವೇನೆಂದು ಪೇಳಿದನೆಂಬ ವರ್ತಮಾನವನ್ನು ಕೇಳಿರುವೆನು. ಮತ್ತು ಈ ಬಾಲೆಯು ದೊರಕಿದ ವಾರ್ತೆಯಂ ನಾನಾಗಿ ಮೊದಲೇ ಪೇಳದೆ ಮಂತ್ರಿಯೇ ಇನ್ನು ಯಾರ ಮುಖದಿಂದಲಾದರೂ ತಿಳಿದಲ್ಲಿ ಎನ್ನ ಮೇಲೆ ದ್ವೇಷವನ್ನು ತಾಳದೆ ಇರನು. ಇದಕ್ಕೆ ನಿನ್ನ ಬುದ್ಧಿಗೆ ಏನು ತೋರುವುದು? ” ಎಂದು ನುಡಿಯಲು; ನೀತಿಶಾಲಿಯಾದ ಸುನಂದೆಯು—“ ಎಲೈ ಕಾಂತನೆ, ಸಮಸ್ತಭೂಮಂಡಲಕ್ಕೂ ಮಂತ್ರಿಯಾಗಿ ಪ್ರಭುಕಟಾಕ್ಷಕ್ಕೂ ಪಾತ್ರನಾಗಿ ನಮಗೆ ಬಹುದಿವಸದಿಂದಲೂ ಆಪ್ತನಾಗಿ ಬಲವಂತನಾಗಿರುವ ಮಂತ್ರಿಯಲ್ಲಿ ನಾವು ನಿಮಿತ್ತವಿಲ್ಲದೆ ದ್ವೇಷಮಂ ಸಂಪಾದಿಸಿಕೊಳ್ಳುವುದು ನ್ಯಾಯವಲ್ಲ. ಈಗ ಪೇಳನೆ ವಂಚಿಸಿದಲ್ಲಿ ಈ ವಾರ್ತೆಯು ಕಾಲಾನಂತರದಲ್ಲಾದರೂ ತಿಳಿದು ಅನರ್ಥವನ್ನುಂಟುಮಾಡದೆ ಬಿಡದು.

ಬಲವಂತನಾದವನಲ್ಲಿ ವಿರೋಧವಂ ಗೈದು ಜೀವಿಸುವುದು ಯುಕ್ತವಾಗಿ ತೋರಲಾರದು. ನಾವು ನಿರ್ವಂಚನೆಯಿಂದ ಈ ವಾರ್ತೆಯಂ ಪೇಳಿದಬಳಿಕ ಮಂತ್ರಿಯು ಮನಬಂದಂತೆ ಕಾರ್ಯವಂ ನಡೆಸಿಕೊಳ್ಳಲಿ" ಎಂದು ನುಡಿಯಲು; ಧನಗುಪ್ತನು ತನ್ನ ಪತ್ನಿಯ ವಾಕ್ಯವಂ ಯುಕ್ತವೆಂದು ತಿಳಿದು, ಮಂತ್ರಿಯ ಮನೆಯಂ ಕುರಿತು ಪೋಗಲು; ಮಂತ್ರಿಯು ಕುಶಲಪ್ರಶ್ನೆಯಂ ಗೈದು,— "ಅಯ್ಯಾ ವರ್ತಕರೇ, ರತ್ನದ್ವೀಪಕ್ಕೆ ಪೋಗುತ್ತಲಿದ್ದು ಸಮುದ್ರಮಧ್ಯದಿಂದ ಏನು ನಿಮಿತ್ತವಾಗಿ ಹಿಂತಿರುಗಿ ಬಂದಿರಿ?" ಎಂದು ನುಡಿಯಲು; ಆ ವರ್ತಕನು ಮಂತ್ರಿಯನ್ನು ಏಕಾಂತ ಸ್ಥಳಕ್ಕೆ ಕರೆದುಕೊಂಡು ಪೋಗಿ ರತ್ನಾವಳಿಯು ದೊರಕಿದ ಸಂಗತಿಯನ್ನು ವಿಸ್ತಾರವಾಗಿ ವಿಜ್ಞಾಪಿಸಲು; ಮಂತ್ರಿಯು—"ಅಯ್ಯಾ ವರ್ತಕರೇ, ಜಗತ್ತಿನಲ್ಲಿ ಇಲ್ಲದ ರೂಪವತಿ ಎಂದು ಪೇಳುವ ನಿಮ್ಮ ವಾಕ್ಯದಿಂದ ಆ ಸ್ತ್ರೀಯು ರಾಜಯೋಗ್ಯಳಾಗಿ ಕಾಣುವಳು. ಆ ಬಾಲೆಯನ್ನು ನಾನು ಒಂದುವೇಳೆ ನೋಡುವೆನೆಂಬ ಇಚ್ಛೆಯಿರುವುದು" ಎಂದು ನುಡಿಯಲು; ವರ್ತಕನು ಮಂತ್ರಿಯ ತಾತ್ಪರ್ಯವನ್ನು ತಿಳಿದು, ಆ ಬಾಲಕಿಯನ್ನು ಕರೆದುಕೊಂಡು ಬರುವೆನೆಂದು ನುಡಿದು, ತನ್ನ ಮನೆಗೆ ಬಂದು ಸೇರಲು;

ಇತ್ತಲು, ಮಂತ್ರಿಯು— ಒಡೆದ ಹಲಗೆಯಮೇಲೆ ತೇಲುತ್ತಿದ್ದ ಬಾಲೆಯು ದೊರಕಿದಳೆಂದು ಪೇಳಿದ ವರ್ತಕನ ವಾಕ್ಯವನ್ನು ಆಲೋಚಿಸುವಲ್ಲಿ, ಎನ್ನ ಪತ್ರಿಕೆಯಿಂದ ಬರುತಿದ್ದ ಸಿಂಹಳದೇಶದ ರಾಜಪುತ್ರಿಯೋ, ಇಲ್ಲವಾದಲ್ಲಿ ವರ್ತಕನ ಮಗಳೇ ನಿಶ್ಚಯವೋ ತಿಳಿಯದು, ಎಂದು ಆಲೋಚಿಸುತ್ತಿರಲು;

ಧನಗುಪ್ತನು ತನ್ನ ಪತ್ನಿಯೊಡನೆ ಮಂತ್ರಿಯ ತಾತ್ಪರ್ಯವಂ ಪೇಳಲಾಕಾಂತೆಯು—"ದೈವಯೋಗದಿಂದ ಈ ಬಾಲಕಿಯು ರಾಯನ ಅಂತಃಪುರವನ್ನು ಸೇರಿ ವತ್ಸರಾಜನ ದೃಷ್ಟಿಗೆ ಗೋಚರಳಾದಲ್ಲಿ ಆ ರಾಯನು ಕ್ಷಣವಾದರೂ ಇವಳನ್ನು ಬಿಟ್ಟಿರಲಾರನು. ಆದರೆ ಈ ಬಾಲಕಿಯ ಅಭಿಪ್ರಾಯವೆಂತಿರುವುದೋ ತಿಳಿಯಬೇಕು" ಎಂದು, ರತ್ನಾವಳಿಯಂ ಕರೆದು ಒತ್ತಿನಲ್ಲಿ ಕುಳ್ಳಿರಿಸಿಕೊಂಡು —"ಎಲೌ ಮಂಗಳಾಂಗಿಯೇ, ನಿನ್ನ ಚಿತ್ತಕ್ಕೆ ಆಯಾಸವು ತೋರದೆ ಇದ್ದಲ್ಲಿ ಒಂದು ವಾಕ್ಯವಂ ಪೇಳುವೆನು. ಅನ್ನ ವಸ್ತ್ರವನ್ನು ಕೊಟ್ಟು ಸಲಹಲಾರದೆ ಈ ವಾಕ್ಯವನ್ನು ಪೇಳಿದರೆಂದು ತಿಳಿಯದಿರು. ಯಾವ ಪ್ರಕಾರದಲ್ಲಾದರೂ ನೀನು ಅಧಿಕವಾದ ಐಶ್ವರ್ಯವನ್ನು ಪೊಂದಿದಲ್ಲಿ ನಮ್ಮಂಥ ಬಹುಜನವನ್ನು ಸಂರಕ್ಷಿಸುವಳೆಂಬ ಸಂತೋಷವು ಎನಗೆ ಬಲವಾಗಿರುವುದು"ಎನಲು; ರತ್ನಾವಳಿಯು—"ಇವಳ ವಾಕ್ಯವನ್ನು ಕೇಳುವಲ್ಲಿ ಯಾವನೋ ಒಬ್ಬ ಐಶ್ವರ್ಯವಂತನ ಮನೆಯನ್ನು ಸೇರಿಸುವಳಾಗಿ ತೋರುವಳು. ಇವಳ ಮನೆಯಂ ಬಿಟ್ಟಲ್ಲಿ ವತ್ಸರಾಜನ ಅಂತಃಪುರವೊಂದು, ಅದಲ್ಲದಿದ್ದರೆ ಪರಲೋಕವೊಂದು. ಇವು ಎರಡಲ್ಲದೆ ಎನಗೆ ಇನ್ನೊಂದು ಸ್ಥಾನವೂ ವಾಸಯೋಗ್ಯವಾಗಿ ತೋರುವುದಿಲ್ಲ" ವೆಂದು

ತಿಳಿದು—“ ಮೊದಲು ಸುನಂದೆಯು ಅಭಿಪ್ರಾಯವನ್ನು ತಿಳಿದಲ್ಲದೆ ಪ್ರತ್ಯುತ್ತರವನ್ನೀಯಬಾರದು. ಇವರು ವರ್ತಕರಾದುದರಿಂದ ದ್ರವ್ಯದಾಸೆಗೆ ಇನ್ನು ಯಾರಿಗಾದರೂ ಮಾರಿದಲ್ಲಿ ನಾಲಗೆಯಂ ಹಿರಿದು ಪ್ರಾಣವಂ ಬಿಡುವೆನು. ಲೋಕದಲ್ಲಿ ಪರರ ಮನೆಯಂ ಸೇರುವುದೇ ಬಹುಕಷ್ಟವಾಗಿರುವುದು. ದ್ರೌಪದಿಯು ವಿರಾಟರಾಯನ ಮನೆಯಂ ಪೊಂದಿ ಮಾನಭಂಗಕ್ಕೆ ಒಳಗಾದ ಸಂಗತಿಯು ಎನಗೆ ದೊರಕುವುದಾಗಿ ತೋರುವುದು ” ಎಂದು ಯೋಚಿಸಿ, ಸುನಂದೆಯಂ ಕುರಿತು, “ಎಲೆ ತಾಯೇ, ಈರೀತಿಯಾಗಿ ಎನ್ನನ್ನು ಕೇಳುವುದಕ್ಕೆ ಕಾರಣವೇನಿರುವುದೋ, ಅದನ್ನು ಎನ್ನೊಡನೆ ವಂಚಿಸದೆ ಪೇಳಿ, ಅಬಳಿಕ ಮುಂದಿನ ಕಾರ್ಯವನ್ನು ಆಲೋಚಿಸುವಳಾಗು ” ಎಂದು ಕಣ್ಣುಗಳಲ್ಲಿ ನೀರಂ ತುಂಬಿಕೊಳ್ಳಲು ; ಆ ಸುನಂದೆಯು ಅವಳ ಮುಖವಂ ನೋಡಿ, ಗಲ್ಲವಂ ಮುದ್ದಿಸಿ—“ ಎಲೌ ಕಲ್ಯಾಣಿಯೇ, ಕೇಳು. ನಿನ್ನ ರೂಪಿಗೆ ತಕ್ಕವನಾಗಿ ಅಖಂಡ ಭೂಮಂಡಲಕ್ಕೂ ದೊರೆಯಾಗಿರುವ ವತ್ಸರಾಜನ ಅಂತಃಪುರಕ್ಕೆ ಸೇರಿಸಬೇಕೆಂದು ಮಂತ್ರಿಯಾದ ಯೌಗಂಧರಾಯಣನು ಯೋಚಿಸಿ, ಮೊದಲು ನಿನ್ನನ್ನು ನೋಡಬೇಕೆಂದು ಇಚ್ಛೈಸುತ್ತಿರುವನು” ಎನಲು ; ರತ್ನಾವಳಿಯು-“ ಎಲೆ ತಾಯೇ ಆ ಮಂತ್ರಿಯು ವೃದ್ಧನೋ, ಯೌವನಸ್ಥನೋ, ಪಾಪಭೀತನೋ, ದುಷ್ಟನೋ ? ಇವು ಮೊದಲಾದ ಅವನ ಗುಣಗಳಂ ಪೇಳುವಳಾಗು ” ಎಂದು ನುಡಿಯಲಾ ಸುನಂದೆಯು ಅವಳ ಮಾತಿಗೆ ಮೆಚ್ಚಿ—“ ಎಲೆ ಸುಂದರಾಂಗಿಯೆ, ಕೇಳು. ಮಂತ್ರಿಯು ವೃದ್ಧನಾಗಿ, ಪಾಪಭೀತನಾಗಿ, ಸ್ವಾಮಿಕಾರ್ಯಾರ್ಥನಾಗಿ, ನೀತಿಪರನಾಗಿ, ಸ್ವಪ್ನದಲ್ಲಾದರೂ ಪರಸ್ತ್ರೀಯರ ವಾರ್ತೆಯನ್ನು ಸ್ಮರಿಸದೆ ಇರುವನಾಗಿ, ಪ್ರಜಾಸಮ್ಮತನಾಗಿ ಇರುವನು. ಅವನಲ್ಲಿ ಯಾವ ಸಂದೇಹವನ್ನೂ ಪೊಂದಬೇಡ ” ಎಂದು ನುಡಿಯಲು; ಧನಗುಪ್ತನೂ ರತ್ನಾವಳಿಯ ಅಭಿಪ್ರಾಯವನ್ನು ತಿಳಿದು—“ ಎಲೆ ಕಲ್ಯಾಣಿಯೇ, ನಾನು ಪೂರ್ವಜನ್ಮದಲ್ಲಿ ಯಾರ ಮಕ್ಕಳಿಗೆ ಕಷ್ಟವನ್ನುಂಟುಮಾಡಿದೆನೋ, ಆ ಪಾಪದಿಂದಲೇ ನಾನು ಪುತ್ರಹೀನನಾಗಿರುವೆನು. ಹೀಗಿರುವಲ್ಲಿ ನಿನಗೆ ಸಂತೋಷವನ್ನುಂಟುಮಾಡದೆ ಕಷ್ಟವನ್ನು ಪೊಂದಿಸಲಾರೆನು. ಈ ಮುಖ್ಯವಾದ ವಾಕ್ಯವನ್ನು ಕೇಳು. ಈ ಭೂಮಂಡಲಕ್ಕೆ ಅಧಿಪತಿಯಾಗಿ ಸುಂದರಾಂಗನಾದ ವತ್ಸರಾಜೇಂದ್ರನಿಗೆ ನಿನ್ನನ್ನು ಪತ್ನಿಯನ್ನಾಗಿ ಮಾಡಬೇಕೆಂದು ಇಚ್ಛೈಸಿರುವೆನು. ಏತಕ್ಕೂ ಚಿಂತಿಸಬೇಡ ” ಎಂದು ನುಡಿಯಲು; ರತ್ನಾವಳಿಯು ಮನಸ್ಸಿನಲ್ಲಿ ಬಹಳ ಸಂತೋಷವಂ ಪೊಂದಿ, “ ಅಯ್ಯಾ ವರ್ತಕರೇ, ಎನ್ನ ಮಾನಪ್ರಾಣಗಳನ್ನು ನಿಮ್ಮ ಹಸ್ತಕ್ಕೆ ಒಪ್ಪಿಸಿರುವೆನೆಂದು ಮೊದಲೇ ನಾನು ಹೇಳಿರುವಲ್ಲಿ ಮರಳಿ ವಿಜ್ಞಾಪಿಸುವುದಕ್ಕೆ ಶಕ್ತಿ ಇಲ್ಲವು ” ಎಂದು ನುಡಿಯಲಾ ಧನಗುಪ್ತನು ರಾಜಪತ್ನಿಯಾಗುವುದಕ್ಕೆ ಒಡಂಬಟ್ಟಿರುವ ರತ್ನಾವಳಿಯ ತಾತ್ಪರ್ಯವಂ ತಿಳಿದು, ಅವಳನ್ನು ಪಾಲಕಿಯಲ್ಲಿ ಕುಳ್ಳಿರಿಸಿಕೊಂಡು, ಮಂತ್ರಿಯ ಮನೆಗೆ ಕರೆದುಕೊಂಡು ಪೋಗಿ, ಜನರೆಲ್ಲರನ್ನೂ ಹೊರಕ್ಕೆ ಹೊರಡಿಸಿ, ರತ್ನಾವಳಿ

ಯನ್ನು ಪಾಲಕಿಯಿಂದ ಇಳುಹಿಸಿ, ಮಂತ್ರಿಗೆ ನಮಸ್ಕಾರವಂ ಗೆಯ್ಯುವಂತೆ ಪೇಳಲು ; ಆ ಮಂತ್ರಿಯು ಆ ರತ್ನಾವಳಿಯ ಅಂದವಂ ನೋಡಿ, ಆಶ್ಚರ್ಯವಂ ಪೊಂದಿ, "ಈ ಸುಂದರಾಂಗಿಯನ್ನು ನಿರ್ಮಾಣವಂ ಗೈದವನು ಮನ್ಮಥನೋ, ಚಂದ್ರನೋ, ಆಗಿರಬೇಕಲ್ಲದೆ ಚತುರ್ಮುಖಬ್ರಹ್ಮನಿಗೆ ಇಷ್ಟು ಕುಶಲತ್ವವು ದೊರಕಲಾರದು. ಇವಳು ಸಿಂಹಳದೇಶದ ಅರಸಿನ ಮಗಳೇ ಆಗಿರಬೇಕು" ಎಂದು ಸಂದೇಹವಂ ಪೊಂದಿ, ಆಲೋಚಿಸುತಿರ್ದನು.

ಎಂಬಲ್ಲಿಗೆ
ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ತೃತೀಯಗುಚ್ಛಂ ಸಂಪೂರ್ಣಮ್.

## ಪಂಚಮ ಗುಚ್ಛಂ.

ಅನಂತರದಲ್ಲಿ ಆ ಮಂತ್ರಿಯು ತನ್ನಲ್ಲಿ ತಾನೇ ಯೋಚನೆಯಂ ಗೈದು, ಧನಗುಪ್ತನನ್ನು ಏಕಾಂತಸ್ಥಳಕ್ಕೆ ಕರೆದು—" ಅಯ್ಯಾ, ವರ್ತಕರೇ, ಈ ಬಾಲೆಯು ಯಾರ ಮಗಳೆಂದು ಕೇಳಿದ್ದೀರಿ, ಯಥಾರ್ಥವಾಗಿ ಪೇಳುವರಾಗಿ" ಎಂದು ನುಡಿಯಲು ; ಆ ವರ್ತಕನು,—" ಅಯ್ಯಾ ಮಂತ್ರಿಗಳೇ, ಕಾಶ್ಮೀರದೇಶದ ವರ್ತಕನಾದ ರತ್ನಗುಪ್ತನ ಮಗಳೆಂದು ಪೇಳುತ್ತಿರುವಳು" ಎಂದು, ಅವಳು ದೊರಕಿದ ಸಂಗತಿಯೆಲ್ಲವನ್ನೂ ವಿಸ್ತಾರವಾಗಿ ಶ್ರುತಪಡಿಸಲು ; ಮಂತ್ರಿಯು ರತ್ನಾವಳಿಯ ವೃತ್ತಾಂತವನ್ನು ಕೇಳಿ—" ಅಯ್ಯಾ ವರ್ತಕರೇ, ಈ ಬಾಲೆಯನ್ನು ನೋಡಿದಾಗಲಿಂದಲೂ ಭೂಮಿಯಲ್ಲಿ ವಾಸವದತ್ತಾದೇವಿಗೆ ಸಮಾನವಾದ ರೂಪುಳ್ಳ ಸ್ತ್ರೀಯೇ ಇಲ್ಲವೆಂಬ ಸಂದೇಹವು ಪರಿಹರವಾದುದು. ಮತ್ತು ಇವಳನ್ನು ವತ್ಸರಾಜೇಂದ್ರನಿಗೆ ಒಪ್ಪಿಸಿದಲ್ಲಿ ರಾಯನು ಇವಳಲ್ಲಿ ಅನುರಕ್ತನಾಗಿರುವುದಕ್ಕೆ ಸಂದೇಹವಿಲ್ಲ. ನಾನಾಗಿ ದಂಪತಿಗಳಿಗೆ ವಿರೋಧವನ್ನುಂಟುಮಾಡುವೆನು. ಮತ್ತು ಈ ವೃತ್ತಾಂತವನ್ನು ವಾಸವದತ್ತಾದೇವಿಯು ತಿಳಿಯದೆ ಇರಳು. ಆಬಳಿಕ ಎನ್ನಲ್ಲಿ ಈಗಿರುವ ಬಲವಾದ ಪ್ರೀತಿಯನ್ನು ಬಿಟ್ಟು ಬಲವಾದ ವಿರೋಧವಂ ತಾಳದೆ ಬಿಡಳು. ರಾಜೇಂದ್ರನು ತಿಳಿಯದಂತೆ ದೇವಿಯ ಸನ್ನಿಧಾನಕ್ಕೆ ಒಪ್ಪಿಸುವುದು ಯುಕ್ತವು. ಏಕೆಂದರೆ—ಅಂತಃಪುರದಲ್ಲಿ ಸಂಚರಿಸುವ ಈ ಭಾಮೆಯನ್ನು ದೈವಯೋಗದಿಂದ ರಾಯನು ಕಂಡಲ್ಲಿ ವಿವಾಹವಾಗದೆ ಬಿಡನು. ಹಾಗಾದಲ್ಲಿ ನನ್ನಮೇಲಣ ನಿಷ್ಠುರತ್ವವು ತಪ್ಪಿಹೋಗುತ್ತಲಿರು

ವುದು. ಇದಕ್ಕೆ ನಿಮ್ಮ ಬುದ್ಧಿಗೆ ಹೇಗೆ ತೋರುವುದು ?" ಎಂದು ಕೇಳಲು ; ಧನಗುಪ್ತನು—"ಅಯ್ಯಾ ಮಂತ್ರಿಗಳೇ, ಈ ಬಾಲಕಿಯನ್ನು ನೀವು ಪೇಳಿದಂತೆ ದೇವಿಯ ಅಂತಃಪುರಕ್ಕೆ ಒಪ್ಪಿಸುವುದೇ ಯುಕ್ತವಾಗಿ ತೋರುವುದು" ಎಂದು ನುಡಿಯಲು ; ಮಂತ್ರಿಯು ರತ್ನಾವಳಿಯನ್ನು ತನ್ನ ಪತ್ನಿಯಾದ ಕಾಂತಿಮತಿಯ ಸಮೀಪದಲ್ಲಿ ಕರೆದುಕೊಂಡು ಪೋಗಿ—"ಎಲೆ ಕಾಂತೆಯೇ, ಈ ಬಾಲಕಿಯನ್ನು ನೋಡುವಳಾಗು. ಬ್ರಹ್ಮಸೃಷ್ಟಿಯಲ್ಲಿ ಇಂಥ ಸ್ತ್ರೀಯು ಪುಟ್ಟುವುದು ದುರ್ಲಭವಾಗಿರುವುದು. ಇವಳನ್ನು ದೇವಿಗೆ ವಿಜ್ಞಾಪನೆಯಂಗೈದು ಅಂತಃಪುರಕ್ಕೆ ಕರೆದುಕೊಂಡು ಪೋಗುವವರೆಗೂ ಇಲ್ಲೇ ಇರಿಸಿಕೊಂಡಿರುವಳಾಗು" ಎಂದು ಹೇಳಿ ಏನೋ ಒಂದು ರಾಜಕಾರ್ಯವನ್ನು ವಿಜ್ಞಾಪನೆಯಂ ಗೆಯ್ಯಲು ದೇವಿಯ ಸನ್ನಿಧಿಯಂ ಕುರಿತು ಪೋಗಲು ;

ಇತ್ತ, ಕಾಂತಿಮತಿಯು ರತ್ನಾವಳಿಗೆ ದೃಷ್ಟಿ ತಾಗುವುದೆಂದು, ಬಿಟ್ಟಕಣ್ಣು ಮುಚ್ಚದೆ ಅರೆಬಾಯಿ ತೆರೆದು ನೋಡುವ ಊಳಿಗದ ಹೆಣ್ಣುಗಳಂ ಕುರಿತು—"ಎಲೌ ಬಾಲೆಯರಿರಾ ! ನಿಮ್ಮಂತೆ ಅವಳೂ ಪೆಣ್ಣಲ್ಲವೆ. ದೊಂಬಿಗೈದು ಯಾಕೆ ನಿಂದಿರುವಿರಿ?" ಎಂದು ಗರ್ಜಿಸಿ ನುಡಿದು, ರತ್ನಾವಳಿಗೆ ತನ್ನ ಕೈಯಿಂದಲೇ ಅರೆಬಿರಿದು ಪರಿಮಳವಂ ಸೂಸುತ್ತಿರುವ ದುಂಡುಮಲ್ಲಿಗೆಯ ಮಾಲೆಯಿಂದ ಅವಳ ಮುಡಿಯನ್ನು ಅಲಂಕರಿಸಿ ಗಂಧತಾಂಬೂಲವಂ ಕೊಟ್ಟು ಒತ್ತಿನಲ್ಲಿ ಕುಳ್ಳಿರಿಸಿ ತನ್ನ ಹಸ್ತದಿಂದ ಪ್ರಶಸ್ತವಾದ ಅವಳ ಮಸ್ತಕವನ್ನು ಸವರುತ್ತ ಧನಗುಪ್ತನನ್ನು ಕರೆಯಿಸಿ, ಅವಳ ವೃತ್ತಾಂತವನ್ನು ಕೇಳಿ ತಿಳಿದು ಸಂತುಷ್ಟಳಾಗಿ—"ಎಲೆ ಬಾಲೆಯೇ, ನೀನು ರಾಜಪತ್ನಿಯಾದ ಬಳಿಕ ನಮ್ಮನ್ನು ಮರೆಯದಿರು" ಎಂದು ನುಡಿಯಲು ; ರತ್ನಾವಳಿಯು ಲಜ್ಜೆಯಿಂದ ತಲೆಯಂ ತಗ್ಗಿಸಿ— "ಸುಮಂಗಲೆಯಾಗಿ ವೃದ್ಧೆಯಾದ ನಿನ್ನವಾಕ್ಯವು ಸತ್ಯವಾಗಲಿ !" ಎಂದು ತನ್ನ ಮನದಲ್ಲೇ ನುಡಿದುಕೊಳ್ಳುತ್ತಿರಲು ;

ಇತ್ತಲು ಮಂತ್ರಿಯು ವಾಸವದತ್ತೆಯ ಸಮೀಪವಂ ಪೊಂದಿ, ನಮಸ್ಕರಿಸಿ, ರಾಜಕಾರ್ಯವನ್ನು ವಿಜ್ಞಾಪಿಸಿ, ಹಿಂದಿರುಗಿ ಪೋಗದೆ ನಿಂದಿರಲು; ದೇವಿಯು—"ಅಯ್ಯಾ ಮಂತ್ರಿಯೇ! ಇನ್ನೇನೋ ಒಂದು ಕಾರ್ಯವನ್ನು ಅರಿಕೆಯಂ ಗೆಯ್ಯುತ್ತಿರುವಂತೆ ತೋರುತ್ತಿರುವುದು" ಎಂದು ಅಪ್ಪಣೆಯನ್ನೀಯಲು; ಮಂತ್ರಿಯು-"ಎಲೌ ದೇವಿಯೆ, ನಿಮ್ಮ ಚಿತ್ತಕೆ ಸಮ್ಮತವಾದಲ್ಲಿ ಒಂದು ಕಾರ್ಯವನ್ನು ವಿಜ್ಞಾಪಿಸಬೇಕೆಂದು ನಿಂತಿರುವೆನು" ಎನಲು, ದೇವಿಯು—"ಅಯ್ಯಾ ಮಂತ್ರಿಗಳೇ, ಯಾವುದೊಂದು ಸಂದೇಹವನ್ನೂ ಪೊಂದದೆ ಪೇಳುವರಾಗಿ" ಎಂದು ನುಡಿಯಲು ; ಮಂತ್ರಿಯು ರತ್ನಾವಳಿಯು ಸಮುದ್ರಮಧ್ಯದಲ್ಲಿ ದೊರಕಿದುದು ಮೊದಲಾಗಿ ತನ್ನ ಮನೆಯಲ್ಲಿ ಇರುವವರೆಗೂ ವಿಜ್ಞಾಪಿಸಲು ; —"ದೇವಿಯು ಅಯ್ಯಾ ಮಂತ್ರಿಗಳೇ, ನೀವು ಪೇಳಿದ ಬಾಲೆಯು ರೂಪಿನಲ್ಲಿಯೂ ಗುಣದಲ್ಲಿಯೂ ಎಂತಿರುವಳು ?" ಎನಲು ; ಮಂತ್ರಿಯು

"ಅವಳು ತಮ್ಮ ಸನ್ನಿಧಿಗೆ ಬಂದಬಳಿಕ ಸರ್ವವೂ ಚಿತ್ತಕ್ಕೆ ವೇದ್ಯವಾಗುತ್ತಿರುವುದು" ಎನಲು; ದೇವಿಯು—"ಅಂಥ ಬಾಲಕಿಯು ನಮ್ಮ ಊಳಿಗಕ್ಕೆ ಅಗತ್ಯವಾಗಿ ಬೇಕಾಗಿರುವಳು. ಇಲ್ಲಿಗೆ ಕರೆದುಕೊಂಡು ಬರುವರಾಗಿ" ಎಂದು ನುಡಿಯಲು; ಮಂತ್ರಿಯು ಪೋಗಿ ಗೋಪ್ಯವಾಗಿ ರತ್ನಾವಳಿಯನ್ನು ಪಾಲಕಿಯಲ್ಲಿ ಕುಳ್ಳಿರಿಸಿಕೊಂಡು ಅಂತಃಪುರಕ್ಕೆ ಕರೆತಂದು ಪಾಲಕಿಯಿಂದಿಳುಹಿಸಿ, ಕೈಯ್ಯಂ ಪಿಡಿದು, ಮುಂದಕ್ಕೆ ಕರೆತರುತ್ತ—"ಎಲೆ ಬಾಲಕಿಯೇ, ಮುಂಬಾಗದಲ್ಲಿರುವ ರತ್ನಪೀಠದಲ್ಲಿ ರಾಜಿಸುವ ವಾಸವದತ್ತಾದೇವಿಯ ಪಾದಕ್ಕೆ ವಂದನೆಯಂ ಗೆಯ್ಯುವಳಾಗು" ಎಂದು ನುಡಿಯಲು; ರತ್ನಾವಳಿಯು ಪಾದಸರ ಗಗ್ಗರಗಳು ಘಲುಘಲೆಂದು ಕರ್ಣಸುಖವನ್ನುಂಟುಮಾಡುವಂತೆ ಅಡಿಗಳನ್ನಿಟ್ಟು, ಮುಡಿಯಲ್ಲಿ ಮುಡಿದ ಮಾಲೆಗಳು ಮಂಡೆಯಂ ಮುಚ್ಚುತ ಮನೋಹರವಾಗುವಂತೆ ಮಂಡಿಗಳನ್ನೂರಿ, ಸೊಗಸಾಗಿ ನಮಸ್ಕಾರವಂ ಗೈದು, ತಲೆಯಂ ತಗ್ಗಿಸಿ, ಎದ್ದು ನಿಂತಿರಲು; ವಾಸವದತ್ತಾದೇವಿಯು ಸರಿಯಾಗಿ ಸೇರಿಸಿರುವ ಮರಿದುಂಬಿಗಳ ಪರಿಯನ್ನನುಸರಿಸಿರುವ ಮುಂಗುರುಳುಗಳಿಂ ಕೂಡಿದ ಮುಖಚಂದ್ರನಿಂ ಏಳುತ್ತಿರುವ ಬಾಲಚಂದ್ರನೋ ಎಂಬಂತಿರುವ ವಜ್ರದ ಬೊಟ್ಟಿನಿಂದಲೂ, ಹುಬ್ಬುಗಳೆಂಬ ಕಾಮನ ಬಿಲ್ಲಿನ ಮಧ್ಯದಲ್ಲಿ ಕೆತ್ತಿದ ಕುರುವಿಂದದ ಮಣಿಯೋ ಎಂಬಂತಿರುವ ಕುಂಕುಮದ ಚುಕ್ಕಿಯು ಬೊಟ್ಟಿನಿಂದಲೂ, ಮಾರನು ಮೂರುಲೋಕವಂ ಜಯಿಸಲೋಸುಗ ಮುಖಚಂದ್ರನಿಗೆ ಬರೆದು ಕಳುಹಿಸಿದ ಪತ್ರಿಕೆಯೋ ಎಂಬಂತೆ ಸೊಗಸಾಗಿರುವ ಮಕರಿಕಾಪತ್ರಿಕೆಯಿಂದಲೂ, ಮಾರನ ಬಾಣಗಳ ತುದಿಯಲ್ಲಿ ಇಂದ್ರನೀಲಮಣಿಯಿಂ ಒತ್ತುರೇಖೆಯಂ ಬರೆದಿರುವರೋ ಎಂಬಂತೆ ಶೋಭಿಸುವ ಕಣ್ಣುಗಪ್ಪಿನ ಸೋಗೆಯಿಂದಲೂ, ಸಂಪಗೆಯ ಮೊಗ್ಗಿನ ತುದಿಯಲ್ಲಿ ಮೂಡಿದ ಮಲ್ಲಿಗೆಯೋ ಎಂಬಂತೆ ಒಪ್ಪುವ ಮೂಗುಬೊಟ್ಟಿನಿಂದಲೂ, ಒಂದೇಸ್ಥಳದಲ್ಲಿ ಪುಟ್ಟಿದ ಮಿತ್ರತ್ವದಿಂದ ಮುಖಚಂದ್ರನಂ ನೋಡಲೋಸುಗ ಬಂದಿರುವ ಪವಳಗಳೋ ಎಂಬಂತಿರುವ ತುಟಿಗಳಿಂದಲೂ, ಮುತ್ತಿನ ಕೆನ್ನೀರಂತೆ ಮುದ್ದಾಗಿ ಮುಖದಲ್ಲಿ ತಳತಳಿಸುವ ಯೌವನದ ಸೊನೆಯಿಂದಲೂ, ಮೊಳಗಿತೋರುವ ತೊಟ್ಟುಗಳಿಂ ಧೊಪ್ಪಿ ಮಟ್ಟುಮೀರಿದ ಕಾಂತಿಯಂ ಪುಟ್ಟಿಸುತ್ತ ಕಡೆದು ಮಡಗಿದ ಚಿನ್ನದ ಗುಂಡುಗಳೋ ಎಂಬಂತೆ ಪೊಳೆಯುವ ಕುಚಗಳಿಗೆ ಸಂದುಸೇರುವೆಯಂ ಗೈದಂತೆ ಪಿಡಿದರೆ ಒಡೆಯುವಂತೆ ತೊಟ್ಟಿರುವ, ಸರಿಗೆಯಂ ಬರೆದ ಚಂದ್ರಗಾವಿಯ ಕುಪ್ಪಸದ ವೈಖರಿಯಿಂದಲೂ, ಕಚಕುಚಗಳ ಭಾರದಿಂದ ಬಡವಾಗಿರುವ ನಡುವಿಗೆ ಬಿಗಿಯಾಗಿ ತೊಡಿಸಿರುವ ರತ್ನದ ಕಟ್ಟಿನಂತೆ ಮೆರೆಯುವ ಒಡ್ಯಾಣದ ಒಯ್ಯಾರದಿಂದಲೂ, ಗಂಡುನವಿಲು ತನ್ನ ಗರಿಗಳನ್ನು ಹರಹಿದ ಪರಿಯನ್ನು ತೋರ್ಪುತ್ತಿರುವಂತೆ ಸೀರೆಯ ನಿರಿಗಳಂ ಪಸರಿಸುವ ಬೆಡಗಿನಿಂದಲೂ, ಮಾರನು ಮೂರು ಲೋಕಗಳಂ ಜಯಿಸಿ ನಾರಿಯಂ ಸಡಿಲಿಸಿ ನಿಲ್ಲಿಸಿದ ಬಿಲ್ಲಿನಂತೆ ಕೊಂಕುಗೂಡಿ ನಿಂತಿರುವ ರೀತಿಯಿಂದಲೂ,

ಕಣ್ಣುಗಳಿಗೆ ಕೌತುಕವನ್ನೂ ಮನಕ್ಕೆ ಮಂಗಳವನ್ನೂ ಸಹ ಉಂಟುಮಾಡುವ ರತ್ನಾವಳಿಯ ಸರ್ವಾಂಗವಂ ನೋಡಿ ಇಂಥ ಕಾಂತೆಯು ತನ್ನ ಊಳಿಗಕ್ಕೆ ದೊರಕಿದಳೆಂಬ ಸಂತೋಷವನ್ನೂ, ಶೃಂಗಾರಶೇಖರನಾದ ನಮ್ಮ ರಾಜೇಂದ್ರನು ಇವಳನ್ನು ಕಂಡಲ್ಲಿ ಹದಗೆಡಿಸದೆ ಬಿಡನೆಂಬ ಸಂದೇಹವನ್ನೂ, ಒಂದು ಅಂಗದಲ್ಲಾದರೂ ಕುಂದುದೋರದಂತೆ ಸೃಷ್ಟಿಸಿದ ಚತುರ್ಮುಖ ಬ್ರಹ್ಮನ ಜಾಣ್ಮೆಯನ್ನೂ ಸಹ ಸ್ಮರಿಸಿ, ಸಂತೋಷವಂ ಕಳವಳವಂ ಸಹ ಪೊಂದುತ್ತ,–"ಎನ್ನ ಸಮೀಪದಲ್ಲೇ ಇವಳಿಗೆ ಒಂದಾನೊಂದು ಊಳಿಗವಂ ಕೊಟ್ಟು ಇರುವೆನೆಂದರೆ, ಪುಷ್ಪವು ಸೋಂಕಿದರೆ ಕಂದುವ ಮೈಸಿರಿಯನ್ನು ವಹಿಸಿರುವಳು; ಹೇಗೆ ಊಳಿಗವಂ ಗೆಯ್ಯುತ್ತಿರುವಳೋ? ಮತ್ತು ಸರ್ವದಾ ನಮ್ಮ ರಾಜೇಂದ್ರನು ಇಲ್ಲಿಗೆ ಬರುತ್ತಿರುವಲ್ಲಿ ಯಾರ ಸಂಬುಗೆಯಿಂದ ಎನ್ನ ಸಮೀಪದಲ್ಲಿರಿಸಿಕೊಳ್ಳಲಿ? ದೂರದ ಊಳಿಗದಲ್ಲಿ ಇರಿಸುವೆನೆಂದರೆ ನಮ್ಮ ಅಂತಃಪುರದ ನಾರಿಯರು ಚಿತ್ರಾಂಗಿಯಂತಿರುವರು. ಮತ್ತು ಇವಳು ನಮ್ಮ ಸ್ವಾಮಿಯಂ ಕಂಡರೂ ನಮ್ಮ ಸ್ವಾಮಿಯೇ ಇವಳನ್ನು ಕಂಡರೂ ಪ್ರಮಾದವಾಗಿಯೇ ತೋರುತ್ತಿರುವುದು. ನಾನು ಇವಳನ್ನು ಒಂದು ದಿನವಾದರೂ ವಿಚಾರಿಸದೆ ಮರತೆನಾದರೆ, ಎನ್ನ ಕೈಮೀರಿ ರಾಯನಂ ಸೇರದೆ ನಿಲ್ಲಳು. ಆದರೆ ಇವಳನ್ನು ನೋಡಿದಾರಭ್ಯವಾಗಿ ಏನೋ ಒಂದು ವಿಶ್ವಾಸವೂ ಪೇಳಲಾರದ ಅಭಿಮಾನವೂ ಸಹ ಇವಳಲ್ಲಿ ಉಂಟಾಗಿರುವುದು. ಜಗತ್ತಿನಲ್ಲಿರುವ ಸ್ತ್ರೀಯರ ಸೌಂದರ್ಯವೆಲ್ಲವೂ ಒಟ್ಟುಗೂಡಿ ಬಂದಿರುವಂತೆ ಒಪ್ಪುತ್ತಿರುವ ಈ ನಾರಿಯನ್ನು ಎನ್ನ ಬಳಿಯಲ್ಲಿ ಇರಿಸುವುದಕ್ಕೂ ಇಲ್ಲಿಂದ ಕಳುಹಿಸುವುದಕ್ಕೂ ಸಹ ಎನ್ನ ಮನವು ಒಡಂಬಡದೆ ಇರುವುದು. ಆದರೂ ನಿತ್ಯದಲ್ಲೂ ನಾನು ಪೋಗಿ ವಿಚಾರಿಸುವುದಕ್ಕೂ ಯೋಗ್ಯವಾದ ಪಕ್ಷಿಶಾಲೆಯ ಗೊತ್ತುಗಾತಿಯನ್ನು ಮಾಡಿ ಇರಿಸಬೇಕೆಂದು ತನ್ನ ಮನದಲ್ಲಿ ಆಲೋಚಿಸಿ ಮಂತ್ರಿಯನ್ನು ವಿಂಗಡವಾಗಿ ಕರೆದು— ಇಂಥ ಬಾಲೆಯನ್ನು ಇಲ್ಲಿಗೆ ಒಪ್ಪಿಸಿದೆನೆಂದು ಯಾರ ಮುಂದೆಯೂ ಪೇಳಲಾಗದೆಂದು ಅಪ್ಪಣೆಯನ್ನಿತ್ತು ಕಳುಹಿಸಲು; ಮಂತ್ರಿಯು— "ನಮ್ಮ ದೇವಿಗೆ ಈ ಸ್ತ್ರೀಯನ್ನು ನೋಡಿದಮಾತ್ರದಿಂದಲೇ ಒಂದಾನೊಂದು ಸಂದೇಹವು ಕಾಲೂರಿದಂತೆ ತೋರುತ್ತಿರುವುದು" ಎಂದು ಆಲೋಚಿಸಿ, ಮತ್ತು—ಈ ಕಾಂತೆಯನ್ನು ಅಂತಃಪುರಕ್ಕೆ ಒಪ್ಪಿಸುವುದು ನಮ್ಮ ರಾಜೇಂದ್ರನಿಗೆ ಸಮ್ಮತವಾದ ಕಾರ್ಯವಾಗಿರುವುದು, ಆದರೂ ಸ್ವತಂತ್ರವಾಗಿ ಕಾರ್ಯವಂ ನಡೆಸಿದೆನೆಂಬ ಸಂಶಯವು ಬಲವಾಗಿರುವುದೆಂದು ತನ್ನ ಮನದಲ್ಲಿ ಆಲೋಚಿಸುತ್ತ, ಮನೆಯಂ ಕುರಿತು ಪೋಗಲು;

ರತ್ನಾವಳಿಯು–"ದೇವಿಯ ಮುಖವಂ ನೋಡಿ, ನಾನು ನಮಸ್ಕಾರವಂ ಗೈದಾರಭ್ಯವಾಗಿ ದೇವಿಯು ಏನೋ ಒಂದು ಯೋಚನೆಯಲ್ಲಿ ಚಿತ್ತವನ್ನಿರಿಸಿರುವಂತೆ ತೋರುವಳು. ಆದರೆ ಹುಟ್ಟಿದಾರಭ್ಯವಾಗಿ ಅನೇಕಜನ ಸ್ತ್ರೀಯರುಗಳಿಂದ ಸೇವೆಯಂ

ತೆಗೆದುಕೊಳ್ಳುತ್ತಿದ್ದ ನಾನು ಈಗ ಸಾಧಾರಣ ಸ್ತ್ರೀಯರೊಡನೆ ಹೇಗೆ ಊಳಿಗವಂ ಗೆಯ್ಯಲಿ!" ಎಂದು ಯೋಚಿಸುತ್ತಿರಲು ; ದೇವಿಯು ರತ್ನಾವಳಿಯಂ ನೋಡಿ-ಇವಳ ರೂಪೇ ಮನೋಹರವಾಗಿರುವುದು. ಇವಳಲ್ಲಿ ವಿದ್ಯಾಬುದ್ಧಿ ಕೌಶಲವು ಎಂತಿರುವುದೋ ತಿಳಿಯಬೇಕೆಂದು, ಅವಳಂ ಕುರಿತು-"ಎಲೆ ಬಾಲೆಯೇ, ನಿನ್ನ ವೃತ್ತಾಂತವನ್ನು ಮಂತ್ರಿಯ ಮುಖವಚನದಿಂದ ಕೇಳಿದ್ದರೂ ನಿನ್ನಮುಖದಿಂದ ಮರಳಿ ಕೇಳಬೇಕೆಂಬ ಇಚ್ಛೆಯು ತೋರುವುದರಿಂದ ಪೇಳುವಳಾಗು" ಎನಲು ; ರತ್ನಾವಳಿಯು ಕರಗಳಂ ಮುಗಿದು—"ಎಲೌ ದೇವಿಯೆ, ಮಂದಭಾಗ್ಯಳಾದ ಎನ್ನ ವಾರ್ತೆಯನ್ನು ಪೇಳುವ ಎನ್ನ ಹೃದಯವು ಶೋಕಾಗ್ನಿಯಿಂದ ಸುಡುವುದಲ್ಲದೆ ಕೇಳುವಂಥ ನಿಮಗೂ ಪೇಳಬಾರದ ವ್ಯಥೆಯು ಸಂಭವಿಸುತ್ತಿರುವುದು" ಎಂದು ಕಂಬನಿಗಳಂ ತುಂಬಿ ನಿಲ್ಲಲು; ವಾಸವದತ್ತಾದೇವಿಯು ಅವಳ ವದನಂ ನೋಡಿ —"ಎಲೌ ಬಾಲೆಯೇ, ನೀನು ಯಾವುದಕ್ಕೂ ವ್ಯಸನಂ ಪೊಂದಬೇಡ" ಎಂದು ನುಡಿದು, ತನಗೆ ಆಪ್ತಳಾದ ಕಾಂಚನಮಾಲೆಯಂ ಕರೆದು—"ಎಲೆ ಕಾಂತೆಯೇ, ಈ ಬಾಲೆಯು ಸಾಗರದಲ್ಲಿ ಸಿಕ್ಕಿದುದರಿಂದ ಎಲ್ಲರೂ ಇವಳನ್ನು ಸಾಗರಿಕೆಯೆಂದು ಕರೆಯತಕ್ಕದು. ಮತ್ತು ಪಕ್ಷಿಶಾಲೆಯಲ್ಲಿ ಇರುವ ಕಲವಾಣಿ, ಪ್ರಣಾಳಿಕೆ, ಮದನಿಕೆ, ಕಾಮಲತಿಕೆ ಮುಂತಾದ ಕಾಂತೆಯರ ಮೇಲುವಿಚಾರಣೆಯಂ ತೆಗೆದುಕೊಳ್ಳುತ, ಪಕ್ಷಿಶಾಲೆಗೆ ಇವಳನ್ನು ಗೊತ್ತುಗೈದು, ನಾನು ಕರೆಯಿಸಿದಾಗ ಇಲ್ಲಿಗೆ ಬರುವಂತೆಯೂ ಇನ್ನೊಂದು ಸ್ಥಳಕ್ಕೆ ಎನ್ನಾಜ್ಞೆಯಿಲ್ಲದೆ ಪೋಗದಂತೆಯೂ ಪೇಳಿ, ಈ ಸಾಗರಿಕೆಯನ್ನು ಪಕ್ಷಿಶಾಲೆಗೆ ಕರೆದುಕೊಂಡು ಪೋಗುವಳಾಗು" ಎಂದು ಅಪ್ಪಣೆಯನ್ನೀಯಲು ; ಕಾಂಚನಮಾಲೆಯು —ಅಜ್ಞೆಯಾದಂತೆ ನಡೆದುಕೊಳ್ಳುವೆನೆಂದು ಆ ಸಾಗರಿಕೆಯನ್ನು ಪಕ್ಷಿಶಾಲೆಗೆ ಕರೆದುಕೊಂಡುಬಂದು, ಅಲ್ಲಿರುವ ಸ್ತ್ರೀಯರಿಗೆಲ್ಲಾ ದೇವಿಯ ಅಪ್ಪಣೆಯಂ ಪೇಳಿ—"ಎಲೆ ಸಾಗರಿಕೆಯೆ, ದೇವಿಯು ನಿನ್ನ ಎದುರಾಗಿ ಅಪ್ಪಣೆಯನ್ನಿತ್ತಿರುವಲ್ಲಿ ಮರಳಿ ನಿನಗೆ ಪೇಳತಕ್ಕ ವಾಕ್ಯಗಳಿಲ್ಲ. ಬುದ್ಧಿವಂತೆಯಾಗಿ ಇದ್ದುಕೊಂಡು ಇರುವಳಾಗು" ಎಂದು ಪೇಳಿ, ದೇವಿಯ ಸಮೀಪಕೆ ಪೋಗಲು ;

ಸಾಗರಿಕೆಯು ಸಂತುಷ್ಟಳಾಗಿ, "ದೇವರು ಕಣ್ಣು ಕಿತ್ತು ಮತಿಯಂ ಕೊಟ್ಟಂತೆ, ಎನಗೆ ಯೋಗ್ಯವಾದ ಊಳಿಗವೇ ದೊರಕಿತು" ಎಂದು ಸುತ್ತಲೂ ಪಕ್ಷಿಶಾಲೆಯಂ ನೋಡಿ, ಅಲ್ಲಲ್ಲಿ ಹುಲ್ಲೆಯ ಮರಿಗಳಿಗೆ ಎಳಗರುಕೆಯ ಭ್ರಾಂತಿಯನ್ನು ಉಂಟುಮಾಡುತ್ತಿರುವ ಪಚ್ಚೆಯ ರತ್ನಗಳಿಂದ ಹೆಚ್ಚಾದ ಕಾಂತಿಯನ್ನುಂಟುಮಾಡುವ ಭೂಮಿಯನ್ನೂ, ಪಾರಿವಾಳ ಪಕ್ಷಿಗಳಿಗೆ ನೀರಿನ ಭ್ರಾಂತಿಯನ್ನು ಹೇರಳವಾಗಿ ಉಂಟುಮಾಡುತ್ತಿರುವ ವಜ್ರದ ಹಾಸರೆಗಲ್ಲುಗಳಿಂದ ಪರಿಶೋಭಿಸುವ ಸ್ಥಳಗಳನ್ನೂ, ಮಿಂಚುತ್ತ ಅಂಚೆಮರಿಗಳಿಗೆ ಕೊಂಚವಾಗಿ ಕಮಲಗಳ ಶಂಕೆಯಂ ಬೀರುವ ಪದ್ಮರಾಗ ಮಣಿಗಳ ಜಗಲಿಯನ್ನೂ, ಶೈತ್ಯಕ್ಕೆ ಜನ್ಮಭೂಮಿಯಾಗಿ ಹಾರಿ ಜಾರಿ ಬಾಯಾರಿ ಬಂದ

ನವಿಲುಮರಿಗಳ ಆಸೆಯನ್ನು ಸಂಪೂರ್ಣವಂ ಗೆಯ್ಯುವ ಜಲಧಾರಾಯಂತ್ರದ ಸೊಗಸನ್ನೂ, ಸಹ ನೋಡುತ್ತ, ಅಲ್ಲಲ್ಲಿರುವ ಮೃಗಪಕ್ಷಿಗಳ ವಿಚಾರಣೆಯಂ ತೆಗೆದು ಕೊಳ್ಳುತ್ತಿರುವಲ್ಲಿ;

ಇತ್ತಲು, ವಾಸವದತ್ತಾದೇವಿಯು ಆ ಸಾಗರಿಕೆಯಲ್ಲಿ ಅತ್ಯಂತ ವಿಶ್ವಾಸವಂ ತಾಳಿ, ಅಪೂರ್ವವಾಗಿ ಬಂದ ಫಲಗಳನ್ನೂ ತನಗೆ ಯೋಗ್ಯವಾದ ಮೃಷ್ಟಾನ್ನದ ಎಡೆಯನ್ನೂ, ಗಂಧ ತಾಂಬೂಲ ಮುಂತಾದ ವಸ್ತುಗಳನ್ನೂ ಸಹ ಕಳುಹಿಸುತ್ತ ಬರಲು; ಕಾಂಚನಮಾಲೆಯು ಸಾಗರಿಕೆಗೆ ಉಂಟಾಗುವ ಮರ್ಯಾದೆಯಂ ನೋಡಿ ಮನದಲ್ಲಿ ಅಸೂಯೆಯಂ ಪೊಂದಿ— ನಾನು ಬಾಲ್ಯದಿಂದಲೂ ದೇವಿಯ ಕಟಾಕ್ಷಕ್ಕೆ ಪಾತ್ರಳಾಗಿದ್ದರೂ ಈ ಸಾಗರಿಕೆಗೆ ಉಂಟಾಗುವ ಮರ್ಯಾದೆಯನ್ನು ಒಂದು ದಿನವಾದರೂ ಪಡೆಯಲಿಲ್ಲ. 'ದೊರೆಗಳಾದವರು ನೂತನಪ್ರಿಯರೆಂಬುವುದು' ನ್ಯಾಯವೇ ಸರಿ, ಎಂದು ತನ್ನ ಮನದಲ್ಲಿ ಆಲೋಚಿಸುತ್ತಿರಲು; ಒಂದುದಿನ ವಾಸವದತ್ತಾದೇವಿಯು–ಪಕ್ಷಿಶಾಲೆಯಲ್ಲಿ ನೂತನವಾಗಿ ಬಂದ ಸಾಗರಿಕೆಯು ಶುಕ ಪಿಕ ಮೊದಲಾದ ಪಕ್ಷಿಗಳನ್ನು ಹೇಗೆ ಸಂರಕ್ಷಿಸುತ್ತಿರುವಳೋ ನೋಡಬೇಕೆಂದು ಯೋಚಿಸಿ, ಊಳಿಗದ ಹೆಣ್ಣುಗಳನ್ನು ಸಂಗಡ ಬಾರದಂತೆ ಪೇಳಿ, ಕಾಂಚನಮಾಲೆಯ ಕೈಲಾಗವಂ ತೆಗೆದುಕೊಂಡು ಬರುತ್ತಾ, ಕಾಂಚನಮಾಲೆಯಂ ಕುರಿತು,—"ಎಲೆ, ಕಾಂಚನಮಾಲೆಯೆ, ಈಗ ಬಂದಿರುವ ಸಾಗರಿಕೆಯು ವರ್ತಕನ ಮಗಳಾಗಿರುವಳೋ, ರಾಜಪುತ್ರಿಯಾಗಿರುವಳೋ? ನಿನ್ನ ಬುದ್ಧಿಗೆ ಹೇಗೆ ತೋರುವುದು?" ಎನಲು; ಕಾಂಚನಮಾಲೆಯು ಮೊದಲೇ ಅವಳಲ್ಲಿ ಅಸೂಯೆಯನ್ನು ತಾಳಿರುವಳಾದುದರಿಂದ ದೇವಿಯಂ ಕುರಿತು—"ಎಲೌ ಪೂಜ್ಯಳಾದ ದೇವಿಯೆ, ಕೇಳು. ನಿಮ್ಮ ಚಿತ್ತಕೆ ಆಯಾಸವು ತೋರಿದರೂ ತೋರಲಿ, ಒಂದು ವಿಜ್ಞಾಪನಾ ವಾಕ್ಯವನ್ನು ವಿಜ್ಞಾಪಿಸುವೆನು. ಈ ಸಾಗರಿಕೆಯೆಂಬವಳು ಯಾರ ಮಗಳಾದರೂ ಆಗಲಿ, ಇವಳು ರೂಪವತಿಯೆಂದು ಅಂತಃಪುರವನ್ನು ಸೇರಿಸಿಕೊಂಡುದು ನೆತ್ತಿಯಲ್ಲಿ ರತ್ನವಿರುವುದೆಂದು ಸರ್ಪವನ್ನು ತಂದು ಮಗ್ಗುಲಲ್ಲಿ ಸೇರಿಸಿಕೊಂಡಂತಾದುದು. ನಮ್ಮ ರಾಜೇಂದ್ರನು ಕಾಮನಿಗೂ ಕಲಾಶಾಸ್ತ್ರವಂ ಕಲಿಸುವ ಶೃಂಗಾರಶೇಖರನೆಂಬುವುದು ನಿಮ್ಮ ಚಿತ್ತಕೆ ವೇದ್ಯವಾಗಿಯೇ ಇದೆ. ಕಣ್ಣಿಗೆ ಬಣ್ಣವಾಗಿರುವುದೆಂದು ತೊಟ್ಟಿಯ ಪಣ್ಣನ್ನು ಮೆಲ್ಲಲು ಕಹಿಯಾಗಿ ತೋರದೆ ಇರಲಾರದು. ಯಾವ ವಸ್ತುವಿನಿಂದ ತನಗೆ ಮೋಸವು ತೋರುತ್ತಾ ಇದೆ ಎಂದು ಮನಸ್ಸಿಗೆ ತಿಳಿದಾಗಲೆ, ಆ ವಸ್ತುವನ್ನು ಮೊದಲು ದೂರವಾಗಿ ತ್ಯಜಿಸಿಬಿಡಬೇಕು. ಅದಲ್ಲದಿದ್ದರೆ ಹುಚ್ಚುನಾಯಿಯ ವಿಷವು ಮುಂಗಾರು ಗುಡುಗಿನ ಧ್ವನಿಯನ್ನು ಕೇಳಿದಾಕ್ಷಣದಲ್ಲಿಯೆ ಕೆರಳಿಕೊಂಡು ಪ್ರಾಣಸಂಕಟವನ್ನುಂಟುಮಾಡುವಂತೆ ಕಾಲಾನಂತರದಲ್ಲಿ ವಿಪತ್ತಿಗೆ ಕಾರಣವಾಗದೆ ಪೋಗದು. ಇವಳು ನಮ್ಮ ರಾಜೇಂದ್ರನಿಗೆ ಕಣ್ಣಿಗೆ ಗೋಚರವಾದ ಬಳಿಕ ಇವಳಮೇಲೆ ನಿಮ್ಮ

ಪ್ರಯತ್ನಗಳು ನಡೆಯಲಾರವು. ಅಥವಾ ನಡೆದರೂ ನಿಮಗೂ ರಾಯನಿಗೂ ಹಬ್ಬಿ ಕೊಂಡಿರುವ ವಿಶ್ವಾಸವು ಕೆಟ್ಟು ವಿರೋಧವು ದೊರಕುವುದರಲ್ಲಿ ಸಂದೇಹ ಕಾಣಿ ಸಲಾರದು. ದೊರೆಯ ಕಟಾಕ್ಷವು ದೊರಕಬೇಕೆಂದು ಎಲ್ಲರೂ ಅಪೇಕ್ಷಿಸುವರಾದು ದರಿಂದ ಇಲ್ಲಿ ಇರುವ ನಮ್ಮ ಊಳಿಗದ ಹೆಣ್ಣುಗಳಲ್ಲಿ ಯಾವಳಾದರೂ ಇವಳ ವಾರ್ತೆ ಯನ್ನು ರಾಯನಿಗೆ ಬಿನ್ನೈಸದೆ ಬಿಡಳು. ಆಬಳಿಕ ತುಟಿಯು ಮಾರಿದ ಹಲ್ಲು ಮುರಿ ಯುವುದಕ್ಕೂ ಮುಚ್ಚಿಕೊಳ್ಳುವುದಕ್ಕೂ ಹೇಗೆ ಆಗದೆ ಇರುವುದೋ, ಆ ರೀತಿ ಯಿಂದ ನಿಮ್ಮ ಶಿಕ್ಷೆಗೂ ರಕ್ಷೆಗೂ ಸಿಕ್ಕದೆ ಹೋಗುವಳು. ತುರುಚನ ಹಂಬನ್ನು ಮುಟ್ಟಿ ತುರಿಸಿಕೊಳ್ಳುವುದಕಿಂತಲೂ ಮುಟ್ಟದೆ ದೂರವಾಗಿ ಬಿಟ್ಟು ಕಳೆಯುವುದೇ ನ್ಯಾಯವಾಗಿ ತೋರುವಂತೆ, ಇವಳನ್ನು ಬಂದ ದಾರಿಯಲ್ಲಿ ಹೊಂದಿಸಿದಲ್ಲಿ ಮುಂದೆ ಯಾವ ವಿಚಾರದಲ್ಲೂ ನಿಮ್ಮ ಮನಸ್ಸಿಗೆ ವ್ಯಥೆಯು ಪುಟ್ಟಲಾರದು. ಇವಳು ಅಂತಃ ಪುರದಿಂದ ಹೋದರೆ, ಸಮಸ್ತವಾದ ಊಳಿಗಗಳೂ ನಿಂತುಹೋಗುವುದೆಂದು ಚಿತ್ತಕೆ ತೋರಿ ಇದ್ದಲ್ಲಿ ಇವಳನ್ನು ಇಲ್ಲೇ ಇರಿಸಿಕೊಂಡಿರಬಹುದು. ಇದುವರೆಗೂ ಇವ ಳಿಂದಲೇ ಸಮಸ್ತ ಕಾರ್ಯವೂ ನಿರ್ವಾಹವಾಗುತ್ತ ಇರಲಿಲ್ಲ. ಆದರೆ ತಮ್ಮ ಅಭಿವೃದ್ಧಿ ಯನ್ನು ಬಯಸುತ್ತಿರುವ ಗೌಡಿಯಾದುದರಿಂದ ಶಕ್ತ್ಯಾಯಂ ಮಾರಿ ವಿಜ್ಞಾಪನೆಯಂ ಗೈದಿರುವೆನು. ಇದರಮೇಲೆ ಪ್ರಭುಗಳಾದ ತಮ್ಮ ಚಿತ್ತಕ್ಕೆ ಸಮ್ಮತವಾದಂತೆ ಕಾರ್ಯ ವಂ ನಡೆಯಿಸಬಹುದು" ಎಂದು ಬಿನ್ನೈಸಲು; ದೇವಿಯು ಆಗಿನವೇಳೆಗೆ ಕಾಂ ಚನಮಾಲೆಯ ವಚನಗಳೇ ಸಮ್ಮತಗಳಾಗಿ ತೋರಿದುದರಿಂದಲೂ, ಕಿವಿಗಳೇ ದೊರೆ ಗಳ ಕಣ್ಣುಗಳಾದುದರಿಂದಲೂ, ಅವಳಂ ಕುರಿತು—"ಎಲೆ ಸ್ತ್ರೀಯೇ, ಈಗ ನೀನು ಪೇಳಿದ ವಾಕ್ಯವು ನಿಶ್ಚಯವೇ ಸರಿ. ಆದರೆ ಈಗ ಪಕ್ಷಿಶಾಲೆಗೆ ಹೋಗಿ ಯಾವುದಾ ದರೂ ಒಂದು ನೆಪವಂಗೈದು ಅಪರಾಧಗಳನ್ನು ಅವಳಲ್ಲಿ ನಿಶ್ಚಯಿಸಿ, ಇಲ್ಲಿಂದ ಹೊರ ಮಡಿಸಬೇಕಲ್ಲದೆ ವ್ಯರ್ಥವಾಗಿ ಕೋಪಿಸಿ ಕಳುಹಿಸುವುದು ನ್ಯಾಯವಲ್ಲ" ವೆಂದು ಪಕ್ಷಿಶಾಲೆಯ ಸಮೀಪಕ್ಕೆ ಒಂದು—"ಎಲೆ, ಕಾಂಚನಮಾಲೆಯೆ, ನಾವಿಬ್ಬರೂ ಆ ಸಾಗರಿಕೆಯು ಕಾಣದಂತೆ ನಿಂತು ಅವಳು ಮಾಡುವ ವಿಚಾರಗಳ ನೀತಿಯನ್ನೂ ಚೇಷ್ಟೆಗಳನ್ನೂ ಸಹ ನೋಡುವ" ಎನ್ನಲು; ಕಾಂಚನಮಾಲೆಯು— "ಈಗ ದೇವಿಯರು ಚೆನ್ನಾಗಿ ಅಪ್ಪಣೆಯನ್ನಿತ್ತಿರುವಿರಿ" ಎಂದು, ಗವಾಕ್ಷ ರಂಧ್ರಗಳಲ್ಲಿ ಕಾಂಚನಮಾಲೆಯೂ ದೇವಿಯೂ ಸಹ ನೋಡುತ್ತಿರಲು ;

ಇತ್ತಲು, ಸಾಗರಿಕೆಯು ಒತ್ತಿನಲ್ಲಿ ಚಿತ್ತರವಾಗಿ ಚಿತ್ತರವಾಗಿ ಉತ್ತಮವಾಗಿ ರುವ ಮಾಕಂದವನದ ಪದ್ಮಸರೋವರದಲ್ಲಿ ಸ್ನಾನವಂಗೈದು; ಗರಿ ಮುರಿಯದೆ ಪಾಲ ನೊರೆಯಂತೆ ವೆ ರೆಯುತ್ತ, ಸರಿಗೆಯ ಸೆರಗಿನಿಂದ ಪರಿಶೋಭಿಸುತ್ತಿರುವ ಸೀರೆಯ ನ್ನುಟ್ಟು; ಕರಿಯ ಕವಚಂ ತೊಡಿಸಿದ ಕಾಮನ ಕೈ ಕಠಾರಿಗಳಂತೆ ಮೆರೆಯುತ್ತ ಕ್ಷಣ ಕ್ಕೊಂದು ಪರಿಯಾಗಿ ಉಬ್ಬಿ ಬರುವ ಕುಚಗಳನ್ನು ಮೇಘವರ್ಣದಂತೆ ಮೇಲಾದ

ಕುಪ್ಪಸದಿಂದ ಅರೆಯಾಗಿ ತೋರುವಂತೆ ಬಿಗಿದು ; ಹದವರಿದು ಕಟ್ಟಿದ ತುದಿಗಂಟಿನಿಂದೊಪ್ಪಿ ನವಿಲುಗರಿಯ ನಾಚಿಕೆಯಂ ತೆಗೆದು, ಪೋಡದ ಮುಖಭಂಗವಂ ಗೈದು, ಕತ್ತಲೆಯ ಕಾಂತಿಯನ್ನೊತ್ತರಿಸಿ, ಅರೆಯಾಗಿ ಒಂದು ಪರಿಯಾಗಿ ಕಿವಿಗಳಂ ಮುಚ್ಚಿ, ತುದಿಯಲ್ಲಿ ಅರೆಬಿರಿದ ಇರುವಂತಿಗೆಯ ಮಾಲೆಯಿಂದ ಮೇಲಾಗಿ ನಿತಂಬಗಳಲ್ಲಿ ಜೋಲುತ್ತ ತುಂಬಿಗಳ ಗರಿಯ ಕರಿಯ ಬಣ್ಣಕ್ಕೆ ಸರಿಯಾಗಿ ಮೆರೆಯುತ್ತಿರುವ, ಕೇಶಕಲಾಪದಿಂ ವಿಭೂಷಿತಳಾಗಿ ; ಮುಖಕಮಲಕ್ಕೆ ಸರಿಯಾಗಿ ಎರಗಿದ ಮರಿದುಂಬಿಗಳ ಪರಿಯಂ ಅನುಸರಿಸಿ ಮೆರೆಯುವ ಕಸ್ತೂರಿತಿಲಕದಿಂದ ಪರಿಶೋಭಿಸುತ್ತ ; ಮನ್ಮಥನ ಪಟ್ಟದ ರಾಣಿಯ ಗಜದ ಕುಂಭಸ್ಥಳದಲ್ಲಿ ಅಲಂಕರಿಸಿದ ದುಂಡುಮಲ್ಲಿಗೆಯ ದಂಡೆಯೋ ಎಂಬಂತೆ ಮೆರೆಯುವ ಆಣಿಮುತ್ತಿನ ಮಾಲೆಯಿಂದ ಮೇಲಾದ ಕುಚಕುಂಭಗಳಿಂದ ಮನೋಹರಳಾಗಿ ; ಆ ಪಕ್ಷಿಶಾಲೆಯ ಮಧ್ಯದಲ್ಲಿರುವ ಪೀಠದಲ್ಲಿ ಕುಳಿತು ; ಅಲ್ಲಿರುವ ಊಳಿಗದ ಪೆಣ್ಣುಗಳಂ ಕುರಿತು—“ಎಲೆ, ಚಂದ್ರಮುಖಿಯೇ, ನೀನು ಚಕ್ರವಾಕಪಕ್ಷಗಳ ಹಿಂಡಿಗೆ ನುಗ್ಗದೆ ಹಿಂದಿರುವಳಾಗು. ಎಲೆ ನಾಗವೇಣಿಯೇ, ನವಿಲುಗಳು ನಾಟ್ಯವಾಡುವ ಸ್ಥಳಕ್ಕೆ ನಲಿಯುತ್ತ ಪೋಗದಿರು. ಎಲೈ ಸಿಂಹಮಧ್ಯಳೇ, ಉಲ್ಲಾಸದಿಂದ ಹುಲ್ಲುಗಳಂ ಮೆಲ್ಲುತ್ತಲಿರುವ ಹುಲ್ಲೆಯ ಮರಿಗಳ ಮರಕತದ ಮನೆಯ ಹೊಸತಿಲಂ ಮೆಟ್ಟದಿರು. ಎಲೆ ಪಲ್ಲವಪಾಣಿಯೇ, ನೀನು ನಿಂತಲ್ಲಿ ನಿಲ್ಲದೆ ಕೋಗಿಲೆಗಳಿರುವ ಗೂಡುಗಳಿಗೆ ಕೈಯ್ಯಂ ನೀಡದಿರು. ಎಲೆ ಬಿಂಬಾಧರೆಯ್ಯೋ, ನೀನು ಹಂಬಲಿಸುತ್ತ ಇಂಪಾಗಿ ಪಂಜರದಲ್ಲಿ ರಂಜಿಸುತ್ತ ಕಿವಿಗಿಂಪಾದ ಸೊಲ್ಲುಗಳಂ ಸೊಲ್ಲಿಸುತ್ತಿರುವ ಗಿಳಿಗಳ ಬಳಿಯಲ್ಲಿ ಸುಳಿಯದೆ ಸುಮ್ಮನಿರುವಳಾಗು. ಎಲೆ ಪಿಂಗಾಕ್ಷಿಯೆ, ಮುಂಗಡೆಯಲ್ಲಿ ಮಂಗಳವಾದ ಅಂಗಳದಲ್ಲಿ ಮೇವರಿತು ಮೆಲ್ಲುತ್ತ ಸಂಚರಿಸುತ್ತಿರುವ ಪಾರಿವಾಳದ ಪಕ್ಷಿಗಳಂ ಹಾರಿಸುವೆನೆಂದು ಓರೆನೋಟಗಳಿಂ ನೋಡಿ ಒಯ್ಯಾರವಂ ತೋರಿ ಎನ್ನ ಮಾತುಗಳಂ ಮೀರಿ ಪೋಗದೆ ನಿಲ್ಲುವಳಾಗು. ಎಲೆ ಘನಕೇಶಿಯೇ, ಹಸಿವಿನಿಂದ ಹಂಬಲಿಸುತ್ತ ಚಪಲಗಳಾದ ಚಾತಕಪಕ್ಷಿಗಳ ಮರಿಗಳಿಗೆ ಹಿಮಜಲಬಿಂದುಗಳಂ ಕೊಟ್ಟು ಸಂತೋಷವಂ ಪುಟ್ಟಿಸುವಳಾಗು. ಎಲೆ ಕಮಲಮುಖಿಯೇ, ನಡುಬಾವಿಯ ತಡಿಯಲ್ಲಿ ಎಡೆಯಾಡುತ್ತ ಎಡೆಬಿಡದೆ ಕ್ರೇಂಕಾರವಂ ಗೆಯ್ಯುವ ಅಂಚೆಯ ಮರಿಗಳಿಗೆ ಸಂಚರಿತು ಮಿಂಚುತ್ತಿರುವ ತಾವರೆಯ ದಂಟುಗಳನ್ನು ಮೆಲ್ಲಿಸುವಳಾಗು. ಎಲೆ ತುಂಬುಜವ್ವನದ ಕುಂಭಕುಚೆಯೇ, ನೀನು ನಿನ್ನ ಪೆರ್ಮೊಲೆಗಳಂ ಪೊರುವುದೆ ನಿನಗೆ ಊಳಿಗವಾಗಿರುವುದಲ್ಲದೆ ದೇವಿಯರು ಬಿಜಯಂಗೆಯ್ಯುವ ದಾರಿಗೆ ಕಸ್ತೂರಿಯ ಸಾರಣೆಗೈದು ಕುಂಕುಮದ ಕಾರಣೆಯಂ ಬಿಟ್ಟು, ಪಚ್ಚಗಪ್ಪೂರದ ರಂಗವಲಿಯನ್ನಿಕ್ಕುವುದಂ ಮರೆದು ಸೊಕ್ಕಿನಿಂದಿರುವುದು ನ್ಯಾಯವೆ ಪೇಳು. ಎಲೆ ಶುಕವಾಣಿಯೇ, ಎಚ್ಚರಿಕೆ ಪರಾಕೆಂದು ದೇವಿಯರ ಬಿರುದು ಪದ್ಯಗಳಂ ಪರಿಪರಿಯಾಗಿ ಪಾಡುವುದಂ ಮರೆತು ಮರು

ಳಾಗಿದ್ದಲ್ಲಿ ನಿನಗೆ ಮನ್ನಣೆಯು ಉಂಟಾಗುವುದೆ ಪೇಳು. ಎಲೆ ಮಂದಗಮನೆಯೆ, ದಿನಕೊಂದು ಹಜ್ಜೆಯನ್ನಿಡದೆ ಶೀಘ್ರದಿಂ ಪೋಗಿ, ಸಿರಿಯಂತೆ ಮೆರೆಯುವ ದೇವಿಯರು ಬರುವ ದಾರಿಯಲ್ಲಿ ಪಾದಗಳು ಒತ್ತದಂತೆ ತೊಟ್ಟು ತೆಗೆದ ಜಾಜಿಯ ಪುಷ್ಪಗಳಂ ಸುರಿದು ನಯವಾದ ಸೂರ್ಯಪಟದ ನಡೆಮುಡಿಯಂ ಹಾಸದೆ, ಮಾಸದ ಪೈಬಣ್ಣವನಾಂತು ನಿಂತಿರುವ ನಿನ್ನಂ ಕಂಡು ದೇವಿಯು ಮಾಸಲಳಿಯದೆ ಬಿಡಳು. ಎಲೆ ಕಲವಾಣಿಯೇ, ನೀನು ಬಲುಹೊತ್ತಿನಿಂದ ಮಲೆಯುತ್ತ, ಪಲಬಗೆಯ ಪಕ್ಷಿಗಳಂ ನೋಡುತ್ತ, ಚೆಲುವಾದ ಸಂಗೀತವಂ ತೊರೆದು, ಮಂದಮತಿಯಂತೆ ಹಿಂದು ಮುಂದನರಿಯದೆ ದೇವಿಯ ಸೇವೆಯಂ ಮರೆತು, ನಿಂದಿರುವುದು ನ್ಯಾಯವೆ ಪೇಳು" ಎಂದು ಸಖಿಯರಿಗೆ ಬುದ್ಧಿಯಂ ಪೇಳುತ್ತಿದ್ದಳು.

ಎಂಬಲ್ಲಿಗೆ
ಶ್ರೀ ಕೃಷ್ಣರಾಜಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ಪಂಚಮ ಗುಚ್ಛಂ ಸಂಪೂರ್ಣಂ.

## ಷಷ್ಠ ಗುಚ್ಛಂ.

ಅನಂತರದಲ್ಲಿ ನಾಗರಿಕೆಯು ಮರಳಿ ಅಲ್ಲಲ್ಲಿರುವ ನಾರಿಯರಂ ಕುರಿತು-"ಎಲೆ ಚಂಚಲಾಕ್ಷಿಯೇ, ಕದ್ದಾಳೆಯ ಮರದ ಕತ್ತಲೆಯು ಹೊದ್ದದಂತೆ ಮುದ್ದಾದ ರತ್ನದೀಪವಂ ಬಿಟ್ಟು ಕಾದಿರುವುದಂ ಬಿಟ್ಟು ಸೊಗಸಾಗಿರುವ ಬಗಸೆಗಣ್ಣುಗಳ ಕಾಂತಿಯಂ ಪಸರಿಸಿ ಪಕ್ಷಿಗಳ ಪಾರಿಸುತ್ತ ನಿಂತಿರುವುದು ನೀತಿಯೆ ಪೇಳು. ಎಲೆ ಮದವತಿಯೇ, ದೇವಿಯ ಪಾದಸೇವೆಯಂ ತೊರೆದು, ಬೆದೆಯರಿಯದೆ, ಸೆರಗಂ ಮರೆದು, ಮೇರೆಯಂ ಮೀರಿ, ಮದನಂಗೆದೆಗೊಟ್ಟವಳಂತೆ ತಾರುಮಾರಾಗಿ ಓರೆದುರುಬನ್ನಿಟ್ಟು ಬಾರಿಬಾರಿಗೂ ಈ ಪಕ್ಷಿಶಾಲೆಯ ದಾರಿಯಲ್ಲಿ ಸಂಚಾರವಂ ಗೆಯ್ಯುವುದಕ್ಕೆ ಕಾರಣವೇನಿರುವುದು ಪೇಳು. ಎಲೆ ಬಟ್ಟಮೊಲೆಯ ಬಾಲೆಯೇ, ಕಟ್ಟಿದ ಕಾಸೆಯಂ ಬಿಗಿದ ಎಡೆಗಟ್ಟನ್ನೂ ಬಿಚ್ಚದೆ ನಿಟ್ಟುಸಿರಂ ಬಿಡುತ್ತ ಸಜ್ಜುಗೊಂಡ ಗೆಜ್ಜೆಯ ಕಾಲುಗಳನಿಟ್ಟು ನಾಟ್ಯದ ಹಂಬಲವಂ ಬಿಟ್ಟು ಪೆಟ್ಟುವಿದ್ದವಳಂತೆ ಸಿಟ್ಟುಗೊಂಡು ಮಟ್ಟುಮೀರಿದ ಬಳಲಿಕೆಯಂ ತೋರೆಯದೆ ಮುದ್ದಾದ ಮುಖದ ಬೆಮರುಗಳಂ ಒರೆಸದೆ ಬಿರುಸಾಗಿ ಹುಬ್ಬುಗಳಂ ಗಂಟಿಕ್ಕಿ ನಾಟ್ಯಶಾಲೆಯಿಂದ ನಾಚಿಕೆಯಿಲ್ಲದೆ ಬಂದು ನವಿಲುಗಳ ನಾಟ್ಯವ ನೋಡುತ್ತ ನಿಂದಿರುವುದು ಚಂದವೆ ಪೇಳು. ಎಲೆ ಕುಂದರದನೆಯೇ,

ಇಂದುಕಾಂತಶಿಲೆಯಿಂ ಸುಂದರವಾದ ದೇವಿಯ ಗದ್ದುಗೆಯಂ ಸಿದ್ಧವಂ ಗೆಯ್ಯದೆ ಮುಗ್ಧೆಗಳಂತೆ ಮುಖವನ್ನೆತ್ತಿ ಹಾರುವ ಪಾರಿವಾಳಗಳನರೆದೃಷ್ಟಿಯಿಂದ ಏಕೆ ನೋಡುತ್ತ ನಿಂದಿರುವೆ.? ಎಲೆ ಚಿತ್ತರಿಣಿಯೆ, ಮುತ್ತಿನ ಮಾಲೆಯು ಕಿತ್ತುಹೋಗದಂತೆ ಕತ್ತಿನಲ್ಲಿ ನಿಂತು ಪಕ್ಷಿಗಳಂ ಹಾರಿಸೆಂದು ನೀರಜಾಕ್ಷಿಯಂ ನಿಲ್ಲದೆ ಹೋಗಿ ಸೊಲ್ಲಿಸುವಳಾಗು. ಎಲೆ ರಾಜೀವಪಾದೆಯೇ, ರಾಜೋಪಚಾರಕ್ಕೆ ರಾಜಿಸುತ್ತ ಸೋಜಿಗವಂ ತೋರಿ ಈ ಜಗಕ್ಕೆ ಮೇಟಾಗಿರುವ ಗಂಧ ತಾಂಬೂಲ ಫಲ ಪುಷ್ಪಗಳನಿಂಬಾಗಿ ತಟ್ಟೆಗಳಲ್ಲಿ ತುಂಬಿ ಮಡಗಿ, ಪ್ರಶಸ್ತವಾದ ಹಸ್ತಪಾವಡೆಯಂ ಮುಚ್ಚಿ, ದೇವಿಯರ ಪಾದವಂ ತೊಳೆಯಲೋಸುಗ ಪದ್ಮರಾಗದೆಸೆಯಿಲ್ಲದಣಿಯಾದ ಪಾತ್ರದಲ್ಲಿ ಪನ್ನೀರಂ ತುಂಬಿ, ದೂಂಬಿಗೊಂಡು ತುಂಬಿಬರುವ ದುಂಬಿಗಳ ದಾರಿಗನುಸಾರವಾಗಿ ಸೊಂಪಾದ ಸಂಪಿಗೆಯ ಮೊಗ್ಗುಗಳನ್ನು ಒಗ್ಗುಗೂಡಿಸಿ, ದೇವಿಯರ ಪಾದಸೇವೆಯಲ್ಲಿ ಮೋದದಿಂದ ಕಾದಿರುವಳಾಗು. ಎಲೆ ರಂಗುದುಟಿಯ ತುಂಗಸ್ತನದ ಮಂಗಳಾಂಗಿಯೇ, ಸಿಂಗರಂಗೊಂಡು ಮುಂಗಡೆಯ ಅಂಗಣದಲ್ಲಿ ಬಂಗಿಯಂ ತಿಂದ ಮಂಗನಂತೆ ನಿಂತು ನೋಡದೆ ಪಚ್ಚೆಗಪ್ಪುರದ ಪುಡಿಯಂ ಚೆಲ್ಲಿ ಪನ್ನೀರ ಚಳೆಯವನ್ನಿತ್ತು ಲಾಮಂಚದ ತಡಿಕೆಯ ಅಂಚಿನಲ್ಲಿ ಕಳೆಗುಂದದ ಚೆಂದದ ಕುಂದದ ಮಾಲೆಗಳನ್ನು ಅಳವಡಿಸಿ ದುಂಡುಮಲ್ಲಿಗೆಯ ದಂಡೆಗಳ ತಂಡಗಳನ್ನು ತುಂಡುಗೈದು ಹೆಚ್ಚಾದ ಕುಚ್ಚುಗಳಂ ರಚಿಸಿ, ದಿಕ್ಕುದಿಕ್ಕುಗಳಲ್ಲಿ ಪಲಬಗೆಯ ಪಕ್ಕಿಗಳು ಪೊಕ್ಕು ಕೊಕ್ಕುಗಳಿಂ ಕುಕ್ಕಿ ಚಪ್ಪರದ ಚಿಗುರುಗಳಂ ಚದುರಿಸದಂತೆ ಬೆದರಿಸುತ, ಚದುರತನದಿಂ ನಿಂತು ಕಾದಿರುವಳಾಗು. ಎಲೆ ಬಾಲೆಯರುಗಳಿರಾ, ಕೇಳಿ. ಲೋಕದಲ್ಲಿ ರಾಜಸೇವೆಯು ಹರಸಿದ ಹಾವಂ ಮುತ್ತಿಕ್ಕಿದಂತೆ ಮಹಾಪ್ರಯಾಸವಾಗಿರುವುದು. ಆದುದರಿಂದ ಭಯಭಕ್ತಿ ಯುಕ್ತರಾಗಿ ಇದ್ದಲ್ಲಿ ದೇವಿಯ ಕಟಾಕ್ಷವು ಕೈಗೂಡುವುದು. ದೊರೆಗಳೂ ಅವರ ಪತ್ನಿಯರೂ ಸಹ ದೇವಾಂಶವಾಗಿರುವರು ಎಂದು ತಿಳಿಯುವರಾಗಿ. ಈಗ ದೇವಿಯರು ಬರುವ ಸಮಯವಾದುದು” ಎಂದು ಸಖಿಯರಂ ಕುರಿತು ಹೇಳುತ್ತಿರಲು ;

ದೇವಿಯು ಕಿವಿಗೆ ಹಿತವಾದ ನಾಗರಿಕೆಯ ವಾಕ್ಯವಂ ಕೇಳಿ, ಒತ್ತಿನಲ್ಲಿ ನಿಂದಿದ್ದ ಕಾಂಚನಮಾಲೆಯ ಮುಖವಂ ನೋಡಿ,—“ಎಲೆ ನಾರಿಯೆ, ನಾಗರಿಕೆಯ ಮೇಲಾದ ನುಡಿಯನ್ನು ಆಲೈಸಿದೆಯೊ? ಇವಳು ವರ್ತಕನ ಮಗಳೇ ಆದಲ್ಲಿ ಈ ರೀತಿಯಾದ ವಾಕ್ಯಗಳು ವದನದಿಂದ ಹೊರಮಡುವುದೆ ಹೇಳು? ಮತ್ತು ಇವಳು ಪೀಠದಲ್ಲಿ ಕುಳಿತಿರುವ ಠೀವಿಯೂ, ಹುಬ್ಬುಗಳನ್ನೆಬ್ಬಿಸುವ ಒಯ್ಯಾರವೂ, ಇಂಬಾಗಿ ತಂಬುಲವನ್ನೊತ್ತರಿಸಿರುವ ಬೆಡಗೂ, ಮುಡಿಯ ತುದಿಗಂಟನ್ನು ಕಟ್ಟಿರುವ ಬಿತ್ತರವೂ, ಹೊಸಪರಿಯಾಗಿ ನಮಗೂ ದೊರೆಯದೆ, ವರ್ತಕರ ಕುಲಕ್ಕೆ ದೂರವಾಗಿ ಹೋಗುವ ಸೊಬಗನ್ನು ಪುಟ್ಟಿಸುತ್ತಿರುವುವು” ಎಂದು ನುಡಿಯಲು ; ಕಾಂಚನಮಾಲೆಯು—

ಇವಳ ವಿಚಾರವಾಗಿ ಕರಬುತ್ತಿದ್ದ ಎನ್ನ ಮನಕ್ಕೂ ಪ್ರಿಯವಂ ಪುಟ್ಟಿಸುತ್ತಿರುವ ವಚನಮಾಧುರ್ಯವು ಶತ್ರುಗಳನ್ನಾದರೂ ಸಹ ಮಿತ್ರರನ್ನು ಗೈಯುತ್ತಲಿರುವುದು; ನಾನು ವ್ಯರ್ಥವಾಗಿ ಇವಳ ಮೇಲೆ ದೇವಿಯೊಡನೆ ನಾನಾಪ್ರಕಾರವಾದ ಚಾಡಿಯನ್ನು ಪೇಳಿದೆನೆಂದು, ತನ್ನ ಮನದಲ್ಲಿ ಯೋಚಿಸಿ, ದೇವಿಯಂ ಕುರಿತು—" ಎಲೌ ತಾಯೇ, ಇವಳು ಯಾವುದೋ ಒಂದು ದೇಶದ ರಾಯನ ಮಗಳಲ್ಲದೆ ಇದ್ದಲ್ಲಿ, ಪಕ್ಷಿಗಳ ಪಾಲನಾರೀತಿಯೂ, ರಾಜನೀತಿಯನ್ನು ಅನುಸರಿಸಿ ಸರಿಯಾದ ಮಾತಿನ ರೀತಿಯೂ, ಈ ಠೀವಿಯೂ ಸಹ ದೊರೆಯಲಾರವು. ಯಾರಿಗೇ ಆಗಲಿ ಕುಲಕ್ಕೆ ಸರಿಯಾದ ವಾಕ್ಯಗಳು ಕಡೆಯುತ್ತಲಿರುವುವು" ಎಂದು ನುಡಿಯುತ್ತಲಿರಲು;

ಅಷ್ಟರಲ್ಲೇ ಕಮಲಪ್ರಭೆಯೆಂಬ ಕಾಂತೆಯು ಮರಕತದ ವೀಣೆಯಂ ಕರದಲ್ಲಿ ಪಿಡಿದು ಸಂಗೀತ ಶಾಲೆಯಂ ಪೊರಮಟ್ಟು ಪಕ್ಷಿಶಾಲೆಯ ಕಡೆಯಾಗಿ ಪೋಗುತ್ತಲಿರಲು,

ಸಾಗರಿಕೆಯು ಆ ವೀಣೆಯ ಸುಂದರತೆಗೆ ಮನಸೋತು—" ಎಲೆ ಕಾಂತೆಯೆ, ವೀಣೆಯನ್ನು ಸಂಗೀತಶಾಲೆಯಿಂದ ಎಲ್ಲಿಗೆ ತೆಗೆದುಕೊಂಡು ಪೋಗುತ್ತಲಿರುವೆ?" ಎಂದು ನುಡಿಯಲು; ಕಮಲಪ್ರಭೆಯು—" ಎಲೆ ಸಾಗರಿಕೆಯೇ, ದೇವಿಯರು ನುಡಿಸತಕ್ಕುದು; ಚೆನ್ನಾಗಿ ಮೇಳವಂ ಮಾಡಿಸಿಕೊಂಡು ಬರುವಂತೆ ಅಪ್ಪಣೆಯನ್ನಿತ್ತುದರಿಂದ ಮದನಮಂಜರಿಯೆಂಬ ಸಂಗೀತ ಪಾರಂಗತೆಯ ಸಮೀಪಕ್ಕೆ ತೆಗೆದುಕೊಂಡು ಪೋಗಿದ್ದೆನು" ಎನಲು; ಸಾಗರಿಕೆಯು ಆವೀಣೆಯನ್ನು ಜಾಣತನದಿಂದೆತ್ತಿ—" ಎಲೆ ಬಾಲೆಯೇ, ಈ ವೀಣೆಯು ದೇವಿಯರಿಗೆ ಯೋಗ್ಯವಾದುದರಿಂದ ನಮ್ಮಂಥವರು ನುಡಿಸಬಾರದು. ಆದರೂ ಮಾಡಿರುವ ಮೇಳದ ಹೆಚ್ಚು ಕಡಿಮೆಯನ್ನು ನೋಡುವೆನು" ಎಂದು ಕುಚಕ್ಕೆ ಒರಗಿಸಿಕೊಂಡು, ವರ್ಜ್ಯಾವರ್ಜ್ಯಗಳ ತಿಳಿದು, ಘನ ನಯ ದೇಸಿಯಗಳೆಂಬ ಮೂರು ಪ್ರಕಾರವಾದ ಗಾನಭೇದವನ್ನೂ ಮೂರ್ಛನಾಕ್ರಮವನ್ನೂ ಆರಭಿ ಕಲ್ಯಾಣಿ ಮೊದಲಾದ ರಾಗಗಳಿಗೆ ಸಂಬಂಧಗಳುಂಟಾಗದಂತೆ ನಿಷಾದ ಋಷಭ ಗಾಂಧಾರ ಷಡ್ಜಗಳೆಂಬ ಸೊಂಪಾದ ಭೇದಗಳಂ ತಿಳಿದು ಕಿವಿಗೆ ಹಿತವಾಗಿ ನುಡಿಸುತ್ತ, ಸತ್ಯಲೋಕದಿಂದ ಸರಸ್ವತಿಯೇ ಭೂಲೋಕಕ್ಕೆ ಇಳಿದು ಬಂದಳೋ ಎಂಬ ಸಂದೇಹವಂ ಪುಟ್ಟಿಸುತ್ತಿರಲು;

ಇತ್ತ ದೇವಿಯು ಇವಳಿಗೆ ವೀಣಾವಿದ್ಯೆಯಲ್ಲಿರುವ ಪ್ರಜ್ಞಾವಿಶೇಷವಂ ತಿಳಿದು, ಅತ್ಯಂತ ಆಶ್ಚರ್ಯವನ್ನು ಪೊಂದುತ್ತಲಿರಲು; ಕಾಂಚನಮಾಲೆಯು— ಇವಳು ಯಾರೋ ದೇವತಾಸ್ತ್ರೀಯಾಗಿ ತೋರುವಳಲ್ಲದೆ ಮನುಷ್ಯ ಸ್ತ್ರೀಯೆಂದು ನಂಬಲಾಗದೆಂದು, ತನ್ನ ಮನದಲ್ಲಿ ತಿಳಿಯುತ್ತಿರುವಳಾಗಲು;

ಅತ್ತ ಕಮಲಪ್ರಭೆಯು—" ಎಲೆ ಸಾಗರಿಕೆಯೇ, ಇನ್ನೂ ಯಾವಯಾವ ವಿದ್ಯೆಗಳನ್ನು ಎಲ್ಲೆಲ್ಲಿ ಕಲಿತಿರುವೆ? ಪೇಳುವಳಾಗು," ಎನಲು; ಸಾಗರಿಕೆಯು—

“ ಎಲೆ ಕಾಂತೆಯೇ, ಕೇಳು. ಎನಗೆ ಬಾರದ ವಿದ್ಯೆಗಳೇ ಇಲ್ಲ. ನಾನು ಕಲಿತ ಸ್ಥಳಗಳನ್ನು ಪೇಳುವೆನೆಂದರೆ ಎನ್ನ ನಾಲಗೆಯು ಹಿಮ್ಮೆಟ್ಟುತ್ತಿರುವುದು. ಕೆಟ್ಟ ಬಳಿಕ ಯಾವ ವಿದ್ಯೆಗಳಿದ್ದರೂ ಏನು ಫಲವು? ಲೋಕದಲ್ಲಿ ಲಕ್ಷ್ಮೀ ಸರಸ್ವತಿಯರು ಅತ್ತೆ ಸೊಸೆಯರಾದುದರಿಂದ ಒಂದೇ ಸ್ಥಳದಲ್ಲಿರುವುದು ದುರ್ಲಭವು. ಕೆಟ್ಟ ಬ್ರಹ್ಮನು ವ್ಯರ್ಥವಾಗಿ ಎನ್ನ ಪುಟ್ಟಿಸಿದನು. ಸಕಲೈಶ್ವರ್ಯವಂ ಬಿಟ್ಟು-ಕೆಟ್ಟು ಬಂದು ಈ ಸದ್ಗುಣ ಶಾಲಿಯಾದ ವಾಸವದತ್ತಾದೇವಿಯಂ ಬಂದು ಸೇರಿರುವೆನು. ಅವಳು ಹಾಲಲ್ಲಿ ಅದ್ದುವಳೋ ಸೇರಿದವರ ಮಾತುಗಳಂ ಕೇಳಿ ನೀರಲ್ಲಿ ಮುಳುಗಿಸುವಳೋ ತಿಳಿಯೆನು. ಲೋಕದಲ್ಲಿ ಪರಸೇವೆಯೇ ಕಷ್ಟವಾಗಿರುವುದು. ಇದರಲ್ಲಿ ರಾಜಸೇವೆಯ ವಿಚಾರವಂ ಪೇಳತಕ್ಕುದೇನು!” ಎಂದು ಕಣ್ಣುಗಳಲ್ಲಿ ನೀರುತುಂಬಿ, ಕೈಯ್ಯಲ್ಲಿ ಪಿಡಿದಿದ್ದ ವಸ್ತ್ರದಿಂದ ಒರಿಸುತ್ತಿರಲು ;

ವಾಸವದತ್ತಾದೇವಿಯು ಮನಮರುಗಿ—“ ಎಲೆ ಕಾಂಚನಮಾಲೆಯೇ, ಸಾಗರಿಕೆಯು ಪೇಳಿದ ವಾಕ್ಯವಂ ಕೇಳಿದೆಯಾ ?” ಎಂದು ನುಡಿದು, “ ಇವಳನ್ನು ಯಾರು ಕ್ಷುದ್ರವಂ ಪೇಳುತ್ತಿದ್ದರೂ ಕೈಬಿಡದೆ ಸಲಹುವೆನು ” ಎಂದು, ಮನದಲ್ಲಿ ನಿಶ್ಚಯಿಸುತ್ತಿರಲು; ಕಾಂಚನಮಾಲೆಯು—“ ಸಾಗರಿಕೆಯು ವಚನವಂ ಕೇಳಿ ಕರುಣವಂ ತಾಳಿದ ದೇವಿಯು, ನಾನು ಕ್ಷುದ್ರವಂ ಪೇಳಿದುದಕ್ಕೆ, ‘ ಕಾಂಚನಮಾಲೆಯೇ ಸಾಗರಿಕೆಯ ವಚನವಂ ಕೇಳಿದೆಯಾ ?’ ಎಂದು ನುಡಿದ ವಾಕ್ಯವೇ ಎನಗೆ ಶಿಕ್ಷೆಯಂಗೈದಂತಾದುದು ” ಎಂದು ಯೋಚಿಸುತ್ತಿರಲು;

ಸಾಗರಿಕೆಯು—“ ಎಲೆ ಕಮಲಪ್ರಭೆಯೇ, ನಿನ್ನ ಊಳಿಗದ ವೇಳೆಯು ಮೀರಿ ಪೋಗುವುದು. ವೀಣೆಯಂ ದೇವಿಯ ಸನ್ನಿಧಿಗೆ ತೆಗೆದುಕೊಂಡು ಪೋಗುವಳಾಗು ” ಎಂದು ನುಡಿಯುತ್ತಿರಲು ;

ಇತ್ತಲಾಕಾಂಚನಮಾಲೆಯು ಮನದಲ್ಲಿ ತಲ್ಲಣವಂ ಪೊಂದುತ,–“ ದೊರೆಗಳ ಹೃದಯವು ಅಗಾಧವಾಗಿ ಇರುವುದರಿಂದ ಹಿಂದುಮುಂದನ್ನು ಆಲೋಚಿಸದೆ ಒಂದು ಕಾರ್ಯವನ್ನಾದರೂ ವಿಜ್ಞಾಪಿಸುವುದು ಕಷ್ಟವಾಗಿರುವುದು. ನಮ್ಮ ದೇವಿಗೆ ಸಾಗರಿಕೆಯಲ್ಲೇ ಬಲವಾದ ಅಭಿಮಾನವು ಬಲಿತಿರುವುದು. ಮುಂದೆ ನನಗೆ ಯಾವ ರೀತಿಯಾದ ಶಿಕ್ಷೆಯಾಗುವುದೋ ? ” ಎಂದು ಯೋಚಿಸುತ್ತಿರಲು ;

ಅಷ್ಟರಲ್ಲೇ ಕಮಲಪ್ರಭೆಯೆಂಬ ಕಾಂತೆಯು, ಮಕರಂದೋದ್ಯಾನ ವನದಿಂದ “ ನಮ್ಮೆಲ್ಲರಿಗೂ ಬಹಳವಾದ ಆನಂದ ಉಂಟಾಗುವುದು ” ಎಂದು ಕೂಗುತ್ತ ಓಡಿಬರಲು ; ಸಾಗರಿಕೆಯ ಮಿತ್ರಳಾದ ಸುಸಂಗತೆಯು ಕಮಲಪ್ರಭೆಯೆಂಬ ಕಾಂತೆಯಂ ಕುರಿತು–“ ಎಲೆ ನಾರಿಯೇ, ಎಲ್ಲರಿಗೂ ಹೇಗೆ ಸಂತೋಷವಾಗುವುದು ? ಏತಕ್ಕೆ ಈರೀತಿ ಕೂಗುತ್ತ ಬಂದೆ ? ” ಎಂದು ನುಡಿಯಲು; ಅವಳು—“ ಎಲೆ ಸುಸಂಗತೆಯೇ, ಕೇಳು. ವಸಂತಕಾಲವು ಪ್ರಾಪ್ತವಾದುದರಿಂದ ನಾವು ಬಿಜಯಂಗೆಯ್ಯುವೆ

ವು. ಮಕರಂದೋದ್ಯಾನವನ್ನು ರಂಗವಲ್ಲಿ ಮುಂತಾದ ಮಂಗಳದ್ರವ್ಯಗಳಿಂದ ಅಲಂಕರಿಸುವಂತೆ ದೇವಿಯರು ಅಪ್ಪಣೆಯನ್ನಿತ್ತರೆಂದು ಕಲವಾಣಿಯು ಬಂದು ಪೇಳಿದ ವಾಕ್ಯವಂ ಕೇಳಿ ಸಂತೋಷದಿಂದ ಕೂಗುತ್ತ ಬಂದೆನು" ಎಂದು ನುಡಿಯಲಾಸಾಗರಿಕೆಯು ತನಗೆ ಮಿತ್ರಳಾದ ಸುಸಂಗತೆಯಂ ಕರೆದು—" ಎಲೆ ಕಾಂತೆಯೇ, ವಸಂತೋತ್ಸವವೆಂದರೇನು? ಮನ್ಮಥನ ಪೂಜೆಯೆಂದರೇನು? ಸೇವಕಳಾದ ಈ ಸಾರಿಗೆ ಇಷ್ಟು ಸಂತೋಷವು ಪುಟ್ಟುವುದಕ್ಕೆ ಕಾರಣವೇನು?" ಎಂದು ಬೆಸಗೊಳ್ಳಲು; ಅವಳು—" ಎಲೆ ಮಿತ್ರಳೇ, ಆದರ ಸಂಗತಿಯನ್ನು ಏಕಾಂತವಾಗಿ ನುಡಿಯುವೆನು" ಎಂದು ಪೇಳುತ್ತಿರಲು;

ಅಷ್ಟರಲ್ಲೇ ದೇವಿಯು ಕಾಂಚನಮಾಲೆಯು ಕೈಲಾಗವಂ ಪಿಡಿದು ಪಕ್ಷಿಶಾಲೆಗೆ ಬಿಜಯಂಗೆಯ್ಯಲು;

ಸಾಗರಿಕೆಯು ಬೆದರಿದ ಹುಲ್ಲೆಯಂತೆ ಕಾಲಂದುಗೆಯು ಘಲ್ಲೆಂದು ಶಬ್ದವನ್ನುಂಟುಮಾಡುವಂತೆ ಬೆಚ್ಚಿ ಪೀಠದಿಂದೆದ್ದು ದೇವಿಗೆ ನಮಸ್ಕಾರವಂಗೆಯ್ಯಲು; ದೇವಿಯು ಸಾಗರಿಕೆಯಲ್ಲಿ ಅಧಿಕವಾದ ಅಭಿಮಾನವಂ ತಾಳಿ, " ಎಲೆ ಮಂಗಳಾಂಗಿಯೇ, ನೀನು ಪಕ್ಷಿಶಾಲೆಗೆ ಅಧಿಕಾರಕ್ಕೆ ಬಂದಬಳಿಕ ಯಾವ ಯಾವ ಪಕ್ಷಿಗಳು ಎಷ್ಟೆಷ್ಟು ಮೊಟ್ಟೆಗಳನ್ನು ಕೊಟ್ಟಿರುವುವು? ಕಸ್ತೂರೀಮೃಗ ಪುಣಗಿನ ಬೆಕ್ಕು ಜವ್ವಾಜಿಬೆಕ್ಕು ಹುಲ್ಲೆಗಳೂ ಸಹ ಎಷ್ಟು ಮರಿಗಳನ್ನೀದಿರುವುವು?" ಎಂದು ಅವಳ ಕರವಂ ಪಿಡಿದು, ನಾಲಾಗಿ ಮೇಲಾಗಿ ಲೀಲೆಗನುಕೂಲವಾಗಿರುವ ಮೃಗಪಕ್ಷಿಗಳಂ ನೋಡುತ್ತ, ಮೆಲ್ಲಮೆಲ್ಲನೆ ಪಲ್ಲವದಂತೆ ಮೃದುವಾದ ಪಾದಗಳನ್ನಿಟ್ಟು ಬರುತ್ತಿರಲು;

ಅಷ್ಟರಲ್ಲೇ ತರಳಿಕೆಯೆಂಬ ದ್ವಾರಪಾಲಿಕೆಯು ತ್ವರ್ಯದಿಂದ ಓಡಿಬಂದು ದೇವಿಯಂ ಕುರಿತು—" ಎಲೌ ದೇವಿಯೇ, ರಾಜೇಂದ್ರನು ಮುತ್ತಿನ ಹಜಾರದಿಂದ ಮಣಿಹಜಾರಕ್ಕೆ ಬಂದು ನಿನ್ನಂ ಕಾಣದೆ ಕಲಾವತಿಯ ಮುಖದಿಂದ ಪಕ್ಷಿಶಾಲೆಯಲ್ಲಿ ಇರುವಳನ್ನಾಗಿ ತಿಳಿದು ಇಲ್ಲಿಗೆ ದಯೆಮಾಡುತ್ತಿರುವನು" ಎಂದು ಬಿನ್ನೈಸಲು;

ದೇವಿಯು ತಾವರೆಯೆಲೆಯಮೇಲೆ ಬಿದ್ದ ನೀರಿನಂತೆ ಚಂಚಲಹೃದಯಳಾಗಿ ಇನ್ನು ಮಾಡತಕ್ಕುದೇನೆಂದು ಯೋಚಿಸಿ, " ಕಾಂಚನಮಾಲೆಯೇ, ಇಲ್ಲಿರುವ ಸಾಗರಿಕೆ ಮೊದಲಾದ ಈ ಬಾಲೆಯರುಗಳನ್ನು ಸಂಗೀತಶಾಲೆಗೆ ಕೂಡಿ ಬಾಗಿಲನ್ನು ಬಲವಾಗಿ ಹಾಕುವಳಾಗು" ಎಂದು ಏಕಾಂತವಾಗಿ ನುಡಿದು, " ಎಲೆ ಬಾಲೆಯರಿರಾ, ನೀವೆಲ್ಲರೂ ಸಂಗೀತಶಾಲೆಗೆ ಪೋಗುವರಾಗಿ" ಎಂದು ಗರ್ಜಿಸಿ ನುಡಿಯಲು; ಕಾಂಚನಮಾಲೆಯು ಸಾಗರಿಕೆ ಮೊದಲಾದ ಬಾಲೆಯರುಗಳನ್ನು ಪಕ್ಷಿಶಾಲೆಗೆ ಕೂಡುತ್ತಿರುವಷ್ಟರಲ್ಲೇ ರಾಯನು ಬಂದು ಸ್ವಲ್ಪವಾಗಿ ಸಾಗರಿಕೆಯ ಹಿಂಬಾಗವಂ ನೋಡಿ

ಇವಳಾರೋ ಹೊಸಬಳಾಗಿರುವಳೆಂದು ಬಾರಿಬಾರಿಗೂ ಸಂಗೀತಶಾಲೆಯ ಬಾಗಿಲನ್ನು ನೋಡುತ್ತ ಬರಲು ;

ಅಷ್ಟರಲ್ಲೇ ದೇವಿಯು ರಾಯನಂ ಕಂಡು ನಮಸ್ಕಾರವಂ ಗೈದು ಕೈಲಾಗವನ್ನಿತ್ತು ಪಕ್ಷಿಶಾಲೆಗೆ ಕರೆದುಕೊಂಡು ಬರುತ್ತಿರಲು ;

ಕಾಂಚನಮಾಲೆಯು ಎಲ್ಲರನ್ನೂ ಸಂಗೀತಶಾಲೆಗೆ ಪೊಗಿಸಿ, ಬಾಗಿಲಂ ಮುಚ್ಚಿ ಬೀಗವನ್ನು ಹಾಕಿಬರಲು; ಒಳಗಿರುವ ಸುಸಂಗತೆಯು—ಯಾವಾಗಲೂ ರಾಯನು ಬಂದಾಗ ನಡೆಯದೇ ಇದ್ದ ಮರ್ಯಾದೆಯು ಈಹೊತ್ತು ನಡೆಯುವುದಕ್ಕೆ ಈ ಸಾಗರಿಕೆಯು ಕಾರಣಳಾಗಿರುವಳೆಂದು ಯೋಚಿಸುತ್ತಿರಲು; ಸಾಗರಿಕೆಯು—ಇಲ್ಲಿ ರಾಯನು ಬಂದಾಗ ಈ ಊಳಿಗದ ಪೆಣ್ಣುಗಳು ನಿಲ್ಲುವ ಮರ್ಯಾದೆ ಇಲ್ಲವೋ, ಅಲ್ಲದಿದ್ದರೆ ರಾಯನು ಎನ್ನನ್ನು ಕಾಣುವನೆಂಬ ಸಂದೇಹದಿಂದ ದೇವಿಯು ಮಾಡಿದ ಬುದ್ಧಿಚಮತ್ಕಾರವೋ ತಿಳಿಯಬೇಕೆಂದು ಆಲೋಚಿಸಿ, “ ಎಲೆ ಸುಸಂಗತೆಯೇ, ಇಲ್ಲಿ ರಾಯನು ಬಂದಾಗ ಊಳಿಗದ ಪೆಣ್ಣುಗಳು ಎದುರಾಗಿ ನಿಲ್ಲುವ ಮರ್ಯಾದೆಯು ಇಲ್ಲವೋ ಇನ್ನೇನಾದರೂ ಕಾರಣವಿರುವುದೋ ಪೇಳುವಳಾಗು ? ” ಎನಲು ; ಅವಳು—ಈ ಮರ್ಯಾದೆ ಇಲ್ಲವೆಂದು ನುಡಿದರೆ ತನ್ನ ನಿಮಿತ್ತದಲ್ಲೇ ಈ ರೀತಿಯಾಯಿತೆಂದು ಮನದಲ್ಲಿ ನೊಂದುಕೊಳ್ಳುವಳೆಂದು ಯೋಚಿಸಿ, “ ಎಲೆ ಕಾಂತೆಯೇ ನಮ್ಮ ಅರಮನೆಯ ರೀತಿಯು ಇದೇ ರೀತಿ ” ಎಂದು ನುಡಿಯಲು ;

ರಾಯನು ಮೇಘಮಧ್ಯದಲ್ಲಿ ತೋರಿ ಬಯಲಾದ ಮಿಂಚಿನ ಬಳ್ಳಿಯಂತೆ ಕಾಮನ ಕೈ ಕತ್ತಿಯು ಒರೆಯಂ ಪೊಕ್ಕಂತೆ ಸಂಗೀತಶಾಲೆಯಂ ಪೊಕ್ಕ ಸಾಗರಿಕೆಯ ಹಿಂಬಾಗವಂ ಕಂಡ ಮಾತ್ರದಿಂದಲೇ ಕಳವಳವಂ ಪೊಂದಿ, “ ಎನಗೆ ಆಪ್ತನಾದ ವಿದೂಷಕನು ಒತ್ತಿನಲ್ಲಿ ಇಲ್ಲ. ಇವಳಾರೆಂದು ದೇವಿಯಂ ಕೇಳುವುದು ಮರ್ಯಾದೆಯಲ್ಲ. ಅಥವಾ ಕೇಳಿದರೂ ನಿಜವಾದ ವಾಕ್ಯವಂ ಪೇಳುವಳಲ್ಲ. ಇದಕೆ ಏನು ಪ್ರಯತ್ನವಂ ಗೆಯ್ಯಲಿ ? ” ಎಂದು ಯೋಚಿಸುತ್ತಿರಲು ; ದೇವಿಯು ರಾಯನ ಚಂಚಲದೃಷ್ಟಿಯನ್ನೂ ಏನೋ ಒಂದು ಪರಿಯಾದ ಮುಖರಸವನ್ನೂ ಸಹ ನೋಡಿ,—ನಮ್ಮ ಸ್ವಾಮಿಯು ಸಾಗರಿಕೆಯಂ ಕಂಡಂತೆ ತೋರುವುದೆಂದು ಯೋಚಿಸುತ್ತಿರಲು ;

ಅಷ್ಟರಲ್ಲೇ ಕಲವಾಣಿಯೆಂಬ ಕಾಂತೆಯು ಓಡಿಬಂದು ದೇವಿಯಂ ಕುರಿತು— “ ಎಲೌ ದೇವಿಯೇ, ಮಣಿಹಜಾರದ ಮುಂದುಗಡೆಯಲ್ಲಿ ಕಟ್ಟಿದ್ದ ರತ್ನಪಂಜರವು ಕಿತ್ತು ಬೀಳಲಾಗಿ ಅಲ್ಲಿಂದ ಮೇಧಾವಿನಿಯೆಂಬ ಶಾರಿಕೆಯು ವಿಕಾರಸ್ವರದಿಂದ ನಿನ್ನನ್ನೇ ಪೆಸರಂ ಪಿಡಿದು ಕೂಗುತ್ತಿರುವುದೆಂದು ಬಿನ್ನೈಸಲು; ದೇವಿಯು ತ್ವರ್‍ಯದಿಂದೊಡಗೂಡಿ—“ ಎಲೈ ಸ್ವಾಮಿಯೇ, ಪಂಜರವು ಏನು ನಿಮಿತ್ತದಿಂದ ಕಿತ್ತುಬಿದ್ದುದೋ? ಅದನ್ನು ವಿಚಾರಿಸುವುದಕ್ಕೆ ಸಂಗಡಲೇ ದಯೆಮಾಡಿಸಬೇಕು” ಎಂದು ರಾಯನ ಹಸ್ತ

ವಂ ಪಿಡಿದು ಕರೆದುಕೊಂಡು ಬರುತ, ಏನೋ ಒಂದು ವಾಕ್ಯವಂ ಕೇಳುವಂತೆ ಕಾಂಚನಮಾಲೆಯಂ ಕರೆದು, ಕಿವಿಯಲ್ಲಿ ರಹಸ್ಯವಾದ ವಾಕ್ಯವಂ ಪೇಳಿ ಕಳುಹಿಸಲು ; ರಾಯನು-ಮೊದಲೇ ಪಕ್ಷಿಶಾಲೆಯಿಂದ ಎನ್ನನ್ನು ಹೊರಡಿಸಬೇಕೆಂಬ ದೇವಿಗೆ ಪಂಜರವು ಕಿತ್ತುಬಿದ್ದುದೆಂಬ ವಾಕ್ಯವು ಸಹಾಯವಂ ಗೈದುದೆಂದು ಯೋಚಿಸುತ್ತ, ಆಪ್ತ ವಿದೂಷಕನು ಇಲ್ಲವೆಂದು ಎಡಬಲವಂ ನೋಡುತ್ತ ಬರುತ್ತಿರಲು ;

ಅಷ್ಟರಲ್ಲೇ ವಸಂತಕನೆಂಬ ವಿದೂಷಕನು,—ಮಕರಂದೋದ್ಯಾನ ವನದಲ್ಲಿ ದೇವಿಯು ಮನ್ಮಥನ ಪೂಜೆಯಂ ಗೈಯ್ಯುವುದೇ ನಿಜವಾಗಿದ್ದಲ್ಲಿ ಎನಗೆ ಬಾಗಿನವೂ ದಕ್ಷಿಣೆಯೂ ಸಹ ಬಾರದೇ ಇರದು. ನಾನು ವತ್ಸರಾಜನ ಸನ್ನಿಧಿಯಂ ಬಿಟ್ಟು ಬಹು ಹೊತ್ತಾದುದು. ಇಂಥ ಉತ್ಸವಕಾಲದಲ್ಲಿ ರಾಜನ ಸನ್ನಿಧಿಯಲ್ಲೇ ಇರಬೇಕೆಂದು ಯೋಚಿಸುತ್ತಾ, ಬರುತ್ತಿರಲು ; ಎಚ್ಚರಿಕೆ ಪರಾಕೆಂದು ಪೇಳುವ ಊಳಿಗದ ಪೆಣ್ಣುಗಳು ಉಚ್ಚರಿಸುವ ಶಬ್ದವಂ ಕೇಳಿ,—"ಇದೋ! ಇತ್ತಲು, ರಾಯನು ಉತ್ತಮವಾದ ಮುತ್ತಿನ ಹಜಾರದ ಹತ್ತಿರವಂ ಸೇರುವನಂತೆ ತೋರುವುದು. ನಾನೂ ಶೀಘ್ರದಿಂ ಪೋಗುವೆನು" ಎಂದು ಬಂದು, ದೇವಿಯರಿಂದೊಡಗೂಡಿದ ರಾಯನಂ ಕಂಡು—ರೋಹಿಣೀನಕ್ಷತ್ರವಂ ಪೊಂದಿದ ಪೂರ್ಣಚಂದ್ರನಂತೆ ದೇವಿಯರಿಂದೊಡಗೂಡಿ ಮುಂದುಗಡೆಯಲ್ಲಿ ಆನಂದದಿಂ ಬರುವನಾದರೂ ನಮ್ಮ ರಾಯನ ಮುಖವಂ ನೋಡಿದರೆ, ಏನೋ ಒಂದು ಯೋಚನೆಯಲ್ಲಿ ಅವನ ಚಿತ್ತವು ತಗಲಿಕೊಂಡಿರುವಂತೆ ತೋರುವುದೆಂದು ಯೋಚಿಸುತ್ತಬಂದು, "ಎಲೈ, ರಾಜೇಂದ್ರನೇ, ನೀನು ದೇವಿಯಿಂದೊಡಗೂಡಿ ಶಾಶ್ವತವಾದ ಭೂಮಣ್ಡಲವಂ ಪರಿಪಾಲಿಸುವನಾಗು!" ಎಂದು ಕರವನ್ನೆತ್ತಿ ಆಶೀರ್ವಾದವಂ ಗೆಯ್ಯಲು; ರಾಯನು ಬಡವನಿಗೆ ಭಾಗ್ಯ ಬಂದಂತೆ ಅತ್ಯಂತಸಂತೋಷವಂ ಪೊಂದಿ—ಎನ್ನ ಮನದ ಸಂದೇಹವನ್ನು ಆಪ್ತನಾದವನೊಡನೆ ಹೇಳಿದಲ್ಲದೆ ಮನದ ಕಳವಳವು ಪೋಗಲಾರದೆಂದು ಯೋಚಿಸಿ,—"ಅಯ್ಯಾ ವಸಂತಕನೇ, ನಿನಗೆ ಕ್ಷೇಮವೇ ?" ಎಂದು ಬೆಸಗೊಳ್ಳಲು ; ವಿದೂಷಕನು ರಾಯನ ವಾಕ್ಯವಂ ಕೇಳದವನಂತೆ ನಾಗರಿಕೆಯು ಸಂದೇಹದಿಂ ಬರುವ ದೇವಿಯಂ ನೋಡಿ—"ಎಲೌ ಪೂಜ್ಯಳಾದ ದೇವಿಯೇ, ಏನೋ ಒಂದು ಯೋಚನೆಯಲ್ಲಿ ನಿನ್ನ ಚಿತ್ತವು ತಗಲಿಕೊಂಡಿರುವುದರಿಂದ ನಿನ್ನ ಕೃಪಾದೃಷ್ಟಿಯು ಎನ್ನಲ್ಲಿ ಬೀಳಲಿಲ್ಲವು" ಎನಲು, ದೇವಿಯು—ಇವನು ಮಹಾ ಜಾಣನಾಗಿರುವುದರಿಂದಲೇ ಎನ್ನ ಯೋಚನೆಯ ಪರಿಯಂ ತಿಳಿದುದು, ಇವನಿಗೆ ತಕ್ಕ ಉತ್ತರವಂ ಪೇಳುವೆನೆಂದು ಯೋಚಿಸಿ, "ಅಯ್ಯಾ ವಿದೂಷಕನೇ, ಮುತ್ತಿನ ಹಜಾರದಲ್ಲಿ ಶಾರಿಕೆಯ ಪಂಜರವು ಕಿತ್ತುಬಿದ್ದುದೆಂಬ ವಾರ್ತೆಯಂ ಕೇಳಿದುದರಿಂದ ಮನದ ಕಳವಳದಿಂದ ನಿನ್ನನ್ನು ನೋಡಲಿಲ್ಲ" ಎಂದು ನುಡಿಯಲು ; ಆವೇಳೆಗೆ ಕಾಂಚನಮಾಲೆಯು ದೇವಿಯ ಸನ್ನಿಧಿಯಂ, ಸೇರಿ, "ಎಲೌ ತಾಯೇ ನೀನು ಅಪ್ಪಣೆಯನಿತ್ತಂತೆ ಸಂಗೀತಶಾಲೆಯ ಬಾಗಿಲಂ ಹಾಕಿ, ಪಕ್ಷಿಶಾಲೆಯ ಬೀಗವಂ

ತೆಗೆದು, ಬೀಗದ ಕೈಯ್ಯಂ ಕೈಯ್ಯಲ್ಲಿ ತೆಗೆದುಕೊಂಡು ಬಂದೆನು" ಎಂದು ಏಕಾಂತವಾಗಿ ಪೇಳಲು; ದೇವಿಯು—"ಎಲೆ ಕಾಂತೆಯೇ, ನೀನು ಬೀಗವನ್ನು ಹಾಕಿ ಬರುವಾಗ, ನಾಗರಿಕೆಯು ಏನೆಂದು ನುಡಿದುಕೊಂಡಳು?" ಎಂದು ಬೆಸಗೊಳ್ಳಲು; ಕಾಂಚನಮಾಲೆಯು—"ಎಲೌ ದೇವಿಯೇ, ಕೇಳು. ನಾಗರಿಕೆಯು ಸುಸಂಗತೆಯಂ ಕುರಿತು-'ಎಲೆ ಕಾಂತೆಯೆ, ಲೋಕದಲ್ಲಿ ನೋಡತಕ್ಕಂಥ ವಸ್ತುವನ್ನು ನೋಡದೆ ಇದ್ದ ಪುಣ್ಯವಿಲ್ಲದ ಕಣ್ಣುಗಳಿಷ್ಟೇನು! ಹುಟ್ಟಿಬರುವ ಸೂರ್ಯನಂ ನೋಡಿ ಸಮಸ್ತ ಪ್ರಾಣಿಗಳೂ ಸಂತೋಷವಂ ಪೊಂದುತ್ತಿದ್ದರೂ, ಪುಣ್ಯವಿಲ್ಲದ ಗೂಗೆಯು ಹೇಗೆ ಸಂಕಟವಂ ಪೊಂದುವುದೋ ಅದೇರೀತಿಯಲ್ಲಾಯಿತು' ಎಂದು ಪೇಳುತಿದ್ದು, ಅಷ್ಟರಲ್ಲೇ ಎನ್ನ ಸುಳಿವಂ ತಿಳಿದು, ಆ ಮಾತುಗಳನ್ನೇ ಬಿಟ್ಟಳು. ಆದರೆ ಅವಳಾಡಿದ ವಾಕ್ಯಕ್ಕೆ ತಾತ್ಪರ್ಯವೇನಿರುವುದೋ?" ಎಂದು ಬಿನ್ನೈಸಲು; ದೇವಿಯು—"ಎಲೆ ಬಾಲೆಯೇ, ಕೈ ಹುಣ್ಣಿಗೆ ಕನ್ನಡಿಯನ್ನು ಏಕೆ ತರಬೇಕು? ನಮ್ಮ ಸ್ವಾಮಿಯನ್ನು ನೋಡುವುದಕ್ಕೆ ಅವಕಾಶ ದೊರೆಯಲಿಲ್ಲವೆಂಬ ದುಃಖದಿಂದ ಆಡಿದ ಮಾತುಗಳು, ಎಂಬ ತಾತ್ಪರ್ಯವು ವ್ಯಕ್ತವಾಗಿಯೇ ಇದೆ. ಆದರೂ ಇಂದಿನ ದಿನದಲ್ಲಿ ಮಂದಯಾನೆಯಂ ಸುಂದರಾಂಗನಾದ ನಮ್ಮ ಸ್ವಾಮಿಯು ಕಂಡನೋ ಕಾಣಲಿಲ್ಲವೋ ತಿಳಿಯೆನು. ಸಂಗೀತಶಾಲೆಯ ಬಾಗಿಲನ್ನೇ ಬಾರಿಬಾರಿಗೂ ಕಿರುನೋಟಗಳಿಂ ನೋಡುತ್ತ ಚಂಚಲವಾದ ಭಾವವಂ ತಳೆದು, ಇಲ್ಲಿಗೆ ಪ್ರವೇಶವಂ ಗೈವನೋ ಎಂಬ ಭೀತಿಯುಂಟಾಗಿದ್ದುದು. ಅಷ್ಟರಲ್ಲೇ ದೈವಯೋಗದಿಂದ ಶಾರಿಕೆಯ ಪಂಜರವು ಕಿತ್ತು ಬಿದ್ದುದೆಂಬ ವಾರ್ತೆಯು ಎನಗೆ ಒದಗಿದಾಗ ಸಮಾಧಾನವನ್ನುಂಟುಮಾಡಿದುದು." ಎಂದು ರಹಸ್ಯವಾಗಿ ನುಡಿಯುತ್ತಿರಲು; ಕಂಚುಕಿಯು ಬಂದು ರಾಯನಂ ಕುರಿತು—"ಎಲೈ ಸ್ವಾಮಿಯೇ, ಮಂತ್ರಿಯು ಅಂತಃಪುರದ ಬಾಗಿಲಲ್ಲಿ ನಿಂತು ಏನೋ ಒಂದು ರಾಜಕಾರ್ಯವನ್ನು ಬಿನ್ನೈಸಬೇಕೆಂದು ಕಾದಿರುವನು" ಎಂದು ವಿಜ್ಞಾಪಿಸಲು; ರಾಯನು—ಎನ್ನ ಹೃದಯದಲ್ಲಿ ಹುಟ್ಟಿದ ಸಂದೇಹವನ್ನು ಎನ್ನ ಮಿತ್ರನಾದ ವಿದೂಷಕನೊಡನೆ ಪೇಳುವುದಕ್ಕೆ ಸಮಯವು ದೊರೆಯುವುದೆಂದು, ಆ ವಿದೂಷಕನ ಕರವಂ ಪಿಡಿದು ಬರುತ್ತ, "ಎಲೆ ಕಂಚುಕಿಯೇ, ಮಂತ್ರಿಯನ್ನು ಸಂಧ್ಯಾಕಾಲಕ್ಕೆ ಬರುವಂತೆ ಪೇಳುವನಾಗು" ಎಂದು ನುಡಿದು, ಮುತ್ತಿನ ಹಜಾರದಲ್ಲಿರುವ ನಿದ್ರೆಮಾಳಿಗೆಯಂ ಪೊಂದಿದನು.

ಎಂಬಲ್ಲಿಗೆ

ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ನಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಷಷ್ಠ ಗುಚ್ಛಂ ಸಂಪೂರ್ಣಂ.

# ಏಳನೆಯ ಗುಚ್ಛಂ.

ಅನಂತರದಲ್ಲಿ ವತ್ಸರಾಜನು ಮಿತ್ರನಾದ ವಿದೂಷಕನಂ ಕುರಿತು-" ಅಯ್ಯಾ ವಸಂತಕನೇ, ನೀನು ಒಳ್ಳೆಯ ಸಮಯದಲ್ಲೇ ಎನ್ನ ಸಮೀಪದಲ್ಲಿಲ್ಲ. ಅದರೆ ಪೇಳವೆನು ಕೇಳು. ಈಗ ಪಕ್ಷಿಶಾಲೆಯಲ್ಲಿದ್ದ ದೇವಿಯುಂ ಕಾಣಬೇಕೆಂದು ಅಲ್ಲಿಗೆ ಪೋಗುತ್ತ ಮಾರನೇರುವ ಬಂಡಿಯ ಗಾಲಿಗಳಂತೆ ಮಂದರಾಕರಗಳಾಗಿ ಮನ್ಮಥನ ಪಟ್ಟದಾನೆಯ ಕುಂಭಸ್ಥಳಗಳಂತೆ ಇಂಬಾಗಿ ರತಿಯ ಹಂಬಲವಂ ಮನಕ್ಕೆ ತುಂಬುತ್ತಿರುವ ನಿತಂಬಬಿಂಬಗಳಿಂ, ಸುಂದರವಾಗಿ ಬಳೆಕೆಳಗಾಗಿ ಕಮಲಗಳಂ ತಳೆದ ಸುವರ್ಣದ ತಾವರೆಯ ನಾಳಗಳಂತೆ ನೀಲಗಳಾಗಿ ಪೇಳಲಳವಲ್ಲದ ಸೌಂದರ್ಯವಂ ಧರಿಸಿದ ಹಸ್ತಗಳಿಂ, ಪ್ರಶಸ್ತವಾದ ಭುಜಗಳಿಂದೊಡಗೂಡಿ, ಪಾದಕಮಲಗಳೊಡನೆ ಮಿತ್ರತ್ವವಂ ಬಳೆಯಿಸುವನೆಂದು [illegible] ಗೂಡಿದ ಮೊತ್ತವಾದ ಕತ್ತಲೆಯೋ ಎಂಬಂತೆ [illegible] ಮಲ್ಲಿಗೆ ಮಾಲೆಗಳಂದ [illegible] ಮೂಹದಿಂ ಭೂಷಿತವಾದ [illegible] ಬಿಳಿದಿಂಗಳನ್ನಿಟ್ಟು ತೋರುವಂತೆ ಸರಿಗೆಯಿಂ [illegible] ಮನ್ಮಥನ ಇಂದ್ರಜಾಲದೇವತೆಯೋ ಎಂಬಂತೆ ಸಂಗೀತ ಶಾಲೆಯನ್ನು ಕುರಿತು ಪೋಗುತ್ತಿರಲಾಗ, ಅವಳ ಹಿಂಬಾಗವನ್ನು ಕಂಡೆನಲ್ಲದೆ ಮುಖಚಂದ್ರನ ದರ್ಶನವಂ ಗೆಯ್ಯುವದಕ್ಕೆ ಎನಗೆ ಪುಣ್ಯವು ದೊರೆಯಲಿಲ್ಲ. ಆದರೂ ಆ ಕಾಂತೆಯು ನೂತನಳಾಗಿ ಅಂತಃಪುರಕ್ಕೆ ಬಂದಿರುವಳೋ, ಇಲ್ಲವಾದಲ್ಲಿ ದೇವಿಯು ಎನ್ನ ಕಣ್ಣಿಗೆ ಮರೆಯಾಗಿ ಸಾಕುತ್ತಿರುವ ಸರಸಿಜಾಕ್ಷಿಯೋ, ಮತ್ತು ಚಿನ್ನದ ಬಾಳೆಯಂತೆ ಸನ್ನುತವಾದ ಅವಳ ಹಿಂಬಾಗವನ್ನು ನೋಡಿದಾರಭ್ಯವಾಗಿ ಮದನನಂಬಿಗೆ ಮನಸಂ ಮಾರಿರುವೆನು. ಈಗ ನೀನು ಆವಳ ವೃತ್ತಾಂತವನ್ನು ತಿಳಿದು ಬಂದು ಪೇಳದೆ ಇದ್ದಲ್ಲಿ ಎನ್ನ ಮನವು ಗಾಳಿಗೊಡ್ಡಿದ ದೀಪದಂತೆ, ಬೆಂಕಿಯ ಸೆಕೆಯಂ ಪೊಂದಿದ ಪಾದರಸದಂತೆ ಚಂಚಲವಾಗುವುದು" ಎಂದು ನುಡಿಯಲಾವಿದೂಷಕನು— "ರತಿದೇವಿಗಿಂತಲೂ ಅತಿಶಯವಾದ ರೂಪಿನಿಂದ ವಿಭೂಷಿತಳಾದ ವಾಸವದತ್ತಾದೇವಿಯು ಪತ್ನಿಯಾಗಿರುವಲ್ಲಿ ಇವಳಿಗಿಂತಲೂ ಅತಿಶಯವಾದ ಇನ್ನೊಬ್ಬ ಕಾಮಿನಿಯು ಅಂತಃಪುರದಲ್ಲಿ ಇರುವಳೆಂದು ನುಡಿಯುವ ನಮ್ಮ ರಾಯನ ವಾಕ್ಯವು ಅಬದ್ಧವಾಗಿ ತೋರುವುದು. ಆದರೂ ದೊರೆಗಳಾದವರು ನೂತನ ಪ್ರಿಯರೆಂಬುದು ಯುಕ್ತವಾಗಿರುವುದರಿಂದ ಯೌವನ ಸ್ತ್ರೀಯಾದ ಯಾವಳನ್ನೋ ಕಂಡು ಇಂತು ವ್ಯಾಕುಲಚಿತ್ತನಾಗಿರುವನು. ಅನೇಕರಾದ ಕಾಂತೆಯರು ಅಂತಃಪುರದಲ್ಲಿ ಇರುವಲ್ಲಿ ಈ ನಮ್ಮ ರಾಯನ ದೃಷ್ಟಿಗೆ ಗೋಚರವಾದವಳು ಯಾವ ಸ್ತ್ರೀಯೆಂದು ನಿಶ್ಚಯವಂ ಗೆಯ್ಯಲಿ?

ರಾಜಸೇವೆಯೆಂಬುದು ಮಹಾಕಷ್ಟವಾದ ಕಾರ್ಯವು" ಎಂದು ತನ್ನ ಮನದಲ್ಲಿ ಆಲೋಚಿಸಿ, ರಾಯನಂ ಕುರಿತು—"ಎಲೈ ರಾಜೇಂದ್ರನೇ, ಲೋಕದಲ್ಲಿ ವಾಸವದತ್ತಾದೇವಿಗಿಂತಲೂ ಸುಂದರಸ್ತ್ರೀಯು ಬ್ರಹ್ಮಸೃಷ್ಟಿಯಲ್ಲೇ ಪುಟ್ಟುವುದು ದುರ್ಲಭವು. ಅಥವಾ ಅಂಥ ಸುಂದರಸ್ತ್ರೀಯು ಇದ್ದರೂ ನಿನ್ನ ಅಪ್ಪಣೆಯಿಲ್ಲದೆ ಅಂತಃಪುರಕ್ಕೆ ಹೇಗೆ ಬಂದು ಸೇರುವಳು? ನೀನು ಅವಳ ಮುಖವನ್ನೂ ಕಾಣದೆ ಬಲವಾದ ಒಂದು ಗುರುತನ್ನೂ ಕಾಣದೆ ಕಾಮಾತುರನಾಗಿ ಅವಳನ್ನು ಗೊತ್ತುಗೆಯ್ಯುವುದೆಂದು ನುಡಿದಲ್ಲಿ ನಾನು ಹೇಗೆತಾನೆ ಇಂಥವಳೆಂದು ನಿಶ್ಚಯಿಸಲಿ? ಯಾವುದಾದರೂ ಒಂದು ನಿಮಿತ್ತವಿಲ್ಲದೆ ನಾನು ಅಂತಃಪುರವನ್ನು ಪೊಕ್ಕು ಹುಡುಕುತ್ತಿರುವ ವಾರ್ತೆಯನ್ನು ದೇವಿಯು ತಿಳಿದಲ್ಲಿ ಎನಗೆ ಆಗತಕ್ಕ ಕಾರ್ಯವಂ ಗೈದು, ಅಂತರಂಗದಲ್ಲಿ ಸಂಗತವಾದ ಸಂಶಯವಂ ತಾಳದೆ ಬಿಡಳು. ಇದಕ್ಕೊಂದು ಉಪಾಯವಂ ಪೇಳುವೆನು, ಕೇಳು. ಈಹೊತ್ತು ನಾಳೆಯಲ್ಲೇ ದೇವಿಯು ವಸಂತೋತ್ಸವವನ್ನು ಗೆಯ್ಯುವಳೆಂಬ ವಾರ್ತೆಯನ್ನು ಕೇಳಿರುವೆನು. ಆ ಸಮಯದಲ್ಲಿ ಸಮಸ್ತರಾದ ಸ್ತ್ರೀಯರೂ ದೇವಿಯ ಆಜ್ಞೆಯಿಂದ ಮಕರಂದೋದ್ಯಾನ ವನವನ್ನು ಪೊಂದುತ್ತಲಿರುವರು. ಆ ಸಮಯದಲ್ಲಿ ನಿನ್ನ ನೇತ್ರಮಾರ್ಗವನ್ನು ಪೊಂದಿದ ಆಕಾಂತೆಯು ಇವಳೇ ಸರಿಯೆಂದು ನಿಶ್ಚಯಿಸಬಹುದು. ಅದುವರೆಗೂ ಜಿತೇಂದ್ರಿಯನಾಗಿ ಇರುವನಾಗು" ಎಂದು ನುಡಿಯಲು; ರಾಯನು ನಿಟ್ಟುಸಿರಂ ಬಿಟ್ಟು, "ಎಲೈ ಮಿತ್ರನೇ, ಲೇಸಾಗಿ ವಾಸದ ಪೂಮಾಲೆಯಿಂ ಭೂಷಿತವಾದ ಅವಳ ಕೇಶಪಾಶವು ಮನವಂ ಗಾಸಿಯಂ ಪೊಂದಿಸುತ್ತಿರುವಲ್ಲಿ ಹೇಗೆ ನಾನು ವಿಷಯೇಂದ್ರಿಯವಂ ಜಯಿಸಲು ಸಮರ್ಥನಾಗುವೆನು? ವಿಶ್ವಾಮಿತ್ರ ಪರಾಶರ ಮುಂತಾದ ಋಷಿಗಳೂ ಕೋಮಲೆಯರಾದ ಬಾಲೆಯರ ಲೀಲೆಗನುಕೂಲರಾಗಿ ವ್ಯಥೆಯಂ ಪೊಂದಿದ ಕಥೆಯಂ ಕೇಳಿರುವೆಯಷ್ಟೆ. ಲೋಕದಲ್ಲಿ ಪುಟಕ್ಕೆ ಹಾಕಿದ ಚಿನ್ನದ ಬಣ್ಣದಂತೆ ಚೆನ್ನಾಗಿ ಮೈಸಿರಿಯುಳ್ಳಂತ ಕನ್ನೆಯು ಯಾವವರೆಗೆ ನೇತ್ರಮಾರ್ಗವಂ ಪೊಂದುವುದಿಲ್ಲವೋ, ಅದುವರೆಗೂ ಧೈರ್ಯವೂ ಜಾಣತನವೂ ಯುಕ್ತಾಯುಕ್ತ ವಿಚಾರವೂ ಪಾಪಭೀತಿಯೂ ಜಪತಪೋನುಷ್ಠಾನಾದಿ ಸತ್ಕರ್ಮವೂ ವ್ಯತ್ಯಾಸವಿಲ್ಲದೆ ನಡೆಯುವುವು. ಯಾವ ಮನುಜನಿಗಾಗಲಿ ಹೃದಯವೆಂಬ ಹುಲ್ಲುಮನೆಯು ಮನ್ಮಥಾಗ್ನಿಯಿಂದ ದಹಿಸಲ್ಪಡುತ್ತಿರಲಾಗಿ ಎಳ್ಳಷ್ಟಾದರೂ ವಿವೇಕವು ಸಮೀಪವಂ ಪೊಂದಲಾರದು. ಮಹೇಶ್ವರನು ಒಬ್ಬಳಿಗೆ ಅರ್ಧ ದೇಹವನ್ನಿತ್ತುದು ಸಾಲದೆ ಮತ್ತೊಬ್ಬಳನ್ನೂ ನೆತ್ತಿಯ ಹತ್ತಿಸಿದನು. ವಿಷ್ಣುವು ತನ್ನ ಕಾಂತೆಗೆ ತನ್ನ ಎದೆಯನ್ನು ವಾಸಗೃಹವಂ ಗೈದನು. ಬ್ರಹ್ಮನು ತನ್ನ ಸತಿಗೆ ಮುಖವನ್ನೇ ಅಂತಃಪುರವನ್ನಾಗಿ ವಿರಚಿಸಿದನು. ಇಂತು ಸರ್ವಲೋಕಕ್ಕೂ ಮುಖ್ಯರಾದ ಮೂರು ಮೂರ್ತಿಗಳೇ ವೀರಮಾರನಿಗೆ ಮನವಂ ಮಾರಿ ತಾರುಮಾರಾಗಿ ನಡೆಗೇಡಾಗಿರುವಲ್ಲಿ ನಮ್ಮಂಥವರ ವಿವೇಕವನ್ನು ಕೇಳತಕ್ಕುದೇನು?" ಎಂದು

ನುಡಿಯುತ್ತಿರಲು ;

ಇತ್ತಲು, ದೇವಿಯು ಮಣಿಹಜಾರವಂ ಪೊಂದಿ, ಅಲ್ಲಿ ಕಿತ್ತು ಬಿದ್ದಿರುವ ಶಾರಿಕೆಯ ಪಂಜರವಂ ಕಂಡು, ಅಲ್ಲಿರುವ ಊಳಿಗದ ಬಾಲೆಯರ ಮೇಲೆ ಬಹಳ ವಾಗಿ ಕೋಪವಂ ತಾಳಿ, ಕಾಂಚನಮಾಲೆಯಿಂ ಕರೆದು—“ ಎಲೆ ಕಾಂತೆಯೇ, ಎನಗೆ ಪ್ರೇಮಪಾತ್ರವಾದ ಈ ಪಂಜರದ ಶಾರಿಕೆಯನ್ನು ಪಕ್ಷಿಶಾಲೆಗೆ ಕರೆದು ಕೊಂಡುಹೋಗಿ, ಕಾಲಕಾಲಕೆ ಸರಿಯಾಗಿ ಫಲಗಳನಿತ್ತು, ಪುರಾಣ ಪುಣ್ಯಕಥೆ ನಾಟಕ ಪ್ರಹಸನ ಮೊದಲಾದ ದಶರೂಪಕಗಳನ್ನು ಕಲಿಸಿ, ಸಲಹುವುದೆಂದು ಸಾಗರಿಕೆಯ ಹಸ್ತಕೆ ಕೊಟ್ಟು ಬರುವಳಾಗು ” ಎಂದು ಅಪ್ಪಣೆಯನೀಯಲು ; ಅ ವಳು—ಅಪ್ಪಣೆಯಾದಂತೆ ನಡೆದುಕೊಳ್ಳುವೆನೆಂದು ಆ ಶಾರಿಕೆಯ ಪಂಜರವಂ ಕರದಲ್ಲಿ ಪಿಡಿದು ಪಕ್ಷಿಶಾಲೆಯಿಂ ಪೊಂದಿ ಸಾಗರಿಕೆಯಿಂ ಕುರಿತು—“ ಎಲೆ ಮಂಗಳಾಂಗಿಯೇ, ಕೇಳು. ಈ ಶಾರಿಕೆಯ ಪಂಜರವಂ ತೆಗೆದುಕೊಳ್ಳುವಳಾಗು. ಈ ಶಾರಿಕೆಯು ದೇವಿಗೆ ಪ್ರಾಣಪ್ರಿಯಕರವಾಗಿರುವುದು. ಯಾವ ಶಾಸ್ತ್ರವನ್ನೂ ಕೇಳಿದ ಮಾ ತ್ರದಿಂದಲೇ ಗ್ರಹಿಸುತ್ತಿರುವುದು. ದಂಪತಿಗಳಿಗುಂಟಾದ ಪ್ರಣಯಕಲಹವಂ ಪರಿಹರಿಸಬಲ್ಲುದು. ದೂತಿಯರಂತೆ ನೀತಿಯಂ ಪೇಳಿ, ಸೇರದ ನಾರಿಯರನ್ನು ನಾಯಕರಿರುವ ಸಂಕೇತಸ್ಥಾನಕ್ಕೆ ಸೇರಿಸಬಲ್ಲುದು. ಆದುದರಿಂದ ಈ ಪಕ್ಷಿಶಾಲೆಯ ಲ್ಲಿರುವ ಇತರ ಪಕ್ಷಿಗಿಂತಲೂ ಇದರಲ್ಲಿ ಪ್ರೇಮವಂ ತಾಳಿ ಸಲಹುತ್ತಿರುವಂತೆ ದೇವಿಯ ಆಜ್ಞೆಯಾಗಿರುವುದು ” ಎಂದು ನುಡಿಯಲು ; ಸಾಗರಿಕೆಯು ಮೊದಲು ತನ್ನರಮನೆಯಲ್ಲಿದ್ದ ಪಕ್ಷಿಶಾಲೆಯಿಂ ಸ್ಮರಿಸುತ್ತಿದ್ದು, “ ಎಲೆ ಕಾಂಚನಮಾಲೆಯೇ, ಎನ್ನರಮನೆಯ ಪಕ್ಷಿಶಾಲೆಯಲ್ಲೂ ಇಂಥ ಪಕ್ಷಿಗಳು ” ಎಂದು ನುಡಿಯುತ್ತಿರುವುದ ರಲ್ಲೆ ಜಾಗರೂಕಳಾಗಿ,—“ಎಲೆ ಕಾಂತೆಯೇ, ಎನ್ನ ಅರಮನೆಯೆಂದು ತಪ್ಪಿ ನುಡಿ ದೆನು. ಮಂದಪುಣ್ಯಳಾದ ಎನಗೆ ಅರಮನೆಯೆಂದರೇನು ? ಆದರೂ ದೇವಿಯು ಎನ್ನಲ್ಲಿ ಅಧಿಕವಾದ ಪ್ರೇಮವನ್ನಿಟ್ಟು ಸಲಹುವಳಾದುದರಿಂದ ಅವಳ ಅರಮನೆ ಯೇ ಎನ್ನ ಅರಮನೆಯೆಂದು, ಅವಳ ವಸ್ತುಗಳೆಲ್ಲವೂ ಎನ್ನ ವಸ್ತುಗಳೆಂದೇ ತಿಳಿದು ನುಡಿದೆನು. ” ಎನಲು ; ಕಾಂಚನಮಾಲೆಯು ಸಾಗರಿಕೆಯು ಮೊದಲು ನುಡಿದ ವಾಕ್ಯವನ್ನೂ ಆ ಬಳಿಕ ಅದನ್ನು ಹಿಂತಿರುಗಿಸಿದ ಜಾಣ್ಮೆಯನ್ನೂ ಸಹ ನೋಡಿ ಮೆಚ್ಚಿ—ಇವಳು ರಾಜಪುತ್ರಿಯೇ ಸರಿ ; ದೇವಿಯ ವಸ್ತುಗಳೆಲ್ಲವನ್ನೂ ಎನ್ನ ವಸ್ತು ಗಳೆಂದೇ ತಿಳಿಯುವೆನೆಂದು ಹೇಳಿದ ವಾಕ್ಯವು ಬಹುದೂರವಾಗಿ ರಾಯನವರೆಗೂ ವ್ಯಾಪಿಸಿಕೊಂಡು ಬರುವುದು. ಮುಂದೆ ಈ ಪುಂಡಗಮನೆಯು ಸುಂದರಾಂಗನಾದ ರಾಜೇಂದ್ರನ ಆನಂದಕ್ಕೆ ಪಾತ್ರಳಾಗಿ ನಮಗೆಲ್ಲರಿಗೂ ಗುಟುಕುನೀರನ್ನು ಕುಡಿಸು ವುದರಲ್ಲಿ ಸಂದೇಹವೇ ಇಲ್ಲ—ಎಂದು, ಆಲೋಚಿಸಿ, “ ಎಲೆ ಸಾಗರಿಕೆಯೇ, ನೀನು ಯಶೋವಂತಳಾಗಿ ಅಭಿವೃದ್ಧಿಯನ್ನು ಹೊಂದುವ ಕಾಲದಲ್ಲಿ ಎನ್ನನ್ನು ಮರೆಯ

ಲಾಗದು ” ಎಂದು ನುಡಿಯಲಾಸಾಗರಿಕೆಯು ನಿಟ್ಟುಸಿರಂ ಬಿಟ್ಟು “ ಎಲೆ ಕಾಂತೆಯೇ, ಮಂದಭಾಗ್ಯಳಾದ ಎನಗೂ ಒಂದು ಅಭಿವೃದ್ಧಿಯು ಪುಟುವುದೆ, ಪೇಳು. ಉರಿಯುವಳ ಮೇಲೆ ಉಪ್ಪನ್ನು ಚೆಲ್ಲಿದಂತೆ ಜ್ವರದಿಂ ತಪಿಸುವಳ ಮೇಲೆ ಕಾದೆಣ್ಣೆಯಂ ಪೊಯ್ವಂತೆ ಸಿರಿಯಂ ಪೋಗಲಾಡಿಸಿಕೊಂಡು ಪರಸೇವೆಗೊಳಗಾಗಿರುವ ಎನ್ನನ್ನು ನಯವಾದ ನಿಷ್ಠುರವಾಕ್ಯವೆಂಬ ಗರಗಸದಿಂದ ಕೊರೆಯುತ್ತಿರುವೆ ! ” ಎಂದು ಕಣ್ಣೀರಂ ತುಂಬಿಕೊಳ್ಳಲು ; ಕಾಂಚನಮಾಲೆಯು—“ ಎಲೆ ಸಾಗರಿಕೆಯೆ, ಏಕೆ ವ್ಯಸನವನ್ನು ಪೊಂದುತ್ತಿರುವೆ ? ” ಎಂದು ಸಮಾಧಾನಂಗೈದು, ದೇವಿಯ ಸನ್ನಿಧಾನವಂ ಕುರಿತು ಪೋಗಲು;

ಮಕರಂದೋದ್ಯಾನ ವನವನ್ನು ಸಲಹುವ ಮದನಿಕೆಯೆಂಬ ಸ್ತ್ರೀಯು ದೇವಿಯ ಸನ್ನಿಧಿಯಂ ಸೇರಿ, “ ಎಲೌ ಕಲ್ಯಾಣಿಯೇ, ನಿನ್ನ ಕಟಾಕ್ಷದಿಂದ ವನವೆಲ್ಲವೂ ಫಲಪುಷ್ಪಗಳಿಂದ ಪೂರಿತವಾಗಿರುವುದು. ನಿನ್ನ ಆಜ್ಞೆಯಾದಂತೆ ಮಾರವೀರನ ಪೂಜೆಗೋಸುಗ ಅಪಾರವಾದ ಶೃಂಗಾರದಿಂದ ಸಂಗತವಾಗಿ ಮಾಡಿರುವೆನು. ಚಿತ್ತಕ್ಕೆ ಒಪ್ಪಿದಾಗ ಚಿತ್ತೈಸಬಹುದು ” ಎಂದು ಬಿಸ್ನೈಸಲು ; ಶಕುಂತಶಾಲೆಯಿಂದ ಬಂದ ಕಾಂಚನಮಾಲೆಯು ಬಂದುದಂ ನೋಡಿ ಅವಳಂ ಕರೆದು, “ ಎಲೆ, ಕಾಂತೆಯೇ, ನಾಳೆ ಮಧ್ಯಾಹ್ನಕ್ಕೆ ಮಕರಂದೋದ್ಯಾನವನದಲ್ಲಿ ಮನ್ಮಥ ಪೂಜೆಯಂಗೆಯ್ಯಲೋಸುಗ ಸಮಸ್ತವಾದ ಸಖಿಯರುಗಳೂ ತಮ್ಮತಮ್ಮ ಆಭರಣ ವಸ್ತ್ರಗಳಿಂದ ಅಲಂಕೃತರಾಗಿ ಮಂಗಳದ್ರವ್ಯಗಳಿಂ ತುಂಬಿದ ತಟ್ಟೆಗಳಂ ಕರದಲ್ಲಿ ಪಿಡಿದುಕೊಂಡು ಕಟ್ಟಳೆಯಮೇರೆ ಬರುವಂತೆ ಸರ್ವರಿಗೂ ಪೇಳಿಸುವಳಾಗು ” ಎಂದು ದೇವಿಯು ಅಪ್ಪಣೆಯನೀಯಲು ; ಕಾಂಚನಮಾಲೆಯು ಆಜ್ಞೆಯಾದಂತೆ ನಡೆದುಕೊಳ್ಳುವೆನೆಂದು, ತನ್ನ ಕೈಕೆಳಗಿರುವ ಕಲವಾಣಿಯಂ ಕರೆದು,–“ ಎಲೆ ಕಾಮಿನಿ, ನಾಟ್ಯಶಾಲೆ, ಪಾಕಶಾಲೆ, ಪಾನೀಯಶಾಲೆ, ಪಾಠಶಾಲೆ, ಪಕ್ಷಿಶಾಲೆ, ಸಂಗೀತಶಾಲೆ, ಚಂದ್ರಶಾಲೆ, ವಿಹಾರಶಾಲೆ, ಮುತ್ತಿನ ಹಜಾರ, ಮಣಿಹಜಾರ, ಸಂಕೇತಮಂಟಪ, ದೇವತಾರ್ಚನೆಯ ತೊಟ್ಟಿ ಮುಂತಾದ ಸ್ಥಾನಗಳಿಗೆ ಪೋಗಿ, ಅಲ್ಲಲ್ಲಿರುವ ಪಲ್ಲವಪಾಣಿಯರಂ ಕುರಿತು—ನೀವೆಲ್ಲರೂ ಪೂರ್ವದ ಮರ್ಯಾದೆಯ ಮೇರೆಗೆ ಮನ್ಮಥಪೂಜೆಗೆ ಮಂಗಳದ್ರವ್ಯಂಗಳಂ ಕೈಕೊಂಡು ಸಿಂಗರಂಗೊಂಡು ನಾಳೆಯ ಮಧ್ಯಾಹ್ನಕೆ ಮಕರಂದೋದ್ಯಾನವನವನ್ನು ಹೊಂದಿ ಬರುವರಾಗಿರೆಂದು ಸಾರಿ ಬರುವಳಾಗು ” ಎಂದು ನೇಮಿಸಿ ಕಳುಹಿಸಲು ; ಆ ಕಾಂತೆಯು ಪೋಗಿ ಅವಳು ಪೇಳಿದ ಮೇರೆಗೆ ಸಾರುತ್ತ ಬರಲು ;

ಪಕ್ಷಿಶಾಲೆಯಲ್ಲಿದ್ದ ಪಲ್ಲವಪಾಣಿಯಾದ ಸಾಗರಿಕೆಯು ಅವಳು ಸಾರಿದ ಶಬ್ದವಂ ಕೇಳಿ ಮಿತ್ರಳಾದ ಸುಸಂಗತೆಯಂ ಕುರಿತು—“ ಎಲೆ ಕಾಂತೆಯೇ, ಈಗ ಸಾರಿ ಪೋದ ವಾರಿಜಾಕ್ಷಿಯ ಗಂಭೀರಧ್ವನಿಯಂ ಕೇಳಿದೆಯ ? ದೇವಿಯು ಮಕರಂ

ದೋದ್ಯಾನವನವೆಂದರೇನು? ಅಲ್ಲಿ ಮನ್ಮಥನ ಪೂಜೆಯೆಂದರೇನು? ಇಲ್ಲಿರುವ ನಲ್ಲೆಯರೆಲ್ಲರೂ ನಿಲ್ಲದೆ ಅಲ್ಲಿಗೆ ಪೋಗತಕ್ಕದು ಹೇಗೆ? ಅಲ್ಲಿಗೆ ಇನ್ನಾರು ಬರತಕ್ಕವರು? ಇದರ ಸಂಗತಿಯನ್ನು ವಿಸ್ತಾರವಾಗಿ ವಿವರಿಸುವಳಾಗು" ಎಂದು ಬೆಸಗೊಳಲಾಮಂಗಳಾಂಗಿಯು—"ಎಲೆ ಕಲ್ಯಾಣಿಯೇ, ಕೇಳು. ವರ್ಷವರ್ಷಕ್ಕೂ ಈ ವಸಂತ ಋತುವಿನಲ್ಲಿ ದೇವಿಯು ಅಂತಃಪುರದಲ್ಲಿರುವ ಸಮಸ್ತ ಕಾಂತೆಯರಿಂದೊಡಗೂಡಿ ಪೋಗಿ ಈ ಅರಮನೆಯ ಒತ್ತಿನಲ್ಲಿ ಚಿತ್ರವಾಗಿರುವ ಮಕರಂದೋದ್ಯಾನ ವನವಂ ಪೊಕ್ಕು ಪುಷ್ಪಾಪಚಯ ಜಲಕ್ರೀಡೆ ಶೈಲಾರೋಹಣ ಮೊದಲಾದ ಕ್ರೀಡೆಗಳಂ ವಿವರಿಸಿ, ಸನ್ನುತವಾದ ಸುವರ್ಣಮಯವಾದ ಅಶೋಕವೃಕ್ಷದ ಮೂಲಭೂಮಿಯಲ್ಲಿ ಮೂರು ಲೋಕಕ್ಕೂ ವೀರನಾಗಿ ಸತಿಯಾದ ರತಿಯಿಂದೊಡಗೂಡಿದ ಮನ್ಮಥನಂ ಪೂಜಿಸಿ ಬರುವಳು. ಅಲ್ಲಿಗೆ ರಾಜಾಧಿರಾಜನಾದ ವತ್ಸರಾಜನೂ ಮಂತ್ರಿ ಮೊದಲಾದ ಅರಸುಗಳ ಪತ್ನಿಯರೂ ಸಹ ಬರುತ್ತಿರುವರು. ಆದುದರಿಂದ ನಾವಿಬ್ಬರೂ ಅಲಂಕಾರವಾಗಿ ಮಂಗಳದ್ರವ್ಯಗಳಂ ತಟ್ಟೆಯಲ್ಲಿ ತುಂಬಿಕೊಂಡು ದೇವಿಯ ಸೇವೆಯಲ್ಲಿ ಜಾಗರೂಕರಾಗಿರುವ, ನಡೆ" ಎನಲು; ಸಾಗರಿಕೆಯು ಸಂತೋಷಭರಿತಳಾಗಿ ಇಂದಿನ ದಿನದಲ್ಲಾದರೂ ಸರ್ವಾಂಗಸುಂದರನಾದ ರಾಜೇಂದ್ರನ ದರ್ಶನವು ದೊರಕದೆ ಇರದು ಎಂದು, ಯೋಚಿಸುತ್ತ ಮಂಗಳಸಾನವಂ ಗೆಯ್ಯಲೋಸುಗ ಸುಸಂಗತೆಯೊಡನೆ ಕೂಡಿ ಪೋಗಲು;

ಕಾಂಚನಮಾಲೆಯು ದೇವಿಯ ಸನ್ನಿಧಿಯಂ ಸೇರಿ, "ಎಲೌ ದೇವಿಯೇ, ನಿಮ್ಮ ಅಪ್ಪಣೆಯಾದಂತೆ ಅಂತಃಪುರದಲ್ಲಿರುವ ಸಮಸ್ತ ಕಾಂತೆಯರಿಗೂ ವಸಂತೋತ್ಸವದ ಸಂಗತಿಯಂ ಕುರಿತು ಸಾರಿದೆನು" ಎಂದು ಬಿನ್ನೈಸಲು; ದೇವಿಯು—"ಎಲೆ ಬಾಲೆಯೇ, ನೀನು ಪೋಗಿ ಮಹಾರಾಜೇಂದ್ರನಾದ ನಮ್ಮ ಸ್ವಾಮಿಗೂ ಈ ಉತ್ಸವದ ವಾರ್ತೆಯಂ ಪೇಳಿ ಮಕರಂದೋದ್ಯಾನಕೆ ಕರೆದುಕೊಂಡು ಬರುವಳಾಗು" ಎಂದು ಅಪ್ಪಣೆಯನ್ನೀಯಲು; ಕಾಂಚನಮಾಲೆಯು—ಆಜ್ಞೆಯಾದಂತೆ ನಡೆದುಕೊಳ್ಳುವೆನೆಂದು, ಸಮಸ್ತಾಭರಣಗಳಿಂದ ವಿಭೂಷಿತಳಾಗಿ ಕೈಯಲ್ಲಿ ಚಿನ್ನದ ಕಟ್ಟಿನ ಬೆತ್ತವಂ ಪಿಡಿದು ಸಂಗಡ ಊಳಿಗದ ಹೆಣ್ಣುಗಳನ್ನು ಜತೆಗೊಂಡು ಬರುತ್ತಿರಲು;

ಇತ್ತಲು, ಮುತ್ತಿನ ಹಜಾರದಲ್ಲಿದ್ದ ವತ್ಸರಾಜನು ವಸಂತೋತ್ಸವಕ್ಕೆ ಸನ್ನದ್ಧರಾದ ಅಂತಃಪುರದ ಕಾಂತಾಜನರು ಮಾಳ್ಪ ಗಾನಸ್ವರವನ್ನೂ ವೀಣಾವೇಣುಮುಖ ವೀಣೆ ಮೃದಂಗ ಮೊದಲಾದ ವಾದ್ಯಧ್ವನಿಯನ್ನೂ ಕಿವಿಗಿಂಪಾದ ಕಲಕಲಸ್ವರವನ್ನೂ ಸಹ ಕೇಳಿ ಒತ್ತಿನಲ್ಲಿದ್ದ ವಸಂತಕನಂ ಕುರಿತು—"ಎಲೈ ಮಿತ್ರನೇ, ಮಂಗಳಕರವಾದ ಅಂಗನೆಯರ ಕೋಲಾಹಲಧ್ವನಿಯು ಕೇಳಬರುತ್ತಿರುವುದು. ಇಷ್ಟು ಸಂತೋಷಕ್ಕೆ ಕಾರಣವೇನಿರುವುದು?" ಎಂದು ಬೆಸಗೊಳಲು; ಅವನು—"ಎಲೈ ಮಹಾರಾಜೇಂದ್ರನೇ, ದೇವಿಯವರು ಮಕರಂದೋದ್ಯಾನವನದಲ್ಲಿ ಮನ್ಮಥನಂ

ಪೂಜಿಸಲೋಸುಗ ಸಮಸ್ತರಾದ ಸಖಿಯರುಗಳಿಂದ ಕೂಡಿ ಪೋಗುವರೆಂದು ಮೊದಲೆ ವಿಜ್ಞಾಪನೆಯಂ ಗೈದಿರುವೆನಷ್ಟೆ. ಅದೇ ವಸಂತೋತ್ಸವದಿಂ ಪುಟ್ಟಿದ ಸ್ತ್ರೀಜನದ ಕೋಲಾಹಲಧ್ವನಿಯೆಂದು ಊಹಿಸುತ್ತಿರುವೆನು” ಎನಲು; ರಾಯನು—“ಎಲೈ ಮಿತ್ರನೇ, ನಾವಿರ್ವರೂ ಚಂದ್ರಕಾಂತಶಿಲೆಯಿಂದ ಸುಂದರವಾದ ಈ ಚಂದ್ರಶಾಲೆಯನ್ನೇರಿ ಕೋಮಲಾಂಗಿಯರಾದ ಸ್ತ್ರೀಯರುಗಳು ಮಾಳ್ಪ ವಿಲಾಸಗಳನ್ನು ನೋಡುವ ನಡೆ” ಎಂದು ಅವನಿಂದೊಡಗೂಡಿ ಚಂದ್ರಶಾಲೆಯನ್ನೇರಿ ಸುತ್ತಲೂ ನೋಡಿ ಸಂತೋಷಭರಿತನಾಗಿ—“ಎಲೈ ಮಿತ್ರನೇ, ಕೇಳು ಎನ್ನ ರಾಜ್ಯವು ಜಯಿಸಲ್ಪಟ್ಟ ಸಮಸ್ತ ಶತ್ರುಗಳುಳ್ಳದಾಗಿರುವುದು. ಯೋಗ್ಯನಾಗಿ ಕುಲಕ್ರಮಾಗತನಾಗಿ ನೀತಿಶಾಸ್ತ್ರಪಾರಂಗತನಾಗಿ ಧರ್ಮಸೂಕ್ಷ್ಮವಂ ತಿಳಿದಂಥ ಮಂತ್ರಿಯಲ್ಲಿ ಸಮಸ್ತರಾಜ್ಯಭಾರವೂ ಎನ್ನಿಂದ ಇರಿಸಲ್ಪಟ್ಟಿದು. ರಾಜಾಧಿರಾಜನಾದ ಪ್ರದ್ಯೋತರಾಯನ ಪುತ್ರಿಯಾದ ವಾಸವದತ್ತೆಯೇ ಎನಗೆ ಧರ್ಮಪತ್ನಿಯಾಗಿರುವಳು. ಸಕಲವಾದ ಋತುಗಳಿಗೂ ಶ್ರೇಷ್ಠವಾದ ವಸಂತ ಋತುವೂ ಪ್ರಾಪ್ತವಾಗಿರುವುದು. ವಸಂತನಾಮಕನಾದ ನೀನೂ ಎನಗೆ ಪ್ರಾಪ್ತನಾರುಗಿಪೆ. ಇದರಮೇಲೆ ವಸಂತೋತ್ಸವವೂ ದೊರಕಿರುವುದು. ಆದುದರಿಂದ ಎನ್ನ ಸಂತೋಷಕ್ಕೆ ಪಾರವೇ ಇಲ್ಲವು” ಎಂದು ನುಡಿಯಲು; ವಿದೂಷಕನು—“ಅಯ್ಯಾ ರಾಜೇಂದ್ರನೇ, ನಿನಗೂ ಅಲ್ಲ, ಮನ್ಮಥನಿಗೂ ಅಲ್ಲ, ಬ್ರಾಹ್ಮಣನಾದ ಎನಗೊರ್ವನಿಗೇ ಈ ವಸಂತೋತ್ಸವವು ಪ್ರಾಪ್ತವಾಗಿರುವುದು. ಏತಕೆಂದರೆ, ಮಹಾರಾಜನಾದ ನೀನು ಎನ್ನೊಡನೆ ಸರಸಸಲ್ಲಾಪವಂ ಗೆಯ್ಯುತ್ತಿರುವೆಯಾದುದರಿಂದ ಎನಗೆ ಬಹಳವಾದ ಉತ್ಸವವುಂಟಾಗಿರುವುದು. ಮತ್ತು ಇದೋ! ಇತ್ತಲು ಯೌವನದಿಂದ ಮತ್ತರಾಗಿ ಮದ್ದಾನೆಯಂತೆ ಮುದ್ದಾಗಿ ಪಾದಗಳನಿಟ್ಟು ಬರುತ ವಾರನಾರಿಯರು ಪಿಡಿದಿರುವ ಕೊಂಬಿನ ಅಂಡೆಗಳಲ್ಲಿ ತುಂಬಿದ ಓಕುಳಿಯ ನೀರಿನ ಪೆಟ್ಟಿನಿಂದ ಕುಣಿದಾಡುವ ಎಳಯ ಪೆಣ್ಣುಗಳಿಂದ ವೃದ್ಧಿಯಂ ಪೊಂದಿಸುತ್ತ ಬಿತ್ತರಿಸಿ ಬಾರಿಸುವ ಮುದ್ದಾದ ಮದ್ದಳೆ ವೀಣಾವೇಣು ಜರ್ಝರಿಯೆಂಬ ವಾದ್ಯಗಳ ಸದ್ದುಗಳಿಂದ ಬೀದಿಯೆಲ್ಲವಂ ಶಬ್ದಮಯಂಗೆಯ್ವುದಲ್ಲದೆ ಗಂಧದ ಹುಡಿಯನ್ನು ಆನಂದದಿಂದ ಚೆಲ್ಲುತ್ತ ಹತ್ತುದಿಕ್ಕುಗಳಂ ಪರಿಮಳಂಗೊಳಿಸಿ ಬಣ್ಣವೇರಿಸುವ ಈ ವಸಂತೋತ್ಸವದ ವೃದ್ಧಿಯಂ ಚೆನ್ನಾಗಿ ನೋಡುವನಾಗು” ಎಂದು ಬಿನ್ನೈಸಲು; ಆ ವತ್ಸರಾಜನು ಸಂತೋಷದಿಂದ ಸುತ್ತಲೂ ನೋಡಿ, “ಎಲೈ ಮಿತ್ರನೇ, ಅಂತಃಪುರದ ನಾರಿಯರಿಗೆ ಉಂಟಾಗಿರುವ ಈ ವಸಂತೋತ್ಸವದ ಹೆಚ್ಚುಗೆಯು ಮಸ್ತಕವಂ ಮೀರಿ ತೋರುತ್ತಲಿರುವುದು. ಸುತ್ತಲೂ ವಿಸ್ತಾರವಾಗಿ ಏಳುತ್ತಿರುವ ಗಂಧದ ಹುಡಿಯ ವೃದ್ಧಿಯಿಂದ ಆಕಾಶದಲ್ಲಿ ಏಳವಿಸಿಲು ಪುಟ್ಟಿದಂತೆ ತೋರುತ್ತಲಿರುವುದು. ಕುಂಕುಮದ ಹುವ್ವಿನ ಚೂರ್ಣಗಳು ಪೂರ್ಣವಾಗಿ ವ್ಯಾಪಿಸಿರುವುದರಿಂದ ಸಂಧ್ಯಾರಾಗವು ಸಾಂದ್ರವಾಗಿ ದಿಕ್ಕುಗಳಲ್ಲಿ ವ್ಯಾಪಿಸಿದಂತೆ ತೋರುತ್ತಲಿರು

ವುದು. ಸುವರ್ಣರತ್ನಮಯಗಳಾದ ಆಭರಣಗಳ ಕಾಂತಿಗಳಿಂದ ಸೊಂಪಾಗಿ ಮುಡಿದ ಸಂಪಗೆಯ ಹುವ್ವುಗಳ ಹೊಳಪುಗಳಿಂದ ಎಲ್ಲರೂ ಸರ್ವಾಭರಣದ ರಸದಿಂದ ಲಿಪ್ತರಾದಂತೆ ತೋರುವರು. ಈ ಕೌಶಾಂಬೀನಗರಿಯು ತನ್ನ ವೈಭವದಿಂದ ರಾಜರಾಜನಾದ ಕುಬೇರನ ಅಲಕಾವತಿಪಟ್ಟಣವನ್ನು ಅಲೆಗಳೆಯುತ್ತಿರುವುದು. ಮತ್ತು ಆಕಾಂತೆಯರು ಪಿಡಿದ ಸುವರ್ಣದ ಅಂಡೆಗಳಿಂದ ಹೊಡೆಯಲ್ಪಟ್ಟ ಸಾಂದ್ರವಾದ ಓಕುಳಿಯ ನೀರಿನಿಂದಲೂ, ಎಲ್ಲಾಕಡೆಯಲ್ಲಿಯೂ ಚೆಲ್ಲಿರುವ ಪರಿಮಳಗಂಧದ ಕೆಸರಿನಿಂದಲೂ, ಗೃಹಾಂಗಣವೆಲ್ಲಾ ಕೆಸರುಗೊಂಡಿರುವುದು. ಅದುಕಾರಣದಿಂದ ಕ್ರೀಡೆಗೆ ಯೋಗ್ಯವಲ್ಲದೆ ಇರುವುದು. ಸೊಕ್ಕುಜವ್ವನದ ಕಾಂತೆಯರ ಕಪೋಲಗಳಿಂ ಜಾರಿದ ಕುಂಕುಮದ ಮಕರಿಕಾಪತ್ರಗಳ ದೂಳಿಗಳಿಂದ ಕೆಂಪಾಗಿರುವ ಮಣಿಮಯವಾದ ಭೂಮಿಯು ಕೆಂದಾವರೆಗಳಂತೆ ಅಂದವಾಗಿರುವ ಆತರುಣಿಯರ ಪಾದಗಳ ಕೆಂಪುಗಳಿಂದ ಅಲತಿಗೆಯ ರಸದಿಂ ಸಾರಣೆಯಂಗೈದಂತೆ ತೋರುವುದು" ಎಂದು ನುಡಿಯಲು; ವಿದೂಷಕನು—"ಅಯ್ಯಾ, ರಾಜೇಂದ್ರನೇ, ಹದವಾಗಿ ಬೆದೆಗೊಂಡ ಸುದತಿಯರು ಕರಗಳಲ್ಲಿ ಪಿಡಿದ ಚಿನ್ನದ ಜೀರ್ಕೊಳವೆಗಳಿಂದ ಪನ್ನೀರುಗಳಂ ತುಂಬಿ ಕಿರುಮೊಲೆಯ ತರಳಾಕ್ಷಿಯರ ಮೇಲೆ ಪೊಯ್ಯಲು, ಅವರು ಜಲದ ತಂಪಿನಿಂ ಕುಚಗಳಂ ತಬ್ಬಿ ನಸು ನಡುಗುತ ರೋಮಾಂಚನಾಂಚಿತಕಾಯರಾಗಿ, ಕೋತಂಗೂಡಿದ ಹುಬ್ಬುಗಳಿಂದಲೂ, ಅರೆದೆಗೆದ ದೃಷ್ಟಿಯಿಂದಲೂ, ಪೊಸತಾದ ಕೇಳಿಯಲ್ಲಿ ಹಸನಾಗಿ ತೋರುವ ಲೀಲೆಯಂ ಸೂಚಿಸುತ್ತಿರುವರು. ಇತ್ತಲು ನೋಡು." ಎಂದು ಬಿನ್ನೈಸಲು; "ಎಲೈ ವಿದೂಷಕನೇ, ಚೆನ್ನಾಗಿ ಪೇಳಿರುವೆ. ಅದರ ಸಂತೋಷದಿಂದ ಒಬ್ಬರೊಬ್ಬರ ಮೇಲೆ ಬಿಡದೆ ಇಟ್ಟಾಡಿದ ಗಂಧದ ಪುಡಿಯಿಂ ಪುಟ್ಟಿದ ಅಂಧಕಾರದ ನಡುವೆ ಹೆಡೆಗಳಂತೆ ರಾಜಿಸುವ ಸುವರ್ಣದ ಅಂಡೆಗಳಲ್ಲಿ ಕೆತ್ತಿದ ರತ್ನಕಾಂತಿಗಳಿಂದ ರಮಣೀಯವಾದ ಈ ಸ್ತ್ರೀಯರುಗಳು ಪಾತಾಳಲೋಕದಲ್ಲಿ ಒಪ್ಪುವ ನಾಗಕನ್ನೆಯರಂತೆ ರಾಜಿಸುತ್ತಿರುವರು" ಎಂದು ನುಡಿಯಲು; ವಿದೂಷಕನು,—"ಎಲೈ ಸ್ವಾಮಿಯೇ ಇತ್ತಲು ದೃಷ್ಟಿಯನ್ನಿರಿಸುವನಾಗು. ಮಧುಪಾನದ ಸೊಕ್ಕಿನಿಂದ ತಾರುಮಾರಾದ ಅಭಿನಯದಿಂ ಯುಕ್ತಳಾದ ಕಲಾವತಿಯೆಂಬ ಕಾಂತೆಯು ನಾಟ್ಯವಂಗೆಯ್ಯುತ್ತ ದಿವಸಲಕ್ಷ್ಮಿಯು ಸಂಧ್ಯಾರಾಗವನ್ನುಟ್ಟಂತೆ ಚಂದ್ರಗಾವಿಯ ಸೀರೆಯಿಂದ ಸುಂದರಳಾದ ಕಾಂಚನಮಾಲೆಯಿಂದೊಡಗೂಡಿ ಇತ್ತಲು ಬರುತ್ತಿರ್ಪಳು" ಎಂದು ಬಿನ್ನೈಸಲು; ಕಲಾವತಿ ಕಾಂಚನಮಾಲೆಯರಿರ್ವರು ಸಂತೋಷದಿಂಭರಿತರಾಗಿ ಚಂದ್ರಶಾಲೆಯಂ ಕುರಿತು ಬರುತ್ತ ದ್ವಿಪದೀಖಂಡವೆಂಬ ಹಾಡುಗಳಂ ಹಾಡುತ ಬರಲು; ಕಲಾವತಿಯು—"ಮನ್ಮಥನಿಗೆ ಪರಮಮಿತ್ರನಾದ ಈ ಮಂದಮಾರುತನು ಮಾವಿನ ಮರಗಳಲ್ಲಿ ಮೊಗ್ಗುಗಳನ್ನರಳಿಸುತ್ತ ಮಾನಿನಿಯರ ಮನದಲ್ಲಿ ಪುಟ್ಟಿದ ಮಾನವನ್ನಡಗಿಸುತ್ತ ತಂಪುದೋರಿ ಸೊಂಪುಮೀರಿ ಕಂಪುಬೀರಿ ಬೀಸುತ್ತಿರುವನು" ಎಂದು ಹಾಡು

ತ್ತಿರಲು; ಕಾಂಚನಮಾಲೆಯು—“ ಎಲೆ ಬಾಲೆಯೇ, ಉಕ್ಕಿಬರುವ ಸೊಕ್ಕುಜವ್ವನದ ಕಕ್ಕಸವೊಲೆಯ ಬಾಲೆಯರು ಈ ವಸಂತೋತ್ಸವದ ಮಹಿಮೆಯಿಂದ ತಮ್ಮ ಎದೆಯಲ್ಲಿ ಪುಟ್ಟಿದ ಬೆದೆಯುಂ ತಾಳಲಾರದೆ ತಮ್ಮ ಅಹಂಕಾರವಂ ತೊರೆದು, ಇನಿಯರ ಸನ್ಮಾನಕೆ ಮನಸೋತು ಗಾಳಿಗೆ ಅಲೆಯುವ ಬಾಳೆಲೆಗಳಂತೆ ಹೊಳಕುತ್ತ ತೋರುವರು. ಮತ್ತು ಈ ವಸಂತಮಾಸವೇ ಯೌವನದಿಂ ವಿಭೂಷಿತರಾದ ಕಾಮಿಜನರ ಮನದಲ್ಲಿ ಮೂಢಭಾವನಂ ಮೂಡಿಸುತ್ತಿರುವುದು. ಅಬಳಿಕ ಸರ್ವರಂ ಸದೆಯುತ್ತಿರುವ ಮದನನು ಹದವಾದ ಅಂಬುಗಳಿಂದ ಹೃದಯಮಂ ಸೀಳುತ್ತಿರುವನು.” ಎಂದು ಪಾಡುತ ಬರುತಿದ್ದಳು.

ಎಂಬಲ್ಲಿಗೆ
**ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ**
**ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ**
**ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್**
**ವತ್ಸರಾಜನ ಕಥೆಯಲ್ಲಿ**
**ಸಪ್ತಮಗುಚ್ಛಂ ಸಂಪೂರ್ಣಂ.**

## ಎಂಟನೆಯ ಗುಚ್ಛಂ.

ಅನಂತರದಲ್ಲಿ ವತ್ಸರಾಜೇಂದ್ರನು ಮನಬಂದಂತೆ ಕ್ರೀಡಿಸುತ್ತಿರುವ ತುಂಬುಜವ್ವನದ ನಾರಿಯರ ವಿಲಾಸವಂ ನೋಡಿ, ಅಧಿಕಸಂತೋಷವಂ ತಾಳಿ, ಮುಂಬಾಗದಲ್ಲಿ ಬರುತ್ತಿರುವ ಕಲಾವತಿ ಕಾಂಚನಮಾಲೆಯರಂ ಕಂಡು ವಿದೂಷಕನಂ ಕುರಿತು—“ ಅಯ್ಯಾ ಮಿತ್ರನೇ, ದೇವಿಗೆ ಅತ್ಯಂತಪ್ರೇಮಕ್ಕೆ ಪಾತ್ರಳಾದ ಕಾಂಚನಮಾಲೆಯು ಕಲಾವತಿಯಿಂದೊಡಗೂಡಿ ಬರುವಳು. ಈ ಭಾವವು ಎನ್ನನ್ನು ವಸಂತೋತ್ಸವಕ್ಕೆ ಕರೆಯಲೋಸುಗವೆಂದೇ ತೋರುತ್ತಿರುವುದು. ಮತ್ತೆ ಸುತ್ತಲೂ ಸುತ್ತಿರುವ ಮತ್ತಗಜಗಾಮಿನಿಯರಾದ ಈ ಕಾಮಿನಿಯರ ಲೀಲೆಗಳು ವೃದ್ಧಿಯಂ ಹೊಂದಿ ಮನಕ್ಕೆ ಮಂಗಳವನ್ನುಂಟುಮಾಡುತ್ತಲಿರುವುವು. ಹೇಗೆಂದರೆ—ನಾಟ್ಯವೇಗದಿಂ ಅಲೆಯುತ್ತಿರುವ ಪುಷ್ಪಮಾಲೆಗಳು ಜಾರುವಂತೆಯೂ, ಸೊಂಪಾಗಿ ಕೆಂಪಾದ ಪಾದಗಳಲ್ಲಿ ತಗಲಿಕೊಂಡಿರುವ ಪಾದಸರ ಗಗ್ಗರಂಗಳು ಕಿವಿಗಳಿಗೆ ಇಂಪಾದ ಧ್ವನಿಯನ್ನುಂಟುಮಾಡುತ್ತಲೂ, ಹಾರಗಳು ಹಾರುತ್ತ ವಕ್ಷಸ್ಥಳವಂ ಪೀಡಿಸುವಂತೆಯೂ, ಕುಚಗಳ ಭಾರಕೆ ಬಡನಡುವು ಬಳುಕುವಂತೆಯೂ, ನಾಟ್ಯವಂ ಗೆಯ್ಯುವ ಈ ಸ್ತ್ರೀಯರುಗಳ ಲೀಲಾವ್ಯಾಪಾರಂಗಳು ಹೇರಳವಾಗಿ ನೇತ್ರಾನಂದವಂತೋರಿಸುತ್ತಿರುವುವು” ಎಂದು ನುಡಿಯಲಾ ವಿದೂಷಕನು—“ ಅಯ್ಯಾ, ರಾಜೇಂದ್ರನೇ,

ನಾಟ್ಯವಂ ಗೆಯ್ಯುತ್ತ ನಲಿಯುತ್ತಿರುವ ಈ ಪೆಣ್ಣುಗಳ ನಡುವೆ ನಾನು ಪೋಗಿ ನಾಟ್ಯವಂ ವಿರಚಿಸಿ ಬರುವೆನು" ಎಂದು ಬಿನ್ನೈಸಲು; ರಾಜೇಂದ್ರನು,—"ಎಲ ಹಾಸ್ಯಗಾರನೆ, ಅದೇರೀತಿಯಿಂದ ಮಾಡಬಹುದು" ಎಂದು ಅಪ್ಪಣೆಯನ್ನೀಯಲು, ಆ ವಿದೂಷಕನು ಚಂದ್ರಶಾಲೆಯಿಂದಿಳಿದು ಹೊದೆದ ಧೋತ್ರವಂ ನಡುವಿಗೆ ಸುತ್ತಿ ಆ ಕಲಾವತಿ ಕಾಂಚನಮಾಲೆಯರ ನಡುವಿನಿಂದ ವಕ್ರವಾಗಿ ಕುಣಿಯುತ್ತ, "ಎಲೆ ಕಲಾವತಿಯೇ, ಈ ಚರ್ಚರಿಯೆಂಬ ವಾದ್ಯವಿಶೇಷವನ್ನು ಎನಗೆ ಸ್ವಲ್ಪವಾಗಿ ಕಲಿಸು" ಎಂದು ನುಡಿಯಲಾಕಲಾವತಿಯು "ಎಲೈ ಹೆಡ್ಡನಾದ ವಿದೂಷಕನೇ, ಇದು ಚರ್ಚರಿಯಲ್ಲ, ದ್ವಿಪದೀಖಂಡವನ್ನು ಹಾಡುತ್ತಿರುವೆನು" ಎಂದು ನುಡಿಯಲು; ಅವನು,—"ಎಲೆ ಬಾಲೆಯೇ ದ್ವಿಪದೀಖಂಡವಾದರೆ, ಹೂರಣಗಡುಬುಗಳಂ ಮಾಡುವುದಕ್ಕೆ ಯೋಗ್ಯವಾಗುವುದೇ ಪೇಳು?" ಎನಲು; ಆ ಕಲಾವತಿಯು ನಸುನಗುತ್ತ "ಮೂಢನೇ, ಇದು ಹಾಡುವುದಕ್ಕೆ ಯೋಗ್ಯವಲ್ಲದೆ ಹೂರಣಗಡುಬಿಗೆ ಯೋಗ್ಯವಾಗಲಾರದು" ಎನಲು; "ಹಾಗಾದರೆ ಎನಗೆ ಇದರಿಂದ ಕಾರ್ಯವೇನು? ನಮ್ಮ ಸ್ವಾಮಿಯು ಇದ್ದಎಡೆಗೆ ಪೋಗುವೆನು" ಎಂದು ನುಡಿಯುತ್ತಿರಲು, ಕಲಾವತಿಯು ಅವನ ಕರವಂ ಪಿಡಿದು, "ಇಲ್ಲಿ ನಾಟ್ಯವಂ ಗೆಯ್ಯದೆ ಎಲ್ಲಿ ಪೋಗುತ್ತಿರುವೆ?" ಎನಲು, ಕಾಂಚನಮಾಲೆಯು ನಸುನಗುತ, "ಎಲೈ ವಿದೂಷಕನೇ, ನಾವಿಬ್ಬರೂ ರಾಯನ ಸನ್ನಿಧಾನಕೆ ಬರುತ್ತಲಿರ್ಪೆವು. ನೀನು ನಮ್ಮ ಗಾನಕ್ಕೆ ಸಮವಾಗಿ ನಾಟ್ಯವಂ ಗೆಯ್ಯುವುದು" ಎಂದು ಕರವಂ ಪಿಡಿದು ಎಳೆಯಲಾವಿದೂಷಕನು ಅದೇರೀತಿಯಿಂದ ಗೆಯ್ಯುವೆನೆಂದು ಕುಣಿಯುತ್ತ, ಅವರಿರ್ವರಿಂ ತಪ್ಪಿಸಿಕೊಂಡು ರಾಯನಿದ್ದೆಡೆಗೆ ಬಂದು ಸೇರಲು, ರಾಯನು—"ಎಲೈ ವಿದೂಷಕನೇ, ಆ ಸ್ತ್ರೀಯರಿಬ್ಬರೂ ಏತಕ್ಕೋಸುಗವಾಗಿ ನಿನ್ನ ಹಸ್ತವಂ ಪಿಡಿದೆಳೆಯುತ್ತಲಿದ್ದರು?" ಎಂದು ನುಡಿಯಲು; ಅವನು—"ಎಲೈ ಸ್ವಾಮಿಯೇ, ಆ ಕಲಾವತಿ ಕಾಂಚನಮಾಲೆಯರು ಎನ್ನ ನಾಟ್ಯಚಾತುರ್ಯವನ್ನು ಕಲಿಸೆಂದು ಕರವನ್ನು ಎಳೆಯಲು ನಾನು ಅದನ್ನು ಕಲಿಸದೆ ನಿನ್ನ ಸನ್ನಿಧಿಯಂ ಕುರಿತು ಬಂದೆನು" ಎಂದು ನುಡಿಯಲಾರಾಯನು ನಗುತ—"ಎಲೈ, ಮಿತ್ರನೇ, ಆ ಸ್ತ್ರೀಯರಿಬ್ಬರೂ ಇಲ್ಲಿಗೆ ಬರುವರೋ, ಮತ್ತೊಂದು ಕಾರ್ಯ ನಿಮಿತ್ತವಾಗಿ ಪೋಗುವರೋ ಪೇಳು?" ಎನಲು; ಅವನು "ಎಲೈ ಸ್ವಾಮಿಯೇ, ಅವರು ಪೇಳಿದ ವಾಕ್ಯದಿಂದ ಈ ನಿನ್ನ ಸನ್ನಿಧಿಯನ್ನೇ ಪೊಂದುವರಾಗಿ ತೋರುವರು." ಎಂದು ಬಿನ್ನೈಸಲು;

ಅತ್ತ ಕಾಂಚನಮಾಲೆಯು—"ಎಲೆ ಕಲಾವತಿಯೇ, ಈ ನಾವಿಬ್ಬರೂ ಬಹುಕಾಲದಿಂದ ವಿನೋದವ್ಯಾಪಾರದಲ್ಲಿದ್ದುಕೊಂಡು ದೇವಿಯರ ಅಜ್ಞೆಯನ್ನು ಮರೆತಿರುವುದು ನ್ಯಾಯವಲ್ಲ. ಅದರಿಂದ ಶೀಘ್ರವಾಗಿ ನಡೆಯುವಳಾಗು. ರಾಯನ ಸನ್ನಿಧಿಯಂ ಪೊಂದುವೆವು." ಎಂದು ಅವಳಿಂದೊಡಗೂಡಿ ಬರುತ್ತ, ಚಂದ್ರಶಾಲೆ

ಯ ಹಂತವನ್ನು ಹತ್ತುವಲ್ಲಿ ಕಾಲುಂಗರ ಕಾಲುಸರ ಗಗ್ಗರ ಮೊದಲಾದ ಶಬ್ದಂಗ ಳಿಂದ ದಿಕ್ಕುದಿಕ್ಕುಗಳಲ್ಲಿ ಪ್ರತಿಧ್ವನಿಯನ್ನು ಪುಟ್ಟಿಸುತ್ತ ರಾಯನಿದ್ದೆಡೆಗೆ ಬಂದು, "ಎಲೈಮಹಾರಾಜೇಂದ್ರನೇ! ಜಯವುಳ್ಳವನಾಗು ಜಯವುಳ್ಳನಾಗು," ಎಂದು ಅದೇ ನೋ ಒಂದು ಒಯ್ಯಾರವನ್ನುಂಟುಮಾಡುತ್ತ ನಮಸ್ಕಾರವಂ ಗೈದು, ನಿಂದು,–"ಎಲೈ ಸ್ವಾಮಿಯೇ, ದೇವಿಯರು ನಿಮಗೆ ಅಪ್ಪಣೆಯನಿತ್ತು ಕಳುಹಿಸಿದರು" ಎಂದು ಅರೆ ಮಾತನ್ನು ನುಡಿದು, "ಎಲೈ ಸ್ವಾಮಿಯೇ, ತಪ್ಪಿ ನುಡಿದೆನು. ನಿಮಗೆ ವಿಜ್ಞಾಪನೆ ಯಂ ಗೆಯ್ಯುವಂತೆ ಪೇಳಿರುವರು" ಎಂದು ಬಿನ್ನೈಸಲು; ರಾಯನು "ಎಲೆ ಕಾಂಚನಮಾಲೆಯೇ, ಈಗಿನ ಪ್ರಕೃತಕೆ ದೇವಿಯರು ಅಪ್ಪಣೆಯನ್ನಿತ್ತಿರುವರೆಂದು ಪೇಳುವುದೇ ಸೊಗಸಾಗಿರುವುದು. ಅದರಲ್ಲೂ ಈಗ ಮನ್ಮಥೋತ್ಸವವೂ ಪ್ರಾಪ್ತ ವಾಗಿರುವುದು. ಆದರೆ ದೇವಿಯು ಏನೆಂದು ಬಿನ್ನೈಸುವಂತೆ ಕಳುಹಿಸಿರುವಳು?" ಎನಲು; ಕಾಂಚನಮಾಲೆಯು ನಾಚಿಕೆಯಿಂದ ತಲೆಯಂ ತಗ್ಗಿಸಿ—"ಎಲೈ ಸ್ವಾ ಮಿಯೇ, ಈಗ ಮಕರಂದೋದ್ಯಾನ ವನವೆಂಬ ಶೃಂಗಾರತೋಟದ ಚೆನ್ನಸುಗೆಯ ಮರದ ಅಡಿಯಲ್ಲಿ ಲೋಕಪ್ರಖ್ಯಾತನಾದ ಮನ್ಮಥರಾಜನಂ ಪೂಜಿಸುತ್ತಿರುವರು. ಅದರಿಂದ ಸ್ವಾಮಿಯವರು ಅಲ್ಲಿಗೆ ಬಿಜಯಂಗೈದು ಪೂರ್ಣವಂ ಗೆಯ್ಯಬೇಕೆಂದು ಬಿನ್ನೈಸುವಂತೆ ನಮ್ಮಿಬ್ಬರನ್ನೂ ದೇವರವರ ಸನ್ನಿಧಿಗೆ ಕಳುಹಿಸಿರುವರು." ಎಂದು ನುಡಿಯಲು; ರಾಯನು ಬಹಳ ಸಂತೋಷವಂ ತಾಳಿ, "ಎಲೈ ವಿದೂಷಕನೇ, ಶೀಘ್ರದಿಂದ ಪೋಗಿ, ಎನ್ನ ಮನೋರಥವನ್ನು ಸಾಧಿಸುವ, ನಡೆ." ಎನಲು; ವಿದೂಷಕನು—"ಅಯ್ಯಾ, ರಾಜೇಂದ್ರನೇ, ಮನ್ಮಥನಂ ಪೂಜಿಸುವಲ್ಲಿ ಸ್ವಸ್ತಿವಾ ಕ್ಯವಂ ಪೇಳುವ ಬ್ರಾಹ್ಮಣನಾದ ಎನಗೆ ಏನಾದರೂ ದಕ್ಷಿಣೆಯು ದೊರಕುತ್ತಲಿರು ವುದು, ಆದುದರಿಂದ ಶೀಘ್ರವಾಗಿ ಪೋಗುವ ನಡೆ." ಎನಲು; ರಾಯನು—"ಎಲೆ ಕಾಂಚನಮಾಲೆಯೆ, ನಾವು ಶೀಘ್ರದಿಂ ಬರುವೆವು. ತ್ವರೆಯಿಂದ ನೀನು ಈ ವಾ ರ್ತೆಯನ್ನು ದೇವಿಗೆ ಬಿನ್ನೈಸುವಳಾಗು" ಎಂದು ಅಪ್ಪಣೆಯನೀಯಲು ಅವರಿ ಬ್ಬರೂ ರಾಯನಿಗೆ ವಂದನೆಯಂಗೈದು, ಕಾಂಚನಮಾಲೆಯು—ಆಜ್ಞೆಯಾದಂತೆ ನಡೆ ದುಕೊಳ್ಳುವೆನೆಂದು ಕಲಾವತಿಯಿಂದೊಡಗೂಡಿ ಪೋಗಲು ;

ಇತ್ತಲು, ಪಕ್ಷಿಶಾಲೆಯಲ್ಲಿದ್ದ ಸಾಗರಿಕೆಯು ಸರ್ವಾಲಂಕಾರಭೂಷಿತಳಾಗಿ ಸುಸಂಗತೆಯಂ ಕುರಿತು —"ಎಲೆ, ಈ ಶಾರಿಕೆಯ ಪಂಜರವನ್ನು ರಕ್ಷಿಸುತ್ತಿರುವ ಳಾದರೆ, ನಾನು ಮಕರಂದೋದ್ಯಾನ ವನಕ್ಕೆ ಪೋಗಿ ಮನ್ಮಥನ ಪೂಜೆಯ ಸೊಗ ಸನ್ನು ನೋಡಿ ಬರುವೆನು" ಎಂದು ಆ ಪಂಜರವಂ ಕೊಟ್ಟು, ಮಂಗಳದ್ರವ್ಯಗಳು ತುಂಬಿದ ತಟ್ಟೆಯನ್ನು ಹಸ್ತದಲ್ಲಿ ಪಿಡಿದು, ಮನ್ಮಥನಿಗೆ ಪಟ್ಟಾಭಿಷೇಕವಂ ಗೆಯ್ಯು ವುದಕ್ಕೆ ಪೋಗುವ ವಸಂತಲಕ್ಷ್ಮಿಯೋ ಎಂಬಂತೆ ಬಂದು, ದೇವಿಯ ಊಳಿಗದ ಪೆಣ್ಣುಗಳ ಗುಂಪಿನಲ್ಲಿ ನಿಂತಿರಲು ;

ಇತ್ತ ರಾಯನು–“ ಅಯ್ಯಾ ವಿದೂಷಕನೇ, ದೇವಿಯು ಸಮೀಪವಂ ಸೇರುವ, ನಡೆ ” ಎಂದು ಅವನ ಕೈಯ್ಯಂ ಪಿಡಿದು, ಚಂದ್ರಶಾಲೆಯಿಂದ ಇಳಿದು ಬರುತ್ತಿರಲು ; ವಿದೂಷಕನು ಮುಂದುಗಡೆಗೆ ಬಂದು ಸುತ್ತಲೂ ನೋಡಿ–“ ಎಲೈ ರಾಜೇಂದ್ರನೇ, ಇದೋ! ಇತ್ತಲು ಮಕರಂದೋದ್ಯಾನವನದ ಬಾಗಿಲಿರ್ಪುದು, ಬಿಜಯಂಗೆಯ್ಯಬಹುದು. ” ಎಂದು, ಆ ವನವಂ ಪೊಕ್ಕು, ಅಲ್ಲಿರುವ ವೃಕ್ಷಲತೆಗಳ ಸೌಂದರ್ಯವಂ ನೋಡಿ, ಆಶ್ಚರ್ಯವಂ ಪೊಂದಿ, “ ಎಲೈ ರಾಜೇಂದ್ರನೇ, ಇತ್ತ ನೋಡು. ಈ ಶೃಂಗಾರದ ತೋಟದಲ್ಲಿ ಮಾರನ ತಳವಾರನಂತೆ ಮುಂದುವರಿದು ಸಂಚರಿಸುವ ತಂಗಾಳಿಯಿಂದ ಚಲಿಸುತ್ತಿರುವ ಪಲ್ಲವಂಗಳಿಂ ಕೂಡಿದ ಸೀಮಾವಿನ ಪುಷ್ಪ ಗುಚ್ಛಗುಚ್ಛಗಳಿಂದ ಮೊತ್ತವಾಗಿ ಸುತ್ತವಾಗಿ ಉದುರಿರುವ ಪರಾಗಗಳಿಂದ ಪೂರಿತಗಳಾದ ಕಲ್ಹಾರಿಗಳಿಂದ ಎತ್ತಲು ವ್ಯಾಪ್ತವಾಗಿ, ಮಕರಂದವಂ ಪೀರಿ ಮದವೇರಿ ನಯವಾಗಿ ಝುಂಕಾರವಂ ಗೆಯ್ಯುವ ಭೃಂಗಗಳ ಧ್ವನಿಗಳೆಂಬ ಸ್ವಸ್ತಿವಾಚನೆಗಳಿಂದ ಯುಕ್ತವಾಗಿ, ಕಿವಿಗಿಂಪಾದ ಕೋಗಿಲೆಗಳ ಮಧುರಸ್ವರವೆಂಬ ಮಂಗಳ ವಾದ್ಯದಿಂದೊಡಗೂಡಿ, ಚಲಿಸುತ್ತಿರುವ ತಾಳೆಯ ಮರಗಳ ಎಲೆಗಳ ಶಬ್ದವೆಂಬ ತಾಳದ ಶಬ್ದದಿಂದ ರಮ್ಯವಾಗಿ, ಒಂದು ಮಟ್ಟಾಗಿ ಚಂಚಲಂಗಳಾದ ಎಳಲತೆಗಳೆಂಬ ನಾಟ್ಯ ಸ್ತ್ರೀಯರಿಂದೊಡವೆರೆದು, ಮನ್ಮಥನೆಂಬ ನಾಟ್ಯಾಚಾರ್ಯನು ವಿರಚಿಸಿರುವ ಇದೊಂದು ಪರಿಯಾದ ರಂಗಸ್ಥಾನವೋ ಎಂಬಂತೆ ಮೆರೆಯುತ್ತಿರುವ ಈ ವನದ ಸೊಗಸನ್ನು ನೋಡು! ” ಎಂದು ಬಿನ್ನೈಸಲು ; ರಾಯನು ವನವೆಲ್ಲವಂ ನೋಡಿ, “ ಎಲೈ ವಿದೂಷಕನೇ, ನೀನು ನುಡಿದ ವಾಕ್ಯವು ಯುಕ್ತವೇ ಸರಿ . ಮೊದಲಾಗಿಯೆ ಈ ವನವೇ ಎನ್ನ ಮನಕ್ಕೆ ಹೇರಳವಾದ ಸಂತೋಷವಂ ಬೀರುತ್ತಿರುವುದು. ಇದರಲ್ಲಿ ಎನ್ನ ಮನೋಗತಳಾದ ಮಂಗಳಾಂಗಿಯಂ ಕಂಡೆನಾದರೆ, ಎನ್ನ ಸಂತೋಷವೆಂಬ ಸಮುದ್ರವು ಮೇರೆಯಂ ಮೀರಿ ಉಕ್ಕುತ್ತಿರುವುದು. ಮತ್ತೂ ಈ ವನದಲ್ಲಿ ಪ್ರಕಾಶಿಸುತ್ತಿರುವ ಹವಳಗಳಂತೆ ಬಣ್ಣವೇರಿದ ಚಿಗುರುಗಳಿಂ ರಕ್ತತ್ವವಂ ತಾಳಿ, ಮನೋಹರಂಗಳಾದ ತುಂಬಿಗಳ ಧ್ವನಿಗಳೆಂಬ ಸ್ಫುಟವಾದ ಅಕ್ಷರಂಗಳಿಂದ ಶೂನ್ಯವಾದ ವಾಕ್ಯಗಳಿಂದ ಯುಕ್ತವಾಗಿ, ಮಂದಮಾರುತದ ಸಂದಣಿಯಿಂದ ಚಲಿಸುತ್ತಿರುವ ತುದಿಗೊಂಬೆಗಳಿಂದ ಭ್ರಮೆಯಂ ಪೊಂದಿರುವ, ಈ ವೃಕ್ಷಗಳು ಮದ್ಯಪಾನಗಳಿಂದ ಮತ್ತಗಳಾಗಿರುವಂತೆ ತೋರುತ್ತಿರುವುವು. ಇತ್ತ ನೋಡು. ವಕುಳವೃಕ್ಷಗಳು ಕಾಮಿನಿಯರು ಮುಕ್ಕುಳಿಸಿ ಬುಡದಲ್ಲಿ ಉಗಿದಿರುವ ಮದ್ಯವನ್ನು ವೃದ್ಧಿಯಂ ಪೊಂದಿಸಲೋಸುಗವೋ ಎಂಬಂತೆ ತಮ್ಮಲ್ಲಿ ಪುಟ್ಟಿದ ಮಕರಂದದ ಮಳೆಯನ್ನು ಉಂಟುಮಾಡುತ್ತಲಿರುವುವು; ಸಂಪಗೆಯ ಮರಗಳು ಯೌವನದ ಪೆಣ್ಣುಗಳ ಮುಖವು ಮದ್ಯಪಾನದಿಂ ಕೆಂಪಾಗುತ್ತಲಿರಲು, ಅವರ ಮೈ ಬಣ್ಣವನ್ನು ಕಳುವುದಕೋಸುಗವೋ ಎಂಬಂತೆ ಪುಷ್ಪಗಳಿಂ ಪೂರಿತಂಗಳಾಗಿರುವುವು ; ದೋ

ಹಳ ನಿಮಿತ್ತವಾಗಿ ಬಂದಿರುವ ದೇವಕಾಂತೆಯರ ಕಾಲಂದುಗೆಯ ಧ್ವನಿಯಂ ಕೇಳಿ ಅಭ್ಯಾಸವಂ ಗೆಯ್ಯುವುವೋ ಎಂಬಂತೆ ಅಶೋಕವೃಕ್ಷಗಳು ತುಂಬಿಗಳ ಶಬ್ದಂಗಳಿಂದ ಯುಕ್ತವಾಗಿರುವುವು" ಎಂದು ನುಡಿಯಲು; ವಿದೂಷಕನು—"ಎಲೈ ಸ್ವಾಮಿಯೇ, ಈ ತುಂಬಿಗಳ ಮಧುರಸ್ವರವನ್ನು ಅನುಸರಿಸಿ ದೇವಿಯ ಊಳಿಗದ ಪೆಣ್ಣುಗಳ ಕಾಲಂದುಗೆಯ ಧ್ವನಿಗಳು ಕೇಳಿಬರುವುವು" ಎಂದು ನುಡಿಯುತ್ತಿರಲು;

ಅಷ್ಟರಲ್ಲೀ ವಾಸವದತ್ತಾದೇವಿಯು ನಕ್ಷತ್ರಸಮೂಹದ ಮಧ್ಯದಲ್ಲಿ ಪೊಳೆಯುತ್ತಿರುವ ಚಂದ್ರಲೇಖೆಯಂತೆ ಅನೇಕರಾದ ಸ್ತ್ರೀಯರ ಮಧ್ಯದಲ್ಲಿ ದಿವ್ಯಾಂಬರಭೂಷಣಂಗಳಿಂದ ಅಲಂಕೃತಳಾಗಿ ಬರುತ್ತಿರಲು; ಕಾಂಚನಮಾಲೆಯು ಅವಳ ಒತ್ತಿನಲ್ಲಿ ಪುಷ್ಪಗಳಿಂದ ಪೂರಿತಮಾದ ರತ್ನದ ತಟ್ಟೆಯಂ ಪಿಡಿದು ಒರುತ್ತಿರುವ ಸಾಗರಿಕೆಯಂ ಕಂಡು ತನ್ನ ಮನದಲ್ಲಿ—"ಈ ಸುಂದರಾಂಗಿಯು ಊಳಿಗದ ಪೆಣ್ಣುಗಳ ಸಂದಣಿಯಲ್ಲಿ ಬಂದಿರುವಳು; ನಮ್ಮ ರಾಜೇಂದ್ರನೂ ಬರುತ್ತಿರುವನು. ಮನ್ಮಥಪೂಜೆಯು ಸಂಪೂರ್ಣವಾಗಿಯೇ ನಡೆಯುವಂತೆ ಕಾಣುತ್ತಲಿರುವುದು. ಬಾರಿಬಾರಿಗೂ ದೇವಿಯಲ್ಲಿ ಇವಳ ಮೇಲೆ ದೂರನ್ನು ಪೇಳುವುದು ನ್ಯಾಯವಲ್ಲ. ಹೇಗಾದರೂ ಕಾರ್ಯವು ನಡೆಯಲಿ. ಮೊದಲು ಪೇಳಿದುದಕೆ ಎನಗೆ ಮಾನಭಂಗವು ಸಂಪೂರ್ಣವಾಗಿ ಉಂಟಾಗಿರುವುದು" ಎಂದು ಯೋಚಿಸುತ್ತ ಬರುತ್ತಿರಲು; ದೇವಿಯು—"ಎಲೆ ಕಾಂಚನಮಾಲೆಯೇ, ಮುಂದುವರಿದು ಮಕರಂದೋದ್ಯಾನದ ಮಾರ್ಗವನ್ನು ತೋರಿಸುತ್ತ ನಡೆ" ಎಂದು ಆಜ್ಞೆಯನ್ನೀಯಲು; ಅವಳು ಭಯಭಕ್ತಿಯಿಂದ ಯುಕ್ತಳಾಗಿ, "ಇದೊ ಇತ್ತಲಾಗಿ ಚಿತ್ತೈಸತಕ್ಕುದು. ಇತ್ತಲು ಮಕರಂದದ ಕಾಲುವೆಯು ದಾಂಟುವುದಕೆ ಅಸಾಧ್ಯವಾಗಿ ತೋರುವುದು. ಇತ್ತಲು ಪುಷ್ಪಪರಾಗಗಳಿಂದ ಪೂರಿತವಾದ ದಾರಿಯಲ್ಲಿ ಪಾದಗಳನ್ನಿರಿಸಲು ಮೊಳಕಾಲುವರೆಗೂ ಹೂಳಿಹೋಗುವುದು. ಇತ್ತಲು ಎಳೆಲೆಯ ಬಾಳೆಯಿಂ ಪುಟ್ಟಿದ ಪಚ್ಚಗಪ್ಪುರದ ದೂಳಿಯ ರಾಶಿಯನ್ನು ಹತ್ತಿ ಇಳಿಯುವುದು ಕಷ್ಟವಾಗಿ ಕಾಣುತ್ತಿರುವುದು. ಇತ್ತಲು ವಿರಹವನ್ನು ಸಹಿಸಲಾರದೆ ಹಲ್ಲುಗಳಂ ಕಿರಿಯುತ್ತಿರುವ ವಿರಹಿಜನರನ್ನು ಹಾಸ್ಯವಂ ಗೆಯ್ಯುವುದೋ ಎಂಬಂತಿರುವ ಅರೆಬಿರಿದ ದಾಳಿಂಬದ ಹಣ್ಣುಗಳಿಗೆ ಎರಗುವ ಗಿಳಿಗಳ ಗರಿಗಳಿಂದ ಪುಟ್ಟಿದ ಕಿರುಗಾಳಿಗೆ ಅಲೆಯುತ್ತಿರುವ ವಕುಳಪುಷ್ಪಗಳಿಂ ಸುರಿಯುತ್ತಿರುವ ಮಕರಂದವು ಮಳೆಗಾಲದ ಶಂಕೆಯಂ ಪುಟ್ಟಿಸುತ್ತಿರುವುದು" ಎಂದು, ಮುಂಗಡೆಯಂ ಚೆನ್ನಾಗಿ ನೋಡಿ—"ಎಲೌ ತಾಯೇ, ಇತ್ತಲು ಚೆನ್ನಾಗಿ ದೃಷ್ಟಿಯಂ ಇರಿಸುವಳಾಗು. ಈ ವಸಂತ ಸಮಯದಲ್ಲಿ ತಂಗಾಳಿಯ ಸೋಂಕಿನಿಂದ ಚಲಿಸುವ ಚಿಗುರಿಗಳಿಂದ ಚೆಂದವಾಗಿರುವ ಪಲಬಗೆಗಳಾದ ವೃಕ್ಷಲತೆಗಳಿಂದ ಮೊರೆದೇಳುವ ಮರಿದುಂಬಿಗಳೆಂಬ ಮುಂಗುರುಳು

ಗಳಂ ವಹಿಸಿ, ಪೊಸಚಿಗುರುಗಳಂ ಸವಿಯಾಗಿ ಸವಿದು ಕೂಗುವ ಕೋಗಿಲೆಗಳ ಮಧುರಧ್ವನಿಗಳೆಂಬ ಗಾನಸ್ವರವನಾಂತು, ಕೊಂಚವಾಗಿ ಚಲಿಸುವ ಗೊಂಚಲುಗಳೆಂಬ ಬಟ್ಟವೊಲೆಗಳಿಂದ ರಮಣೀಯವಾಗಿ, ಶರೀರವಂ ತಾಳಿದ ವಸಂತಲಕ್ಷ್ಮಿಯು ಇದಿರೆದ್ದು ಬರುವಳಂತೆ ಈ ವನದ ಸೌಭಾಗ್ಯವು ಕಂಗಳಿಗೆ ಕೌತುಕವನ್ನುಂಟುಮಾಡುತ್ತಿರುವುದು" ಎಂದು ಬಿನ್ನೈಸಲು; ದೇವಿಯು—"ಎಲೆ ಕಾಂಚನಮಾಲೆಯೇ, ಚೆನ್ನಾಗಿ ನುಡಿದಿರುವೆ. ಆದರೆ ಮನ್ಮಥನಂ ಪೂಜಿಸುವ ಸುವರ್ಣದ ಅಶೋಕವೃಕ್ಷವು ಇನ್ನೆಷ್ಟು ದೂರವಿರುವುದು" ಎಂದು ನುಡಿಯಲು; ಅವಳು—"ಇದೋ ಇತ್ತಲು, ಎಡೆಬಿಡದೆ ಮೊಳಕೆದೋರುವ ಪಲ್ಲವಗಳಿಂದ ಭರಿತವಾಗಿ, ದೇವಿಯರ ಪ್ರೇಮಪಾತ್ರವಾದ ಮಾಲತೀಲತೆಗೂ ಅಕಾಶದಲ್ಲಿ ಪುಷ್ಪಗಳು ಪುಟ್ಟಬೇಕೆಂದು ಪ್ರಯಾಸವಂ ಪೊಂದುತ್ತಲಿರುವ ರಾಯನ ಕಾರುಣ್ಯಕೆ ಪಾತ್ರವಾದ ವನಮಾಲಿಕಾಲತೆಗೂ ಮಧ್ಯಭಾಗದಲ್ಲಿರುತ ಮನ್ಮಥನ ಆಯುಧಶಾಲೆಯಂತೆ ವಿರಹಿಗಳಿಗೆ ದಾವಾಗ್ನಿಯಂತೆ ಚಿಗುರುಗಳಿಂದ ಮನೋಹರವಾದ ಪೊನ್ನಸಂಪಗೆಯ ಮರವು ಕಾಣುತ್ತಲಿರುವುದು!" ಎಂದು ಬಿನ್ನೈಸಲು; ದೇವಿಯು—"ಎಲೆ ಬಾಲೆಯೇ ನೀನು ಊಳಿಗದ ಪೆಣ್ಣುಗಳು ತಂದಿರುವ ಪೂಜಾದ್ರವ್ಯಗಳಿಂ ತುಂಬಿರುವ ತಟ್ಟೆಗಳಂ ತೆಗೆದು, ಆ ವೃಕ್ಷಮೂಲದಲ್ಲಿ ಸಾಲಾಗಿ ಇರಿಸುವಳಾಗು" ಎಂದು ಅಪ್ಪಣೆಯನ್ನೀಯಲು; ಆ ದೇವಿಯ ಪಾರ್ಶ್ವಭಾಗದಲ್ಲಿ ಬರುತ್ತಿರುವ ಸಾಗರಿಕೆಯು ಆ ವಾಕ್ಯವಂ ಕೇಳಿ, "ಇದೋ, ಸಮಸ್ತಪೂಜಾದ್ರವ್ಯಗಳಿಂ ತುಂಬಿದ ತಟ್ಟೆಯು ಸಿದ್ಧವಾಗಿರುವುದು" ಎಂದು ತಾನು ತಂದ ತಟ್ಟೆಯಂ ದೇವಿಯ ಮುಂದಕೆ ತಂದು ಪಿಡಿಯಲು; ದೇವಿಯು ಸರ್ವಾಲಂಕಾರಭೂಷಿತೆಯಾಗಿ ಬಂದ ಸಾಗರಿಕೆಯಂ ನೋಡಿ, "ಹೋ ಹೋ! ಮೋಸವಾದುದು. ಯಾವುದನ್ನು ನಮ್ಮ ರಾಯನ ಕಣ್ಣುಗಳಿಂ ತಪ್ಪಿಸಿ ಸಲಹುತ್ತಿದ್ದೆನೋ ಅದನ್ನು ಈಗ ಆ ರಾಯನಿಗೆ ನಾನಾಗಿ ಕೈಗಾಣಿಕೆಯಾಗಿ ಒಪ್ಪಿಸುವಂತಾದುದು. ಈಗ ನಾನು ಮಾಡುವ ಮನ್ಮಥಪೂಜೆಗೆ ತಂದ ಮಂಗಳದ್ರವ್ಯವು ಇವಳಿಗೂ ರಾಯನಿಗೂ ಗಾಂಧರ್ವವಿವಾಹಕೋಸುಗವಾಗಿಯೇ ತಂದಿರುವಂತಾಗುವುದು. ಆದರೆ ಒಂದು ಕಾರ್ಯವಂ ಗೆಯ್ಯುವೆನು" ಎಂದು ತನ್ನ ಮನದಲ್ಲಿ ಯೋಚಿಸಿ, ಸಾಗರಿಕೆಯಂ ಕುರಿತು—"ಎಲೆ ಬಾಲೆಯೇ, ಮನ್ಮಥಮಹೋತ್ಸವದಲ್ಲಿ ಸಮಸ್ತಸಖಿಯರೂ ದೊಂಬಿಗೊಂಡಿರುವಲ್ಲಿ ಮೇಧಾವಿನಿಯೆಂಬ ಶಾರಿಕೆಯಂ ಬಿಟ್ಟು ನೀನು ಇಲ್ಲಿಗೆ ಬರಬಹುದೆ ಪೇಳು? ಎಲ್ಲಾ ಸಖಿಯರಲ್ಲೂ ಜಾಣೆಯೆಂತಲೂ, ಎನ್ನ ಚಿತ್ತಕೆ ಆಯಾಸವು ಪುಟ್ಟದಂತೆ ನಡೆಯುವಳೆಂತಲೂ ತಿಳಿದಿರುವ ಎನ್ನ ಅಭಿಪ್ರಾಯವನ್ನು ವ್ಯರ್ಥವಂ ಗೆಯ್ಯುವಳಂತೆ ತೋರುತ್ತಿರುವೆ? ಈಗ ನೀನು ಇಲ್ಲಿ ನಿಲ್ಲದೆ ಶಕುಂತಶಾಲೆಯಂ ಪೊಂದಿ ಶಾರಿಕೆಯಂ ಸಲಹುತ್ತಿರುವಳಾಗು" ಎಂದು ಅಪ್ಪಣೆಯನ್ನೀಯಲಾ ಸಾಗರಿಕೆಯು ಖಿನ್ನಹೃದಯಳಾಗಿ—"ಪರಸೇವೆಯು ನರಕಕಿಂತಲೂ

ಕಷ್ಟವೆಂಬುವುದು ನಿಶ್ಚಯವೇ ಸರಿ. ಆ ಸೇವಕರಾದವರಿಗೆ ತಮ್ಮ ಶರೀರಕ್ಕೂ ತಮಗೆ ಸ್ವಾತಂತ್ರ್ಯವಿಲ್ಲವೆಂಬುವ ನೀತಿಯು ನಿಶ್ಚಯವೇ ಸರಿ. ಇಂದಿನ ದಿನದಲ್ಲಾದರೂ ಸುಂದರಾಂಗನಾದ ವತ್ಸರಾಜನ ಸಂದರ್ಶನವನ್ನು ಪೊಂದುವೆನೆಂಬ ಆನಂದವೆಲ್ಲವೂ ಮೂಢನ ಮುಂದೆ ಕವಿತ್ವವಂ ಪೇಳಿದಂತಾದುದು. ಇನ್ನು ಮಾಡತಕ್ಕುದೇನು!" ಎಂದು ಮನದಲ್ಲಿ ಬಹಳವಾದ ವ್ಯಥೆಯುಂ ಪೊಂದುತ್ತ, "ದೇವಿಯರ ಅಪ್ಪಣೆಯಾದಂತೆ ನಡೆದುಕೊಳ್ಳುವೆನು" ಎಂದು ತನ್ನ ಹಸ್ತದಲ್ಲಿದ್ದ ಮಂಗಳದ್ರವ್ಯದ ತಟ್ಟೆಯನ್ನು ಕಾಂಚನಮಾಲೆಯ ಹಸ್ತಕೆ ಕೊಟ್ಟು, ಶಿರವಂ ಬಾಗಿ, ಬರುತ್ತ, "ಇದು ರಾಯನು ಎನ್ನನ್ನು ಕಾಣುವನೆಂಬ ಸಂದೇಹವನ್ನು ಪೊಂದಿ ದೇವಿಯು ಶಾರಿಕೆಯುಂ ನೆಪವಂಗೈದು ಮಾಡಿದ ಭೇದೋಪಾಯವಾಗಿ ತೋರುವುದು. ಈ ರೀತಿಯಾಗಿ ದೇವಿಯ ಮನದಲ್ಲಿ ಸಂದೇಹವೇ ಬಲವಾಗಿದ್ದಲ್ಲಿ ಎನಗೆ ರಾಯನೊಡನೆ ಸಮಾಗಮವೂ ಮನೋರಥಸಂಪೂರ್ತಿಯೂ ಸಹ ಹೇಗೆ ನಡೆಯುವುದೊ ! ಈಗ ಸುಸಂಗತೆಯ ಹಸ್ತಕ್ಕೆ ಶಾರಿಕೆಯನ್ನಿತ್ತು ಬಂದಿರುವೆನು. ಅವಳು ಫಲಂಗಳನ್ನಿತ್ತು ಶಾರಿಕೆಯುಂ ಸಲಹುತ್ತಿರುವಳು. ಆದರೆ ಮನ್ಮಥೋತ್ಸವವನ್ನು ನಮ್ಮ ಅರಮನೆಯಲ್ಲಿ ಮಾಡುವಂತೆ ಇಲ್ಲಿಯೂ ವಿರಚಿಸುವರೋ ಮತ್ತೊಂದು ಪರಿಯಾಗಿ ಗೆಯ್ಯುತ್ತಿರುವರೋ ? ಇದನ್ನು ಸ್ವಲ್ಪ ದೂರವಾಗಿ ಮರಗಳ ಮರೆಯುಂ ಸೇರಿ ನೋಡುತ್ತಿರುವೆನು." ಎಂದು ಯೋಚಿಸುತ್ತ ಬಂದು, ಜಾಜಿಗಳ ಪೊದರನ್ನು ಮರೆಗೊಂಡು ನಿಂದು, "ನಾನೂ ಇಲ್ಲಿ ಬಲ್ಲಿದನಾದ ಮನ್ಮಥನಂ ಪೂಜಿಸುವೆನು" ಎಂದು ಪುಷ್ಪಗಳಂ ಕೊಯ್ಯುತ್ತಿದ್ದಳು.

ಎಂಬಲ್ಲಿಗೆ
ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಎಂಟನೆಯ ಗುಚ್ಛಂ ಸಂಪೂರ್ಣಂ.

# ಒಂಬತ್ತನೆಯ ಗುಚ್ಛಂ.

ಅನಂತರದಲ್ಲಿ ಸಾಗರಿಕೆಯು ತಾನು ಇರುವುದನ್ನು ಯಾವ ಸಖಿಯಾದರೂ ಕಂಡು ದೇವಿಗೆ ವಿಜ್ಞಾಪನೆಯಂ ಗೈದಲ್ಲಿ ಎನ್ನಲ್ಲಿರುವ ನಂಬುಗೆಯು ತಪ್ಪಿ ಎನಗೆ ಕಳುಹಿಸು ವಂಥ ಮರ್ಯಾದೆಗಳನ್ನು ಸಹ ನಿಲ್ಲಿಸುವಳೆಂದು ಕಳವಳವಂ ಪೊಂದುತ್ತ, ಎಡಬಲವಂ ನೋಡುತ್ತ, ಮನ್ಮಥನ ಪೂಜೆಯಂ ಗೆಯ್ಯುವೆನೆಂದು ಪುಷ್ಪಾಪಚಯಮಂ ಗೆಯ್ಯುತ್ತಿರಲು;

ಇತ್ತಲು, ವಾಸವದತ್ತಾದೇವಿಯು ಸಾಗರಿಕೆಯು ಪೋದುದಂ ಕಂಡು— "ಎಲೆ ಕಾಂಚನಮಾಲೆಯೇ, ಪುರೋಭಾಗದಲ್ಲಿ ಪರಿಶೋಭಿಸುತ್ತಿರುವ ಈ ರಕ್ತಾಶೋಕವೃಕ್ಷದ ಬುಡದಲ್ಲಿ ಗಿಳಿದೇರಿನಿಂದಲೂ ಕಬ್ಬುಬಿಲ್ಲಿನಿಂದಲೂ ರತೀದೇವಿಯಿಂದಲೂ ಪುಷ್ಪಬಾಣಂಗಳಿಂದಲೂ ಯುಕ್ತನಾದ ಮನ್ಮಥನಂ ಬರೆಯುವಳಾಗು" ಎಂದು ಆಜ್ಞೆಯನ್ನೀಯಲು; ಕಾಂಚನಮಾಲೆಯು ಪಚ್ಚಗಪ್ಪುರದ ದೂಳಿಯಂ ಹರಹಿ ಅದರಮೇಲೆ ದೇವಿಯು ಹೇಳಿದಂತೆ ಮನ್ಮಥನಂ ಬರೆಯುತ್ತಿರಲು;

ಇತ್ತಲು, ವಿದೂಷಕನು—"ಎಲೈ ಮಹಾರಾಜೇಂದ್ರನೇ, ಮೊದಲು ನಾನು ದೇವಿಯ ಪರಿಜನದ ಕಾಲಂದುಗೆಯ ಧ್ವನಿಯು ಕೇಳಿ, ದೇವಿಯು ಬರುವಳೆಂದು ಪೇಳಿದಂತೆ ಸಕಲರಾದ ಸಖಿಯರುಗಳಿಂದೊಡಗೂಡಿ ದೇವಿಯು ರಕ್ತಾಶೋಕವೃಕ್ಷದ ಸಮೀಪವಂ ಸೇರಿರುವಳು" ಎಂದು ಬಿನ್ನೈಸಲು; ರಾಯನು ಮುಂದಕ್ಕೆ ಪಾದಗಳನ್ನಿಟ್ಟು ನೋಡಿ—"ಎಲೈ ಮಿತ್ರನೇ, ನೀನು ಪೇಳಿದುದು ಯುಕ್ತವೇ ಸರಿ. ಪುಷ್ಪಕ್ಕಿಂತಲೂ ಅತ್ಯಂತಕೋಮಲವಾದ ಶರೀರವಂ ತಾಳಿ ವ್ರತನಿಯಮದಿಂದ ಅತ್ಯಂತಕೃಶವಾಗಿ ತಾವರೆಯ ದಂಟಿನ ನೂಲಿಗೂ ಅತ್ಯಂತಸೂಕ್ಷ್ಮವಾದ ನಡುವಿನಿಂದ ಒಪ್ಪುತ್ತಿರುವ ವಾಸವದತ್ತಾದೇವಿಯು, ನಾರಿಯಂ ಸಡಲಿಸಿ ನಿಲ್ಲಿಸಿದ ಮನ್ಮಥನ ಧನುಸ್ಸಿನಂತೆ ಪೊಳೆಯುತ್ತಿರುವಳು. ನಾವಿರ್ವರೂ ಅವಳ ಸಮೀಪವಂ ಪೊಂದುವೆವು" ಎಂದು ಬರುತ್ತ, ಎಣಿಸುವುದಕ್ಕೆ ಶಕ್ಯವಲ್ಲದೆ ಆ ಉಪವನವೆಲ್ಲವಂ ಸ್ತ್ರೀಮಯವೆನಿಸಿ ನಿಂದಿರುವ ಊಳಿಗದ ಹೆಣ್ಣುಗಳ ಗುಂಪುಗಳಂ ನೋಡಿ, —"ಎಲೈ ಮಿತ್ರನೇ, ಈ ಸಖಿಯರ ಸಂದಣಿಯಲ್ಲಿ ನಾನು ನೋಡಿದ ಮಂದಯಾನೆಯನ್ನು ಇವಳೇ ಸರಿ ಎಂದು ಹೇಗೆ ನಿಶ್ಚೈಸಲಿ?" ಎಂದು ನುಡಿಯಲು; ವಿದೂಷಕನು—"ಎಲೈ ರಾಜೇಂದ್ರನೇ, ನಿನ್ನಲ್ಲಿ ಮನ್ಮಥಮಹಾರಾಜನ ಪ್ರೀತಿಯು ಹೇರಳವಾಗಿದೆಯಾದುದರಿಂದ ಅವನೇ ನಿನಗೆ ಗೊತ್ತುಗೈದು ಕೊಡುವನು" ಎಂದು ವಿನೋದವಾಕ್ಯವನ್ನಾಡಲು; ರಾಯನು—"ಎಲೈ ಮಿತ್ರನೇ, ಸತ್ಯವಾಕ್ಯನೆಂದು ನಿನ್ನ ತಿಳಿದಿರುವೆನು. ನೀನು ನುಡಿದಂತೆ ಆ ಪೂರ್ಣಚಂದ್ರಮುಖಿಯು ಒಂದು

ಬಾರಿ ಕಣ್ಣುಗಳಿಗೆ ಗೋಚರಳಾದವಳಾದರೆ, ಎನ್ನ ಜನ್ಮವು ಸಾರ್ಥಕವಾಗುವುದು ” ಎಂದು ನುಡಿಯುತ್ತ ಬರುತ್ತಿರಲು ;

ಇತ್ತಲಾ ದೇವಿಯು ಸ್ವಲ್ಪ ದೂರದಲ್ಲಿ ರಾಯನಂ ಕಂಡು ಸಂತೋಷವಂ ಪೊಂದಿ—“ ಎಲೆ, ಕಾಂಚನಮಾಲೆಯೇ, ಬೇಗದಿಂ ಬಂದು ಈ ಊಳಿಗದ ಪೆಣ್ಣುಗಳಂ ಹಿಂದಿರಿಸುವಳಾಗು, ರತ್ನಪೀಠವಂ ಅಶೋಕದ ವೃಕ್ಷದ ಒತ್ತಿನಲ್ಲಿ ಇರಿಸುವಳಾಗು. ಮಹಾರಾಜೇಂದ್ರನು ಇಲ್ಲಿಗೆ ವಿಜಯಂಗೆಯ್ಯುತ್ತಿರುವನು.” ಎಂದು ನುಡಿದು, ರಾಯನಿಗೆ ಇದಿರುಬಂದು, “ ಎಲೈ ಸ್ವಾಮಿಯೇ, ಜಯವುಳ್ಳವನಾಗು ” ಎಂದು ನುಡಿದು, ನಮಸ್ಕಾರವಂ ಗೈದು ನಿಂದಿರಲು ; ರಾಯನು—“ ಎಲೌ ದೇವಿಯೇ, ಬಲುಹೊತ್ತಾದುದು. ನೀನು ಪೋಗಿ ಶೀಘ್ರದಿಂ ಪುಷ್ಪಬಾಣನಂ ಪೂಜಿಸುವಳಾಗು ” ಎಂದು ಅಪ್ಪಣೆಯನ್ನೀಯಲು ; ದೇವಿಯು—“ ಎಲೈ ಸ್ವಾಮಿಯೇ ಆಜ್ಞೆಯಾದಂತೆ ನಡೆದುಕೊಳ್ಳುವೆನು. ಸ್ವಾಮಿಯವರು ಈ ರತ್ನಪೀಠದಲ್ಲಿ ಬಿಜಯಂಗೆಯ್ಯಬಹುದು ” ಎಂದು ವಿಜ್ಞಾಪಿಸಲು ; ರಾಯನು ಅದೇರೀತಿಯಿಂದ ರತ್ನಪೀಠದಲ್ಲಿ ಮಂಡಿಸಿ, ಒತ್ತಿನಲ್ಲಿ ವಿದೂಷಕನಂ ಕುಳ್ಳಿರಿಸಿಕೊಂಡು ಸಖಿಯರುಗಳ ಗುಂಪನ್ನು ಬಾರಿಬಾರಿಗೂ ನೇವರಿಸಿಕೊಂಡು ನೋಡುತ್ತಿರಲು ; ಕಾಂಚನಮಾಲೆಯು—“ ಎಲೌ ದೇವಿಯೇ, ನಿನ್ನ ಹಸ್ತದಿಂ ಕೊಯ್ದ ಪುಷ್ಪಗಳಿಂದ ಮನ್ಮಥನಂ ಪೂಜಿಸುವಳಾಗು ; ಪರಿಮಳಗಂಧವನ್ನು ಅನುಲೇಪನವಂ ಗೆಯ್ಯುವಳಾಗು.” ಎನಲು ; ದೇವಿಯು ಆ ಅಸುಗೆಯ ಮರದ ಮೂಲಬಾಗದಲ್ಲಿ ತನ್ನ ಪೀಠದೊಳ್ ಕುಳಿತು, “ ಎಲೆ ಕಾಂಚನಮಾಲೆಯೇ, ಈಗ ಸಖಿಯರುಗಳು ತಂದಿರುವ ಪೂಜಾದ್ರವ್ಯಗಳಿಂ ತುಂಬಿದ ತಟ್ಟೆಗಳಂ ಮುಂದಿರಿಸುವಳಾಗು ” ಎಂದು ಅಪ್ಪಣೆಯಂ ಕೊಡಲು ; ವಿದೂಷಕನು ಏಕಾಂತವಾಗಿ ರಾಯನಂ ಕುರಿತು—“ ಅಯ್ಯಾ ಸ್ವಾಮಿಯೇ, ಈಗ ಸಮಸ್ತರಾದ ಊಳಿಗದ ಪೆಣ್ಣುಗಳೂ ತಾವು ತಂದಿರುವ ತಟ್ಟೆಗಳನ್ನು ಈ ಅಶೋಕ ವೃಕ್ಷದ ಸಮೀಪದಲ್ಲಿ ಇರಿಸುವುದಕ್ಕೋಸುಗ ಬರುತ್ತಿರುವರಾದುದರಿಂದ ನಿನ್ನ ಕಾರ್ಯಕೆ ಅನುಕೂಲವಾದುದು. ಇದೇ ಸಮಯದಲ್ಲಿ ಇಂಥವಳೆಂದು ಗೊತ್ತುಗೆಯ್ದಲ್ಲಿ ಅವಳು ಪಾತಾಳಲೋಕಕ್ಕೆ ಪೋದರೂ ಬಿಡದೆ ತಂದು ನಿನ್ನೊಡನೆ ಪೊಂದಿಸುವುದರಲ್ಲಿ ಸಂದೇಹವಿಲ್ಲವು ” ಎಂದು ಬಿನ್ನೈಸುತ್ತಿರಲು ; ಕಾಂಚನಮಾಲೆಯು ಎಲ್ಲಾ ಬಾಲೆಯರಂ ನೋಡಿ—“ ಎಲೆ ಸಖಿಯರುಗಳಿರಾ ! ನೀವು ತಂದಿರುವ ಮಂಗಳ ದ್ರವ್ಯಗಳ ತಟ್ಟೆಗಳನ್ನು ತಂದು ದೇವಿಯ ಮುಂದುಗಡೆಯಲ್ಲಿ ಮಡಗುವುದು” ಎಂದು ಕೂಗಿ ನುಡಿಯಲು ; ಆ ಬಾಲೆಯರುಗಳು ಸಾಲುಸಾಲಾಗಿ ಬಂದು ತಟ್ಟೆಗಳನ್ನಿರಿಸಿ ಪೋಗುತ್ತಿರಲು ; ರಾಯನು ಅವರೆಲ್ಲರಂ ನೋಡಿ ನಿಟ್ಟುಸಿರಂ ಬಿಟ್ಟು—“ ಎಲೆ ವಿದೂಷಕನೇ, ಎನ್ನ ನೇತ್ರಕ್ಕೆ ಸೌಭಾಗ್ಯರೂಪಳಾದ ಆ ಸ್ತ್ರೀಯು ಇಲ್ಲಿಗೆ ಬಂದಂತೆ ತೋರುವುದಿಲ್ಲ. ಹಿಂದುಗಡೆಯಲ್ಲಿರುವ ಸಖಿಯರ ಗುಂಪಿನಲ್ಲಿ ಯಾವ ಸ್ಥಳ

ದಲ್ಲಿ ಅಡಗಿಕೊಂಡಿರುವಳೋ ಕಾಣೆನು” ಎಂದು ನುಡಿಯಲು; ವಿದೂಷಕನು— “ಎಲೈ ರಾಜೇಂದ್ರನೇ, ಚೆನ್ನಾಗಿ ಮುಖವನ್ನು ನೋಡದೆ ಯಾವಳೊಬ್ಬಳ ಹಿಂಬಾಗವನ್ನು ಕಂಡು ಇಂತು ಚಿಂತೆಯಂ ಪೊಂದುವುದು ಯುಕ್ತವಲ್ಲ” ಎಂದು ನುಡಿಯಲು; ದೇವಿಯು ಕಾಂಚನಮಾಲೆಯು ತೆಗೆದು ಒಪ್ಪಿಸುವ ಪೂಜಾವಸ್ತುಗಳಂ ತೆಗೆದುಕೊಂಡು ಮನ್ಮಥನಂ ಷೋಡಶೋಪಚಾರಂಗಳಿಂದ ಪೂಜಿಸುತ್ತಿರಲು; ರಾಯನು ಕುಸುಂಬೆಯ ಹೂವಿನ ಬಂಣದಿಂದ ರಂಗುಗೊಂಡಿರುವ ಚಂದ್ರಗಾವಿಯ ಸೀರೆಯನ್ನುಟ್ಟು ನೂತನವಾಗಿ ಮಜ್ಜನವಂ ಗೈದಿರುವುದರಿಂದ ಪರಿಶುದ್ಧವಾಗಿ ಕಾಣುತ್ತಿರುವ ಅಂಗಗಳಿಂದೊಡಗೂಡಿರುತ್ತ ಮನ್ಮಥನಂ ಪೂಜಿಸುತ್ತಿರುವ ಈ ವಾಸವದತ್ತೆಯು ಚಿಗುರುಗಳಿಂದ ವ್ಯಾಪ್ತವಾದ ಎಳೆಲತೆಯಂತೆ ಪೊಳೆಯುತ್ತಿರುವಳೆಂದು ತನ್ನ ಮನದಲ್ಲಿ ತಿಳಿಯುತ್ತಿರಲು; ಕಾಂಚನಮಾಲೆಯು—“ಎಲೌ ದೇವಿಯೇ, ಹಸ್ತದಲ್ಲಿ ಕೊಡಲ್ಪಟ್ಟ ಈ ಕುಂಕುಮದ ಗಂಧದ ಹೂವಿನಿಂದ ಅಶೋಕವೃಕ್ಷದ ಮೂಲಭಾಗವನ್ನು ರಂಗುಗೊಳಿಸುವಳಾಗು” ಎಂದು ನುಡಿಯಲು; ದೇವಿಯು ಅದೇರೀತಿಯಿಂದ ಕುಂಕುಮದ ಹೂವಿನ ಗಂಧವನ್ನು ಆ ವೃಕ್ಷದ ಬುಡಕ್ಕೆ ಲೇಪಿಸುತ್ತಿರಲು; ರಾಯನು ಅದನ್ನು ಕಂಡು—“ಎಲೆ ಪ್ರಾಣಪ್ರಿಯಳಾದಂಥ ವಾಸವದತ್ತೆಯೇ, ಮನ್ಮಥನ ಪೂಜೆಯಲ್ಲಿ ಆಸಕ್ತವಾದ ನಿನ್ನ ಹಸ್ತದಿಂದ ಮುಟ್ಟಲ್ಪಟ್ಟ ಈ ಅಶೋಕವೃಕ್ಷವು ಈಗ ತಾನು ಪೊಳೆದೋರುವ ಮತ್ತೊಂದು ಎಳೆಯ ಚಿಗುರನ್ನು ಧರಿಸಿದಂತೆ ತೋರುತ್ತಿರುವುದು; ಮತ್ತು ಈ ಅನಂಗನಾದ ಮನ್ಮಥನು ತನಗೆ ಪ್ರಾಪ್ತವಾದ ಅನಂಗತ್ವವನ್ನು ತನಗೆ ತಾನೇ ನಿಂದಿಸುತ್ತಿರುವನು. ಏಕೆಂದರೆ—ಯಾವ ನಿನ್ನ ಹಸ್ತದ ಸಂಸ್ಪರ್ಶವು ಆ ಮನ್ಮಥನ ಅಂಗಕೆ ದೊರೆಯಲಿಲ್ಲವೋ, ಆದುದರಿಂದಲೇ” ಎಂದು ತನ್ನ ಮನದಲ್ಲಿ ಯೋಚಿಸುತ್ತಿರಲು; ಕಾಂಚನಮಾಲೆಯು—“ಎಲೌ, ಪೂಜ್ಯಳಾದ ದೇವಿಯೇ, ಮನ್ಮಥನ ಪೂಜೆಯಾದ ಬಳಿಕ ಮನ್ಮಥನಿಗೂ ಮನ್ಮಥನಾದ ನಮ್ಮ ರಾಜೇಂದ್ರನಂ ಪೂಜಿಸುವಳಾಗು” ಎಂದು ನುಡಿಯಲು; ದೇವಿಯು—“ಎಲೌ ಸಖಿಯೇ, ಸಮಸ್ತ ಪೂಜೋಪಕರಣದ್ರವ್ಯಗಳನ್ನೂ ತಂದು ಒದಗಿಸುವಳಾಗು” ಎಂದು ನುಡಿದು, ರಾಯನಿದ್ದೆಡೆಗೆಯ್ತಂದು ಷೋಡಶೋಪಚಾರಗಳಿಂದ ರಾಯನ ಪಾದಪೂಜೆಯಂ ಮಾಡುತ್ತಿರಲು;

ಇತ್ತಲು, ಕೆಲಬರು ಸಖಿಯರುಗಳು ದೇವಿಯ ಕಣ್ಣುಗಳಂ ತಪ್ಪಿಸಿ ರಾಯನು ಕಾಣುವಂತೆ ಚಿನ್ನದ ಚೀರ್ಕೊಳವೆಗಳಲ್ಲಿ ಸನ್ನುತವಾದ ಪನ್ನೀರಂ ತುಂಬಿ ವಾರಿಗೆಯ ನಾರಿಯರ ತೋರುಮೊಲೆಗಳಂ ಗುರಿಗೆಯ್ದು ಚಿಮ್ಮುತ್ತ ಸುಮ್ಮಾನದಿಂ ಕ್ರೀಡಿಸುತ್ತಿರುವರು; ಮತ್ತೆ ಕೆಲಂಬರು ಚಿತ್ತಜನಿಂ ಮತ್ತವಾಗಿ ಮುಖಕಮಲಕ್ಕೆ ಮೊರೆದೆರಗುವ ಮರಿದುಂಬಿಗಳ ಗಾಳಿಗೆ ಕಣ್ಣುಗಳಂ ಮುಚ್ಚಿ ತೋರಮೊಲೆಗಳಂ ಪೊರಲಾರದೆ ಗಡಗಡನೆ ನಡುಗುತ್ತ, ಕರಯುಗ್ಮಗಳಂ ಕೊಡಹುತ್ತ, ನಿಂತಲ್ಲಿ ನಿಲ್ಲದೆ

ತಲ್ಲಣವಂ ಗೆಯ್ಯುತ್ತ ನಿಂತಿರುವರು ; ಇನ್ನು ಕೆಲಬರಾದ ಚಂಚಲಾಕ್ಷಿಯರು ದೇವಿಯು ಭೂಮೀಶ್ವರನಾದ ನಮ್ಮ ಸ್ವಾಮಿಯನ್ನು ನೇಮದಿಂ ಪೂಜಿಸುವ ವೇಳೆಯಲ್ಲಿ ತಾಳಮೇಳ ಮೊದಲಾದುವಂ ಮೇಳೈಸಿ ಕೇಳುವವರ ಕಿವಿ ಹಿತವಾಗುವಂತೆ ಗಾನವಂ ಗೆಯ್ಯುತ್ತ ನಯವಾಗಿ ನಾಟ್ಯವಂ ವಿರಚಿಸಬೇಕೆಂದು ತೊರೆಯಿಂದೊಡಗೂಡಿ ವೀಣಾವೇಣು ಮುಖವೀಣೆ ಮೊದಲಾದ ವಾದ್ಯಗಳಂ ಸ್ವರಂಗೆಯ್ದು, ನಾಟ್ಯವಂ ಮಾಡಲುಜ್ಜುಗಿಸುತ್ತಿರಲು ;

ಈ ಕೋಲಾಹಲಧ್ವನಿಯನ್ನೂ ಸಖಿಯರುಗಳ ಸಂಭ್ರಮದ ಗಾನಸ್ವರವನ್ನೂ ಸಹ ಕೇಳಿದ ಸಾಗರಿಕೆಯು- " ಪುಷ್ಪಾಪಚಯದಲ್ಲಿ ತಗಲಿದ ಚಿತ್ತವೃತ್ತಿಯುಳ್ಳ ನಾನು ಮನ್ಮಥಮಹೋತ್ಸವವಂ ನೋಡುವುದ ಮರೆತೆನು. ಆದರೂ ಸಿಂದೂರದ ವೃಕ್ಷದ ಮರೆಯಂ ಸೇರಿ ನೋಡುವೆನು " ಎಂದು ಬಂದು ಅದೇರೀತಿಯಲ್ಲಿ ಮುಂದುಗಡೆಯಂ ನೋಡೆ, ದೇವಿಯಿಂ ಪೂಜಿಸಲ್ಪಟ್ಟ ಸುಂದರಾಂಗನಾದ ರಾಯನಂ ಕಂಡು ಅವನಂ ಪ್ರತ್ಯಕ್ಷನಾದ ಮನ್ಮಥನೆಂದು ತಿಳಿದು,—" ನಮ್ಮ ಅರಮನೆಯಲ್ಲಿ ಚಿತ್ರದಲ್ಲಿ ಬರೆದ ಮನ್ಮಥನಂ ಪೂಜಿಸುತ್ತಲಿದ್ದೆನು. ಇಲ್ಲಿ ಎನ್ನ ಪುಣ್ಯದಿಂದ ಪ್ರತ್ಯಕ್ಷನಾದ ಮನ್ಮಥನ ಸಂದರ್ಶನವು ಎನಗೆ ಪ್ರಾಪ್ತವಾದುದು. ಲೋಕದಲ್ಲಿ ಮನ್ಮಥನು ಅನಂಗನೆಂಬುವ ವಿದ್ವಾಂಸರ ವಾಕ್ಯಗಳೆಲ್ಲವೂ ಅಪದ್ಧಗಳಾದುವು. ನಾನೂ ಇವನಂ ಪೂಜಿಸುವೆನು " ಎಂದು ತಾನು ಕೊಯ್ದಿದ್ದ ಪುಷ್ಪಗಳಂ ಹಸ್ತಗಳಲ್ಲಿ ತುಂಬಿ, "ಎಲೈ ಮಂಗಳಾಂಗನಾದ ಮನ್ಮಥನೇ, ಎನ್ನ ಮನೋರಥವಂ ಪೂರೈಸುವನಾಗು. ಎಲೆ ಕಮಲಬಾಣನೇ, ಎನ್ನ ಕಾಮಿತವಂ ಕೈಗೂಡಿಸುವನಾಗು. ಯಾವ ನಿನ್ನ ಪುಷ್ಪಬಾಣಗಳು ಸಮಾಧಿಸ್ಥರಾಗಿರುವ ವ್ಯಾಸವಿಶ್ವಾಮಿತ್ರಪರಾಶರ ಮೊದಲಾದ ಋಷಿಗಳನ್ನು ವರ್ಣಾಶ್ರಮಧರ್ಮಗಳಿಂ ಕೆಡಿಸಿ ಕಾಂತೆಯರಿಗೆ ಕಾಯವಂ ತೊಡಿಸಿ ಲೋಕಾಪವಾದಕೆ ಗುರಿಯಾಗಿ ಮಾಡಿರುವುವೋ ; ಮತ್ತು ರಾವಣಕೀಚಕ ಮೊದಲಾದುವರನ್ನು ಕಂದಿಕುಂದಿಸಿ ಹಿಂದುಮುಂದನ್ನು ತಿಳಿಯಲೀಯದೆ ಮಂದರಂಗೆಯ್ದು ಯಮನ ಪಟ್ಟಣದಲ್ಲಿ ಸಂಸಾರಿಗಳನ್ನಾಗಿ ಮಾಡಿರುವುವೋ: ಅಂಥ ನಿನಗೋಸ್ಕರವಾಗಿ ನಮುಸ್ಕಾರವಂ ಗೆಯ್ಯುವೆನು " ಎಂದು ಕರದಲ್ಲಿದ್ದ ಪುಷ್ಪಗಳಂ ಪುರೋಭಾಗಕ್ಕೆ ಚೆಲ್ಲಿ ನಮುಸ್ಕಾರವಂ ಗೆಯ್ದು,—" ಎಲೈ, ಸರ್ವವ್ಯಾಪಿಯಾದ ಮನ್ಮಥನೇ, ಈಗ ಎನ್ನ ಮನದಲ್ಲಿ ಪುಟ್ಟಿರುವ ಅಭಿಲಾಷೆಯಂ ಸಂಪೂರ್ಣವಂ ಗೆಯ್ದರೆ ವಸಂತಕಾಲಗಳಲ್ಲಿ ವ್ರತವಂ ಧರಿಸಿ ನಿನ್ನ ಚರಣಗಳಂ ಸಹಸ್ರ ನಾಮಗಳಿಂದ ಪೂಜಿಸಿ ನಿರಾಹಾರಳಾಗಿ ಇರುವೆನು " ಎಂದು ಪ್ರಾರ್ಥಿಸುತ್ತ, ಮಂಗಳಾಂಗನಾದ ರಾಯನನ್ನು ರಪ್ಪೆಯನ್ನಿಕ್ಕದೆ ನೋಡುತ್ತ ನಿಂದಿರಲು ;

ಕಾಂಚನಮಾಲೆಯು—" ಅಯ್ಯಾ, ವಿದೂಷಕನೇ, ಈಗ ಮನ್ಮಥನ ಪೂಜೆಯು ಸಂಪೂರ್ಣವಾಗಿ ಆದುದು. ದಕ್ಷಿಣೆಸಹಿತವಾದ ಬಾಗಿನವಂ ತೆಗೆದುಕೊಳ್ಳು

ವನಾಗು ” ಎಂದು ನುಡಿಯಲು ; ವಿದೂಷಕನು ಸಂತೋಷಭರಿತನಾಗಿ ದೇವಿಯು ಪುರೋಭಾಗವಂ ಸೇರಲು, ದೇವಿಯು,—“ ಎಲೈ ವಸಂತಕನೇ, ನಿನಗೆ ತೆಗೆದಿರಿಸಿರುವ ಪುಷ್ಪಮಾಲೆ ಪರಿಮಳ ಗಂಧ ತಾಂಬೂಲ ದಿವ್ಯವಸ್ತ್ರ ಮೊದಲಾದ ವಸ್ತುಗಳಿಂದ ಪ್ರಶಸ್ತವಾಗಿರುವ ಬಾಗಿನವಂ ತೆಗೆದುಕೊಳ್ಳುವುದು ” ಎಂದು ಕಮಲದಂತೆ ಕಾಂತಿಯುಳ್ಳ ತನ್ನ ಕರಗಳಿಂದ ಬಾಗಿನವಂ ಎತ್ತಿ ವಿದೂಷಕನಿಗೆ ಕೊಡಲು; ವಿದೂಷಕನು ಬಹಳವಾಗಿ ಸಂತುಷ್ಟನಾಗಿ,—“ ಎಲೌ ದೇವಿಯೇ, ನೀನು ನಿನ್ನ ಪತಿಯಾದ ಮಹಾರಾಜೇಂದ್ರನ ಪ್ರೀತಿಗೆ ಪಾತ್ರಳಾಗಿ ಅಖಂಡ ಭೂಮಂಡಲಕೆ ಅಧಿಪತಿಯಾಗುವಂಥ ಕುಮಾರನಂ ಪಡೆಯುವಳಾಗು ” ಎಂದು ಕೂಗಿ ನುಡಿಯಲು ;

ಸಾಗರಿಕೆಯು ಆ ವಿದೂಷಕನ ವಾಕ್ಯವಂ ಕೇಳಿ, “ ಇವನು ಪ್ರತ್ಯಕ್ಷನಾದ ಮನ್ಮಥನೆಂದು ತಿಳಿದೆನು. ಒತ್ತಿನಲ್ಲಿರುವ ಈ ಬ್ರಾಹ್ಮಣನ ವಾಕ್ಯವಂ ಕೇಳುವಲ್ಲಿ ಇವನೇ ವತ್ಸರಾಜೇಂದ್ರನಾಗಿರುವನು. ಮೊದಲು ಹರನ ಉರಿಗಣ್ಣಿಂದುರಿದು ಪೋದ ಸ್ಮರನು ಮರಳಿ ಅಂಗದಿಂ ಕೂಡಿ ಬರುವುದು ಆಶ್ಚರ್ಯವೇ ಸರಿ. ಆದರೆ ಆ ಮನ್ಮಥನು ಈ ವತ್ಸರಾಜನಂತೆ ಸುಂದರಾಂಗನಾಗಿರನು. ಎನ್ನ ಪೂರ್ವ ಪುಣ್ಯದಿಂದೊಂದುಬಾರಿ ಈ ರಾಜೇಂದ್ರನೊಡನೆ ಅಂಗಸುಖವು ದೊರಕೊಂಡಲ್ಲಿ ನಾನು ಇದುವರೆಗೂ ಪೊಂದಿದ ಶ್ರಮಗಳೆಲ್ಲವೂ ಸುಖರೂಪಗಳಾಗಿ ಪರಿಣಮಿಸುತ್ತಿರುವುವು” ಎಂದು ಯೋಚಿಸುತ್ತಿರಲು ;

ಅಷ್ಟರಲ್ಲೇ “ ತನ್ನ ಕಿರಣಂಗಳಿಂದ ಸಮಸ್ತ ತೇಜಸ್ಸನ್ನೂ ಅಡಗಿಸುತ್ತಿರುವ ಸೂರ್ಯನು ಅಪಾರವಾದ ಪಶ್ಚಿಮ ಸಮುದ್ರದ ತೀರಮಂ ಸೇರುತ್ತಿರಲು; ಸಮಸ್ತವಾದ ರಾಜೋತ್ತಮರೂ ಸಾಯಂಕಾಲದ ಸಂದರ್ಶನಕ್ಕೋಸುಗ ಸಭಾಸ್ಥಾನಮಂ ಪೊಂದಿದವರಾಗಿ ತಮ್ಮ ಕಾಂತಿಗಳನ್ನು ಕಂದಿಸುತ್ತ ಚಂದ್ರನ ಚಂದ್ರಿಕೆಯಂತೆ ನಯನಾನಂದವನ್ನುಂಟುಮಾಡುತ್ತಿರುವ ನಿನ್ನ ಪಾದದರ್ಶನವನ್ನು ಅಪೇಕ್ಷಿಸುತ್ತಲಿರುವರು ” ಎಂದು ವೈತಾಳಿಕರು ಪೊಗಳುವ ಸಂಧ್ಯಾಕಾಲ ಸೂಚಕವಾದ ಶಬ್ದಮಂ ಕೇಳಿದ ಸಾಗರಿಕೆಯು—“ ನಿಶ್ಚಯವಾಗಿ ಇವನೇ ವತ್ಸರಾಜನಾಗಿರುವನು. ಇಂಥ ಮನೋಹರವಾದ ಅಂಗವುಳ್ಳವನಾಗುದರಿಂದಲೇ ಎನ್ನನ್ನು ಯಾರೂ ತಿಳಿಯದಂತೆ ಎನ್ನ ತಂದೆಯು ಹಡಗನ್ನು ಹತ್ತಿಸಿ ಕಳುಹಿಸಿದನು. ಈಗ ನಾನು ಪರಸೇವೆಗೆ ಪಾತ್ರಳಾಗಿರುವಲ್ಲಿ ಈ ರಾಯನೊಡನೆ ಹೇಗೆತಾನೇ ಸಂಗಮವಂ ಪೊಂದುವುದು ? ಮುಂದೆ ದೈವವು ಏನುಮಾಡುವುದೋ ತಿಳಿಯದು. ಇಲ್ಲಿ ನಿಂತಿರುವ ಎನ್ನನ್ನು ಯಾರಾದರೂ ಕಾಣುವುದಕ್ಕೆ ಮುಂಚಿತವಾಗಿ ಶಕುಂತಶಾಲೆಯಂ ಪೊಂದುವುದು ಯುಕ್ತವಾಗಿರುವುದು ” ಎಂದು ಯೋಚಿಸುತ್ತಿರಲು ;

ರಾಯನು—“ ಆಯ್ಯಾ, ವಿದೂಷಕನೇ, ಈ ಮನ್ಮಥೋತ್ಸವದಲ್ಲಿ ಮಗ್ನರಾದ

ನಮಗೆ ಸಂಧ್ಯಾಕಾಲದ ಸಮಯವಾದುದು ತಿಳಿಯಲಿಲ್ಲ " ಎಂದು, ಕುಳಿತಿದ್ದ ರತ್ನಪೀಠದಿಂದೆದ್ದು, ಪೂರ್ವದಿಕ್ಕನ್ನು ನೋಡಿ,—" ಸ್ವಲ್ಪ ಬಿಳುಪುದೋರುವ ಈ ಪೂರ್ವದಿಕ್ಕು, ವಿರಹದಿಂದ ಬಿಳ್ಪುಗೂಡಿದ ಮುಖವುಳ್ಳ ಕಾಂತೆಯು ಹೃದಯಸ್ಥಿತನಾದ ನಾಯಕನನ್ನು ತೋರಿಸುವಂತೆ, ತನ್ನಲ್ಲಿ ಅಡಗಿರುವ ಚಂದ್ರನ ಆವಿರ್ಭಾವವಂ ಹೊರಮೋರಿಸುತ್ತಲಿರುವುದು " ಎಂದು ನುಡಿಯಲು ;

ದೇವಿಯು ರಾಯನು ಎದ್ದುದಂ ನೋಡಿ—ಇನ್ನು ಅಂತಃಪುರಕ್ಕೆ ತೆರಳುವೆನೆಂದು ರಾಯನ ಚರಣಗಳಿಗೆ ನಮಸ್ಕರಿಸಿ ನಿಂದಿರಲು ;

ಸಾಗರಿಕೆಯು ಅಂತಃಪುರಕ್ಕೆ ಪೋಗಲೋಸುಗ ರಾಯನ ಚರಣಗಳಿಗೆ ವಂದಿಸಿ ನಿಂದಿರುವ ದೇವಿಯುಂ ಕಂಡು ಭಯಭ್ರಾಂತಳಾಗಿ, " ಇನ್ನು ನಾನು ಮಾಡತಕ್ಕುದೇನು ? ದೇವಿಯು ಅಂತಃಪುರಕ್ಕೆ ಪೋಗಲೋಸುಗವಾಗಿ ಎದ್ದು ನಿಂದಿರುವಳು. ನಾನು ಮುಂಚಿತವಾಗಿಯೇ ಪೋಗಬೇಕಾಗಿರುವುದು. ಈ ರಾಯನ ಸರ್ವಾಂಗಮಂ ನೋಡಿಯಾದರೂ ಸಂತೋಷವಂ ಪೊಂದುವೆನೆಂದರೆ, ಅದಕ್ಕೂ ಪುಣ್ಯಮಂ ಸಂಪಾದಿಸಲಿಲ್ಲ" ಎಂದು ನಿಟ್ಟುಸಿರಂ ಬಿಟ್ಟು, ಮಟ್ಟುಮೀರಿದ ಸಂತಾಪವಂ ಪೊಂದತ್ತಿರಲು ;

ರಾಯನು ದೇವಿಯುಂ ಕಂಡು,—" ಎಲೆ ಕಾಂತೆಯೇ, ದಿಕ್ಕುಗಳಿಗೆ ಹೆಚ್ಚಾದ ಕಾಂತಿಯನ್ನು ಬೀರುತ್ತಿಗುವ ನಿನ್ನ ಮುಖಚಂದ್ರನ ಕಾಂತಿಯುಂ ಕಂಡು ಕನ್ನೈದಿಲೆಗಳು ಕಳೆದೋರುತ್ತಲಿರುವುವು. ಈ ಪೆಣ್ದುಂಬಿಗಳು ನಯವಾಗಿ ಪಾಡುತ್ತಲಿರುವ ನಿನ್ನ ಊಳಿಗದ ಪೆಣ್ಣುಗಳ ಗಾನಸ್ವರದ ಅಂದವಂ ಕೇಳಿ ನಾಚಿಕೆಯಿಂದಲೋ ಎಂಬಂತೆ ಅಲ್ಲಲ್ಲಿರುವ ಕಮಲಕಲ್ಹಾರ ಮೊದಲಾದ ಪುಷ್ಪಗಳಲ್ಲಿ ಅಡಗುತ್ತಲಿರುವುವು. ನಾನು ಸಭಾಸ್ಥಾನಮಂ ಕುರಿತು ಪೋಗುವೆನು " ಎಂದು ನುಡಿದು, ವಿದೂಷಕನ ಕೈಲಾಗವಂ ಕೊಂಡು ಪೊರಮಟ್ಟು ಪೋಗಲು ;

ದೇವಿಯು ಸಮಸ್ತರಾದ ಊಳಿಗದ ಪೆಣ್ಣುಗಳಂ ಕರೆದುಕೊಂಡು ಅಂತಃಪುರಮಂ ಪೊಂದಲು ;

ಸಾಗರಿಕೆಯು ಸಾಲುಗೊಂಡಿರುವ ಮರಗಳ ಮರೆಯಂ ಬಿಟ್ಟು ಮುಂದಕ್ಕೆ ಅಡಿಯಿಟ್ಟು ಬಂದು ರಾಯನಂ ಕಾಣದೆ ಅಡಿಗಡಿಗೂ ಸಂತಾಪವಂ ಪೊಂದಿ, " ಎನ್ನ ಹೃದಯದಲ್ಲಿ ಪುಟ್ಟಿಕೊಂಡು ಉರಿಯೇರಿ ಬರುವ ಮಾರನ ಸಂತಾಪವಂ ಯಾರೊಡನೆ ಪೇಳಲಿ? ಯಾರು ರಾಯನೊಡನೆ ಕೂಡಿಸಿ ಎನ್ನಂ ಸಲಹುತ್ತಿರುವರು ? ಮರಳಿ ಈ ರಾಜೇಂದ್ರನಾದ ವತ್ಸರಾಜನಂ ನೋಡುವುದಕ್ಕೆ ಸಮಯವು ಎಲ್ಲಿ ದೊರಕುವುದು ? ಮೊದಲೇ ವಾಸವದತ್ತಾದೇವಿಯು ಎನ್ನಲ್ಲಿ ಏನೋ ಒಂದು ಸಂದೇಹವನ್ನು ಪೊಂದುತ್ತಲಿರುವಳು. ಸಮಸ್ತ ಸಖಿಯರಿಗೂ ಗೊತ್ತುಗಾತಿಯಾಗಿ ದೇವಿಯ ಕಟಾಕ್ಷಕ್ಕೆ ಪಾತ್ರಳಾಗಿ ಇರುವ ಕಾಂಚನಮಾಲೆಯು ಎನ್ನೊಡನೆ ಮರ್ಮ

ಭೇದಕವಾದಂಥ ಮಾತುಗಳನ್ನೇ ಆಡುತ್ತಲಿರುವಳು. ಈಗ ರಾಯನಲ್ಲಿ ಅನುರಾಗ ಪುಟ್ಟಿರುವ ಸಂಗತಿಯನ್ನು ದೇವಿಯಾಗಲಿ, ಕಾಂಚನಮಾಲೆಯಾಗಲಿ, ತಿಳಿದಲ್ಲಿ ದೇಹಾಂತವಾದ ಶಿಕ್ಷೆಯನ್ನು ಮಾಡಿಸದೆ ಬಿಡರು. ಯಾವುದಕ್ಕೂ ಸ್ವಾತಂತ್ರ್ಯವಿಲ್ಲದ ಸ್ತ್ರೀಯರಿಗೂ, ದರಿದ್ರರಾದ ಪುರುಷರಿಗೂ ಬಂದ ಯೌವನವು ಕೃಪಣನ ದ್ರವ್ಯ ದಂತೆ ವ್ಯರ್ಥವಾಗುವುದು. ಎನ್ನನ್ನು ನಿರ್ಮಾಣವಂ ಗೈದ ಬ್ರಹ್ಮನಿಗೆ ಆಯಾಸ ಮಾತ್ರವೇ ಫಲವಲ್ಲದೆ ಇನ್ನೊಂದು ಫಲವನ್ನೂ ಕಾಣೆನು" ಎಂದು ನುಡಿದು ತನ್ನ ಮನಸ್ಸನ್ನು ಕುರಿತು—"ಎಲೆ, ಮನವೇ! ಹಾಸವಂ ಗೆಯ್ಯದೆ ಇದ್ದರೂ ಕಮಲದಳಗಳಂತೆ ಕಾಂತಿಯುಳ್ಳ ಕರ್ಣಾಂತವಂ ಸೇರಿರುವ ಕಣ್ಣುಗಳ ಕೊನೆಗ ಳಿಂದ ಕೊನಬುದೋರುವಂತೆ ಕ್ಷಣಮಾತ್ರವಾದರೂ ಎನ್ನ ಮುಖವಂ ನೋಡದೆ ಇದ್ದರೂ, ತನಗೆ ಆಪ್ತಳಾದ ಸಖಿಯೊಡನೆ ಮನೋಹರವಾಗಿ ಸವಿಯಾದ ಸರಸೋ ಕ್ತಿಯನ್ನಾಡದೆ ಇದ್ದರೂ, ಇಲ್ಲಿ ಈಗ ಕ್ಷಣಕಾಲವು ರಾಯನನ್ನು ನೋಡಿದ ಮಾತ್ರ ದಿಂದಲೇ ಬಾಲ್ಯದಿಂದ ಸಂಗಡಲೇ ವೃದ್ಧಿಯಂ ಪೊಂದಿದ ಎನ್ನಂ ಬಿಟ್ಟು ಆ ರಾಯನ ನ್ನೇ ಸೇರುವುದು ನಿನಗೆ ನ್ಯಾಯವೆ ಪೇಳು? ದೊರೆಗಳಾದವರು ಐಶ್ವರ್ಯದಿಂದ ಮತ್ತ ರಾಗಿ ಬಹುಜನ ಸ್ತ್ರೀಯರಿಗೆ ವಲ್ಲಭರಾಗಿರುವರು ಎಂಬ ಪರಿಯನ್ನೂ ಪರೀಕ್ಷಿಸದೆ ಬಯಲ ಭ್ರಾಂತಿಯಂ ಪೊಂದಿ ಬಳಲುತ್ತಿರುವುದು ನ್ಯಾಯವೆ ಪೇಳು?" ಎಂದು ನುಡಿದು, ತಂಗಾಳಿಯ ಸೋಂಕಿನಿಂದಲೂ, ಕರ್ಣಗಳಿಗೆ ಶೂಲವನ್ನಿಟ್ಟಂತೆ ಅಧಿಕ ವ್ಯಥೆಯನ್ನು ಪೊಂದಿಸುತ್ತಿರುವ ಶುಕಪಿಕ ಮಯೂರ ಮೊದಲಾದ ಪಕ್ಷಿಗಳ ಕಲಕಲ ಧ್ವನಿಯನ್ನು ಕೇಳಿ, ಕ್ಷಣಕೊಂದು ಪರಿಯಾಗಿ ಬರುವ ವೃದ್ಧಿಯಂ ಸಹಿಸಲಾರದೆ, ಉನ್ಮತ್ತಾವಸ್ಥೆಯಂ ಪೊಂದಿ, ಸುತ್ತುಗೊಂಡಿರುವ ಮಲ್ಲಿಗೆಯ ಬಳ್ಳಿಗಳಿಂದ ಮನೋ ಹರವಾದ ಮಾವಿನ ಮರದ ಸಮೀಪವಂ ಸೇರಿ, "ಎಲೆ ಮಾಕಂದವೃಕ್ಷವೇ! ಮನವಂ ಮಥಿಸುತ್ತಿರುವ ಮನ್ಮಥನ ಬಾಧೆಗೆ ಈಡಾಗಿರುವ ಎನ್ನನ್ನು ಪ್ರಾಣಕಾಂತ ನಾದ ವತ್ಸರಾಜನೊಡನೆ ಕೂಡಿಸದೆ ನೀನು ಮಾತ್ರ ಈ ಲತೆಯೆಂಬ ಕಾಂತೆಯನ್ನು ಆಲಿಂಗಿಸಿ ಅಧಿಕಸಂತೋಷವನ್ನು ಪೊಂದುವುದು ನ್ಯಾಯವೇ ಪೇಳು? ಎಲೆ ಸುರ ಹೊನ್ನೆಯೇ, ಈ ಕನ್ನೆಯಾ ಕಾಯಜನ ಬಾಣದಿಂದ ಕಂದುವಳೆಂಬ ಸಂದೇಹವಂ ಒಂದು ಬಾರಿಯೂ ಯೋಚಿಸದೆ ಪುಷ್ಪಗಳೆಂಬ ವ್ಯಾಜದಿಂದ ಮಂದಹಾಸವಂ ಗೆಯ್ಯುವುದು ಅಂದವೇ ಪೇಳು? ಎಲೆ ಲತೆಗಳಿರಾ, ನೀವು ನಿಮಗೆ ಒಂದೊಂದು ಬೇಕಾದ ಪುಷ್ಪಗಳನ್ನು ಅವಲಂಬಿಸಿ ವೃದ್ಧಿಯಂ ಪೊಂದಿ ನಿರಾಲಂಬಳಾದ ಎನ್ನನ್ನು ನೋಡಿ ತಲೆಗಳಂ ತೂಗುತ್ತ ಭ್ರಮರಧ್ವನಿಗಳೆಂಬ ಮಾತುಗಳಿಂದ ಹಾಸ್ಯವಂ ಗೆಯ್ಯುದು ಯುಕ್ತವೆ, ಪೇಳಿ? ಎಲೆ ಶುಕಪಿಕಮಯೂರಗಳಿರಾ! ಎನ್ನ ವಾಕ್ಯ ದಲ್ಲಿಯೂ ಸ್ವರದಲ್ಲಿಯೂ ಕೇಶಕಲಾಪದಲ್ಲಿಯೂ ದ್ವೇಷವನ್ನಾಂತು ನಿಮ್ಮ ನಿಮ್ಮ ಸ್ವರಂಗಳೆಂಬ ತಪ್ತನಾರಾಚಗಳನ್ನು ಎನ್ನ ಕಿವಿಗೆ ಪುಗಿಸಿ ವ್ಯಥೆಯನ್ನುಂಟುಮಾಡುವ

ಚಮತ್ಕಾರವನ್ನು ಯಾವ ಸ್ಥಳದಲ್ಲಿ ಅಭ್ಯಾಸವಂ ಗೆಯ್ದಿರಿ, ಪೇಳಿ? ಎಲೆ ಹಂಸಪಕ್ಷಿಯೇ, ದಿಕ್ಕಿಲ್ಲದ ಈ ಬಾಲೆಯನ್ನು ಹಿಂಸೆಯಂ ಗೆಯ್ಯಲೋಸುಗ ಈ ರೀತಿಯಾಗಿ ನಿರ್ಮಾಣವಂ ಗೆಯ್ದಿರುವ ಚತುರ್ಮುಖಬ್ರಹ್ಮನಿಗೆ ನೀತಿಯಂ ಬೋಧಿಸಿ ಎನಗೆ ಹಿತವಂ ಪುಟ್ಟಿಸದೆ ಜಗ್ಗುಗೂಡಿದ ನಡೆಯಂ ವಹಿಸಿ ಕಮಲದ ಮುಗ್ಗುಲಂ ಸೇರಿ ಹಿಗ್ಗುತ್ತ, ತಲೆಯಂ ತಗ್ಗಿಸಿ ಪಕ್ಷಪಾತವನ್ನು ವಿರಚಿಸುವುದು ನೀತಿಯೇ ಪೇಳು?" ಎಂದು, ಮಂದಮಾರುತದ ಸೋಂಕಿನಿಂದ ಕಂದಿ ಕುಂದಿ, "ಎಲೈ ಮಾರುತನೇ ನಿರಪರಾಧಿಯಾಗಿ ಮಾತೃಗಳಿಂದ ವಿಯುಕ್ತಳಾಗಿ ಪರಸೇವೆಯಲ್ಲಿ ಕೊರಗುತ್ತಲಿರುವ ಈ ತರುಣಿಯಂ ಕಾರಣವಿಲ್ಲದೆ ದಾರುಣನಾಗಿ ಪುಷ್ಪರಸವೆಂಬ ವಿಷವಂ ಚೆಲ್ಲುತ್ತ ಪರಾಗವೆಂಬ ವಿಷಚೂರ್ಣಗಳಂ ಪ್ರಯೋಗಿಸುತ್ತ ಬಾಧಿಸುತ್ತಲಿರುವ ನಿನ್ನನ್ನು ದೈವವು ದರ್ಪಶಾಲಿಯಾದ ಸರ್ಪಗಳ ಮುಖವನ್ನು ಪೊಂದಿಸುವುದು ಯುಕ್ತವಾಗಿಯೇ ಇರುವುದು. ಲೋಕದಲ್ಲಿ ಪರಹಿಂಸೆಯನ್ನುಂಟುಮಾಡುವನು ಕ್ಷಯವಂ ಪೊಂದುವನೆಂಬುವುದು ನ್ಯಾಯವಾಗಿರುವುದು. ನಮ್ಮಂಥ ವಿರಹ ಸ್ತ್ರೀಯರುಗಳನ್ನು ಬಾಧಿಸುತ್ತಲಿದ್ದುದರಿಂದಲೇ ದಿನಕೊಂದು ಬಗೆಯಾಗಿ ಕ್ಷಯಿಸುತ್ತಲಿದ್ದರೂ ಕ್ರೂರನಾದ ಯಮನ ಶಾಸನಗಳೊಡಗೂಡಿ ಮಲಯಪರ್ವತದಲ್ಲಿ ಪುಟ್ಟಿದ ಗಂಧದ ವೃಕ್ಷಗಳನ್ನು ಪೊಂದಿರುವ ಪಾವುಗಳ ಮುಖವಂ ಪೊಕ್ಕು, ಅಲ್ಲಿರುವ ವಿಷವನ್ನು ತಂದು ಚೆಲ್ಲದಿರು." ಎಂದು ಕೈಗಳಂ ಮುಗಿಯುತ್ತ ತಲ್ಲಣವಂ ಗೆಯ್ಯುತ್ತಲಿದ್ದಳು.

ಎಂಬಲ್ಲಿಗೆ
ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಒಂಬತ್ತನೆಯ ಗುಚ್ಛಂ ಸಂಪೂರ್ಣಂ.

## ಹತ್ತನೆಯ ಗುಚ್ಛಂ.

ಅನಂತರದಲ್ಲಿ ನಾಗರಿಕೆಯು ಮನ್ಮಥನ ಬಾಧೆಯಂ ಸಹಿಸಲಾರದೆ, ಉನ್ಮತ್ತಾವಸ್ಥೆಯಂ ತಾಳಿ, ಮನ ಬಂದಂತೆ ವೃಕ್ಷ ಲತೆ ಮೊದಲಾದ ವಸ್ತುಗಳಂ ಕುರಿತು ಮಾತುಗಳನ್ನಾಡುತ್ತಿದ್ದಳು:

ಅಷ್ಟರಲ್ಲೀ ಪಶ್ಚಿಮದಿಕ್ಕಾಂತೆಗೆ ಸಾಗರಿಕೆಯು ವಿರಹವ್ಯಥೆಯಂ ವಿವರಿಸಲು ಪೋಗುವನೋ ಎಂಬಂತೆ, ಅಸ್ತಪರ್ವತದಲ್ಲಿ ಬೆಳೆದ ತಾಳಫಲವು ವಾಯುವಿನ ಸಂಘರ್ಷಣೆಯಿಂದ ಕಿತ್ತು ಪಶ್ಚಿಮ ಸಮುದ್ರದಲ್ಲಿ ಬೀಳುವುದೋ ಎಂಬಂತೆ, ಸೂರ್ಯಕಿರಣದ ಸೆಕೆಯಿಂದ ಬೆಮರಿದ ಗಗನಲಕ್ಷ್ಮಿಯು ಫಾಲದಿಂದ ಜಾರಿ ಬೀಳುವ ಮಾಣಿಕದ ಬೊಟ್ಟೋ ಎಂಬಂತೆ, ಚಮರಗಿರಿಯ ತಪ್ಪಲಿನಲ್ಲೊಪ್ಪುವ ವ್ಯಾಧರುಗಳ ಬಾಣದಿಂ ನಿಕೃತ್ತಮಾಗಿ ರಕ್ತಸಿಕ್ತವಾದ ಗಜದ ಕುಂಭಸ್ಥಳವೋ ಎಂಬಂತೆ, ದಿವಸವೆಂಬ ವಿಟ ಪುರುಷನು ಪಶ್ಚಿಮದಿಕ್ಕಾಂತೆಯ ಅಲಂಕಾರಕೋಸುಗ ಕಲಸಿ ಸಮುದ್ರತೀರದಲ್ಲಿ ಮಡಗಿರುವ ಕುಂಕುಮದ ಉಂಡೆಯೋ ಎಂಬಂತೆ, ಪಶ್ಚಿಮದಿಕ್ಕಿನ ಬೆಟ್ಟದ ಬೇಗೆಯಿಂದ ಸಿಡಿಗುಬೀಳುವ ದುಂಡಾಗಿರುವ ಕೆಂಡವೋ ಎಂಬಂತೆ, ಆಕಾಶವೆಂಬ ಕುಲಾಲನು ವರುಣನ ಕರಣಿಗೆ ವಿಚಿತ್ರತರವಾದ ಘಟಗಳಂ ವಿರಚಿಸಲೋಸುಗ ತೆಗೆದುಕೊಂಡುಪೋದ ಕುರುವಿಂದದ ಚಕ್ರವೋ ಎಂಬಂತೆ, ರಾಜಪ್ರೀತಿಕರವಾದ ಕನ್ನೈದಿಲೆಗಳಂ ಕಂದಿಸುತ್ತಲಿದ್ದುದರಿಂದಲೂ ಸಮಸ್ತ ಪ್ರಾಣಿಗಳಿಗೂ ಪುಟ್ಟಿದ ಪಾತಕವನ್ನು ಸಮುದ್ರಸ್ನಾನದಿಂದ ಪೋಗಲಾಡಿಸುವುದಕ್ಕೋಸುಗ ಪೋಗುವನೋ ಎಂಬಂತೆ, ಸೂರ್ಯನು ಪಶ್ಚಿಮಗಿರಿಯಿಂದ ಮರೆಯಾಗಿ ಸಮುದ್ರವಂ ಪ್ರವೇಶಿಸಲು; ನಿಜಪತಿಯು ಪೋದಮೇಲೆ ಹೃದಯದಲ್ಲಿದ್ದು ಪ್ರಯೋಜನವೇನೆಂದು ಹೊರಚೆಲ್ಲಿದ ಕಮಲಲತೆಗಳ ಅನುರಾಗವು ಜಗವಂ ವ್ಯಾಪಿಸಿತೋ ಎಂಬಂತೆ, ಕಾಲನೆಂಬ ಶಿಲ್ಪಿಯು ಮನ್ಮಥಮಹಾರಾಜನಿಗೆ ಪೊಯ್ದು ಕೆಂಪು ಸುರಿಪುಟದ ಗೂಡಾರವೋ ಎಂಬಂತೆ, ಪಶ್ಚಿಮದಿಕ್ಕಾಂತೆಯಲ್ಲಿ ಅನುರಕ್ತನಾಗಿ ಸೂರ್ಯನೆಂಬ ಪರಮಹಂಸನು ಉಟ್ಟಿದ್ದು ಬಿಟ್ಟುಪೋದ ಕಾವಿಯ ಬಟ್ಟೆಯು ಆಕಾಶದಲ್ಲಿ ವ್ಯಾಪಿಸಿತೋ ಎಂಬಂತೆ, ಸಂಧ್ಯಾತಾಂಡವ ನಾಟ್ಯವೇಗದಿಂದ ಪುಟನೆಗೆದು ಗಗನವಂ ವ್ಯಾಪಿಸಿದ ಗಂಗೆಯ ಬೈತಲೆಯ ಚಂದ್ರವೋ ಎಂಬಂತೆ, ಸಂಧ್ಯಾಕಾಲವಾದ ಆ ಬಳಿಕ ಅಗ್ನಿಯಂ ಪೊಂದುವುದಕ್ಕೋಸುಗ ಪರಿಬರುವ ಸೂರ್ಯನ ತೇಜಸ್ಸುಗಳೋ ಎಂಬಂತೆ, ಸೂರ್ಯಕಿರಣಗಳಿಂದ ಸುಡಲ್ಪಟ್ಟ ಆಕಾಶಮಂ ತಂಪುಗೆಯ್ಯಲೋಸುಗ ದಿಗಂಗನೆಯರು ಚೀರ್ಕೊಳವೆಗಳಿಂ ಚೆಲ್ಲಿದ ಕುಂಕುಮಜಲವೋ ಎಂಬಂತೆ, ದೇವಾಂಗನೆಯರು ನಾಟ್ಯಪ್ರಿಯನಾದ ಪರಶಿವನ ಶಿರಸ್ಸಿಗೆ ಪುಷ್ಪಾಂಜಲಿಯಂ ಗೆಯ್ದು ಕೆಂಪುದಾಸವಾಳದ ಪುಷ್ಪದ ಪುಂಜವೋ ಎಂಬಂತೆ, ನೀಲನಭವೆಂದು ಪೇಳುವ ಕವಿಗಳ ವಾಕ್ಯವನ್ನೂ ಆಕಾಶವು ಪ್ರತ್ಯಕ್ಷವಲ್ಲವೆಂದು ನುಡಿಯುವ ತಾರ್ಕಿಕರ ಜಾಣ್ಮೆಯನ್ನೂ ಸಹ ಅಬದ್ಧವಂ ಗೆಯ್ಯಲೋಸುಗ ನಿರ್ಮಿಸಿದ ರಜೋಗುಣವೋ ಎಂಬಂತೆ, ಬ್ರಹ್ಮಾಂಡವು ಸೂರ್ಯಕಿರಣಗಳಿಂದ ಕೆಂಪೇರಿದುದೋ ಎಂಬಂತೆ, ವಾಸರಲಕ್ಷ್ಮಿಯು ಉಟ್ಟ ಚಂದ್ರಗಾವಿಯ ಸೀರೆಯೋ ಎಂಬಂತೆ, ಜಗವೆಲ್ಲವಂ ರಕ್ತಮಯವೆನಿಸಿ, ವಜ್ರಗಳಲ್ಲಿ ಕುರುವಿಂದದ ಮಣಿಯ ಶಂಕೆಯಂ ನೆಲೆಗೊಳಿಸಿ, ವಿರಹದಿಂ ಕೊರಗುವ ತರು

ಣಿಯರ ಕಡೆಗಣ್ಣ ಕೆಂಪಿಗೆ ಕೈಲಾಗವಂ ಕೊಟ್ಟು ಸಂಧ್ಯಾರಾಗವೆಲ್ಲವೂ ಜಗವೆಲ್ಲವಂ
ತುಂಬಿಕೊಂಡಿರಲು ; ಆ ಕಾಲದಲ್ಲಿ ಸಕ್ಕರೆಗಿಂತಲೂ ಸವಿಯಾದ ಗುಟುಕುಗಳಂ
ಕೊಕ್ಕಿನಲ್ಲಿ ಕಚ್ಚಿ, ಅಕ್ಕರೆಯಿಂದ ಪಕ್ಕರೆಗಳಂ ಪಸರಿಸಿ, ಗರಿಗಳಂ ಕೆದರಿ, ಮರಗಳಿ
ರುವ ಗೂಡುಗಳಂ ಸೇರುತ್ತಲಿರುವ ಪಲಬಗೆಗಳಾದ ಪಕ್ಷಿಗಳ ಕಲಕಲಧ್ವನಿಗಳು
ದಿಕ್ಕುದಿಕ್ಕುಗಳಂ ವ್ಯಾಪಿಸುತ್ತಿರಲು ; ಜಾರಕಾಂತೆಯರು ಮಾರನಿಗಿಂತಲೂ ಕ್ರೂರ
ನಾಗಿದ್ದ ಸೂರ್ಯನು ನಮಗೆ ಸಂತಾಪವನ್ನುಂಟುಮಾಡಿದುದಕ್ಕೆ ತಕ್ಕ ಫಲವನ್ನುಂಟು
ಮಾಡಿದರೂ, ಈ ಸಂಜೆಗೆಂಪು ಮೊತ್ತವಾಗಿ ಸುತ್ತಿಬರುವ ಕತ್ತಲೆಗೆ ಸ್ಥಳವನ್ನೀ
ಯದೆ ಬೆಳಕುದೋರುತ್ತಲಿರುವುದೆಂದು ಪಶಿಮ ದಿಕ್ಕನ್ನೇ ರೆಪ್ಪೆಯು ಮುಚ್ಚದೆ
ಕರನೆಟ್ಟಗೆಯುಂ ಮುರಿಯುತ್ತ, ಮನದಲ್ಲಿ ಮರುಗುತ್ತಿರಲು ; ಅಲ್ಲಲ್ಲಿ ರಾಜಬೀದಿಗಳು
ಸೋಜಿಗಮಂ ಬೀರುವ ಆಭರಣವಸ್ತ್ರಗಳಂ ಧರಿಸಿ ಸಂಚರಿಸುವ ವಿಟಪುರುಷರು
ಗಳ ಸಂದಣಿಗಳಿಂದ ಸುಂದರವಾಗಿ ತೋರುತ್ತಿರಲು ; ತೋರಿ ಮರೆಯಾಗುವ
ದುರ್ಜನನ ಐಶ್ವರ್ಯದಂತೆ ಸಂಧ್ಯಾರಾಗವು ಜಾರಿಪೋಗಲು ; ಕಮಲಲತೆಗಳು
ತೇಜೋನಿಧಿಯಾದ ಪತಿಯೂ ಪೋದನೆಂಬ ವ್ಯಸನದಿಂದ ಮಕರಂದವೆಂಬ ಕಣ್ಣೀ
ರುಗಳಂ ಬಿಡುತ್ತ ಕಮಲಂಗಳೆಂಬ ನೇತ್ರಗಳಂ ಮುಚ್ಚಿ, ಭೃಂಗಧ್ವನಿಗಳೆಂಬ ರೋದ
ನವಂ ಗೆಯ್ಯುವುವೋ ಎಂಬಂತೆ ಕಾಣುತ್ತಿರಲು ; ಜಾರಚೋರರುಗಳಿಗೆ ಸಿದ್ಧಾಂಜ
ನವೋ ಎಂಬಂತೆ, ನಾಟ್ಯವಂ ಗೆಯ್ಯುವ ಪರಶಿವನು ಪೊದ್ದಿರ್ದ ಗಜಚರ್ಮವು
ಹಾರಿ ಜಗವಂ ವ್ಯಾಪಿಸಿತೋ ಎಂಬಂತೆ, ಸಂಧ್ಯಾರಾಗವೆಂಬ ಕಾಕ್ಕಿಚ್ಚಿನ ಸೆಕೆ ತಟ್ಟಿ
ಬ್ರಹ್ಮಾಂಡಕಟಾಹವು ಕಪ್ಪುದೋರಿದುದೋ ಎಂಬಂತೆ, ಸಂಧ್ಯಾಂಗನೆಯು ರಾತ್ರಿ
ಯಲ್ಲಿ ಸಂಚರಿಸಲೋಸುಗವಾಗಿ ಉಟ್ಟಿರ್ಪ ನೀಲಾಂಬರವೋ ಎಂಬಂತೆ, ಸೂರ್ಯ
ನಿಂದೆ ಸಂಹೃತರಾದ ಮಂದೇಹರಾಕ್ಷಸರ ಹೃದಯದಲ್ಲಿರ್ದ ಪಾಶಜಾಲವೋ ಎಂಬಂ
ತೆ, ಜಾರಿಣಿಯರು ಸೂರ್ಯನು ಅಸ್ತಮಂ ಪೊಂದಲೆಂದು ಶಪಿಸಿದ ಶಾಪಾಕ್ಷರಗಳು
ರೂಪುಗೊಂಡು ಆಕಾಶವಂ ವ್ಯಾಪಿಸಿದುವೋ ಎಂಬಂತೆ, ಮಾರನೆಂಬ ಮಾಯಾ
ವಿಯು ಸಮಸ್ತ ಪ್ರಾಣಿಗಳ ನೇತ್ರಗಳಂ ಹೊರತಟ್ಟಿ ಜನರ ಮನವನ್ನು ಅಪಹರಿಸ
ಲೋಸುಗ ಕಲ್ಪಿಸಿದ ಮಾಯಾಜಾಲವೋ ಎಂಬಂತೆ, ಸೂರ್ಯನ ಸಂಗದಿಂದ ಬಿಚ್ಚಿದ
ಗಗನಲಕ್ಷ್ಮಿಯ ಕೇಶಪಾಶವೋ ಎಂಬಂತೆ, ಪ್ರಾತಃಕಾಲವಾದ ಬಳಿಕ ಪರೆದು
ಪೋಗುವ ರಾಕ್ಷಸರ ಸಮೂಹವೋ ಎಂಬಂತೆ, ಪತಿಯಾದ ಪರಶಿವನ ನಾಟ್ಯೋ
ತ್ಸವವಂ ನೋಡಲೋಸುಗ ಬಂದಿರ್ಪ ಭೂತಜಾತವೋ ಎಂಬಂತೆ, ಕಮಲಕುಮುದ
ಗಳಲ್ಲಿ ಸ್ಥಳವಿಲ್ಲದೆ ಜಗಮಂ ಮುತ್ತಿರುವ ಭೃಂಗಸಂಗವೋ ಎಂಬಂತೆ, ಗಂಗೆಯಂ
ನೋಡಲೋಸುಗ ಜಗಮಂ ವ್ಯಾಪಿಸಿ ಸ್ವರ್ಗಮಂ ಪೊಂದುವ ಯಮುನಾನದಿಯ
ಜಲಪೂರವೋ ಎಂಬಂತೆ, ಜಾರಸ್ತ್ರೀಯರಿಗೆ ಮನೆದೇವತೆಯಂತೆ, ಚೋರರಿಗೆ
ಸೌಭಾಗ್ಯದೇವತೆಯಂತೆ, ಘೂಕಸಮೂಹಕ್ಕೆ ಅಮೃತಾಂಜನದಂತೆ, ಪ್ರಾಣಿಗಳ

ನೇತ್ರಗಳಂ ಮುಚ್ಚುವ ಪಿಶಾಚ ಸಂಘದಂತೆ ಕತ್ತಲೆಯು ನೊತ್ತವಾಗಿ ಎತ್ತೆತ್ತಲೂ ಸುತ್ತಿಮುತ್ತಿರಲು ; ಸೂರ್ಯನೆಂಬ ಕೃಷಿಯಂ ಗೆಯ್ಯುವ ಪುರುಷನು ಬಿತ್ತಿದ ತೇ ಜೋಬೀಜಗಳು ಮೊಳಕೆದೋರಿದುವೋ ಎಂಬಂತೆ, ಭೂಮಿಯು ಸೌಭಾಗ್ಯವಂ, ನೋಡಲೋಸುಗ ತಲೆಯನ್ನೆತ್ತಿದ ಫಣಾಮಣಿಗಳೋ ಎಂಬಂತೆ, ಅಲ್ಲಲ್ಲಿ ದೀಪಗಳು ತಲೆದೋರುತ್ತಿರಲು ; ಆ ಕಾಲದಲ್ಲಿ ......... ಚಕೋರಗಳ ಪುಣ್ಯರಾಶಿಯಂತೆ ಇಂದ್ರನ ಓಲಗಶಾಲೆಯ ರಜತಕಲಶದಂತೆ, ಪೂರ್ವದಿಗಂಗನೆಯ ಕೈಗನ್ನಡಿಯಂತೆ, ಮಾರನ ವಿಜಯಧ್ವಜದ ದರ್ಪಣದಂತೆ, ಸೂರ್ಯಕಿರಣದಿಂ ಪುಟ್ಟಿದ ಸಂತಾಪವಂ ಪೋಗಲಾಡಿಸಲು ಗಗನಲಕ್ಷ್ಮಿಯು ಪಿಡಿದ ಜಂತದ ಬೀಸಣಿಗೆಯಂತೆ, ಜಾರಚೋರ ರಿಗೆ ಉಲ್ಕಾಮಂಡಲದಂತೆ, ಶಚಿಯು ಜಯಂತನ ತೊಟ್ಟಿಲಿಗೆ ಕಟ್ಟಿದ ಮುತ್ತಿನ ಸೆಂಡಿನಂತೆ, ಜನರ ನಯನಾನಂದಲತೆಯ ಕಂದವೋ ಎಂಬಂತೆ, ಸಮುದ್ರಮಥನ ಕಾಲದಲ್ಲಿ ಪೊರಮಟ್ಟ ಅಮೃತಕಲಶವೋ ಎಂಬಂತೆ, ಗಗನವೆಂಬ ಸರೋವರದಲ್ಲಿ ಸಂಚರಿಸಲೋಸುಗ ಪೋಗುವ ರಾಜಹಂಸಿಯೋ ಎಂಬಂತೆ, ಇಂದ್ರನ ನಂದನವನ ದಲ್ಲಿ ಅರಳಿ ತೋರುವ ಸುಂದರವಾದ ಮಂದಾರಪುಷ್ಪವೋ ಎಂಬಂತೆ, ಚಂದ್ರನು ಚಂದದಿಂದ ಉದಯಗಿರಿಶಿಖರವೆಂಬ ಚಂದ್ರಶಾಲೆಯನ್ನು ಏರಿ, ದಿಕ್ಕಾಂತೆಯರ ಅಂಗಗಳಲ್ಲಿ ನಿಜಕರವನ್ನು ಊರಿ, ಚಕೋರಗಳಿಗೆ ಆನಂದವಂ ತೋರಿ, ಮನ್ಮಥ ಕೀರ್ತಿಯಂ ಹೆಚ್ಚಿಸಿ, ವಿರಹಿಜನರಂ ಬೆಚ್ಚಿಸಿ, ಮಾನಿನಿಯರ ಮಾನಗ್ರಂಥಿಯಂ ಬಿಚ್ಚಿಸಿ, ಕಾಮಿನಿಯರ ಮನಗಳಲ್ಲಿವಿವೇಕವಂ ಮುಚ್ಚಿಸಿ, ಚಂದ್ರಕಾಂತಶಿಲೆಗಳಲ್ಲಿ ನಿರ್ಮಲಜಲವಂ ತೋರಿಸಿ, ಜನರ ಹೃದಯದಲ್ಲಿ ಕಾಮನ ಕಾಲನೂರಿಸಿ, ಕನ್ನೈದಿಲೆ ಗಳನ್ನು ಅರಳಿಸಿ, ವಿಯುಕ್ತರಾದ ಜನರನ್ನು ನರಳಿಸಿ, ಯತಿಗಳಂ ಮರಳಿಸಿ, ವೃದ್ಧಿಯಂ ಪೊಂದುತ್ತಿರಲು ; ಕ್ಷೀರಸಮುದ್ರವು ಮೇರೆದಪ್ಪಿ ಜಗವಂ ವ್ಯಾಪಿಸಿತೋ ಎಂಬಂತೆ, ನಾಟ್ಯವೇಗದಿಂ ಹರನ ಶಿರಸ್ಸಿನಿಂ ಜಾರಿ ಲೋಕವಂ ವ್ಯಾಪಿಸಿದ ಗಂಗಾಜಲವೋ ಎಂಬಂತೆ, ಮೂರುಲೋಕದಲ್ಲೂ ಧೀರನಾದ ಮಾರನ ಕೀರ್ತಿರಾಶಿಯೋ ಎಂಬಂತೆ, ದಿಕ್ಕಾಂತೆಯರ ಒಟ್ಟುಗೂಡಿದ ಮಂದಹಾಸವೋ ಎಂಬಂತೆ, ಮಾರನೆಂಬ ಚೋರ ನು ಜನಮನವೆಂಬ ದ್ರವ್ಯವನ್ನು ಅಪಹರಿಸಲೋಸುಗವಾಗಿ ಚೆಲ್ಲಿದ ಬೆಳುವೆಯ ಬೂದಿಯೋ ಎಂಬಂತೆ, ಭೂಮಿಯೆಂಬ ಕಾಂತೆಯು ಸೂರ್ಯನೆಂಬ ವಿಟಪುರುಷನ ಸಂಗದಿಂದ ಬಿಳ್ಪೇರಿದಳೋ ಎಂಬಂತೆ, ಸಾಂದ್ರವಾಗಿ ಚಂದ್ರಿಕೆಯು ಅಂತರಿಕ್ಷ ಭೂಮಿಗಳಂ ವ್ಯಾಪಿಸುತ್ತಿರಲು ; ರೋಹಿಣಿಯು ಜನರ ದೃಷ್ಟಿ ತಾಕದಂತೆ ಇಟ್ಟ ಕಪ್ಪಿನ ಬೊಟ್ಟೋ ಎಂಬಂತೆ, ಗುರುಪತ್ನಿಯ ಸಂಗದಿಂದುಂಟಾದ ಪಾತಕವೋ ಎಂಬಂತೆ, ಪೂರ್ವದಿಗಂಗನೆಯ ಸಂಗದಿಂದುಂಟಾದ ಕಸ್ತೂರಿಯ ತಿಲಕದ ಚಿಹ್ನವೋ ಎಂಬಂತೆ, ಕ್ರೂರವಾಗಿ ನೋಡುವ ಜಾರಸ್ತ್ರೀಯರುಗಳ ಕರಿಯಗುಡ್ಡೆಯ ಕಾಂತಿ ಯೋ ಎಂಬಂತೆ, ಅಗ್ನಿಯು ಪಾವನವಂ ಗೆಯ್ಯುವಲ್ಲಿ ಉರಿ ತಗಲಿ ಅಂಗಕಪ್ಪು ಕರಿ

ಗೊಂಡುದೋ ಎಂಬಂತೆ, ಚಂದ್ರನ ಅಂಗದಲ್ಲಿ ಸಂಗತವಾದ ಕಳಂಕವು ಕಂಗಳಿಗೆ ಮಂಗಳವನ್ನುಂಟುಮಾಡುತ್ತಿರಲು; ಅಲ್ಲಲ್ಲಿ ನಲ್ಲೆಯರೂ ನಲ್ಲರೂ ಸಹ ಸಲ್ಲೀಲೆಯಿಂದೊಡಗೂಡಿ ಚಂದ್ರಶಾಲೆಗಳಲ್ಲಿ ಸಾಂದ್ರವಾದ ಚಂದ್ರಿಕೆಯಲ್ಲಿ ವ್ಯಾಹಾರವನ್ನು ವಿರಚಿಸುತ್ತಿರುವ ಪರಿಯುನ್ನು ಅವರ ಅಂಗಗಳಿಂದ ಪೊರಮಟ್ಟ ಗಂಧಪುಷ್ಪಪರಿಮಳವು ದಿಕ್ಕುದಿಕ್ಕುಗಳಲ್ಲಿ ತೋರುತ್ತಿರಲು;

ಇತ್ತಲು ಮಕರಂದೋದ್ಯಾನದಲ್ಲಿರ್ದ ಸಾಗರಿಕೆಯು ಜ್ವರದಿಂದ ತಪಿಸುತ್ತಿರುವಳ ಮೇಲೆ ಕಾದೆಣ್ಣೆಯಂ ಚೆಲ್ಲಿದಂತೆ, ಪಿಶಾಚದಿಂದ ಪೀಡಿತಳಾದವಳಿಗೆ ಹುಚ್ಚು ಹಿಡಿದಂತೆ, ಹಾವುಕಡಿದವಳಿಗೆ ವಿಷವಂ ಕುಡಿಸಿದಂತೆ, ಮೊದಲೇ ಮಾರನಿಂದ ಹೇರಳವಾದ ಬಾಧೆಯಂ ಪೊಂದಿರ್ದು, ಬೆಳದಿಂಗಳಿಗೆ ಬೆಚ್ಚಿ, ಕಣ್ಣುಗಳಂ ಮುಚ್ಚಿ, ಕಂದಿ, ಕಳವಳವಂ ಪೊಂದಿ, ಮುಂದುಗಾಣದೆ, ಮಂಡಳಾಗಿ, ಕರಗಿ ಸೊರಗಿ, ಮರುಗಿ ಕೊರಗಿ, ಮರದ ಮರೆಗೊಂಡು, “ಇದೊಂದು ಬಗೆಯಾಗಿ ಬಿಳ್ಪುದೋರಿ ಉರಿಯುತ್ತಿರುವ ಬೆಳದಿಂಗಳೆಂಬ ಉರಿಯುನ್ನು ಹೇಗೆ ಸೈರಿಸಲಿ? ಎಲ್ಲಿ ಪೋಗಲಿ? ಯಾರೊಡನೆ ಪೇಳಲಿ? ಕಳ್ಳನಿಗೆ ಕತ್ತಲೆಯು ಸಹಾಯಮಂ ಗೆಯ್ಯುವಂತೆ ಕ್ರೂರನಾದ ಮಾರನಿಗೆ ಈ ಪಾಪಿಯಾದ ಚಂದ್ರನು ಕೈಲಾಗವಂ ಕೊಟ್ಟು ನಮ್ಮಂಥ ದಿಕ್ಕಿಲ್ಲದ ಬಾಲೆಯರಂ ಬಾಧಿಸುತ್ತಿರುವನು. ಎಲೈ ದುಷ್ಟನಾದ ರಾಹುವೇ, ಈ ದುಷ್ಟನಾದ ಚಂದ್ರನಂ ನುಂಗಿ ಬಿಟ್ಟಪರಿಯಿಂ ನಿನ್ನ ಬುದ್ಧಿಯಂ ನಾನು ಎಷ್ಟೆಂದು ವರ್ಣಿಸಲಿ! ಎಲೆ ಸಮುದ್ರನೇ, ಕೊರಗಿಸಲೋಸುಗ ಮೊದಲು ಕರಿಯ ವಿಷವಂ ಪೆತ್ತುದಲ್ಲದೆ ಈಗ ವಿರಹದಿಂ ಬಾಡಿರುವ ಬಾಲೆಯರಂ ಬಾಧಿಸಲೋಸುಗ ಈ ಬಲವಾದ ಬಿಳಿಯ ವಿಷವಂ ಪೆತ್ತುದರಿಂದಲೇ ನಿನ್ನನ್ನು ಅಗಸ್ತ್ಯಋಷಿಯು ಕುಡಿದು, ದೇವಾಸುರರು ಕಡೆದು, ರಾಮನು ಬಂಧನವಂ ಗೆಯ್ದು ಬಹುಭಂಗವನ್ನುಂಟುಮಾಡಿದುದಲ್ಲದೆ, ದೈವವು ನಿನ್ನ ಹೊಟ್ಟೆಯಲ್ಲಿ ಉರಿಯನ್ನಿರಿಸುವುದು ನ್ಯಾಯವಾಗಿ ತೋರುವುದು. ಸರ್ವಜ್ಞನಾದ ಈಶ್ವರನು ನುಂಗಿದ ಕರಿಯ ವಿಷಕ್ಕಿಂತಲೂ ಈ ಬಿಳಿಯ ವಿಷರೂಪಿಯಾದ ಚಂದ್ರನು ಮಹಾಪಾಪಿಯು. ಇವನನ್ನು ನುಂಗಿದಲ್ಲಿ ಗಂಟಲು ಸುಡುವುದೆಂದು ನೆತ್ತಿಯಂ ಹತ್ತಿಸಿ ಉರಿಯಂ ತಾಳಲಾರದೆ ಗಂಗೆಯಂ ಧರಿಸಿದನು. ಎಲೆ ಮಿತ್ರದ್ರೋಹಿಯಾದ ಚಂದ್ರನೇ! ಲೋಕದಲ್ಲಿ ನಿನ್ನಂಥ ಲಜ್ಜೆಯಿಲ್ಲದವರನ್ನು ಕಾಣೆನು. ಗುರುಪತ್ನಿಯೊಡನೆ ಸಂಗಸುಖವಂ ಪಡೆದು ಪಂಚಮಹಾಪಾತಕಿಯಾದೆನೆಂಬ ಶಂಕೆಯಿಲ್ಲದೆ ಗಗನಾಂಗಣವಂ ಪೊಂದಿ ಪ್ರಜ್ವಲಿಸುತ್ತಿರುವೆ. ನೀನು ಪಾಪಿಯೂ ಕ್ರೂರನೂ ದೋಷಾಕರನೂ ಆದುದರಿಂದಲೇ ಅಗ್ನಿ ರಾಹುಗಳು ನಿನ್ನನ್ನು ನುಂಗಲಾರದೆ ಉಗುಳಿದರು. ಪಾಷಾಣಕ್ಕಿಂತಲೂ ನೀನು ಕಠಿಣನಾದುದರಿಂದ ಸಮುದ್ರವಂ ಪೀಡಿಸಿದ ಅಗಸ್ತ್ಯಋಷಿಯ ಹೊಟ್ಟೆಯಲ್ಲಿ ವಾತಾಪಿಯಂತೆ ಜೀರ್ಣವಾಗದೆ ಉಳಿದು ಬಂದು ಲೋಕಕಂಟಕನಾಗಿ ತೋರುತ್ತಿರುವೆ. ಕಟುಕರವನಂತೆ ನಿರ್ದಯನಾಗಿ

ಪ್ರಾಣಿಹಿಂಸೆಗಳನ್ನು ಮಾಡುತ್ತಲಿರುವ ದುರುಳನಾದ ಮಾರನ ಸರಳುಗಳಿಗೆ ಹತ್ತಿಸು ವುದಕ್ಕೋಸ್ಕರವಾಗಿ ಕಪಟದಿಂದ ಕಳಂಕವೆಂಬ ಸಮುದ್ರದಲ್ಲಿರ್ದ ವಿಷವನ್ನು ತೆಗೆ ದುಕೊಂಡು ಬಂದುದರಿಂದಲೇ ನಿನ್ನ ಕಿರಣಗಳು ಅಗ್ನಿಜ್ವಾಲೆಗಳಿಗಿಂತಲೂ ಉಷ್ಣ ವಾಗಿ, ಎನ್ನ ಅಂಗಗಳನ್ನು ದಹಿಸುತ್ತಲಿರುವುವು. ಎಲೆ ಕಳಂಕಿಯಾದ ನಿಶಾಕರನೇ ಪಿತ್ತಭ್ರಾಂತಿಯಿಂ ತಾಳಿ ಕವಿಗಳೆಲ್ಲರೂ ನಿನ್ನನ್ನು ದ್ವಿಜರಾಜನೆಂದು ನುಡಿಯುವರ ಲ್ಲದೆ ನೀನು ಯಾವ ದ್ವಿಜರನ್ನೂ ಯಾವ ಪ್ರಜೆಗಳನ್ನೂ ಪರಿಪಾಲಿಸಿ ಉದ್ಧಾರವಂ ಗೆಯ್ದಿರುವೆ ಪೇಳು. ಕಣ್ಣಿಗೆ ಬೆಣ್ಣೆಯಂತೆ ಕಾಣುತ್ತ, ಕಾರ್ಯದಲ್ಲಿ ಕ್ರೂರನಾಗಿ ರುವ ನಿನ್ನಂಥ ಪಾಪಿಗೆ ಕ್ಷಯರೋಗ ಬರುವುದೇನಾಶ್ಚರ್ಯವು? ಕಮಲಗಳಂ ಕಂದಿ ಸಿ, ಕಲ್ಲಂ ಕರಗಿಸಿ, ನನ್ನಂಥ ಬಾಲೆಯರಿಗೆ ತಲ್ಲಣವಂ ಮಾಡುತ್ತ ಪಾಪವಾರ್ತೆಗಳಿ ಲ್ಲದ ಕ್ಷುಲ್ಲಕನೆಂಬುದನ್ನು ಬೃಹಸ್ಪತ್ಯಾಚಾರ್ಯರು ಮುಂತಾದವರೆಲ್ಲರೂ ಬಲ್ಲರು. ಎಲೆ ಪಾಪಿಯೇ, ಕೇಳು. ಶಮದಮಾದಿ ಗುಣಸಂಪನ್ನನಾಗಿ ತಪೋನಿಷ್ಠನಾದ ಅತ್ರಿ ಮುನಿಯ ನೇತ್ರದಿಂದ ನೀನು ಪುಟ್ಟಿದುದು ಸಮಸ್ತ ರತ್ನಗಳಿಗೂ ಆಶ್ರಯನಾಗಿ ಜಲ ಮಯವಾದ ಸಮುದ್ರದಿಂದ ವಿಷವು ಪುಟ್ಟಿದಂತಾದುದು. ಕಳ್ಳನಂತೆ ರಾತ್ರಿಯಲ್ಲಿ ಕೈಗೆ ನಿಲುಕದ ಆಕಾಶದಲ್ಲಿ ಸಂಚರಿಸುತ್ತ, ಮಾನಿನಿಯರ ಮಾನವನ್ನು ಅಪಹರಿ ಸುತ್ತ, ತಂಗಿಯಾದ ಲಕ್ಷ್ಮಿಯ ಮನೆಯಂ ಮುರಿಯುತ್ತಲಿರುವ ದುಷ್ಟನಾದ ನಿನ್ನ ಮುಖವನ್ನು ನೋಡಿದ ಮಾತ್ರದಿಂದಲೇ ಸಚೇಲಸ್ನಾನವಂ ಗೆಯ್ಯಬೇಕು" ಎಂದು ನಾನಾಪ್ರಕಾರವಾಗಿ ಚಂದ್ರನನ್ನು ನಿಂದಿಸಿ, ಬೆಳದಿಂಗಳ ಬೇಗೆಯನ್ನು ಸಹಿಸಲಾರದೆ ಪಲ್ಲವಪುಷ್ಪಗಳಿಂದ ಸಂಪೂರ್ಣವಾಗಿರುವ ಮಾಧವೀ ಮಂಟಪವಂ ಸೇರಿ, ಮನ್ಮಥನ ಬಾಧೆಯನ್ನು ಸಹಿಸಲಾರದೆ, ಸಂತಾಪವನ್ನು ಅಂತರಂಗದಲ್ಲಿ ತಾಳಿ, "ನಾನಿಲ್ಲಿರುವುದಂ ಯಾರು ಕಾಣುವರೋ" ಎಂಬ ಶಂಕೆಯಿಂದ ಎದ್ದು, ಕೆಲಬಲವಂ ನೋಡುತ್ತ, "ವತ್ಸರಾಜನೆಂದರೇನು, ನಾನು ಅವನೊಡನೆ ಕೂಡು ವುದು ಎಂದರೇನು, ನನ್ನ ಪ್ರಯತ್ನವು ಹೆಳವನು ಮರದಮೇಲಿರುವ ಫಲವನ್ನು ಬಯಸಿದಂತಾಗಿರುವುದು. ಮನ್ಮಥನಾದರೋ ಒಂದು ಕ್ಷಣವಾದರೂ ಅವಕಾಶವ ನ್ನೀಯದೇ ಮರ್ಮವಂ ಭೇದಿಸುತ್ತಲಿರುವನು. ಶಕುಂತಶಾಲೆಯನ್ನು ಪೊಂದುವೆನೆಂ ದರೆ, ಜಂಘಾಬಲವೇ ಇಲ್ಲ, ಏನುಮಾಡಲಿ?" ಎಂದು ತಲ್ಲಣಿಸುತ್ತ, ದಿಕ್ಕುದಿಕ್ಕುಗ ಳಲ್ಲಿ ಭ್ರಾಂತಿಯಿಂ ಪೊಂದಿ, "ನಾನು ಎಲ್ಲಿರುವೆನೊ? ಯಾವ ಮಾತುಗಳನ್ನಾಡು ವೆನೋ, ತಿಳಿಯೆನು" ಎಂದು ಅಲ್ಲಿಂದ ಪೊರಮಟ್ಟು, ವಿರಹದಿಂ ಪುಟ್ಟುವ ಉರಿ ಯನ್ನು ಪರಿಹರಿಸಲೋಸುಗ ಆ ವನಮಧ್ಯದಲ್ಲಿ ಮುದ್ದಾಗಿ ದಳಗಳಿಂ ಮುಚ್ಚಿ ಹೆಚ್ಚಾ ಗಿ ತೋರುವ ಕಮಲಗಳ ಸಾಲುಗಳಲ್ಲಿ ಲೀಲೆಯಿಂದ ಕುಳಿತು ನಿದ್ರೆಯಂ ಗೆಯ್ಯುವ ರಾಜಹಂಸಗಳ ದಂಪತಿಗಳಿಂದ ಸೊಂಪುದೋರುತ್ತ, ಕೊರಗುತ್ತಲಿರುವ ಕಮಲ ಗಳಂ ಕಂಡು ಹಾಸ್ಯವಂ ಗೆಯ್ಯುವುವೋ ಎಂಬಂತೆ ವಿಕಸಿತಂಗಳಾದ ಕನ್ನೈದಿಲೆಗಳ

ಸಂಘದಲ್ಲಿ ಸಂಗತವಾದ ಭೃಂಗಗಳ ಸಂಗೀತದಿಂದ ಮಂಗಳಕರವಾಗಿ, ಚಂದ್ರ ಕಿರಣಗಳಿಂದ ಹೊರಸೂಸುತ್ತಿರುವ ಚಂದ್ರಕಾಂತಶಿಲೆಗಳ ಹಂತಗಳಿಂದ ಕಾಂತ ವಾಗಿ, ಕಮಲಗಳೆಂಬ ಮುಖಗಳಿಂದ, ಮತ್ಸ್ಯಗಳೆಂಬ ನೇತ್ರಗಳಿಂದ, ಸುಳಿಗಳೆಂಬ ನಾಭಿಗಳಿಂದ, ತೆರೆಗಳೆಂಬ ತೋಳುಗಳಿಂದ, ಪಾವಸೆಗಳೆಂಬ ರೋಮರಾಜಿಗಳಿಂ ದಲೂ ಯುಕ್ತವಾಗಿ, ಅನೇಕರಾದ ನಾರಿಯರ ವಿಲಾಸವಂ ತಾಳಿ, ನೊರೆಗಳೆಂಬ ಮಂದಹಾಸದಿಂದ ಸುಂದರವಾಗಿರುವ ಕಮಲಸರೋವರವಂ ಪೊಂದಿ, ಕಮಲ ಪರಾಗಗಳಿಂದಲೂ ಮಕರಂದಗಳಿಂದಲೂ ಪರಿಮಳವಂ ತಾಳಿ ಪ್ರಕಾಶಿಸುತ್ತಿರುವ ಈ ಜಲದಲ್ಲಿ ಮುಳುಗಿ ಸಂತಾಪವಂ ಪರಿಹರಿಸುವೆನೆಂದು ತಿಳಿದು, ಆ ಕೊಳದ ಹಂತ ಗಳಲ್ಲಿ ಕಾಂತಗಳಾದ ಪಾದಗಳನ್ನಿಟ್ಟು ಒರಲು; ಇವಳ ದೇಹದಿಂದ ಪೊರಮಟ್ಟ ವಿರಹಾಗ್ನಿಯ ಸೆಕೆ ತಗಲಿ ಕಮಲಗಳೆಲ್ಲಾ ಕರಿಗೊಂಡೂ, ಹಂಸೆಗಳು ಬೆಂದು ಮೇಲ ಕ್ಕೆ ಹಾರಲಾರದೆ ತೀರದಲ್ಲಿ ಬಿದ್ದು ಹೊರಳಿ ಕ್ರೇಂಕಾರವಂ ಗೆಯ್ಯುತ್ತಲೂ, ಭ್ರಮರ ಗಳು ಕರಿಗೊಂಡು ವರ್ಣವ್ಯತ್ಯಾಸವಂ ಪೊಂದದೆ ಚಂದ್ರಕಾಂತ ಶಿಲೆಗಳು ತಮ್ಮಿಂದ ಪೊರಮಡುವ ಜಲಗಳ ಹೀರಿ ಸಿಡಿದೂ, ಒತ್ತಿನಲ್ಲಿರುವ ವೃಕ್ಷಲತೆಗಳು ಕಾಡುಗಿಚ್ಚಿನ ಸೆಕೆ ತಗಲಿ ಕಂದಿರುವಂತೆ ಒಣಗಿದ ಎಲೆಗಳಿಂ ಪುಡಿಗೊಂಡು ಮೊಗ್ಗುಗಳಿಂ ಯು ಕ್ತಗಳಾಗಿಯೂ ತೋರುತ್ತಿರಲು ; ಆ ಸಾಗರಿಕೆಯು ಮೆಲ್ಲಮೆಲ್ಲನೆ ಬಂದು, ಎರಡು ಪಾದಗಳನ್ನೂ ಜಲದಲ್ಲಿ ಇರಿಸಿ, ತಂಗಾಳಿಗೆ ಮೈಗೊಟ್ಟು, ಮೂರ್ಛೆಯಿಂ ಪೊಂದಿ, ಆ ಸೋಪಾನದಲ್ಲಿ ಮೈಮರೆದೊರಗಿರಲು—

ಇತ್ತಲು ವಾಸವದತ್ತಾದೇವಿಯು ಕಾಂಚನಮಾಲೆಯಂ ನೋಡಿ,—“ ಎಲೆ ಬಾಲೆಯೆ, ಇಂದಿನ ದಿನದಲ್ಲಿ ಮಂದಯಾನೆಯಾದ ಸಾಗರಿಕೆಯು ನಮ್ಮ ರಾಯನ ಕಣ್ಣಿಗೆ ಬಿದ್ದಲ್ಲಿ ಯಥಾರ್ಥವಾಗಿ ಮನ್ಮಥೋತ್ಸವವು ಪ್ರಾಪ್ತವಾಗುತ್ತ ಇದ್ದುದು ದೈವಯೋಗದಿಂದ ತಪ್ಪಿದಂತಾಯಿತು. ನೀನು ಸಮಸ್ತ ಸಖಿಯರಿಗೂ ನನ್ನ ಆಜ್ಞೆ ಯ ಪೇಳುವಲ್ಲಿ ಸಾಗರಿಕೆಯ ವಿಚಾರಕ್ಕೆ ಏನು ಅಪ್ಪಣೆ ಎಂದು ಕೇಳದೆಹೋದೆ. ಆದರೂ ಇನ್ನುಮೇಲೆ ಅವಳ ವಿಚಾರದಲ್ಲಿ ಬಹಳ ಜಾಗರೂಕಳಾಗಿರು ” ಎಂದು, “ ಇದಲ್ಲದೆ ನಿಮ್ಮ ರಾಯನಿಂದ ಸಂರಕ್ಷಿತವಾಗುವ ನವಮಾಲಿಕಾಲತೆಗೆ ಅಕಾಲದಲ್ಲಿ ಪುಷ್ಪಪಲ್ಲವಗಳ ಸಮೃದ್ಧಿಯನ್ನುಂಟು ಮಾಡುವುದಕ್ಕೋಸುಗ ದೋಹಳಕ್ರಿಯೆ ಯಲ್ಲಿ ಬಲ್ಲಿದನಾಗಿ ವಿಂಧ್ಯಪರ್ವತವಾಸಿಯಾಗಿಪ್ಪ ಒಬ್ಬ ಸಿದ್ಧಪುರುಷನಂ ಕರೆ ಯಿಸಿ ಇದ್ದಾನೆ ” ಎಂಬ ವಾರ್ತೆಯನ್ನು ಕಮಲಿನಿಯು ಎನ್ನೊಡನೆ ಬಂದು ಪೇಳಿರು ವಳು. ಆ ವಾಕ್ಯವು ಯಥಾರ್ಥವಾಗಿರುವುದೋ ಅಬದ್ಧವಾಗಿರುವುದೋ, ನೀನು ಪೋಗಿ ಚೆನ್ನಾಗಿ ವಿವರಿಸಿಕೊಂಡು ಬರುವಳಾಗು ” ಎಂದು ಅಪ್ಪಣೆಯನ್ನಿತ್ತು ಕಳುಹಿಸಲು ;

ಅತ್ತ, ಚಂದ್ರಶಾಲೆಯಲ್ಲಿ ಸುಸಂಗತೆಯು ಕುಳಿತು “ ಸಾಗರಿಕೆಯು ಮೇಧಾವಿನಿ

ಯೆಂಬ ಶಾರಿಕೆಯು ಪಂಜರವನ್ನು ಎನ್ನ ಹಸ್ತದಲ್ಲಿತ್ತು ಮನ್ಮಥನ ಪೂಜೆಯುನ್ನೋಡಲೋಸುಗ ಪೋಗಿ ರಾತ್ರಿಯಾದರೂ ಈ ಶಕುಂತಶಾಲೆಯಂ ಕುರಿತು ಬರದಿರುವುದಕ್ಕೆ ನಿಮಿತ್ತವೇನಿರುವುದೋ ತಿಳಿಯೆನು? ಆದರೆ ದೇವಿಯು ಅವಳಲ್ಲಿ ವಿಶೇಷವಾದ ಅನುರಾಗಯುಕ್ತಳಾಗಿರುವುದರಿಂದ ಈ ರಾತ್ರಿಯಲ್ಲಿ ತಾನಿರುವ ಮಣಿಹಜಾರದಲ್ಲಿರುವಂತೆ ಅಪ್ಪಣೆಯನ್ನಿತ್ತಿರಬಹುದು,” ಎಂದು ಯೋಚಿಸುತ್ತಿದ್ದಳು.

ಎಂಬಲ್ಲಿಗೆ
ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಹತ್ತನೆಯ ಗುಚ್ಛಂ ಸಂಪೂರ್ಣಂ.

## ಹನ್ನೊಂದನೆಯ ಗುಚ್ಛಂ.

ಅನಂತರದಲ್ಲಿ ಸಾಗರಿಕೆಯು ಬಹುಕಾಲವು ಆ ಕಮಲ ಸರೋವರದ ಸ್ಫಟಿಕ ಸೋಪಾನದಲ್ಲಿದ್ದು ಮೂರ್ಛೆಯಿಂದ ಮಲಗಿದ್ದು, ಬೆಳಗಿನ ಜಾಮದ ತಂಗಾಳಿಯ ಸೋಂಕಿನಿಂದ ಅಂಗಗಳೆಲ್ಲವೂ ತಣುವೇರಿ, ತನ್ನ ಮೂರ್ಛೆಯಂ ತಾನೆ ತಿಳಿದುಕೊಂಡು, “ಕಾಂಚನಮಾಲೆ ಮೊದಲಾದ ವಾಸವದತ್ತಾದೇವಿಯ ಸೇವಕರು ಯಾರು ಎನ್ನ ಕಂಡಿದ್ದರೂ ನಾನು ಇನ್ನು ಏನೇನು ಅವಸ್ಥೆಯಂ ಪೊಂದಬೇಕಾಗಿರುವುದೋ? ದುಷ್ಟನಾದ ಮನ್ಮಥನ ಪೂಜೆಯಂ ನೋಡುವುದಕ್ಕೆ ನಾನು ಬರಲಾಗಿ ಈ ಅವಸ್ಥೆಗೆ ಪಾತ್ರಳಾದೆನು” ಎಂದು, ಮನ್ಮಥನಂ ಕುರಿತು—“ಎಲೈ ಪೂಜ್ಯನಾದ, ಲಕ್ಷ್ಮೀಪುತ್ರನಾದ ಮನ್ಮಥನೇ, ಕೇಳು. ನಿನ್ನ ಪಾದಪೂಜೆಯಂ ಗೆಯ್ದು ನಿನ್ನ ಉತ್ಸವದಲ್ಲಿ ನೇತ್ರಾನಂದವನ್ನು ಅನುಭವಿಸಿ ಇಷ್ಟಾರ್ಥವನ್ನು ಪೊಂದಬೇಕೆಂದು ಬಂದ ಈ ಬಾಲೆಯನ್ನು ಬಾಧಿಸುವುದು ನ್ಯಾಯವೇ ಪೇಳು. ಆದರೆ ಅಜ್ಞಾನದಿಂದ ಈ ವಾಕ್ಯವನ್ನು ನುಡಿದೆನು. ಮನಸ್ಸಿನಿಂದಲೇ ಪುಟ್ಟಿ ಆ ಮನಸ್ಸಿಗೆ ವ್ಯಥೆಯನ್ನುಂಟುಮಾಡುವ ಪಾಪಿಗೆ ಉತ್ಸವಕ್ಕೆ ಬಂದ ಎನ್ನಲ್ಲಿ ದಯೆಯು ಹೇಗೆ ಇದ್ದೀತು! ಎಲೆ ಮಾರನೇ, ಕ್ರೂರವಾದ ಪಿಶಾಚದಂತೆ ಅಂಗವಿಲ್ಲದೆ ಅಂಗನೆಯರನ್ನು ಭಂಗಕ್ಕೆ ಭಾಜನರಂ ಮಾಡುತ್ತಿರುವ ನಿನ್ನ ವೀರತ್ವವನ್ನು ಪರಮೇಶ್ವರನ ಫಾಲನೇತ್ರದ ಜ್ವಾಲೆಯೇ ಪೇಳುತ್ತಿರುವುದು. ದುಷ್ಟನಿಗ್ರಹಶಾಲಿಯಾದ ಈಶ್ವರನು ಇದಿರಾಂತ

ನಿನ್ನನ್ನು ಉರಿಗಣ್ಣಿನಿಂದ ಉರುಹಿದ್ದರೂ ಕರುಣಾಶಾಲಿಯಾಗಿ ನಿನ್ನ ತರುಣಿಯಾದ ರತೀದೇವಿಯು ಪ್ರಲಾಪವಂ ಕೇಳಲಾರದೆ ಅನಂಗತ್ವವನ್ನು ಕೊಟ್ಟುದರಿಂದಲೇ ‘ಪಶುಪತಿ’ ಎಂಬ ಶಬ್ದಕೆ ಪಾತ್ರನಾದನು. ಎಲೈ, ತೃಣಪ್ರಾಯನಾದ ಮನ್ಮಥನೇ, ಕೇಳು. ಬಾಲರುಗಳಿಂದ ಸೀಳುವುದಕ್ಕೆ ಯೋಗ್ಯವಾದ ಕಬ್ಬುಬಿಲ್ಲನ್ನೂ, ನಮ್ಮಂಥ ನಾರಿಯರು ಕೇಶದಿಂದ ಕಟ್ಟಿದರೆ ಕಂದುತ್ತಿರುವ ಪೂಸರಳುಗಳನ್ನೂ, ಮದ್ಯಪಾಯಿಗಳಾದ ತುಂಬಿಗಳ ನಾರಿಯನ್ನೂ ಸಹ ಧರಿಸಿ, ಶಬ್ದವಂ ಕೇಳಿದ ಮಾತ್ರದಿಂದಲೇ ಏಳು ಗಾವುದಕ್ಕೆ ಹಾರುತ್ತಿರುವ ಶುಕಪಿಕ ಮಯೂರ ಮೊದಲಾದ ಪಕ್ಷಿಗಳ ಸೇನೆಯಂ ಜತೆಗೊಂಡು, ತಮ್ಮ ನೆರಳಿಗೆ ತಾವೇ ಬೆಚ್ಚುತ್ತ ಭೀರುಗಳಾದ ನಾರಿಯರನ್ನು ಬೆದರಿಸುತ್ತ, ಮೂರುಲೋಕದಲ್ಲೂ ವೀರನೆಂಬ ಹುಲ್ಲುಬಿರುದಂ ಸಂಪಾದಿಸಿರುವೆಯಲ್ಲದೆ ಸಹಜವಾಗಿ ಶೂರನೇ ನೀನಾದಲ್ಲಿ ಆ ಪುರಾರಿಯಾದ ಪರಶಿವನ ಮುಂದೆ ಯಾವ ಊರಿಗೆ ಒಕ್ಕಲು ಹೋಗಿ ಇದ್ದೆ ಪೇಳು. ಇದ್ದವರ ಮಾತುಗಳಂತಿರಲಿ. ತಾಯಿಯಾದ ಲಕ್ಷ್ಮೀದೇವಿಯಂ ಬಾಧಿಸಿ ಗಂಡನ ವದೆಯಂ ಸೇರಿಸದ ಮಾತೃದ್ರೋಹಿಯಾದ ನಿನ್ನನ್ನು ಪುಣ್ಯಸ್ಥಳವಾದ ವನಮಧ್ಯದಲ್ಲಿ ಸ್ಮರಿಸಿದುದರಿಂದ ಪುಟ್ಟಿದ ಪಾಪವನ್ನು ನಾನು ಎಲ್ಲಿ ಪೋಗಿ ಪರಿಹರಿಸಲೆಂದು ಯೋಚಿಸುತ್ತಲಿರುವೆನು. ಮತ್ತು ಮಾತೃದ್ರೋಹಿಯಾದ ನಿನ್ನನ್ನೂ, ಸ್ವರ್ಗಸ್ತ್ರೀಯಕೆ ಮುಖ್ಯಾಶ್ರಯನಾಗಿ ಸಮುದ್ರದಿಂದ ಪುಟ್ಟಿ ಬ್ರಹ್ಮಹತ್ಯಾಬದ್ಧದರನಾದ ಪರಶಿವನ ಸಂಗವಂ ಪಡೆದ ಗುರುದ್ರೋಹಿಯಾದ ಚಂದ್ರನನ್ನೂ, ಮಧುಪಾಯಿಗಳ ಅಭಿವೃದ್ಧಿಗೆ ಕಾರಣನಾದ ವಸಂತನನ್ನೂ ಸಹ ಸಹಾಯವಾಗಿ ವಿರಚಿಸಿರುವ ದೈವದ ಜಾಣತನವಂ ಆಲೋಚಿಸಿದಲ್ಲಿ ಈ ಮಹಾಪಾತಕಿಗಳನ್ನು ಹೇಗೆ ಜತೆಗೂಡಿಸಿದನೆಂದು ಅಧಿಕವಾದ ಆಶ್ಚರ್ಯವು ತೋರುತ್ತಲಿರುತ್ತಿರುವುದು. ಪ್ರಾಣಿಹಿಂಸೆಗಳನ್ನು ಗೆಯ್ಯುವುದು ಮಹಾ ಪಾಪವೆಂದು ಪೇಳುವ ಶಾಸ್ತ್ರಾರ್ಥವನ್ನು ಆಲೋಚನೆಯಂ ಗೆಯ್ಯದೆ ಪಾಮರನಂತೆ ಜಗತ್ತನ್ನು ಬಿದಿರಿನಿಂ ಪುಟ್ಟಿದ ಬೆಂಕಿಯು ವನವೆಲ್ಲವಂ ದಹಿಸುವಂತೆ ದಹಿಸಿ, ವಿಷ್ಣುವಿನ ದೆಸೆಯಿಂ ಪುಟ್ಟಿ ಅವನ ವಂಶಕ್ಕೆ ಮೃತ್ಯುರೂಪವಾದ ಅಪಕೀರ್ತಿಯಂ ಸಂಪಾದಿಸುವುದಕ್ಕೆ ಮೂಲಪುರುಷನಾಗಿರುವೆ? ನಿನ್ನಂತೆ, ಹುಟ್ಟಿದ ಮನೆಗೆ ಬೆಂಕಿಯನ್ನಿಕ್ಕುವ ಕೆಟ್ಟ ಮನುಜನು ಮೂರು ಲೋಕದಲ್ಲೂ ಪುಟ್ಟುವನೆ ಪೇಳು” ಎಂದು ಮನಬಂದಂತೆ ಮಾರನಂ ನಿಂದಿಸುತ್ತಿರಲು ;

ಅಷ್ಟರಲ್ಲೇ ಚಂದ್ರನು ಗುರುಪತ್ನೀಗಮನದಿಂದ ತೇಜೋಹೀನನಾಗಿ ಸಮುದ್ರಸ್ನಾನಕ್ಕೆ ಪೋಗುವನೋ ಎಂಬಂತೆ, ರಾತ್ರಿಯೆಲ್ಲವೂ ಗಗನಲಕ್ಷ್ಮಿಯ ಸಂಗಮದಲ್ಲಿ ಜಾಗರಣೆಯಂ ಗೆಯ್ದು ಪಶ್ಚಿಮದಿಕ್ಕೆಂಬ ಕೇಳೀಗೃಹದಲ್ಲಿ ಶಯನವಂ ಗೆಯ್ಯಲೋಸುಗ ಪೋಗುವನೋ ಎಂಬಂತೆ, ನಕ್ಷತ್ರಗಳೆಂಬ ಗರಿಗಳೆಲ್ಲವೂ ಗಳಿತವಾಗಿ ಪೋಗಲು ಗಗನದಲ್ಲಿ ಹಾರಲಾರದೆ ವಾರಿನಿಧಿಯಲ್ಲಿ ಬೀಳುವ ಹಂಸವೋ ಎಂ

ಬಂತೆ, ಪ್ರೀತಿಕರರಾದ ತಾರಾನಾರಿಯರು ಕನ್ನೈದಿಲೆಯ ಲತೆಗಳೆಂಬ ತಾರನಾರಿಯರೂ ಸಹ ಕಾಂತಿಹೀನರಾಗಿ ನಷ್ಟವಂ ಪೊಂದಿದರೆಂಬ ಚಿಂತೆಯಿಂದ ಸಮುದ್ರಪ್ರವೇಶವಂ ಮಾಡುವುದಕ್ಕೆ ಪೋಗುವನೋ ಎಂಬಂತೆ, ಕಾಲನೆಂಬ ಸಿದ್ಧಪುರುಷನು ಪಶ್ಚಿಮಗಿರಿಯಲ್ಲಿರುವ ಮೂಲಿಕೆಯ ಸಂಗಮಂ ಪೊಂದಿಸಲೋಸುಗ ಇರಿಸಿದ ಪಾದರಸದ ಉಂಡೆಯೋ ಎಂಬಂತೆ, ಚರಮಗಿರಿಯ ಶಿಖರಮಂ ಮರೆಗೊಳ್ಳುತ್ತಿರಲು ;

ಅಲ್ಲಲ್ಲಿರುವ ಹರಿಹರ ಮುಂತಾದ ದೇವಸ್ಥಾನಗಳಲ್ಲಿ ಬಹಳವಾದ ಕಹಳಾ ಭೇರೀ ಶಂಖಧ್ವನಿಗಳು ಪ್ರಾತಃಕಾಲವಾದುದೆಂಬ ಸೂಚನೆಯನ್ನು ದಿಕ್ಕಾಂತೆಯರಿಗೆ ಪೇಳುತ್ತಿರಲು ;

ಪುಣ್ಯಸ್ಥಳಗಳಲ್ಲಿರುವ ಪುಣ್ಯಾತ್ಮರುಗಳೂ ಸ್ನಾನಾರ್ಥವಾಗಿ ಎದ್ದು ದೇವತಾ ನಾಮಾಂಕಿತವಾದ ಉದಯರಾಗಗಳಂ ಪೇಳುತ್ತ ನದೀತಟಾಕ ಸರೋವರ ಜಲಾಶಯಂಗಳಂ ಸೇರುತ್ತಿರಲು ;

ಪತಿವ್ರತಾ ಸ್ತ್ರೀಯರುಗಳು ಪತಿಯ ಪಕ್ಕದಿಂದೆದ್ದು ಅಂಗಗಳು ಸೋಂಕಿದ ಅಪರಾಧಗಳಂ ಕ್ಷಮಿಸೆಂದು ಅವನ ಚರಣಯುಗ್ಮಗಳಿಗೆ ನಮಸ್ಕಾರವಂ ಗೆಯ್ದು ಅತ್ತೆಮಾವಂದಿರುಗಳ ಪಾದಪದ್ಮಗಳಿಗೆ ವಂದನೆಯಂ ಗೆಯ್ದು ಇಷ್ಟದೇವತಾ ನಾಮಾಂಕಿತವಾದ ಉದಯರಾಗಗಳಂ ಮನದಲ್ಲಿ ನೆನೆಯುತ್ತ ತಮ್ಮತಮ್ಮ ಗೃಹಕೃತ್ಯಗಳಲ್ಲಿ ಸನ್ನದ್ಧರಾಗುತ್ತಿರಲು ;

ವೃಕ್ಷ ಗೃಹ ಮೊದಲಾದ ಸ್ಥಾನಂಗಳಲ್ಲಿರುವ ಪಕ್ಷಿಗಳು ಗೂಡುಗಳಿಂದ ಕತ್ತುಗಳಂ ನೀಡಿ ಅರುಣನ ಕಿರಣಗಳಿಂದ ಕೆಂಪುದೋರುವ ದಿಕ್ಕುಗಳಂ ನೋಡಿ ಸಂತೋಷದಿಂಕೂಡಿ ಸಂಚರಿಸುವ ಯತ್ನವಂ ಮಾಡುತ್ತಿರಲು ;

ಅಷ್ಟರಲ್ಲೇ ಪೂರ್ವಸಮುದ್ರದಲ್ಲಿ ಬಡಬಾಗ್ನಿ ಜ್ವಾಲೆಯು ದೇವಗಂಗೆಯಂ ಪೀರಲೋಸುಗ ಎದ್ದುಬರುವುದೋ ಎಂಬಂತೆ ತೋರುತ್ತಲಿರುವ ಅರುಣನ ಕಾಂತಿಯು ಜಗತ್ತೆಲ್ಲವನ್ನೂ ಹಬ್ಬುತ್ತಿರಲು ;

ಸಮಸ್ತ ಜನರುಗಳ ನೇತ್ರಗಳಿಗೆ ಭಾಗ್ಯಸ್ವರೂಪವೋ ಎಂಬಂತೆ, ಮೂರ್ತೀಭವಿಸಿರುವ ಇಂದ್ರನ ಪ್ರತಾಪವೋ ಎಂಬಂತೆ, ಪೂರ್ವದಿಗಂಗನೆಯು ಧರಿಸಿರುವ ಕುರವಿಂದಮಣಿಮಯವಾದ ರಾಗಟೆಯೋ ಎಂಬಂತೆ, ದಿಕ್ಕಾಂತೆಯರು ಪಕ್ಷಿಗಳ ಕಲಕಲಧ್ವನಿಗಳೆಂಬ ಆಲಾಪವಂ ಗೆಯ್ಯುತ್ತ ದಿಕ್ಕರಣಗಳೆಂಬ ಹಗ್ಗಗಳಿಂ ಪಿಡಿದು ಸಮುದ್ರದಿಂದ ಜಲವಂ ತುಂಬಿ ಎಳೆಯುತ್ತಿರುವ ಪದ್ಮರಾಗದ ಬಿಂದಿಗೆಯೋ ಎಂಬಂತೆ, ಘೂಕಸಮೂಹಕ್ಕೆ ಉಲ್ಕಾಚಕ್ರವೋ ಎಂಬಂತೆ, ಸಮಸ್ತ ಕರ್ಮಗಳಿಗೂ ಸಾಕ್ಷಿಯಾದ ಸೂರ್ಯನು ಉದಯಗಿರಿಶಿಖರವನ್ನು ಅಲಂಕರಿಸಲು ;

ಮನ್ಮಥನಂ ದೂಷಿಸುತ್ತಿರುವ ನಾಗರಿಕೆಯು ದಿಕ್ಕುದಿಕ್ಕುಗಳಲ್ಲಿರುವ ಕತ್ತ

ಲೆಯ ವೊತ್ತಗಳಂ ಕತ್ತರಿಸುತ್ತ ತಲೆದೋರಿ ಬರುವ ಸೂರ್ಯಕಿರಣಗಳಂ ಕಂಡು ಭಯಮಂ ಪೊಂದುತ್ತ, " ಇನ್ನುಮೇಲೆ ವೃಕ್ಷಲತೆಗಳಿಗೆ ಜಲವಂ ಪೊಯ್ಯಲೋಸುಗ ಬರುವ ವನಪಾಲಕಿಯರಾದ ಬಾಲಕಿಯರು ಎನ್ನಂ ಕಂಡಲ್ಲಿ ಏನೋ ನಿಮಿತ್ತವಾಗಿ ಎಂದಿಗೂ ಬಾರದೆ ಇರುವ ಈ ವಾರಿಜಾಕ್ಷಿಯು ಇಲ್ಲಿರುವುದಕ್ಕೆ ಕಾರಣವೇನೆಂದು ಸಂದೇಹವಂ ಪೊಂದಿ ವಾಸವದತ್ತಾದೇವಿಗೆ ಪೇಳದೆ ಇರರು. ಇನ್ನುಮೇಲೆ ಯಾವ ಸ್ಥಳಕ್ಕೆ ಪೋಗಲಿ? ಎಂತು ನಾನು ಕಂತುರೂಪನಾದ ಎನ್ನ ಪ್ರಾಣಕಾಂತನಾದ ಆ ವತ್ಸರಾಜನನ್ನು ಕಾಣುವ ಉಪಾಯವಂ ಗೆಯ್ಯಲಿ? " ಎಂದು ಯೋಚಿಸುತ್ತ ಬಂದು, ಭೃಂಗಗಳ ಸಂಗೀತದಿಂದ ಪೂರಿತವಾದ ಶಾಲೆಯೋ ಎಂಬಂತೆ, ಮಾರವೀರನ ಮಂಗಳಮಂಟಪವೋ ಎಂಬಂತೆ, ಮಂದಮಾರುತದ ಗುಡಿಯೋ ಎಂಬಂತೆ, ವಸಂತನ ವಾಸಭವನವೋ ಎಂಬಂತೆ, ಮನೋಹರವಾಗಿ ಕಮಲಸರೋವರದ ಒತ್ತಿನಲ್ಲಿ ಚಿತ್ತರವಾಗಿ ತೋರುತ್ತಿರುವ ಸುವರ್ಣಮಯವಾದ ಕದಳೀಗೃಹಮಂ ಕಂಡು, ಸಂತೋಷಮಂ ಪೊಂದಿ,—" ಈ ಕದಳೀಗೃಹಮಂ ನಾನು ಪೊಕ್ಕೆನಾದರೆ ಯಾವ ಸ್ತ್ರೀಯರೂ ಕಾಣಲಾರರು. " ಎಂದು ಆಲೋಚಿಸಿ ಬಂದು ಆ ಪ್ರವೇಶಮಂ ಪ್ರವೇಶಿಸಿ, ಅಲ್ಲಿರುವ ರಾಜೋಪಚಾರಗಳಿಗೆ ಯೋಗ್ಯಗಳಾದ ಪದಾರ್ಥಗಳಂ ಕಂಡು ಆಶ್ಚರ್ಯಮಂ ಪೊಂದಿ, " ಈ ವತ್ಸರಾಜನ ಮಂದಿರದ ವಾಸವೇ ಎನಗೆ ಒಂದಾನೊಂದು ಆನಂದವಂ ಪುಟ್ಟಿಸುತ್ತಿರುವುದು. ಅವನ ಸಂಗವು ಇನ್ನೇನು ಹರ್ಷವನ್ನು ಪುಟ್ಟಿಸುತ್ತಿರುವುದೋ ತಿಳಿಯೆನು. " ಎಂದು ಯೋಚಿಸುತ್ತ ಅಲ್ಲಲ್ಲಿ ನಿಲ್ಲಿಸಿ ಇರುವ ನಿಲುಗನ್ನಡಿಯಲ್ಲಿ ವಿರಹಾಗ್ನಿಯ ಉರಿಯಿಂದ ಬಾಡಿರುವ ತನ್ನ ಸರ್ವಾಂಗವಂ ನೋಡಿ, ಕೆದರಿದ ಕೇಶಪಾಶಗಳಂ ತಿದ್ದಿ, ರತ್ನಕಲಶಗಳಲ್ಲಿ ತುಂಬಿ ಮಡಗಿರುವ ಹಿಮಜಲದಿಂದ ಮಜ್ಜನವಂ ಗೆಯ್ದು, ಕಸ್ತೂರಿಯ ತಿಲಕವಂ ತಿದ್ದಿ, ಒತ್ತಿನಲ್ಲಿರುವ ಚಿತ್ರವಂ ಬರೆಯುವ ಸಾಮಗ್ರಿಯುಂ ಕಂಡು, ಅಧಿಕಸಂತೋಷದಿಂದ ಯುಕ್ತಳಾಗಿ, " ನಾನು ಪ್ರತ್ಯಕ್ಷವಾಗಿ ಆ ಮಹಾರಾಜನಂ ನೋಡುವುದಕ್ಕೆನಗೆ ಪುಣ್ಯವಿಲ್ಲದೆ ಇದ್ದರೂ ಅವನ ಭಾವಚಿತ್ರವನ್ನು ಬರೆದು ನೇತ್ರಾನಂದವಂ ಅನುಭವಿಸುವೆನು " ಎಂದು ಚಿತ್ರವಂ ಬರೆಯುವುದಕ್ಕೆ ಯೋಗ್ಯವಾದ ಫಲಕಮಂ ಹಸ್ತದಲ್ಲಿ ಧರಿಸಿ, ಬಲುಬಗೆಗಳಾದ ಬಣ್ಣಗಳಂ ಕಲಸಿ, ಅವನ ಭಾವಚಿತ್ರವನ್ನು ಬರೆಯುವುದಕ್ಕೆ ಉದ್ಯುಕ್ತಳಾಗುತ್ತ ಇರಲು ;

ಇತ್ತಲು, ಶಕುಂತಶಾಲೆಯಲ್ಲಿದ್ದ ಸುಸಂಗತೆಯು, " ಸಾಗರಿಕೆಯು ಏನೋ ನಿಮಿತ್ತವಾಗಿ ಬೆಳಗಾದರೂ ಈ ಪಕ್ಷಿಶಾಲೆಗೆ ಬರದೆ ಇರುವಳು " ಎಂದು ಹುಡುಕುತ್ತ, ಮೇಧಾವಿನಿಯೆಂಬ ಶಾರಿಕೆಯ ಪಂಜರವಂ ಕೈಯ್ಯೊಳ್ ಪಿಡಿದು ಬರುತ್ತ, ಮುಂಗಡೆಯಲ್ಲಿ ಬರುವ ನಿಪುಣಿಕೆಯೆಂಬ ಕಾಂತೆಯಂ ಕಂಡು,—ಇವಳನ್ನು ಕೇಳಿದಲ್ಲಿ ಸಾಗರಿಕೆಯು ಇರುವ ಸ್ಥಳವನ್ನು ನೆಲೆಯಾಗಿ ಪೇಳುವಳೆಂದು ಬರುತ್ತಿರಲು ;

ಆ ನಿಪುಣಿಕೆಯು ಬರುತ್ತಾ, "ರಾಯನ ಸಮಸ್ತ ವೃತ್ತಾಂತವೂ ಎನ್ನಿಂದ
ತಿಳಿಯಲ್ಪಟ್ಟಿತು. ಆದುದರಿಂದ ಈ ವಾರ್ತೆಯೆಲ್ಲವನ್ನೂ ವಾಸವದತ್ತಾದೇವಿಗೆ ವಿಜ್ಞಾ
ಪನೆಯಂ ಗೆಯ್ಯುವೆನು" ಎಂದು ಬರುತ್ತಿರಲು ;-

ಸುಸಂಗತೆಯು ನಿಪುಣಿಕೆಯಂ ಕುರಿತು,—"ಎಲೆ ಬಾಲ್ಯಮಿತ್ರಳಾದ ನಿಪು
ಣಿಕೆಯೇ, ಅಧಿಕವಾದ ಆಶ್ಚರ್ಯದಿಂದ ವ್ಯಾಪ್ತವಾದ ಹೃದಯವುಳ್ಳವಳಾಗಿ ಒತ್ತಿನಲ್ಲಿ
ಬರುವ ಎನ್ನನ್ನು ತಿರಸ್ಕರಿಸಿ ಕಣ್ಣೆತ್ತಿನೋಡದೆ ಪೋಗುತ್ತಿರುವುದಕ್ಕೆ ಕಾರಣವೇನು?"
ಎಂದು ನುಡಿಯಲಾಗಿ ನಿಪುಣಿಕೆಯು ಹಿಂದಿರುಗಿ ನೋಡಿ,—"ಎಲೆ ಸುಸಂಗತೆಯೇ
ಬಹಳ ಆಶ್ಚರ್ಯದಿಂದ ಯುಕ್ತಳಾಗಿ ಇದ್ದೀಯೆ? ಎಂದು ಚೆನ್ನಾಗಿ ನುಡಿದಿರುವೆ.
ಆದರೂ ಆಶ್ಚರ್ಯಕೆ ಕಾರಣವಂ ಪೇಳುವೆನು ಕೇಳು. ಶ್ರೀಶೈಲದಿಂದ ಬಂದ ರಾಮಾ
ನಂದನೆಂಬ ಸಿದ್ಧಪುರುಷನ ದೆಸೆಯಿಂದ ನಮ್ಮ ವತ್ಸರಾಜನು ಅಕಾಲದಲ್ಲಿ ಕುಸುಮ
ಸಮೃದ್ಧಿಯಂ ಉಂಟುಮಾಡುವ ದೋಹಳಕ್ರಿಯೆಯನ್ನು ಅಭ್ಯಾಸವಂ ಗೆಯ್ದು
ತಾನು ಸಂರಕ್ಷಿಸುತ್ತಲಿರುವ ನವಮಾಲಿಕೆಯೆಂಬ ಲತೆಗೆ ಪುಷ್ಪಸಮೃದ್ಧಿಯನ್ನುಂಟು
ಮಾಡಿ ಸಂತುಷ್ಟನಾಗಿರುವ ವಾರ್ತೆಯನ್ನು ಕೇಳಿರುವೆನು. ಈ ವಾರ್ತೆಯನ್ನು
ಚೆನ್ನಾಗಿ ತಿಳಿದುಬರುವುದೆಂದು ವಾಸವದತ್ತಾದೇವಿಯು ಕಳುಹಿಸಿಕೊಡಲಾಗಿ ಬಂದು
ಆ ವೃತ್ತಾಂತವನ್ನು ತಿಳಿದುಬಂದೆನು. ಈಗ ನೀನು ಏನು ನಿಮಿತ್ತದಿಂದ ಈ ಶಾರಿಕಾ
ಪಂಜರವನ್ನು ಹಿಡಿದು ಯಾವ ಸ್ಥಳಕ್ಕೆ ಬರುತ್ತಲಿದ್ದೀಯೆ, ಪೇಳು" ಎನಲಾಸುಸಂಗ
ತೆಯು —"ಎಲೆ ಪ್ರಿಯಸಖಿಯೇ, ಕೇಳು. ಮಿತ್ರಳಾದ ಸಾಗರಿಕೆಯನ್ನು ಹುಡು
ಕಿಕೊಂಡು ಪೋಗುತ್ತಲಿರುವೆನು" ಎಂದು ನುಡಿಯಲು ; ಅವಳು—"ಎಲೆ ಸುಸಂಗ
ತೆಯೇ, ನಿಮ್ಮ ಸಾಗರಿಕೆಯು ಉರಿಬಡಿದ ಲತೆಯಂತೆ ಕಂದಿದ ಶರೀರವಂ ತಾಳಿ,
ಏನೋ ಒಂದು ಸಂತಾಪದಿಂದ ಯುಕ್ತಳಾಗಿ ಸುವರ್ಣದ ಕದಳೀಗೃಹವಂ ಪ್ರವೇ
ಶಿಸಿದಳು. ನೀನೂ ಆ ಸ್ಥಳವನ್ನು ಕುರಿತು ಪೋಗುವಳಾಗು. ನಾನು ದೇವಿಯ
ಸನ್ನಿಧಿಯಂ ಪೊಂದುವೆನು" ಎಂದು ನುಡಿದು ಪೋಗಲು ;

ಇತ್ತಲು, ಸಾಗರಿಕೆಯು ತನ್ನ ಶರೀರವನ್ನು ಮನ್ಮಥನಿಗೆ ಕೈಗಾಣಿಕೆಯಂ
ಗೆಯ್ದು ಅಧಿಕ ಸಂತಾಪದಿಂದ ಯುಕ್ತಳಾಗಿ ತನ್ನ ಮನಸ್ಸನ್ನು ಕುರಿತು, "ಎಲೆ
ಮನವೇ, ಯಾವ ಪುರುಷನಂ ನೋಡಿದಮಾತ್ರದಿಂದಲೇ ನೀನು ಇಂಥ ಆಯಾಸಕೆ
ಪಾತ್ರವಾಗಿರುವೆಯೋ ಆಯಾಸಮಾತ್ರವೇ ಫಲವಾಗಿ ದುರ್ಲಭವಾಗಿರುವ ಅಂಥ
ಪುರುಷನನ್ನು ಮರಳಿಮರಳಿ ಏಕೆ ಆಯಾಸಕ್ಕೆ ಪಾತ್ರವಾಗಿ ಅನುಸರಿಸುತ್ತಲಿರುವೆ?
ಅವನಂ ನೋಡುವಂಥ ಪುಣ್ಯವನ್ನು ಸಂಪಾದಿಸಲೇ ಇಲ್ಲ. ಆದರೆ ನಿನ್ನ ಮೂಢತ್ವ
ವನ್ನು ನಾನು ಏನೆಂದು ಬಣ್ಣಿಸಲಿ? ಹುಟ್ಟಿದ್ದು ಮೊದಲಾಗಿ ಇದುವರೆಗೂ ಸಂಗ
ಡಲೇ ಅಭಿವೃದ್ಧಿಯನ್ನು ಪೊಂದಿದಂಥ ಎನ್ನನ್ನೂ ಬಿಟ್ಟು ಕ್ಷಣಮಾತ್ರವು ನೇತ್ರಗ
ಳಿಗೆ ಗೋಚರವಾದಂಥ ಆ ರಾಯನನ್ನು ಅನುಸರಿಸಿ ಪೋಗುತ್ತಲಿರುವ ನಿನಗೆ ಸ್ವಲ್ಪ

ವಾದರೂ ನಾಚಿಕೆಯು ತೋರುವುದಿಲ್ಲವೇ ಪೇಳು. ಹಾಗಲ್ಲದಿದ್ದರೆ ಮನ್ಮಥನ ಬಾಧೆಗಳೂ ಬಾಧೆಗೆ ಅಳುಕಿ ಆ ರಾಯನನ್ನು ಪೊಂದುವ ಕಾರ್ಯವನ್ನು ಅಭ್ಯಾಸ ವಂಗೆಯ್ಯುವೆಯೋ ಪೇಳು. ಅಥವಾ ಆ ಮನ್ಮಥನನ್ನೇ ಕೇಳಿನೋಡುವೆನು" ಎಂದು, "ಎಲೈ ಮನ್ಮಥನೇ, ಜಯಿಸಲ್ಪಟ್ಟ ದೇವರಾಕ್ಷಸರುಗಳುಳ್ಳವನಾಗಿದ್ದರೂ ಈ ಸ್ತ್ರೀ ಜನವನ್ನು ಕೊಲ್ಲುತಿರುವ ನೀನು ಹೇಗೆ ನಾಚಿಕೆಯಂ ಪೊಂದದೆ ಇರುವೆಯೋ ಪೇಳು. ಈ ನಿನ್ನ ಬಾಧೆಯು ನಿಮಿತ್ತದಿಂದ ಎನ್ನ ಮರಣದ ಕಾರ್ಯವೇ ಕೈಗೂಡಿ ತೋರುವುದು. ಆದರೂ ಎಷ್ಟರೊಳಗಾಗಿ ಯಾರು ಬಂದು ಎನ್ನ ನೋಡುವುದಿಲ್ಲ ವೋ ಅಷ್ಟರಲ್ಲೇ ಈ ಹಲಗೆಯಲ್ಲಿ ಎನ್ನಿಂದ ಬರೆಯಲ್ಪಟ್ಟ ಆ ಮಹಾರಾಜನ ಭಾವಚಿತ್ರವನ್ನು ಕಣ್ಣುಗಳು ದಣಿಯುವಂತೆ ಚೆನ್ನಾಗಿ ನೋಡಿ ಆಬಳಿಕ ನಾನು ಯೋಚಿಸಿರುವ ಕಾರ್ಯವನ್ನು ನಡೆಯಿಸುವೆನು." ಎಂದು ಆ ಚಿತ್ರಪಠಮಂ ಹಸ್ತ ದಲ್ಲಿ ಪಿಡಿದು ಚೆನ್ನಾಗಿ ಬರೆಯುತ್ತ ಕುಳಿತಿರಲು ;

ಅಷ್ಟರಲ್ಲೇ ಸುಸಂಗತೆಯು ಶಾರಿಕಾಪಂಜರವಂ ಪಿಡಿದು ಬಂದು ಸುಂದರ ವಾಗಿ ಮಂದಮಾರುತನ ಓಲಗಶಾಲೆಯಂತೆ ಒಪ್ಪುತ್ತಿರುವ ಕದಳೀಗೃಹಮಂ ಪೊಕ್ಕು ಮುಂದುಗಡೆಯಲ್ಲಿರುವ ಸಾಗರಿಕೆಯಂ ಕಂಡು ಆಶ್ಚರ್ಯವಂ ಪಡೆದು,— "ಇದೇನೀಸಾಗರಿಕೆಯು ಅಧಿಕವಾದ ಸಿರಪಕ್ಕೆ ಒಳಗಾಗಿ ಮನದಲ್ಲಿ ಯಾವನನ್ನೋ ಧ್ಯಾನಿಸುತ್ತ ಬರೆಯುತ್ತಿರುವಳು. ಆದುದರಿಂದ ನಾನು ಸಮೀಪವಂ ಸೇರಿದರೂ ಎನ್ನ ಕಾಣದೆ ಇರುವಳು. ಆದರೆ ನಾನು ಒಳಗಾಗಿ ಅವಳಿಗೆ ಮರೆಯಾಗಿ ನಿಂದು ಅವಳು ಬರೆಯುವವನು ಯಾವ ಪುರುಷನಾಗುವನು ನೋಡುವೆನು" ಎಂದು ನಿಂದಿರಲು ;

ಸಾಗರಿಕೆಯು,—"ಆದರೆ, ನಾನು ಸುಂದರಕರನಾದ ಆ ವತ್ಸರಾಜನನ್ನು ಬರೆದೆನು. ಅವನ ಅಂಗಸೌಂದರ್ಯವನ್ನು ಚೆನ್ನಾಗಿ ನೋಡುವೆನೆಂದರೆ ನದಿಯಂತೆ ಪೊರಡುತ್ತಿರುವ ಕಣ್ಣೀರುಗಳು ನೋಡಲೀಯದೆ ಎನ್ನ ದೃಷ್ಟಿಗಳನ್ನು ಮುಚ್ಚು ತ್ತಲಿರುವುವು. ಇನ್ನೇನು ಮಾಡಲಿ!" ಎಂದು ನುಡಿಯುತ್ತ ಧಾರಾಕಾರವಾಗಿ ಸುರಿಯುತ್ತಿರುವ ಕಂಬನಿಗಳನ್ನು ತನ್ನ ಸೀರೆಯ ಮುಂಜೆರಗಿನಿಂದ ಒತ್ತುತ್ತಿರಲು ;

ಸುಸಂಗತೆಯು ಚಿತ್ರಪಠಮಂ ನೋಡಿ, "ಇದೇನು! ಈ ಸಾಗರಿಕೆಯು ನಮ್ಮ ರಾಯನ ಭಾವಚಿತ್ರಮಂ ಬರೆದಳು. ಅವನನ್ನು ಈ ವಸಂತೋತ್ಸವದಲ್ಲಿ ಕಂಡಿರಬೇಕು. ಆದುದರಿಂದಲೇ ಈ ಚಿತ್ರದಲ್ಲಿ ಬರೆಯುವುದಕ್ಕೆ ಯೋಗ್ಯನಾ ದನು" ಎಂದು ತನ್ನ ಮನದಲ್ಲಿ ಯೋಚಿಸಿ, ಆ ಸಾಗರಿಕೆಯ ಮುಂಭಾಗವಂ ಸೇರಿ "ಎಲೆ ಸಾಗರಿಕೆಯೇ, ಲೇಸಾದುದು, ಲೇಸಾದುದು. ರಾಜಹಂಸೆಯು ತಾವರೆಗ ಳಿಂದ ಪೂರಿತವಾಗಿರುವ ಕೊಳನಂ ಬಿಟ್ಟು ಮತ್ತೆ ಇನ್ನಾವ ಸ್ಥಳದಲ್ಲಿ ಕ್ರೀಡಿಸು ವುದು ಪೇಳು" ಎಂದು ನುಡಿಯಲಾಗ ಸಾಗರಿಕೆಯು ಭಯದಿಂದ ಯುಕ್ತಳಾಗಿ

ಕಣ್ಣೀರುಗಳಂ ಬಿಡುತ್ತ ಮೊಗವನ್ನೆತ್ತಿನೋಡಿ ಸುಸಂಗತೆಯುಂ ಕಂಡು ಲಜ್ಜೆಯುಂ ತಾಳಿ ಆ ಚಿತ್ರಪಟವನ್ನು ತನ್ನ ಸೀರೆಯ ಸೆರಗಿನಿಂದ ಮುಚ್ಚುತ್ತಿರಲು; ಸುಸಂಗತೆಯು,-“ಇವಳು ಎನ್ನಂ ಕಂಡು ನಾಚಿಕೆಯಿಂದ ಚಿತ್ರಪಟವಂ ಮುಚ್ಚುತ್ತಿರುವಳು. ಆದರೂ ಇವಳನ್ನು ಮಾತನಾಡಿಸಿ ತಿಳಿಯುವೆನು”-ಎಂದು ಯೋಚಿಸಿ, “ಎಲೆ ಮಿತ್ರಳಾದ ಸಾಗರಿಕೆಯೇ, ಈ ಚಿತ್ರಪಟದಲ್ಲಿ ಯಾವ ಪುರುಷನಂ ಬರೆದಿರುವೆ? ಎನ್ನೊಡನೆ ನಾಚಿಕೆಯುಂ ಬಿಟ್ಟು ಹೇಳುವಳಾಗು” ಎನಲು; ಅವಳು-“ಎಲೆ ಸುಸಂಗತೆಯೇ, ಈ ಮಹೋತ್ಸವಕ್ಕೆ ಒಡೆಯನಾದ ಮನ್ಮಥನಂ ಬರೆದಿರುವೆನು” ಎಂದು ನುಡಿಯಲು; ಸುಸಂಗತೆಯು —“ಎಲೆ ಸಖಿಯೆ, ನಿನ್ನ ಜಾಣತನವು ಆಶ್ಚರ್ಯಕರವಾಗಿರುವುದು” ಎಂದು ನಸುನಗುತ್ತ ನುಡಿದು, “ಆದರೂ ಈಗ ನೀನು ಬರೆದಿರುವ ಚಿತ್ರವು ಸ್ವಲ್ಪಭಾವದಿಂದ ಕಡಮೆಯಾಗಿರುವುದು. ನಾನು ಮನ್ಮಥನೊಡನೆ ರತಿಯನೊಡನೆ ಕೂಡಿಸುವೆನು.” ಎಂದು ಬಲಾತ್ಕಾರದಿಂದ ಆ ಚಿತ್ರಪಟವಂ ತೆಗೆದುಕೊಂಡು ಬರೆಯುತ್ತಿರಲು ;

ಸಾಗರಿಕೆಯು ಅವಳು ಬರೆಯುವ ಚಿತ್ರವಂ ನೋಡಿ,—“ಎಲೆ ಸುಸಂಗತೆಯೇ, ಏನು ನಿಮಿತ್ತವಾಗಿ ಎನ್ನನ್ನು ಈ ಚಿತ್ರಪಟದಲ್ಲಿ ಬರೆಯುತ್ತಿರುವೆ?” ಎಂದು ಸ್ವಲ್ಪವಾಗಿ ಕೋಪವಂ ತಾಳಿ, ಹುಬ್ಬುಗಳಂ ಗಂಟಿಕ್ಕುತಿರಲು ; ಸುಸಂಗತೆಯು, “ಎಲೆ ಸಾಗರಿಕೆಯೇ, ಬರಿದೆ ಎನ್ನಮೇಲೆ ಕೋಪವಂ ತಾಳುತ್ತಲಿರುವೆ? ನೀನು ಯಾವ ತೆರದ ಮನ್ಮಥನಂ ಬರೆದಿರುವೆಯೋ ಅದೇರೀತಿಯಾದ ರತಿಯನ್ನು ಬರೆದಿರುವೆನು. ಎಲೆ ಲಜ್ಜಾಶಾಲಿಯಾದ ಸಾಗರಿಕೆಯೇ ಎನ್ನನ್ನು ನಿನಗೆ ಆಗದವಳನ್ನಾಗಿ ತಿಳಿದು ಏತಕೆ ಬರಿದೆ ವ್ಯಥೆಯನ್ನು ಹೊಂದುತ್ತಲಿರುವೆ? ನಡೆದ ಕಾರ್ಯವನ್ನು ಯಥಾರ್ಥವಾಗಿ ಹೇಳಿದಲ್ಲಿ ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡಬಹುದು. ರೋಗನಿದಾನಮಂ ತಿಳಿಯದೆ ಔಷಧವನ್ನು ಕೊಡತಕ್ಕ ರೀತಿಯು ಹೇಗೆ? ನಿನ್ನ ಮನದಲ್ಲಿ ಪುಟ್ಟಿದ ಸಂತಾಪಕೆ ಕಾರಣವನ್ನು ಹೇಳದೆ ವ್ಯರ್ಥವಾಗಿ ತಪಿಸುತ್ತಲಿದ್ದಲ್ಲಿ ನಿನ್ನ ಮನೋಗತವಾದ ಕಾರ್ಯಸಿದ್ಧಿಯು ಹೇಗೆ ಉಂಟಾಗುವುದು? ನಿನಗೆ ನಾನು ಯಥಾರ್ಥವಾಗಿ ಆಪ್ತಳಾಗಿದ್ದಲ್ಲಿ ವಂಚಿಸದೆ ಹೇಳುವಳಾಗು” ಎಂದು ನುಡಿಯಲು: ಸಾಗರಿಕೆಯು ಕಣ್ಣೀರುಗಳಂ ಬಿಡುತ್ತ, “ಎಲೆ ಕಾಂತೆಯೆ, ನಿನ್ನನ್ನು ನನಗೆ ಪ್ರಾಣಾಪ್ತಳನ್ನಾಗಿ ತಿಳಿದಿದ್ದರೂ ಎನ್ನ ಮನವು ನಾಚಿಕೆಯಿಂದ ಬಿಡಗೂಡಿರುವುದು. ನಾನು ಹೇಳಿದ ಕಾರ್ಯವನ್ನು ಯಾರೊಡನೆಯೂ ಹೇಳುವುದಿಲ್ಲವೆಂದು ನಂಬುಗೆಯನಿತ್ತರೆ ಎಲ್ಲಾ ಮಾತುಗಳನ್ನು ಸೊಲ್ಲಿಸುವೆನು” ಎಂದು ನುಡಿಯಲು ; ಅವಳು—“ಎಲೆ ಮುಗ್ಧೆಯೆ, ನಿನಗಿಂತಲೂ ಇನ್ನೊಬ್ಬಳು ಪ್ರಾಣಾಪ್ತಳೂ ಇಲ್ಲ. ಮಿತ್ರದ್ರೋಹ ದ್ರವ್ಯದ್ರೋಹ ಸ್ವಾಮಿದ್ರೋಹವನ್ನು ಮಾಡಿದವರನ್ನು ಭೂಮಿಯು ಹೊರಲಾರಳು. ನಂಬಿದಂಥ ನಿನಗೆ ದ್ರೋಹವಂ ಗೆಯ್ದು ಯಾವ ನರಕಕ್ಕೆ ಪಾತ್ರಳಾಗು

ವೇನು ಪೇಳು” ಎಂದು ಬಲುಬಗೆಯಿಂದ ಒಡಂಬಡಿಸಲು ; ನಾಗರಿಕೆಯು—“ಎಲೆ
ಕಲ್ಯಾಣಿಯೇ, ಕೇಳು, ನಾನು ನಿನ್ನೊಡನೆ ಎನ್ನ ಮನೋಗತವಾದ ಕಾರ್ಯವಂ
ಪೇಳುವಲ್ಲಿ ಒಂದೆರಡು ಮಾತುಗಳಂ ಕಲಿತು ಯಾರ ಮುಂದೆಯಾದರೂ ಪೇಳುವು
ದೆಂದು ಈ ಮೇಧಾವಿನಿಯೆಂಬ ಶಾರಿಕೆಯಿಂದ ಭಯವನ್ನು ಪೊಂದುತ್ತಿರುವೆನು.
ಅದಡೆ ಎನಗೆ ಹೃದಯದಲ್ಲಿ ಪುಟ್ಟಿದ ಸಂತಾಪವು ಅಧಿಕವಾದ ಬಾಧೆಯನ್ನುಂಟು
ಮಾಡುತ್ತಿರುವುದು. ಇದಕ್ಕೊಂದು ಉಪಾಯವನ್ನು ಗೆಯ್ಯುವಳಾಗು” ಎಂದು
ನುಡಿಯಲಾಸುಸಂಗತೆಯು,—“ಎಲೆ ಕೋಮಲಾಂಗಿಯೇ, ಸ್ವಲ್ಪವಾಗಿ ಸೈರಿಸು,
ಸೈರಿಸು” ಎಂದು, “ಎಲೆ ಬಾಲೆಯೇ, ನಿನ್ನ ಸಂತಾಪವು ಪೋಗುವ ರೀತಿಯಂ
ಗೆಯ್ಯುವೆನೆಂದು ಒತ್ತಿನಲ್ಲಿರುವ ಕಮಲ ಸರೋವರಮಂ ಕುರಿತು ಪೋಗಿ, ಅಲ್ಲಿರುವ
ಕಮಲಗಳನ್ನೂ ತಾವರೆಯ ಎಲೆ ದಂಟುಗಳನ್ನೂ ಸಹ ತಂದು, ತಾವರೆಯ ದಳಗ
ಳಿಂದ ಹಾಸಿಗೆಯಂ ಹಾಸಿ, ಅದರ ದಂಟುಗಳಿಂದ ಹಾರ ಪದಕ ಕಂಕಣಗಳಂ
ರಚಿಸಿ, ಅವಳಿಗೆ ಅಲಂಕಾರವಂ ಗೆಯ್ದು ಮಿಕ್ಕಿದ್ದ ಎಲೆಗಳಂ ಹೊದಿಸಿ, ಒಂದು
ಎಲೆಯಂ ಕೆಯ್ಯಲ್ಲಿ ಪಿಡಿದು ಬೀಸುತ್ತ ನಿಂದಿರಲು ; ನಾಗರಿಕೆಯು,—“ಎಲೆ ಕಾಂ
ತೆಯೇ, ನೀನು ಮಾಡುವ ಉಪಚಾರಗಳು ಅಗ್ನಿಗೆ ಆಜ್ಯಾಹುತಿಯಂ ಗೆಯ್ದಂತೆ
ಆದುದು. ಅಗ್ನಿಯು ವಾಯುಸಖನಾದುದರಿಂದ, ನಿನ್ನ ಕಮಲದ ಬೀಸಣಿಗೆಯ
ಗಾಳಿಸೋಂಕಿನಿಂದ ಹೃದಯದಲ್ಲಿ ಪುಟ್ಟಿಕೊಳುತ್ತಿದ್ದ ವಿರಹಾಗ್ನಿಯು ಉರಿಯಿಂ
ದೊಡಗೂಡಿ ಎನ್ನ ಶರೀರವನ್ನು ಕರಿಗೊಳಿಸುತ್ತಲಿರುವುದಾದುದರಿಂದ ನೀನು ಮಾ
ಡುವ ಉಪಚಾರದಿಂದ ಏನೂ ಪ್ರಯೋಜನವಂ ಕಾಣೆನು. ಈ ತಾವರೆಯ ದಂ
ಟುಗಳನ್ನೂ ಎಲೆಗಳನ್ನೂ ಸಹ ತೆಗೆಯುವಳಾಗು. ಬರಿದೆ ಏತಕೆ ಎನ್ನನ್ನು ಕೋ
ಟಲೆಗೊಳಿಸುತಲಿರುವೆ? ಮುಖ್ಯವಾಗಿ ನುಡಿಯುವ ಎನ್ನ ವಾಕ್ಯವನ್ನು ಕೇಳುವ
ಳಾಗು. ಎಷ್ಟು ಪ್ರಯತ್ನಗಳಂ ಮಾಡಿದರೂ ದೊರೆಯದೇ ಇದ್ದ ಜನದಲ್ಲಿ ಎನಗೆ
ಅನುರಾಗವು ಪುಟ್ಟಿರುವುದು. ಲಜ್ಜೆಯಾದರೋ ಅಧಿಕವಾಗಿ ಯಾವ ಸ್ಥಳವನ್ನೀ
ಯದೆ ಇರುವುದು. ನಾನಾದರೋ ಒಬ್ಬರ ಊಳಿಗದಲ್ಲಿ ತಗಲಿಕೊಂಡು ಪರವಶ
ಳಾಗಿರುವೆನು. ಮನದಲ್ಲಿ ಪುಟ್ಟುವ ಪ್ರೇಮವಾದರೋ ಕ್ಷಣಕೊಂದು ಪರಿಯಾಗಿ
ವೃದ್ಧಿಯಂ ಪೊಂದುತ್ತಲಿರುವುದು. ಈ ಕಾರಣವಂ ನೋಡಿ, ಎನಗೆ ಅಳಿವಲ್ಲದೆ,
ಉಳಿದು ಸೌಖ್ಯವಂ ಪೊಂದುವ ರೀತಿಯಂ ಕಾಣೆನು” ಎಂದು ಮುಖವಂ ಮುಚ್ಚಿ
ರೋದನವಂ ಗೆಯ್ಯುತ್ತಿರಲು ; ಸುಸಂಗತೆಯು,—“ಎಲೆ ಕಾಂತೆಯೇ ಕೇಳು.
ನೀನು ತಿಳಿಯದವಳಲ್ಲ. ಜಾಣೆಯಾದ ನಿನಗೆ ನೀತಿಯಂ ಪೇಳುವುದಕೆ ನಾನು ಶಕ್ತ
ಳಾಗಲಾರೆನು. ಲೋಕದಲ್ಲಿ ಸತ್ಪುರುಷರುಗಳು ವಿಪತ್ತಿನಲ್ಲಿ ಧೈರ್ಯವನ್ನೂ ಸಂಪ
ತ್ತಿನಲ್ಲಿ ವಿನಯ ವಿತರಣವನ್ನೂ ಯಶಸ್ಸಿನಲ್ಲಿ ಪ್ರೀತಿಯನ್ನೂ ಶಾಸ್ತ್ರಾಭ್ಯಾಸದಲ್ಲಿ
ವ್ಯಸನವನ್ನೂ ಯುದ್ಧಭೂಮಿಯಲ್ಲಿ ಪರಾಕ್ರಮವನ್ನೂ ತಾಳುತ್ತಲಿರುವರು. ಮತ್ತು

ಯಾವ ಪುರುಷನಾಗಲಿ ಸ್ತ್ರೀಯಾಗಲಿ ತನ್ನ ಶರೀರವಿರುವವರೆಗೂ ಸಂಪತ್ತನ್ನೇ ಪ್ರಾರ್ಥಿಸುತ್ತ ಆ ಸಂಪತ್ತು ನನಗೆ ಹೇಗೆ ದೊರಕೀತೆಂಬ ಸಂದೇಹವಂ ಬಿಟ್ಟು ಕಾರ್ಯಗಳಂ ನಡೆಸಬೇಕೆಂತಲೂ, ಒಂದಾನೊಂದು ವೇಳೆಯಲ್ಲಿ ಪೂರ್ವಾರ್ಜಿತವಾದ ಕರ್ಮಶೇಷದಿಂದ ಯಾವುದಾದರೂ ಒಂದು ವಿಪತ್ತು ಬಂದಲ್ಲಿ ' ಈ ವಿಪತ್ತುಗಳನ್ನು ಅನುಭವಿಸಲಾರೆನು; ಈ ದೇಹವಾದರೂ ಹೋಗಬಾರದೇ ' ಎಂದು ತನ್ನ ಶರೀರವನ್ನು ನಿಂದಿಸಬಾರದೆಂತಲೂ ಧರ್ಮಶಾಸ್ತ್ರವು ಹೇಳುತ್ತಿರುವುದು. ಅದಂತಿರಲಿ. ಸೀತಾದೇವಿಗೆ ಬಂದ ಕಷ್ಟವನ್ನೂ, ದ್ರೌಪದಿಯೂ ವಿರಾಟರಾಯನ ಮನೆಯಲ್ಲಿ ಮಾಡಿದ ಗೌಡಿತನವನ್ನೂ, ಕೀಚಕನಿಂದ ಪಟ್ಟ ಪಾಡುಗಳನ್ನೂ, ಆಬಳಿಕ ಉಂಟಾದ ಸೌಖ್ಯದ ವಾರ್ತೆಯನ್ನೂ ಸಹ ಕೇಳಿರುವ ನಿನಗೆ ವಿಶೇಷವಾಗಿ ನಾನು ಹೇಳತಕ್ಕದೇನು? ಪ್ರಾಣಿಗಳಿಗೆ ಪ್ರಾರ್ಥಿಸುವುದಕ್ಕೆ ಯೋಗ್ಯವಲ್ಲದೆ ಇರುವ ದುಃಖಗಳೂ ಒಲ್ಲೆ ಒಲ್ಲೆನೆಂದರೂ ನಿಲ್ಲದೆ ಹೇಗೆ ಬರುತ್ತಲಿರುವುವೋ, ಆರೀತಿಯಿಂದ ಸುಖಗಳೂ ಪ್ರಾಪ್ತವಾಗುತ್ತಲಿರುವುವು. ಬ್ರಹ್ಮನು ಪ್ರಾಣಿಗಳ ಹಣೆಯಲ್ಲಿ ಏನು ಬರೆದಿರುವನೋ ಆ ಫಲವು ಮೇರುಪರ್ವತದ ಮೇಲಿದ್ದರೂ ಅಧಿಕವಾಗಿ ಬರಲಾರದು. ಇದಕ್ಕೆ ದೃಷ್ಟಾಂತವನ್ನು ಹೇಳುವೆನು ಕೇಳು. ಒಂದೇ ಗಡಿಗೆಯನ್ನೂ ಭಾವಿಯಲ್ಲಿ ಮುಳುಗಿಸಿದರೂ ಸಮುದ್ರದಲ್ಲಿ ಮುಳುಗಿಸಿದರೂ ಸರಿಯಾಗಿ ತುಂಬಿ ಬರುವುದಲ್ಲದೆ ಹೆಚ್ಚಾಗಿ ಹೇಗೆ ನೀರು ಬರಲಾರದೋ ಆರೀತಿಯಿಂದ ನಾವು ಮಾಡಿದ ಕರ್ಮಕೆ ಅನುಗುಣವಾಗಿ ಬ್ರಹ್ಮನು ಹಣೆಯಲ್ಲಿ ಬರೆಯುತ್ತಲಿರುವನು. ಅದೇ ರೀತಿಯಿಂದ ಹೆಚ್ಚು ಕಡಮೆಗಳಿಲ್ಲದೆ ಸುಖದುಃಖರೂಪವಾದ ಫಲಗಳು ಕೈಸೇರುತಲಿರುವುವು. ಎಲೆ ಕಲ್ಯಾಣಿಯೇ, ನೀನು ರಾಯನನ್ನು ನೋಡದಂತೆಯೂ ರಾಯನು ನಿನ್ನನ್ನು ನೋಡದಂತೆಯೂ ವಾಸವದತ್ತಾದೇವಿಯು ನಿರ್ಬಂಧವಂ ಗೆಯ್ದಿದ್ದರೂ ದೈವಯೋಗದಿಂದ ನಿನಗೆ ಹೇಗೆ ರಾಯನ ಸಂದರ್ಶನವುಂಟಾಯಿತೋ, ಹಾಗೆಯೇ ಮುಂದೆಯೂ ಅವನೊಡನೆ ಸಂಗಮವುಂಟಾಗುತ್ತಲಿರುವುದು. ಹುಟ್ಟಿದ್ದು ಮೊದಲಾಗಿ ಮರಣವಾಗುವವರೆಗೂ ಯಾವವನು ಸುಖವನ್ನೇ ಅನುಭಸುತ್ತಿರುವನು, ಯಾವವನು ಕಷ್ಟವನ್ನೇ ಅನುಭವಿಸುವನು? ಸುಖದುಃಖಗಳು ರಥದ ಗಾಲಿಯ ಅಂಚಿನಲ್ಲಿ ಹತ್ತಿಸಿದ ಸುಣ್ಣದ ಬೊಟ್ಟಿನಂತೆ ಸುತ್ತುತ್ತಲಿರುವುವಲ್ಲದೆ ಒಂದುಕಡೆ ಶಾಶ್ವತವಾಗಿ ನಿಲ್ಲಲಾರವು. ಇದನ್ನು ತಿಳಿದಂಥ ನಿನ್ನಂಥ ಬುದ್ಧಿವಂತರಾದವರು ಸುಖದುಃಖಗಳನ್ನೂ ಮನವನ್ನೂ ಬಿಗಿಗೆಯ್ದು ಎಲ್ಲವೂ ಈಶ್ವರಾಧೀನವೆಂದು ನಿಶ್ಚಯಿಸಿರುವರಲ್ಲದೆ ಕಷ್ಟದಲ್ಲಿ ಕೊರಗುತ್ತ ಸುಖದಲ್ಲಿ ಕೊಬ್ಬುತ್ತ ನಡೆಯಲಾರರು. ಎಲೆ ಮಂಗಳಾಂಗಿಯೇ, ನಿನ್ನನ್ನು ನೋಡಿದಲ್ಲಿ, ಮಹಾಸದ್ವಂಶದಲ್ಲಿ ಹುಟ್ಟಿದವಳನ್ನಾಗಿಯೂ ಬಹು ಭಾಗ್ಯವಂತನ ಮಗಳನ್ನಾಗಿಯೂ ತಿಳಿಯುತ್ತಲಿರುವೆನು. ಆದುದರಿಂದ ಈಗ ಎನ್ನನ್ನೂ ನಿನ್ನ ಸಹೋದರಿಯನ್ನಾಗಿ ತಿಳಿದು ಸ್ವಲ್ಪವಾದರೂ ವಂಚನೆಯಂ ಗೆಯ್ಯದೆ

ಪೇಳುವಳಾಗು. ಲೋಕದಲ್ಲಿ ತನಗೆ ಉಂಟಾಗಿರುವ ದುಃಖವನ್ನು ಆಪ್ತನಾದ ಮಿತ್ರನಲ್ಲಿಯೂ, ಗುಣವಂತನಾದ ಭೃತ್ಯನಲ್ಲಿಯೂ, ಪ್ರೀತಿಪಾತ್ರಳಾದ ನಾರಿಯಲ್ಲಿಯೂ, ಶಕ್ತಿತ್ರಯದಿಂದ ಕೂಡಿದ ಪ್ರಭುವಿನಲ್ಲಿಯೂ ಪೇಳಿದಲ್ಲಿ ಸಮಸ್ತ ದುಃಖದಿಂದಲೂ ಬಿಡಲ್ಪಟ್ಟು ಸುಖವಂತನಾಗುವನು, ಎಂದು ನೀತಿವಂತರಾದ ಪುರುಷರು ಪೇಳುತ್ತಲಿರುವರು. ನಾನು ನಿನ್ನ ಸುಖದುಃಖಕ್ಕೆ ತಗಲಾಗಿರುವಳು ಎಂದು ತಿಳಿದಲ್ಲಿ ನಿನ್ನ ವೃತ್ತಾಂತವನ್ನು ಚಿತ್ತೈಸುವಳಾಗು" ಎಂದು ಅವಳ ಗಲ್ಲವನ್ನು ತನ್ನ ಕರಪಲ್ಲವದಿಂದ ಮುದ್ದಿಸಿ, ಕಂಬನಿಗಳನ್ನು ತನ್ನ ಕರವಸ್ತ್ರದಿಂದ ಒತ್ತಿ, ಅವಳ ಮುಂಡೆಯನ್ನು ತನ್ನ ತೊಡೆಯಮೇಲಿರಿಸಿ ಬಹುಬಗೆಯಾದ ನೀತಿಗೂಡಿದ ಮಾತುಗಳನ್ನು ನುಡಿಯುಲಾ ನಾಗರಿಕೆಯು,—" ಸಮಸ್ತರಾದ ಬಂಧುಗಳಿಂದಲೂ ವಿರಹಿತಳಾದ ಎನಗೆ ಈ ಸುಸಂಗತೆಯು ಅಕ್ಕತಂಗಿಯರಿಗಿಂತಲೂ ಅಧಿಕವಾದ ಪ್ರೇಮದಿಂದೊಡಗೂಡಿ ಯಾವಾಗಲೂ ಎನ್ನಲ್ಲಿ ಸಕಚಿತ್ತಳಾಗಿರುವಳು. ಈ ವತ್ಸರಾಜನಲ್ಲಿ ಎನಗೆ ಉಂಟಾಗಿರುವ ಅಭಿಲಾಷೆಯು ಇವಳ ಸಹಾಯವಿಲ್ಲದಿದ್ದರೆ ಸಂಪೂರ್ಣವಾದ ಮನೋರಥದೊಡನೆ ಕೂಡಲಾರದು. ಆದುದರಿಂದ ಇವಳೊಡನೆ ಎನ್ನ ವೃತ್ತಾಂತವನ್ನು ಪೇಳಬಹುದು. ಅದಲ್ಲದೆ ಇಷ್ಟುಪ್ರಕಾರವಾಗಿ ಕೇಳುತ್ತಿರುವ ಇವಳೊಡನೆ ನಾನು ವಂಚಿಸಿ ಪೇಳಿದವಳಾದರೆ ಅಪದ್ಧವನ್ನು ಪೇಳಿದ ಪಾತಕವೂ ಮಿತ್ರದ್ರೋಹವೂ ಸಹ ನಡತೆಯಲ್ಲಿ ವಿರೋಧವೂ ಸಹ ದೊರೆಕೊಳ್ಳುವುವು. ಅದರಲ್ಲಿ ಸಂದೇಹವು ತೋರಲಾರದು. ನಂಬುಗೆಯಿಂದ ಪೇಳಿದ ಎನಗೆ ಇವಳು ವಂಚನೆಯಂ ಗೆಯ್ಯುವಳೇ ಆದರೆ ಇವಳ ವಂಚನೆಗೆ ತಕ್ಕ ಶಿಕ್ಷೆಯನ್ನು ಈಶ್ವರನೇ ಉಂಟುಮಾಡುತ್ತಲಿರುವನು. ಆದುದರಿಂದ ಎನ್ನ ವೃತ್ತಾಂತವನ್ನು ಪೇಳುವೆನು" ಎಂದು ತನ್ನ ಮನದಲ್ಲಿ ನಿಶ್ಚಯಿಸಿ, ಸುಸಂಗತೆಯ ಮುಖಮಂ ನೋಡಿ, ನಿಟ್ಟುಸಿರಂ ಬಿಟ್ಟು, "ಎಲೆ ಕಲ್ಯಾಣಿಯೇ, ಪಾಪಿಯಾದ ಎನ್ನ ವಾರ್ತೆಯನ್ನು ಏತಕ್ಕೆ ಕೇಳಲಿಚ್ಛೈಸುತ್ತಿರುವೆ? ಏನು ದುಃಖವಿದ್ದರೂ ಎನ್ನ ಹೃದಯವನ್ನೇ ತಪಿಸುತ್ತಲಿರಲಿ. ಅದಂ ಪೇಳಿ, ನಿನಗೂ ದುಃಖವನ್ನು ಉಂಟುಮಾಡಬಾರದೆಂದು ಇದುವರೆಗೂ ಪೇಳದೆ ಇದ್ದೆನು. ಈಗ ಯಾವುದೊಂದು ದುಃಖವಿದ್ದರೂ ನಾನೂ ಅನುಭವಿಸುತ್ತೇನೆಂದು ನಿನ್ನ ಚಿತ್ತದಲ್ಲಿ ತಿಳಿದು ಎನ್ನನ್ನು ಬಲಾತ್ಕರಿಸುವೆಯಾದುದರಿಂದ ಪೇಳುವೆನು ಕೇಳು" ಎಂದು, ತಾನು ಸಿಂಹಳದೇಶದಿಂದ ಹೊರಟುಬರುವುದಕ್ಕೆ ನಿಮಿತ್ತವೇ ಮೊದಲಾದ ಸಮಸ್ತಸಂಗತಿಯನ್ನೂ ಹೇಳಿ,—' ಎಲೆ ಸುಸಂಗತೆಯೇ, ಕೇಳು. ನೀನು ಪ್ರಾಣಕ್ಕಿಂತಲೂ ಪ್ರೀತಿಕರಳೆಂದು ಈ ವೃತ್ತಾಂತವನ್ನು ಪೇಳಿರುವೆನು. ಈ ವಾರ್ತೆಯು ಮತ್ತೊಬ್ಬರ ಕಿವಿಯಂ ಪೊಂದಿದ ಸಂಗತಿಯನ್ನು ನಾನು ತಿಳಿದ ಕ್ಷಣದಲ್ಲೀ ಸ್ತ್ರೀಹತ್ಯಾದೋಷವು ನಿನಗೆ ಸುಲಭದಲ್ಲಿ ದೊರೆಕೊಳ್ಳುವುದು" ಎಂದು ನುಡಿದು, ತಡೆಯಿಲ್ಲದೆ ಕಣ್ಣೀರುಗಳಂ ಬಿಡುತ್ತಿರಲು; ಸುಸಂಗತೆಯು ಅವಳ ವೃತ್ತಾಂತವನ್ನು ಕೇಳಿ, ಅತ್ಯಂತವಾದ ಆಶ್ಚರ್ಯ

ದಲ್ಲಿ ಮುಳುಗಿ, “ ದೈವಕಾರ್ಯವು ಯಾವಯಾವ ಸ್ಥಳದಲ್ಲಿ ಏನೇನು ಸುಖದುಃಖಗಳನ್ನು ಅನುಭವಿಸತಕ್ಕುದೋ ಆಯಾಯ ಸ್ಥಳಕ್ಕೆ ಪ್ರಾಣಿಗಳನ್ನು ತೆಗೆದುಕೊಂಡು ಬರದೆಬಿಡದು. ಇವಳು ಮಹಾರಾಜಪುತ್ರಿಯಾದುದರಿಂದಲೇ ಈ ರೂಪಿನ ಅತಿಶಯವೂ, ನೀತಿಗೂಡಿದ ಮಾತಿನ ಜಾಣ್ಮೆಯೂ, ಸಮಸ್ತ ವಿದ್ಯೆಗಳಲ್ಲಿ ಪಾರಂಗತ್ವವೂ, ಸಮುದ್ರವಂ ಧಿಕ್ಕರಿಸುವ ಗಾಂಭೀರ್ಯವೂ, ಸುಧೆಯಂ ಸೋಲಿಸುವ ವಾಕ್ಯದ ಮಾಧುರ್ಯವೂ, ಬಗೆಬಗೆಯಾಗಿ ಅಲಂಕಾರವಂ ಗೆಯ್ಯುವ ಕುಶಲವಿದ್ಯಾಚಾತುರ್ಯವೂ, ಊಳಿಗದ ಹೆಣ್ಣುಗಳಿಗೆ ಸಲಿಗೆಯಂ ಕೊಡದ ರೀತಿಯೂ, ಇನ್ನೂ ಅನೇಕವಾದ ಸದ್ಗುಣಗಳೂ ಇವಳಲ್ಲಿ ನೆಲೆಗೊಂಡಿರುವುವಲ್ಲದೆ, ಸಾಧಾರಣರಲ್ಲಿ ಪುಟ್ಟಿದವಳಿಗೆ ಈ ಗುಣಗಳು ದೊರಕಲಾರವು. ಮತ್ತು ಲೋಕದಲ್ಲಿ ಜನರು ನಡೆಯುವ ನಡತೆಗಳೇ ಅವರವರ ಉತ್ಪತ್ತಿಯ ಕ್ರಮವನ್ನು ಸೂಚಿಸುತ್ತಲಿರುವುವು ” ಎಂದು ತನ್ನ ಮನದಲ್ಲಿ ನಿಶ್ಚಯಿಸಿ, “ ಎಲೆ ಮಂಗಳಾಂಗಿಯೇ, ಇದುವರೆಗೂ ನಿನ್ನಲ್ಲಿ ಸಲಿಗೆಯಿಂದ ಏನು ಅಪರಾಧವಂ ಗೆಯ್ದಿದ್ದರೂ ಕ್ಷಮಿಸುವಳಾಗು ” ಎಂದು ಬಿನ್ನವಿಸಲು ; ಅವಳು— “ ಎಲೆ ಸುಸಂಗತೆಯೇ, ಈಗ ಇದ್ದ ರೀತಿಯು ಸಹವಾಸದಿಂದ ಇರದೆ ಇನ್ನೊಂದು ಪ್ರಕಾರ ಮರ್ಯಾದೆಯನ್ನುಂಟುಮಾಡುವುದಾದರೆ ಅದೇ ಸಮಸ್ತ ಜನರಿಗೂ ಸಂದೇಹವನ್ನು ಬೀರುತ್ತಿರುವುದು ” ಎಂದು ನುಡಿದು ವ್ಯಸನಾತುರಳಾಗಿ ಇರುತ್ತಿರಲು ; ಸುಸಂಗತೆಯು ಸಮಸ್ತವಾದ ಉಪಚಾರಗಳಿಂದ ಸಂತೈಸುತ್ತಿದ್ದಳು.

ಎಂಬಲ್ಲಿಗೆ

ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಹನ್ನೊಂದನೆಯ ಗುಚ್ಛಂ ಸಂಪೂರ್ಣಂ.

## ಹನ್ನೆರಡನೆಯ ಗುಚ್ಛಂ.

ಅನಂತರದಲ್ಲಿ ಸುಸಂಗತೆಯು ನಾಗರಿಕೆಯು ದುಃಖಸಮಾಧಾನವಂ ಗೆಯ್ದು “ ಯಾವ ತೆರದಲ್ಲಾದರೂ ಆ ಮಹಾರಾಜನೊಡನೆ ಸಮಾಗಮವನ್ನುಂಟುಮಾಡುವ ರೀತಿಯನ್ನು ವಿರಚಿಸಿ ನಿನ್ನ ಮನಸ್ಸಿಗೆ ಸಂತೋಷವಂ ಪುಟ್ಟಿಸುವೆನು ” ಎಂದು ನಂಬುಗೆಯ ಮಾತುಗಳನ್ನು ಪೇಳುತ್ತಿರಲು ;

ಅಷ್ಟರಲ್ಲೇ ಅಂತಃಪುರದ ಬಾಗಿಲಲ್ಲಿ ಕಟ್ಟಿದ್ದ ಸಿಂಗಳೀಕವು ಸರಪಣಿಯಂ ಕಿತ್ತುಕೊಂಡು ಅಲ್ಲಿದ್ದವರ ಮೇಲೆ ಬಿದ್ದು ಗಾಸಿಯನ್ನುಂಟುಮಾಡಲು, ಆ ಜನಗಳ ಕೋಲಾಹಲ ಧ್ವನಿಯು ಕೇಳಿಬರಲು; ಸುಸಂಗತೆಯು ಇಷ್ಟುಶಬ್ದಕೆ ಕಾರಣವೇನೆಂದು ತಾನಿದ್ದ ಸ್ಥಳವಂ ಬಿಟ್ಟು ಕದಳೀಗೃಹದ ಬಹಿರ್ಭಾಗವಂ ಸೇರಿ ನೋಡುತ್ತಿರಲು; ಸಿಂಗಳೀಕನು ಇನ್ನೊಂದು ಬಾಲದ ಶಂಕೆಯನ್ನುಂಟುಮಾಡುತ್ತಿರುವ ಕಿತ್ತಿರುವ ಸುವರ್ಣದ ಸರಪಣಿಯನ್ನು ಎಳೆದುಕೊಂಡು ಬರುತ್ತ, ಕಾಲಲ್ಲಿ ಕಟ್ಟಿದ ಗಗ್ಗರಗಳು ಧ್ವನಿಗೆಯ್ಯುವಂತೆ ಕುಣಿಯುತ್ತ, ಹುಬ್ಬುಗಳನ್ನು ಎಬ್ಬಿಸಿ ಹಲ್ಲುಗಳಂ ಕಿರಿದು ಎಲ್ಲಾ ಜನವಂ ಬೆದರಿಸುತ್ತ, ಮುಚ್ಚಿದ್ದ ಬಾಗಿಲುಗಳಂ ಹೆಚ್ಚಾಗಿ ಬಿರಿಯುವಂತೆ ಹಸ್ತಗಳಿಂ ನೂಕುತ್ತ, ಮನಬಂದಂತೆ ಕುಣಿಯುತ್ತ, ಕುದುರೆಯ ಲಾಯವಂ ದಾಟಿ, ಅಂತಃಪುರದ ಬಾಗಿಲ ಕಾವಲುಗಾರರಾದ ಕುಬ್ಜವಾಮನರಾದ ಜನಗಳಂ ತನ್ನ ಉಗುರುಗಳಿಂದ ಗಾಯವಂ ಗೆಯ್ದು ಬೆದರಿಸಿ, ಪಕ್ಷಿಶಾಲೆಯಂ ಪೊಕ್ಕು, ಪಕ್ಷಿಗಳಿಗೆ ಹಾಕಿದ್ದ ಫಲಗಳಂ ಭಕ್ಷಿಸಲೋಸುಗ ಗೂಡುಗಳ ಬಾಗಿಲಂ ತೆಗೆಯಲು ಪೋಗಿ ದಿಟ್ಟೆಯರಾದ ಊಳಿಗದ ಹೆಣ್ಣುಗಳ ಪೆಟ್ಟಿನಿಂದ ಕಂಗೆಟ್ಟು ಆ ಸ್ಥಳವಂ ಬಿಟ್ಟು, ಮಟ್ಟುಮೀರಿದ ವೇಗದಿಂ ಬಿಟ್ಟು ಬರುತ್ತಿರಲು; ಸುಸಂಗತೆಯು ಆ ಸಿಂಗಳೀಕನಂ ಕಂಡು ಭಯಭ್ರಾಂತಳಾಗಿ ಓಡಿಪೋಗಿ, ಇದೇನು ಕಲಕಲವೆಂದು ಸಂದೇಹವಂ ಪೊಂದುತ್ತಲಿದ್ದ ಸಾಗರಿಕೆಯ ಸಮೀಪವಂ ಸೇರಿ, “ ಎಲೆ ಕಾಂತೆಯೇ, ಅಂತಃಪುರದ ಬಾಗಿಲಲ್ಲಿ ಕಟ್ಟಿದ ಕರಿಯ ಕೋಡಗಂ ಸರಪಣಿಯಂ ಕಿತ್ತುಕೊಂಡು ಉಪವನ ಮಾರ್ಗವಾಗಿ ಇಲ್ಲಿಗೆ ಬರುವಂತೆ ತೋರುತ್ತಲಿರುವುದು. ನಾವಿರ್ವರು ಕತ್ತಲೆಯಾಗಿರುವ ಒತ್ತಿನ ಈ ಪೊಂಗೆಯಮರದ ಪೊದರ ಸೇರುವ, ನಡೆ” ಎಂದು ಅವಳಂ ಕರೆದು ಎಳೆದುಕೊಂಡು ಪೋಗಿ, ಹೊಂಗೆಯಮರದ ಗುಂಪನ್ನು ಸೇರಿ ನಿಂತು ನೋಡುತ್ತಿರಲು; ಸಾಗರಿಕೆಯು ಆ ಕೋಡಗನಂ ಕಂಡು ಭಯಾತುರಳಾಗಿ, “ ಎಲೆ ಸುಸಂಗತೆಯೇ, ಇನ್ನೇನು ಮಾಡಲಿ! ಚಿತ್ರಪಟಮಂ ಮರೆತು ಬಂದೆನು. ಅದು ಯಾರ ಕೈಗಾದರೂ ಸಿಕ್ಕಿದಲ್ಲಿ ಬಹಳವಾದ ಪ್ರಮಾದಕೆ ಕಾರಣವಾಗುವುದು” ಎಂದು ತಲ್ಲಣಿಸುತ್ತಿರಲು; ಸುಸಂಗತೆಯು—“ ಎಲೆ ಜ್ಞಾನಶೂನ್ಯಳೇ, ಚಿತ್ರಪಟದ ಮಾತಂ ತಿರಲಿ, ಇದೋ ನೋಡು. ದುಷ್ಟನಾದ ಆ ಕೋಡಗನು ಮೊಸರು ಅನ್ನದ ಆಸೆಯಿಂದ ಪಂಜರದ ಬಾಗಿಲಂ ತೆಗೆದು ಮೇಧಾವಿನಿಯೆಂಬ ಶಾರಿಕೆಯಂ ಹಾರಿಸಿ, ಅಲ್ಲಿದ್ದ ಮೊಸರುಅನ್ನದ ಬಟ್ಟಲಂ ತೆಗೆದುಕೊಂಡು ಪೋದುದು. ಆ ಶಾರಿಕೆಯು ನಮ್ಮ ಎದುರಾಗಿ ಹಾರಿಪೋಗುತ್ತಲಿರುವುದು” ಎಂದು ತೋರಿಸಲು; ಸಾಗರಿಕೆಯು ಮನದಲ್ಲಿ ಬಹಳವಾದ ವ್ಯಾಕುಲವಂ ತಾಳಿ, “ ಎಲೆ ಸುಸಂಗತೆಯೇ, ಈ ಶಾರಿಕೆಯಲ್ಲಿ ವಾಸವದತ್ತಾದೇವಿಗೆ ಪ್ರಾಣಕ್ಕಿಂತಲೂ ಅತಿಶಯವಾದ ಪ್ರೇಮವಿರುವುದು. ಇದು ಪೋದ ಸಂಗತಿಯಂ ಕೇಳಿದವಳಾದರೆ, ಬಲವಾದ ಶಿಕ್ಷೆಗೆಯ್ಯದೆ ಬಿಡಳು.

ಮುಂದೆ ಮಾಡತಕ್ಕುದೇನು ?" ಎಂದು ಪೇಳಲು; ಅವಳು " ಎಲೆ ಲಕ್ಷ್ಮೀರೂಪಳಾದ ಮಿತ್ರಳೇ, ಕೇಳು. ಆ ಶಾರಿಕೆಯು ಬಾಲ್ಯದಿಂದಲೂ ಸಾಕಿರುವುದರಿಂದ ಎಲ್ಲಿಯೂ ಪೋಗಲಾರದು. ಒಂದು ಬಾರಿ ಮೀರಿಪೋದರೂ ಶಕುಂತಶಾಲೆಯನ್ನೇ ಪೋಗಿ ಸೇರುವುದು. ಆದರೂ ನಾವು ಉಪೇಕ್ಷೆಯಂ ಗೆಯ್ಯದೆ ಹುಡುಕುವ ನಡೆ " ಎಂದು ಅವಳಿಂದೊಡಗೂಡಿ ಬರುತ್ತಿರಲು ; ಸಾಗರಿಕೆಯು ಬರುತ್ತ ಹಿಂದಿರಿಗಿ ನೋಡಿ ಭಯವಂ ಪೊಂದಿ, " ಎಲೆ ಕಾಂತೆಯೇ, ಮರಳಿ ಆ ಕರಿಯು ಕೋಡಗನು ಹಿಂದಿರಿಗಿ ಬರುವಂತೆ ತೋರುವುದು " ಎಂದು ನುಡಿಯಲು ; ಸುಸಂಗತೆಯು ಚೆನ್ನಾಗಿ ನೋಡಿ ನಸುನಗುತ್ತ, " ಎಲೆ ಮುಗ್ಧೆಯೇ, ಇವನು ನಮ್ಮ ರಾಜೇಂದ್ರನಿಗೆ ಅಂತಃಪುರಕ್ಕೆ ಪಾತ್ರನಾಗಿ, ಮಿತ್ರನಾದ ವಸಂತಕನು ಬರುತಿರ್ಪನು. ನೀನು ಭಯವಂ ಪೊಂದಬೇಡ" ಎಂದು ನುಡಿಯುತ್ತಿರಲು ; ಸಾಗರಿಕೆಯು ಅವನಂ ರೆಪ್ಪೆಯನ್ನಿಕ್ಕದೆ ನೋಡುತ್ತಿರಲು ; " ಎಲೆ ನಲ್ಲಳೇ, ಇಲ್ಲಿ ನಿಂತು, ವಸಂತಕನನ್ನು ನೋಡಿದುದರಿಂದ ಪ್ರಯೋಜನವಿಲ್ಲ. ಶಾರಿಕೆಯು ಬಹುದೂರವಾಗಿ ಪೋದಂತೆ ತೋರುವುದು. ಶೀಘ್ರದಿಂದ ಪೋಗಿ ಅದನ್ನು ಹುಡುಕುವ ನಡೆ " ಎಂದು ಪೋಗುತ್ತಿರಲು;

ವಿದೂಷಕನು ಬರುತ್ತ,—" ಎಲೈ ರಾಮಾನಂದಸಿದ್ಧನೇ, ನಿನ್ನ ತಪೋಮಹಿಮೆಯನ್ನು ನಾನೇನೆಂದು ಬಣ್ಣಿಸಲಿ ? ನಿನ್ನ ಜಾಣ್ಮೆಯನ್ನು ಮಹಾರಾಜನಿಗೆ ವಿಜ್ಞಾಪಿಸುವೆನು " ಎಂದು ನುಡಿಯುತ್ತ ಬರುತ್ತ, " ಇದೋ ! ಇತ್ತಲು ನಮ್ಮ ರಾಜೇಂದ್ರನು ರಾಮಾನಂದಸಿದ್ಧನಿಂದ ಕಲಿತ ದೋಹಳವಿದ್ಯೆಯನ್ನು ಮೊದಲು ಪರೀಕ್ಷಿಸಬೇಕೆಂದು ತಾನು ಸಾಕಿದ ಜಾಜಿಯ ಬಳ್ಳಿಯನ್ನು ಪಲ್ಲವಪುಷ್ಪಗಳಿಂದ ಪೂರ್ಣವಾಗುವಂತೆ ಮಾಡಿ ಅಧಿಕವಾದ ಸಂತೋಷದಿಂ ಯುಕ್ತನಾಗಿ ಆ ಬಳ್ಳಿಯನ್ನು ಬಲವಾಗಿ ನೋಡುತ್ತ ನಿಂದಿರುವನು. ನಾನು ಮಹಾರಾಜನ ಸಮೀಪವಂ ಸೇರುವೆನು " ಎಂದು ಬರುತ್ತಿರಲು ;

ರಾಯನು ತಾನೊಬ್ಬನೇ ಬರುತ್ತ ರಾಮಾನಂದಸಿದ್ಧನು ಕಲಿಸಿದ ವಿದ್ಯೆಯು ಸಫಲವಾದುದೆಂದು ಆ ಲತೆಯನ್ನೇ ನೋಡಿ ಹೆಚ್ಚಾದ ಮೊಗ್ಗುಗಳಿಂದೊಡಗೂಡಿ ಬಿಳ್ಪಾದ ಕಾಂತಿಯಂ ತಾಳಿ ಅರಳಿದ ಕುಸುಮಗಳಿಂ ಕೂಡಿ ತಂಗಾಳಿಯಿಂದ ಸ್ವಲ್ಪವಾಗಿ ಚಲಿಸುತ್ತಲಿರುವ ಈ ಬಳ್ಳಿಯು ಪ್ರಾಣಪ್ರಿಯನಾದ ಕಾಂತನನ್ನು ಅಗಲಿ ವಿರಹದಿಂದ ಚಂಚಲಳಾಗುವ ಕಾಂತೆಯಂತೆ ತೋರುತ್ತಿರುವುದು " ಎಂದು ನುಡಿಯುತ್ತ ಬರುತ್ತಿರಲು ;

ವಿದೂಷಕನು ಶೀಘ್ರದಿಂದ ಬಂದು, " ಎಲೈ ಮಹಾರಾಜೇಂದ್ರನೇ, ನೀನು ದೈವಯೋಗದಿಂದ ಅಭಿವೃದ್ಧಿಯನ್ನು ಪೊಂದುತ್ತಲಿರುವೆ. ಪ್ರಯೋಗಿಸಿದ ಮಾತ್ರದಿಂದಲೇ ಕಾರ್ಯಸಿದ್ಧಿಯನ್ನು ತೋರಿಸುತ್ತಿರುವ ಈ ದೋಹಳ ಕ್ರಿಯೆಯಿಂದ ಈ ಪ್ರಕಾರವಾದ ಪುಷ್ಪಸಂಪತ್ತಿನಿಂದಲೂ ತೂಗಿ ಬಾಗುತ್ತ ಪರಿಮಳದಿಂದ ಪತ್ತುದಿಕ್ಕು

ಗಳನ್ನೂ ಮುಚ್ಚುತ್ತ ಕಂಗೊಳಿಸುವ ಈ ನಿನ್ನ ನವಮಾಲಿಕೆಯೆಂಬ ಲತೆಯು ದೇವಿಯು ಸಲಹುತ್ತಿರುವ ಮಾಧವೀಲತೆಯನ್ನು ಹಾಸ್ಯವಂ ಗೆಯ್ಯುತ್ತಿರುವುದು '' ಎಂದು ನುಡಿಯಲು; ರಾಯನು,—'' ಎಲೆ ವಿದೂಷಕನೇ, ಅದಕ್ಕೆ ಸಂದೇಹವೇ ಇಲ್ಲ. ಲೋಕದಲ್ಲಿ ಮಣಿಮಂತ್ರೌಷಧಿಗಳ ಮಹಿಮೆಯು ಇಷ್ಟೆಂದು ಬಣ್ಣಿಸುವುದಕ್ಕೆ ಅಸಾಧ್ಯವಾಗಿರುವುದು. ಆದರೆ ದೇವಿಯು ಸಾಕುತ್ತಿರುವ ಮಾಧವೀಲತೆಯು ಎಂತಿರುವುದೋ ಅದನ್ನು ನೋಡಲಿಚ್ಛೈಸುತ್ತಿರುವೆನು. ನೀನು ಮುಂದೆ ದಾರಿಯನ್ನು ತೋರಿಸುತ್ತ ನಡೆಯುವನಾಗು. ನಾನು ಆ ಲತೆಯನ್ನು ನೋಡಿ ನೇತ್ರಾನಂದವನ್ನು ಅನುಭವಿಸಲಿಚ್ಛೈಸಿರುವೆನು '' ಎಂದು ನುಡಿಯಲು; ವಿದೂಷಕನು ಸಡಗರದಿಂದೊಡಗೂಡಿ ಮುಂದೆ ನಡೆಯುತ್ತ—'' ಎಲೈ ಮಹಾರಾಜನೇ, ನಾನು ಪೋಗುವ ಮಾರ್ಗವನ್ನು ಅನುಸರಿಸುತ್ತ ಬರುವನಾಗು '' ಎಂದು ನುಡಿಯುತ್ತ ನಡೆಯುತ್ತಿರಲು; ರಾಯನು ಸಂತೋಷಭರಿತನಾಗಿ, '' ಎಲೈ ವಿದೂಷಕನೇ, ನಾಟ್ಯಶಾಲೆಯ ಬಾಗಿಲಲ್ಲಿ ನಾನು ಕಂಡ ಕಾಂತೆಯನ್ನು ಗೊತ್ತುಗೆಯ್ದುಕೊಡುತ್ತೇನೆಂದು ನುಡಿದ ನಿನ್ನ ವಾಕ್ಯವೆಲ್ಲವೂ ಅಪದ್ಧವಾಗಿಯೇ ತೋರಿಬರುವುದು '' ಎಂದು ನುಡಿಯಲಾವಿದೂಷಕನು—'' ಎಲೈ ಸ್ವಾಮಿಯೇ, ಇಂಥವಳೆಂದು ಎನಗೆ ತೋರಿಸಿ, ಅವಳನ್ನು ನಾನು ಕರೆದುಕೊಂಡು ಬಾರದೆ ಇದ್ದಲ್ಲಿ ನನ್ನ ವಾಕ್ಯವು ಅಪದ್ಧವಾಗುವುದು. ಅದಲ್ಲದೆ ಒರಿಯುವಮಾತುಗಳನ್ನು ಆಡಿದಲ್ಲಿ ಯಾರ ಮಾತು ಅಪದ್ಧವೋ ನೀನೇ ಪೇಳಬೇಕು '' ಎಂದು ನುಡಿಯುತ್ತ, ಪೋಗುತ್ತಿದ್ದು, ಭಯದಿಂ ಹಿಂದಿರುಗಿ ಓಡಿ ಬಂದು, ರಾಯನ ಹಸ್ತವಂ ಪಿಡಿದು ಎಳೆಯುತ್ತ,—'' ಎಲೈ ರಾಜೇಂದ್ರನೇ, ನೀನು ನೋಡಿಕೊಂಡು ಪೋಗುವನಾಗು. ಈ ಬಗಡೆಯ ಮರದಲ್ಲಿ ಒಂದಾನೊಂದು ಭೂತವು ಇರುವಂತೆ ತೋರುವುದು'' ಎಂದು ನುಡಿಯಲಾರಾಯನು,—'' ಎಲೈ ಮರುಳನೇ, ನೀನು ಬರಿದೆ ಭಯವನ್ನು ಪೊಂದದೆ ಮುಂದೆ ನಡೆಯುವನಾಗು. ಇಂಥ ಪುಣ್ಯಭೂಮಿಯಲ್ಲಿ ಭೂತಗಳ ವಿಕಾರವುಂಟಾಗುವುದೇ ಪೇಳು '' ಎನಲು; ವಿದೂಷಕನು—'' ಎಲೈ ಸ್ವಾಮಿಯೇ, ಇದೋ ವ್ಯಕ್ತವಾಗಿಯೇ ವಾಕ್ಯವನ್ನು ಪೇಳುತ್ತಿರುವುದು. ಎನ್ನ ವಾಕ್ಯದಲ್ಲಿ ನಂಬುಗೆಯಿಲ್ಲದಿದ್ದರೆ ನೀನೇ ಮುಂದೆ ನಿಂತು ಆ ವಾಕ್ಯವನ್ನು ಕೇಳುವನಾಗು '' ಎನಲಾರಾಯನು ಮುಂದಕ್ಕೆ ಪಾದವನ್ನಿಟ್ಟು ಆ ವಾಕ್ಯವಂ ಕೇಳಿ—'' ಎಲೈ ವಿದೂಷಕನೇ, ಹೆಣ್ಣಾದುದರಿಂದ ರುಚಿಕರವಾಗಿ, ಸ್ವಲ್ಪಶರೀರವುಳ್ಳುದರಿಂದ ಕಿರಿದಾಗಿ ಮನೋಹರವಾಗಿ ಈ ರೀತಿಯಿಂದ ಮಾತನಾಡುವುದು ಪೆಣ್ಗಿಳಿಯೆಂದು ಊಹಿಸುತ್ತಿರುವೆನು '' ಎಂದು ನುಡಿದು, ತಲೆಯನ್ನೆತ್ತಿ, ಮೇಲೆ ನೋಡಿ, ಆ ಶಾರಿಕೆಯಂ ಕಂಡು, ಅತ್ಯಂತವಾದ ಆಶ್ಚರ್ಯವಂ ಪೊಂದಿ,—'' ಎಲೈ ವಿದೂಷಕನೇ, ಇದು ನಿಶ್ಚಯವಾಗಿ ಶಾರಿಕೆಯಾದುದು, ನೋಡು '' ಎಂದು ನುಡಿಯಲಾವಿದೂಷಕನು ಭಯವಂ ಪೊಂದುತ್ತ, ಮೇಲೆ ನೋಡಿ, '' ಎಲೈ ಸ್ವಾಮಿಯೇ, ನಿಶ್ಚಯವಾಗಿಯೂ ಪೆಣ್ಗಿಳಿ

ಯಾದುದು. ನೀನೂ ಇದರ ವಾಕ್ಯವಂ ಕೇಳಿ ವ್ಯರ್ಥವಾಗಿ ಭಯುವನ್ನು ಪೊಂದುವೆ ನೆಂದು ನುಡಿದೆ? " ಎಂದು ನುಡಿಯಲಾರಾಯನು— " ಎಲೈ ಮೂರ್ಖನೇ, ನಿನ್ನ ದೋಷವನ್ನು ಎನ್ನಲ್ಲಿ ತೋರಿಸುತ್ತಿರುವೆ? " ಎನಲು ; ಅವನು,–" ಎಲೈ ಸ್ವಾಮಿಯೇ ನೀನು ಎನ್ನ ತಡೆಯಂ ಮಾಡಬೇಡ. ನಾನು ಯಾತರ ಭಯುವನ್ನು ಪೊಂದಿದೆನೋ ಅದರ ರೀತಿಯನ್ನು ತಿಳಿವೆನು " ಎಂದು ಒಂದು ಕೋಲನ್ನು ಕರದಲ್ಲಿ ಪಿಡಿದು, " ಎಲೆ ತೊತ್ತಿನ ಮೊಗುವಾದ ಶಾರಿಕೆಯೇ, ನಿನ್ನ ವಾಕ್ಯವನ್ನು ಕೇಳಿ ಭಯುವನ್ನು ಪೊಂದಿ ದವನು. ನಾನೋ ಅಲ್ಲದಿರ್ದರೆ ಈ ರಾಜೇಂದ್ರನೋ? ನೀನು ಎಂತು ತಿಳಿದಿರುವೆ? ಆಪರಿಯಂ ಚೆನ್ನಾಗಿ ವಿವರಿಸುವನಾಗು. ಇಲ್ಲದಿದ್ದರೆ ದುರ್ಜನನ ಮನದಂತೆ ವಕ್ರವಾಗಿರುವ ಈ ಕೋಲಿನಿಂದ ಕಳಿತ ಹಣ್ಣನ್ನು ಕೆಡಹುವಂತೆ ಈ ಮರದಿಂದ ನಿನ್ನನ್ನೂ ಹೊಡೆದು ನೆಲಕೆ ಬೀಳಿಸುವೆನು " ಎಂದು ಪೋಗುತ್ತಿರಲು ; ರಾಯನು ಆ ವಿದೂಷಕನಂ ಪಿಡಿದು,— " ಎಲೈ ಮೂರ್ಖನೇ, ಏನೋ ಒಂದು ಮನೋಹ ರವಾಗಿ ವಾಕ್ಯವನ್ನು ನುಡಿಯುತ್ತಲಿರುವುದು. ಅದನ್ನು ಕೇಳಿ ಸಂತೋಷವಂ ಪೊಂದದೆ ವ್ಯರ್ಥವಾಗಿ ಬಾಧಿಸುವುದು ನ್ಯಾಯವಲ್ಲ " ಎನಲು ; ವಿದೂಷಕನು— " ನಿನ್ನ ಆಜ್ಞೆಯಿಂದ ಸುಮ್ಮನಿರುವೆನು. ಆದರೂ ಈ ಶಾರಿಕೆಯು ಏನೋ ಒಂದು ವಾಕ್ಯವಂ ಪೇಳುತ್ತಿರುವುದು. ಅದನ್ನು ಚೆನ್ನಾಗಿ ಕೇಳುವೆವು " ಎಂದು ಇಬ್ಬರೂ ಆ ಪಗಡೆಯ ಮರದ ಸಮೀಪವಂ ಸೇರಿ ನಿಂದಿರಲು ;

ಮರದ ತುದಿಯಲ್ಲಿ ಮೇಧಾವಿನಿಯೆಂಬ ಶಾರಿಕೆಯು ತನ್ನೊಳು ತಾನು— " ಎಲೈ ಕಲ್ಯಾಣಿಯೇ, ಎನ್ನನ್ನೂ ಏತಕೆ ಇಲ್ಲಿ ಬರದಿರುವೆ? ನೀನು ಎಂಥ ಮನ್ಮ ಥನಂ ಬರೆದೆಯೋ ಆಪ್ರಕಾರವಾದ ರತಿಯನ್ನೂ ನಾನು ಬರೆದಿರುವೆನು. ಬರಿದೆ ಎನ್ನೊಳು ಏತಕ್ಕೆ ಕೋಪವಂ ತಾಳುತ್ತಿರುವೆ? " ಎಂದು ನುಡಿಯಲಾವಾಕ್ಯವಂ ಕೇಳಿದ ವಿದೂಷಕನು,—" ಎಲೈ ರಾಜೇಂದ್ರನೇ, ಈ ಶಾರಿಕೆಯು ಒಂದಕೊಂ ದು ಸಂಬಂಧವಿಲ್ಲದ ಮಾತುಗಳನ್ನು ಆಡುತ್ತಿರುವುದು? ಇದನ್ನು ಕೇಳಿದುದರಿಂದ ನಮಗೆ ಏನು ಪ್ರಯೋಜನವಿರುವುದು, ನಡೆ." ಎನಲು; ರಾಯನು,—" ಎಲೈ ಮಿ ತ್ರನೇ ಹಾಗಲ್ಲ. ಅದರ ತಾತ್ಪರ್ಯವನ್ನು ಹೇಳುವೆನು ಕೇಳು. ಯಾವವಳೋ ಒಬ್ಬ ಸ್ತ್ರೀಯು ಯಾವವನೋ ಒಬ್ಬ ಪುರುಷನಲ್ಲಿ ವಿರಹಾತುರೆಯಾಗಿ ಅವನನ್ನು ಚಿತ್ರಪಟದಲ್ಲಿ ಬರೆದಿರಲು, ಆಪ್ತಳಾದ ಸಖಿಯು ಕೇಳುವಲ್ಲಿ ಮನ್ಮಥನನ್ನು ನೆವ ಗೆಯ್ದು ತನ್ನ ಅಭಿಪ್ರಾಯವನ್ನು ತಪ್ಪಿಸಿ ನುಡಿಯಲು, ತಿಳಿಯುವುದಕ್ಕೆ ಅಸಾಧ್ಯ ವಾದ ಅವಳ ತಾತ್ಪರ್ಯವನ್ನು ಆ ಸಖಿಯು ಜಾಣತನದಿಂದ ತಿಳಿದು ಚಿತ್ರಪಟದಲ್ಲಿ ಅವಳನ್ನೇ ಬರೆದು ರತಿಯಂ ನೆವಗೆಯ್ದು ತನ್ನ ತಾತ್ಪರ್ಯವನ್ನು ತಪ್ಪಿಸಿ ನುಡಿದಳೆಂಬ ರೀತಿಯನ್ನು ಈ ಪೆಣ್ಗಿಳಿಯು ನುಡಿಯುತ್ತಿರುವುದೆಂದು ಊಹಿಸುತ್ತಿರುವೆನು " ಎನ್ನ ಲು ; ವಿದೂಷಕನು ಶಾರಿಕೆಯನ್ನೂ ರಾಯನನ್ನೂ ಸಹ ನೋಡಿ ಬೆರಳ ಕೊನೆ

ಯಿಂದ ಚಿಟುಕೆಯಂ ಹಾಕುತ್ತ ಆಶ್ಚರ್ಯವಂ ಪೊಂದಿ,—“ ಎಲೈ ಸ್ವಾಮಿಯೇ, ನೀನು ಅಪ್ಪಣೆಯನಿತ್ತಂತೆಯೇ ಸರಿ ” ಎಂದು ನುಡಿಯಲು ; ರಾಯನು,—“ ಎಲವೋ ವಿದೂಷಕ, ವ್ಯರ್ಥವಾಗಿ ನೀನು ಗಲಭೆಯಂ ಗೆಯ್ದು ಆ ಶಾರಿಕೆಯು ಓದುವ ರೀತಿಯನ್ನು ಮಾಡದಿರು. ಇನ್ನೇನೋ ಒಂದು ವಾಕ್ಯವಂ ಪೇಳುತ್ತಿರುವುದು ” ಎಂದು ಪೇಳಲು ;

ಮೇಲುಗಡೆಯಲ್ಲಿ ಶಾರಿಕೆಯು—“ ಎಲೆ ಕಾಂತೆಯೇ, ನೀನು ಲಜ್ಜೆಯಂ ಪೊಂದಬೇಡ. ಈಬಗೆಯಾದ ಕನ್ನೆವೆಣ್ಣಿಗೆ ಈಪರಿಯಾದ ರಾಜಪುತ್ರನಲ್ಲಿ ಅಭಿಲಾಷೆಯು ಪುಟ್ಟಿರುವುದು ಯುಕ್ತವಾಗಿರುವುದು ” ಎಂದು ನುಡಿಯಲು ; ವಿದೂಷಕನು—“ ಎಲೈ ರಾಯನೇ, ನೀನು ಸರ್ವವನ್ನು ಬಲ್ಲೆನೆಂಬ ಗರ್ವವನ್ನು ತಾಳದಿರು. ನಾನು ಪೇಳುವ ವಾಕ್ಯವನ್ನು ಕೇಳುವನಾಗು. ಆ ಕನ್ನೆಯನ್ನು ಯಾವ ಸ್ಥಳದಲ್ಲಿ ಬರೆದಿರುವುದೋ ಅಲ್ಲಿಗೆ ಪೋಗಿ ಕಂಡೆಯಾದರೆ ನಿನ್ನ ಜಾಣತನವೆಲ್ಲವೂ ಹಸನಾಗುವುದು ” ಎನ್ನಲು ; ರಾಯನು,—“ ಎಲೈ ವಿದೂಷಕನೇ, ಇನ್ನು ಏನೋ ಒಂದು ವಾಕ್ಯವನ್ನು ಪೇಳುವುದು. ಅದನ್ನು ಸಾವಧಾನವಾಗಿ ಕಿವಿಗೊಟ್ಟು ಕೇಳುವನಾಗು. ಕುತೂಹಲವಂ ಪೊಂದುವುದಕ್ಕೆ ಮುಂದೆ ಕಾಲವು ಉಂಟಾಗುವುದು ” ಎಂದು ನುಡಿಯುತ್ತಿರಲು ;

ಆಕಾಶದಲ್ಲಿ ಶಾರಿಕೆಯು,—“ ಈ ತಾಪರೆಯು ದಂಟುಗಳನ್ನು ತೆಗೆಯುವಳಾಗು. ಇವುಗಳಿಂದ ಏನು ಪ್ರಯೋಜನವು? ಬರಿದೆ ಎನ್ನನ್ನು ಆಯಾಸಗೊಳಿಸುತ್ತಿರುವೆ? ” ಎನ್ನಲು;

ವಿದೂಷಕನು—“ ಅಯ್ಯಾ ರಾಯನೇ, ಈಗ ಶಾರಿಕೆಯು ಪೇಳ್ದ ವಾಕ್ಯವಂ ಕೇಳ್ದೆಯಾ? ” ಎನಲು ; ರಾಯನು—“ ಕೇಳಿದ ಮಾತ್ರವೇ ಅಲ್ಲ. ಆ ವಾಕ್ಯದ ತಾತ್ಪರ್ಯವನ್ನು ಸಹ ತಿಳಿದಿರುವೆನು ” ಎನಲು ; ವಿದೂಷಕನು—“ ಇನ್ನು ಏನೋ ಒಂದು ವಾಕ್ಯವನ್ನು ಗೊಣಗುತ್ತಲಿರುವುದು. ಆದುದರಿಂದ ಅದೆಲ್ಲವನ್ನೂ ಕೇಳಿದ ಬಳಿಕ ಅದರ ಅಭಿಪ್ರಾಯವನ್ನು ವಿವರಿಸುವನಾಗು ” ಎನಲು ; ವಿದೂಷಕನು ಆ ಮರದ ಬುಡವಂ ಸೇರಿ—“ ಈ ತೊತ್ತಿನ ಪೊಗು ನಾಲ್ಕುವೇದವಂ ಬಲ್ಲ ಬ್ರಾಹ್ಮಣನಂತೆ ಋಕ್ಕುಗಳಂ ಪೇಳುತ್ತಿರುವುದು ” ಎನಲು ; ರಾಯನು—“ ಎಲೈ ಮಿತ್ರನೇ, ಈಗ ಆ ಶಾರಿಕೆಯು ಏನೋ ವಾಕ್ಯವಂ ಪೇಳಿರುವುದು. ನಾನು ಅಡ್ಡಪರಾಕಿನಿಂದ ಕೇಳಲಿಲ್ಲ. ಅದಂ ಪೇಳುವನಾಗು ” ಎಂದು ನುಡಿಯಲು ; ವಿದೂಷಕನು—“ ಎಲೈ ಸ್ವಾಮಿಯೇ, ಕೇಳು. ಎಷ್ಟುಪ್ರಯತ್ನವಂ ಗೆಯ್ದರೂ ದೊರೆಯದೇ ಇರುವ ಪುರುಷನಲ್ಲಿ ನನಗೆ ಅನುರಾಗವುಂಟಾಗಿರುವುದು. ಅಧಿಕವಾದ ಲಜ್ಜೆಯು ಯಾವುದಕ್ಕೂ ಸ್ಥಳವನ್ನೀಯದೆ ಇರುವುದು. ನಾನಾದರೋ ಒಬ್ಬರ ಊಳಿಗಕೆ ತಗಲಿಕೊಂಡು ಸ್ವತಂತ್ರಗಳಿಲ್ಲದೆ ಇರುವೆನು. ಮನದಲ್ಲಿ ವಿಶ್ವಾಸವು ಕ್ಷಣಕೊಂದು

ಬಗೆಯಾಗಿ ಹೆಚ್ಚುತ್ತಲಿರುವುದು. ಈ ಕಾರಣಗಳಿಂದ ಎನಗೆ ಮರಣವೊಂದಲ್ಲದೆ ಉಳಿಯುವ ತೆರನಂ ಕಾಣೆನೆಂದು ನುಡಿಗುದು" ಎನಲು; ರಾಯನು—"ಎಲೈ ಬ್ರಾಹ್ಮಣನೇ, ನಿನ್ನಂತೆ ವೇದಋಕ್ಕುಗಳ ಪರಿಯಂ ತಿಳಿಯುವನು ಯಾರು? ಆದರೆ ಅದರ ಅಭಿಪ್ರಾಯವನ್ನು ಪೇಳುವೆನು ಕೇಳು. ಯಾವವಳೋ ಒಬ್ಬ ಸೊಕ್ಕು ಜವ್ವನದ ಬಾಲೆಯು ತನಗೆ ಪ್ರಾಣಕಾಂತನಾದ ಪುರುಷನಂ ಸೇರುವುದಕೆ ಉಪಾಯಗಳಂ ಕಾಣದೆ ತನ್ನ ಪ್ರಾಣಗಳಲ್ಲಿ ಆಸೆಯಂ ತೊರೆದು ನುಡಿದ ವಾಕ್ಯವಾಗಿ ತೋರುವುದಲ್ಲವೆ?" ಎನಲು; ವಿದೂಷಕನು ಆ ವಾಕ್ಯವಂ ಕೇಳ್ದು, ಗಹಗಹಿಸಿ ನಕ್ಕು, ಕೈತಪ್ಪಳೆಯಂ ಹಾಕುತ್ತ, "ಇದೇನೀತೆರದ ವಕ್ರವಾಕ್ಯವನ್ನು ನುಡಿಯುತ್ತಿರುವೆ? ಆವವಳೋ ಸೊಕ್ಕು ಜವ್ವನದ ಬಾಲೆಯು ಎನ್ನಂ ಕಂಡು ಸೇರುವುದಕೆ ತೆರನಂ ಕಾಣದೆ ಪ್ರಾಣನೊಳು ಆಸೆಯಂ ಬಿಟ್ಟು ನುಡಿದ ವಾಕ್ಯವು ಎಂದು ಪೇಳಬಾರದೇ; ಏತಕೆ ಯಾವವನೋ ಒಬ್ಬ ಪುರುಷನೆಂದು ಟಕ್ಕು ಮಾತುಗಳಂ ಬೀರುತ್ತಿರುವೆ? ನೀನಲ್ಲದಿರೆ ಇನ್ನೊಬ್ಬ ಪುರುಷನನ್ನು ಮನ್ಮಥನಿಗೆ ಸಮಾನನೆಂದು ಪೇಳಬಹುದೆ ಪೇಳು" ಎಂದು ನುಡಿಯಲು; ರಾಯನು ಮೇಲೆ ನೋಡಿ—"ಎಲೈ ಮೂರ್ಖನೇ, ನೀನು ಘಟ್ಟಿಯಾಗಿ ನಕ್ಕು ಕೈತಪ್ಪಳೆಯಂ ಹಾಕಿದುದರಿಂದ ಭಯವಂ ಪೊಂದಿ ಶಾರಿಕೆಯು ಹಾರಿಪೋದುದು. ಇನ್ನೇನು ಹೇಳುತ್ತಿದ್ದುದೋ ವ್ಯರ್ಥವಂಗೆಯ್ದೆ" ಎಂದು ನುಡಿಯಲಾವಿದೂಷಕನು—"ಎಲೈ ರಾಜೇಂದ್ರನೇ, ಶಾರಿಕೆಯು ಎಲ್ಲಿಯೂ ಪೋಗಲಿಲ್ಲ. ಪುರೋಭಾಗದಲ್ಲಿ ಪರಿಶೋಭಿಸುತ್ತಿರುವ ಸುವರ್ಣದ ಕದಳೀಗೃಹದೆಡೆಗೆ ಹಾರಿಪೋದುದು. ನಾವಿರ್ವರೂ ಆ ಸ್ಥಳಕೆ ಪೋಗಿ ಆ ವಿಶಿಷ್ಟವಾದ ಮಾತುಗಳಂ ಕೇಳುವ ನಡೆ" ಎಂದು ನುಡಿಯಲು; ರಾಯನು ಅದೇರೀತಿಯಿಂದ ಬರುತ್ತ,—"ಎಲೈ ವಿದೂಷಕನೇ, ಕೇಳು. ಸಹಿಸುವುದಕ್ಕೆ ಅಸಾಧ್ಯವಾದ ಮನ್ಮಥನ ಬಾಣದ ವ್ಯಥೆಯನ್ನು ವಹಿಸಿದಂಥ ಆ ಸ್ತ್ರೀಯಿಂದ ಪೇಳಲ್ಪಟ್ಟ ವಾಕ್ಯವಂ ಕೇಳಿ ಕಲಿತು ಮುಂದಾಗಿ ನುಡಿಯುತ್ತಿರುವ ಬಾಲಕಗಿಳಿಗಳ ಮುಖದಿಂ ಪೊರಡುವ ವಾಕ್ಯವನ್ನು ಧನ್ಯನಾದಂಥ ಪುರುಷನು ಕೇಳುತ್ತಿರುವನು!" ಎಂದು ನುಡಿಯಲು; ವಿದೂಷಕನು—"ಎಲೈ ರಾಜೇಂದ್ರನೇ ಇದೇ ಸುವರ್ಣದ ಕದಳೀಗೃಹವು. ಇಲ್ಲಿಗೆ ಪ್ರವೇಶವಂ ಗೆಯ್ಯಬಹುದು" ಎಂದು ನುಡಿದು ರಾಯನಿಂದ ಕೂಡಿ ಒಳಹೊಕ್ಕು,—"ಎಲೈ ಸ್ವಾಮಿಯೇ, ಈ ಶಾರಿಕೆಯಿಂದ ಇನ್ನು ನಮಗೆ ಕಾರ್ಯವೇನು? ಇಲ್ಲಿ ಪರಿಮಳದ ಸೂರೆಯನ್ನುಂಟುಮಾಡುತ್ತ ಶೈತ್ಯ ಸೌರಭ್ಯ ಮಾಂದ್ಯದಿಂದೊಡಗೂಡಿ ಬೀಸುತ್ತಿರುವ ಮಂದಮಾರುತದಿಂದ ಸ್ವಲ್ಪವಾಗಿ ಚಲಿಸುತ್ತಲಿರುವ ಸುವರ್ಣದ ಕದಳೀದಳಗಳಿಂದ ಸೊಂಪಾಗಿ ತಂಪಾಗಿರುವ ಈ ಸ್ಥಳದಲ್ಲಿ ಕುಳಿತು ಮನಕೆ ಸಂತೋಷವನ್ನುಂಟುಮಾಡಬಹುದು" ಎನ್ನಲು;

ರಾಯನು—"ನಿನ್ನ ಮನಕೆ ಬಂದಂತೆ ಮಾಡಬಹುದು" ಎಂದು ನುಡಿದು,

ಅವನಿಂದೊಡಗೂಡಿ ಕಾಂತಿಗಳಿಂದ ಹೆಚ್ಚಾಗಿ ಹೊಳೆಯುವ ಪಚ್ಚೆಯ ಚೌಕಿಯಲ್ಲಿ ಕುಳಿತಿರಲು; ವಿದೂಷಕನು ಪಾರ್ಶ್ವಭಾಗವಂ ನೋಡಿ ತೆರೆದ ಬಾಗಿಲಿಂದೊಡಗೂಡಿರುವ ಶಾರಿಕೆಯ ಪಂಜರವಂ ಕಂಡು—" ಎಲೈ ರಾಜೇಂದ್ರನೇ, ಈ ತೆರನಾಗಿರುವ ಪಂಜರದಿಂದ ಶಾರಿಕೆಯು ಹಾರಿ ಬಂದುದು " ಎಂದು ಕುಳಿತಿರ್ದ ಸ್ಥಳಮಂ ಬಿಟ್ಟೆದ್ದು ಹೋಗಿ ನೋಡುತ್ತಿರುವಲ್ಲಿ ಒತ್ತಿನಲ್ಲಿ ಬಿದ್ದಿರುವ ಚಿತ್ರಪಟವಂ ಕಂಡು, ಬಡವನಿಗೆ ಭಾಗ್ಯಬಂದಂತೆ, ಅಧಿಕ ಸಂತೋಷದಿಂ ಯುಕ್ತನಾಗಿ ಆ ಚಿತ್ರಪಟವಂ ಕೈಗೆ ತೆಗೆದುಕೊಂಡು ಅಲ್ಲಿ ಬರೆದಿರುವ ರಾಯನ ಭಾವಚಿತ್ರವಂ, ಒತ್ತಿನಲ್ಲಿ ರತಿದೇವಿಗಿಂತಲೂ ಅತಿಶಯಳಾಗಿ ಬರೆದಿರುವ ಸಾಗರಿಕೆಯನ್ನೂ ಸಹ ನೋಡಿ,—" ಎಲೈ ರಾಜೇಂದ್ರನೇ, ನಿನ್ನ ಪುಣ್ಯವೂ ಬಹಳವಾಗಿರುವುದು· ನೀನು ದೈವಯೋಗದಿಂದಲೆ ಅಭಿವೃದ್ಧಿಯನ್ನು ಹೊಂದುತ್ತಿರುವೆ? " ಎಂದು ಹರ್ಷದಿಂ ಕುಣಿಯುತ್ತಿರಲು; ರಾಯನು—" ಎಲೈ ಮಿತ್ರನೇ, ಈಗ ನಿನಗೆ ದೊರಕಿರುವ ಚಿತ್ರಪಟದಲ್ಲಿ ಏನು ಬರೆದಿರುವುದು? ನೀನು ಏತಕ್ಕೋಸುಗವಾಗಿ ಕುಣಿಯುತ್ತಿರುವೆ? ಎನ್ನೊಡನೆ ವಂಚಿಸದೆ ಪೇಳುವನಾಗು " ಎನಲು; ಅವನು —" ಎಲೈ ರಾಜೋತ್ತಮನೇ, ಮೇಲಾಗಿ ಮನ್ಮಥನಂತೆ ಒಪ್ಪುತ್ತಿರುವ ನಿನ್ನನ್ನು ಈ ಪಟದಲ್ಲಿ ಬರೆದಿರುವುದು· ನೀನಲ್ಲದೆ ಇನ್ನೊಬ್ಬ ಪುರುಷನು ಮನ್ಮಥನ ಸಾಮ್ಯವಂ ಹೊಂದಲಾರನೆಂದು ಮೊದಲೇ ನಾನು ಪೇಳಿರುವೆನಾದುದರಿಂದ ಎನ್ನ ವಾಕ್ಯವು ಒಂದುಕಾಲಕ್ಕೂ ಅಪದ್ಧವಾಗಲಾರದು· ಇನ್ನೂ ಈ ಪಟದಲ್ಲಿ ವಿಶೇಷವಾದ ಕಾರ್ಯವಿರುವುದು " ಎಂದು ನುಡಿಯಲು; ರಾಯನು ಎರಡು ಕರಗಳಂ ನೀಡಿ,—" ಎಲೈ ಮಿತ್ರನೇ, ಅದರಲ್ಲಿ ಇನ್ನಾರ ಭಾವಚಿತ್ರವು ಬರೆದಿರುವುದು. ಅದನ್ನು ಎನ್ನ ಹಸ್ತಕೆ ಕೊಡುವನಾಗು. ನೋಡಿ ಸಂತೋಷವನ್ನು ಹೊಂದುವೆನು " ಎಂದು ನುಡಿಯಲು; ವಿದೂಷಕನು—" ಇಲ್ಲಿ ಮನ್ಮಥನ ಜಯಲಕ್ಷ್ಮಿಯಂತೆ ಕಾಮಿಗಳಿಗೆ ಕಲ್ಪಲತೆಯಂತೆ ಬರೆದಿರುವ ಈ ಕನ್ಯಾರತ್ನವನ್ನು ತೋರಿಸಬೇಕಾದಲ್ಲಿ ಎನಗೆ ರತ್ನಮಯವಾದ ಉಡುಗೊರೆಯನ್ನು ಕೊಟ್ಟಲ್ಲಿ ಈ ಪಟವನ್ನು ನಿನ್ನ ಹಸ್ತಕೆ ಒಪ್ಪಿಸುವೆನು " ಎಂದು ಆ ಚಿತ್ರವನ್ನು ತನ್ನ ದೋತ್ರದ ಸೆರಗಿನಿಂದ ಮುಚ್ಚುತಿರಲು; ರಾಯನು—" ಎಲೈ ವಿದೂಷಕನೇ, ಬಾಲಲೀಲೆಯಂ ಗೆಯ್ಯದೆ ಆ ಪಟವಂ ಎನಗೆ ಕೊಡು " ಎಂದು ಬಲಾತ್ಕಾರದಿಂದ ತೆಗೆದುಕೊಂಡು, ಚೆನ್ನಾಗಿ ನೋಡಿ, ಆಶ್ಚರ್ಯವಂ ಹೊಂದಿ,—" ಎಲೈ ಮಿತ್ರನೇ, ಇವಳೇ ಶಕುಂತಶಾಲೆಯಲ್ಲಿರುವ ಸಂಗೀತಶಾಲೆಗೆ ಪ್ರವೇಶಿಸುತ್ತಿದ್ದ ಬಾಲೆಯು. ನಾನು ಪೇಳಿದ ವಾಕ್ಯಗಳನ್ನು ಅಪದ್ಧಗಳಾಗಿಯೇ ತಿಳಿಯುತ್ತ ಇದ್ದೆಯಷ್ಟೆ. ಈಗ ಇವಳಂ ನೋಡುವನಾಗು. ಆದರೆ ಇಂಥ ಸ್ತ್ರೀಯು ಈ ಬ್ರಹ್ಮಸೃಷ್ಟಿಯಲ್ಲಿ ಪುಟ್ಟಿರುವಳೋ ಎಂಬ ಸಂದೇಹವು ಬಲವತ್ತರವಾಗಿ ಎನ್ನಂ ಬಾಧಿಸುತ್ತಿರುವುದು. ಇವಳಂ ನೋಡಿದಲ್ಲಿ ಈಡುಸೊಬಗನ್ನು ವಹಿ

ಸಿದ ಈ ಕಾಂತೆಯು ತನ್ನ ವಿಲಾಸಗಳಿಂದ ಆದಿಲಕ್ಷ್ಮಿಯನ್ನೂ ತಿರಸ್ಕಾರವಂ ಗೆಯ್ಯುತ್ತ ಎನ್ನಲ್ಲಿ ಪಕ್ಷಪಾತವಂ ತಾಳಿದ ರಾಜಹಂಸಸ್ತ್ರೀಯಂತೆ ಎನ್ನ ಮಾನಸವನ್ನು ಪ್ರವೇಶಿಸುತ್ತಿರುವಳು. ಎಲೈ ಸ್ನೇಹಿತನೇ, ಇವಳಾರು? ಈಪ್ರಕಾರವಾದ ಸೌಂದರ್ಯ ಶಾಲಿಯಾದ ಕಾಂತೆಯು ಎನ್ನ ಕಂಗಳಿಗೆ ಗೋಚರಿಸದೆ ಎನ್ನ ಅಂತಃಪುರದಲ್ಲಿ ಹೇಗೆ ಅಭಿವೃದ್ಧಿಯಂ ಪೊಂದಿದಳು ನೋಡು?" ಎಂದು ಆ ಭಾವಚಿತ್ರವನ್ನು ಬಹು ಪ್ರಕಾರವಾಗಿ ನೋಡುತ್ತಿರಲು;

ಇತ್ತಲು ಸುಸಂಗತೆಯು—"ಎಲೆ ಸಾಗರಿಕೆಯೇ, ಶಾರಿಕೆಯು ಎತ್ತಲೋ ಹಾರಿಪೋದುದು. ಅದನ್ನು ನೋಡುವ ಬಾ" ಎಂದು ಅವಳಿಂದೊಡಗೂಡಿ ಸುವರ್ಣದ ಬಾಳೆಯ ಸ್ತಂಭಗಳಿಂದ ಸುಂದರವಾದ ಮಂದಿರದ ಸಮೀಪವಂ ಸೇರಲು; ಸಾಗರಿಕೆಯು—"ಅದೇರೀತಿಯಂ ಮಾಡುವ ನಡೆ" ಎಂದು ಇಬ್ಬರೂ ಆ ಕದಳೀಗೃಹದ ಸಮೀಪಕ್ಕೆ ಮೆಲ್ಲಮೆಲ್ಲನೆ ಅಡಿಯಿಟ್ಟು ಬರುತ್ತಿರಲು;

ಇತ್ತಲು ವಿದೂಷಕನು—"ಎಲೈ ಸ್ವಾಮಿಯೇ, ಈ ಚಿತ್ರಪಟದಲ್ಲಿ ಬರೆದಿರುವ ಕಾಂತೆಯು ಕಂಬನಿಗಳಂ ತುಂಬಿರುವಂತೆ ತೋರುತ್ತ ಇದ್ದಾಳು" ಎಂದು ನುಡಿಯಲು; ಸುಸಂಗತೆಯು—"ಎಲೆ ಸಖಿಯೇ, ಈ ಕದಳೀಗೃಹದಲ್ಲಿ ವಿದೂಷಕನು ಮಾತನಾಡುತಲಿದ್ದಾನೆ. ಆದುದರಿಂದ ಅಲ್ಲಿ ಮಹಾರಾಜನೂ ಇರುವುದಾಗಿ ತೋರುವುದು. ನಾವಿರ್ವರೂ ಈ ಬಾಳೆಯ ಪೊದರಿನಿಂದ ಮರೆಗೊಂಡು ನಿಂತು ಅವರು ಆಡುವ ಸರಸಸಲ್ಲಾಪಗಳನ್ನು ಕೇಳುವ" ಎಂದು ನುಡಿದು, ಆ ಬಾಳೆಯ ಸ್ತಂಭಗಳ ಸಂದಿಯಲ್ಲಿ ಬಗ್ಗಿ ನೋಡಿ—"ಎಲೆ ಬಾಲೆಯೇ, ನೀನು ದೈವಯೋಗದಿಂದ ಅಭಿವೃದ್ಧಿಯಂ ಪೊಂದುತ್ತಲಿರುವೆ. ಏಕೆಂದರೆ—ನಿನಗೆ ಪ್ರಾಣಕಾಂತನಾದ ವತ್ಸರಾಜನು ಚಿತ್ರಪಟದಲ್ಲಿ ನಿನ್ನ ಭಾವಚಿತ್ರವಂ ನೋಡಿ ನಿನ್ನನ್ನೇ ಬಣ್ಣಿಸುತ್ತಲಿರುವನು" ಎನ್ನಲು; ಸಾಗರಿಕೆಯು ಲಜ್ಜೆಯಿಂದೊಡಗೂಡಿ—"ಎಲೆ ಕಾಂತೆಯೇ, ಈ ನಿನ್ನ ವಿನೋದವಾಕ್ಯಗಳಿಂದ ಪ್ರಯೋಜನವೇನು? ಬರಿದೆ ಏಕೆ ಎನ್ನನ್ನು ಲಜ್ಜೆಯಂ ಪೊಂದಿಸುತ್ತಲಿರುವೆ?" ಎಂದು ನುಡಿಯಲು;

ವಿದೂಷಕನು ಮರಳಿ ರಾಯನಂ ಕುರಿತು—"ಎಲೈ ರಾಜೇಂದ್ರನೇ, ಈ ಸ್ತ್ರೀಯು ಏಕೆ ಕಂಬನಿಗಳಂ ತುಂಬಿರುವಳೆಂದು ಕೇಳಿದರೂ ಪ್ರತ್ಯುತ್ತರವನ್ನೀಯದೆ ಇರುವೆ?" ಎಂದು ನುಡಿಯಲು; ರಾಯನು—"ಎಲೈ ಮಹಾಮಿತ್ರನೇ, ಮಹಾವಿರಹಾತುರಳಾಗಿ ಅವಳು ಪೇಳಿದ ಪದ್ಯದಿಂದಲೆ ವ್ಯಕ್ತವಾಗಿರುವಲ್ಲಿ, ಮರಳಿ ಮರಳಿ ಏತಕೆ ಎನ್ನನ್ನು ಬೆಸಗೊಳುತ್ತಿರುವೆ?" ಎನ್ನಲು;

ಸುಸಂಗತೆಯು ಆ ವಾಕ್ಯವಂ ಕೇಳಿ ಆಶ್ಚರ್ಯವಂ ಪೊಂದಿ—"ಎಲೈ ಕಾಂತೆಯೇ, ಮೇಧಾವಿನಿಯೆಂಬ ಶಾರಿಕೆಯು ತನ್ನ ಮೇಧಾವಿನೀತ್ವವನ್ನು ಪ್ರಕಟಿಸಿದಂತೆ ತೋರುವುದು. ಏಕೆಂದರೆ—ಆ ಶಾರಿಕೆಯ ಪೇಳದೆ ಇದ್ದಲ್ಲಿ ನೀನು ವಿರಹಾತುರೆ

ಯಾಗಿ ಪೇಳಿದ ವಾಕ್ಯವನ್ನು ರಾಯನು ಹೇಗೆ ಬಲ್ಲನು ? ” ಎಂದು ನುಡಿಯಲು ; ಸಾಗರಿಕೆಯು—“ ಎಲೆ ಕಾಂತೆಯೇ, ನಾವಾಡುವ ಮಾತುಗಳಂ ಕಲಿತು ಯಾರ ಮುಂದಾದರೂ ಪೇಳುವುದೆಂದು ಈ ಶಾರಿಕೆಯಿಂದ ಭೀತಿಯಂ ಪೊಂದಬೇಕಾಗಿರುವುದೆಂದು ಮೊದಲೇ ನಾನು ನಿನ್ನೊಡನೆ ಪೇಳಿದೆನು. ” ಎಂದು ನುಡಿಯುತ್ತಿರಲು ;

ಇತ್ತಲು ವಿದೂಷಕನು—“ ಎಲೈ ರಾಜೇಂದ್ರನೇ, ಈ ಚಿತ್ರಪಟದಲ್ಲಿ ಬರೆದಿರುವ ಕಾಂತೆಯು ನಿನ್ನ ಕಣ್ಣುಗಳಿಗೆ ಸೊಗಸನ್ನುಂಟುಮಾಡುವಳೇ ಪೇಳು ” ಎನ್ನಲು ;

ಆ ವಾಕ್ಯವಂ ಕೇಳಿ ಸಾಗರಿಕೆಯು ಭಯವಂ ಪೊಂದಿ—“ ಈ ರಾಯನು ಏನೆಂದು ವಿದೂಷಕನಿಗೆ ಪ್ರತ್ಯುತ್ತರವಂ ಪೇಳುವನೋ ಎಂದು ನಾನು ಮರಣ ಜೀವಿತಗಳ ಮಧ್ಯದಲ್ಲಿ ಈಗ ವಾಸವಂಗೆಯ್ಯುತ್ತಿರುವೆನು ” ಎಂದು ತನ್ನ ಮನದಲ್ಲಿ ಆಲೋಚಿಸುತ್ತಿರಲು ;

ರಾಯನು—“ ಎಲೈ ಮಿತ್ರನೇ, ಎನ್ನ ಕಣ್ಣುಗಳಿಗೆ ಸೊಗಸನ್ನುಂಟುಮಾಡುವಳೇ ಎಂದು ಪೇಳುವುದೇನು, ಎನ್ನನ್ನು ಇವಳು ಆನಂದಸಮುದ್ರದಲ್ಲಿ ಮುಳುಗಿಸುತ್ತಿರುವಳು. ಆದರೂ, ಎನ್ನ ದೃಷ್ಟಿಯು ಅಧಿಕವಾದ ಆಶೆಯಿಂದೊಡಗೂಡಿ ಅಧಿಕಪ್ರಯಾಸದಿಂದ ಮಾರನ ಧ್ವಜಸ್ತಂಭಗಳಂತೆ ಇಂಬಾಗಿರುವ ಇವಳ ನುಣ್ದೊಡೆಗಳನ್ನು ಏರಿ, ಆನೆಯ ಕುಂಭಸ್ಥಳದ ಹಂಬಲವಂ ಬಿಡಿಸುತ್ತಿರುವ ನಿತಂಬಬಿಂಬಗಳ ಎಡೆಯಲ್ಲಿ ಸುತ್ತಿ, ತೆರೆಗಳಲ್ಲಿ ಪರಿಶೋಭಿಸುತ್ತಿರುವ ತ್ರಿವಳಿಗಳಿಂದ ಸುಂದರವಾದ ಮಧ್ಯಸ್ಥಳವಂ ಪೊಂದಿ ಸುಳಿಯಂತೆ ಕಂಗೊಳಿಸುವ ನಾಭಿಯೆಂಬ ಮಡುವಿನಲ್ಲಿ ಮುಳುಗಿ ಎದ್ದು, ಉನ್ನತಂಗಳಾಗಿ ಚಿನ್ನದ ಕುಂಭಗಳಂತೆ ಇಂಬಾಗಿರುವ ಕುಚಗಳೆಂಬ ಪರ್ವತಂಗಳನ್ನು ಹತ್ತಿ, ಕಮಲದಳಗಳಂತೆ ಕಾಂತಿಯನ್ನುಂಟುಮಾಡುತ್ತ ಕಂಬನಿಗಳಿಂ ತುಂಬಿರುವ ನೇತ್ರಗಳಂ ನೋಡುತ್ತಿರುವುದು ” ಎಂದು ನುಡಿಯಲು ;

ಸುಸಂಗತೆಯು ಆ ವಾಕ್ಯವಂ ಕೇಳಿ ಮಂದಸ್ಮಿತಾಂಚಿತೆಯಾಗಿ, ಸಾಗರಿಕೆಯ ಮುಖಕಮಲವಂ ನೋಡಿ,—“ ಎಲೆ ಕಾಂತೆಯೇ, ಈಗ ರಾಜೇಂದ್ರನು ಅಪ್ಪಣೆಯನ್ನಿತ್ತ ವಾಕ್ಯವನ್ನು ಕೇಳಿದೆಯಾ ? ” ಎನಲು ; ಸಾಗರಿಕೆಯು ನಸುನಕ್ಕು,—“ ಎಲೆ ಕಾಂತೆಯೇ, ರಾಯನು ನೀನು ಬರೆದಿರುವ ಚಿತ್ರದ ಚಾತುರ್ಯವನ್ನು ವರ್ಣಿಸುತ್ತಿರುವನಲ್ಲದೆ ಎನ್ನನ್ನು ಸ್ತುತಿಗೆಯ್ಯುವಂತೆ ತೋರುವುದಿಲ್ಲವು ” ಎಂದು, ತಪ್ಪಿಸಿ ನುಡಿಯಲು ;

ರಾಯನು ವಿದೂಷಕನಂ ಕುರಿತು—“ ಎಲೈ ಮಿತ್ರನಾದ ವಿದೂಷಕನೇ, ಕೇಳು. ಚತುರ್ಮುಖಬ್ರಹ್ಮನು ಮನೋಹರಾಂಗಿಯಾದ ಈ ಕಾಂತೆಯ ಪೂರ್ಣಚಂದ್ರನಿಗೆ ಸಮಾನವಾದ ಮುಖವನ್ನು ನಿರ್ಮಾಣವಂ ಗೆಯ್ದಾಗ, ತನಗೆ ಪೀಠರೂಪವಾದ ಕಮಲವು ಆ ಮುಖವನ್ನು ನೋಡಿ ಚಂದ್ರಭ್ರಾಂತಿಯಿಂದ ಮುಕುಳಿತವಾ

ಗಲದರ ಮೊನೆಯಲ್ಲಿ ಕುಳಿತು, ಬಹುಖೇದವನ್ನು ಅನುಭವಿಸಿರಬಹುದೆಂದು ಊಹಿಸುತ್ತಿರುವೆನು" ಎಂದು ನುಡಿಯಲು; ವಿದೂಷಕನು—"ಎಲೈ ಮಹಾರಾಜನೇ, ಈ ನಿನ್ನ ಮನೋಹರವಾದ ಆಕಾರಮಂ ಬರೆದು ಸಮಾಗಮವನ್ನು ಬಯಸುತ್ತಿರುವ ಈ ಕಾಂತೆಯನ್ನು ಚೆನ್ನಾಗಿ ನೋಡದೆ, ನಿನ್ನ ಭಾವಚಿತ್ರವನ್ನೇ ರೆಪ್ಪೆಯನಿಕ್ಕದೆ ಬಲವಾಗಿ ನೋಡುವುದಕೆ ಕಾರಣವೇನು?" ಎಂದು ನುಡಿಯಲಾರಾಯನು—"ಎಲೈ ಮಿತ್ರನೇ, ನೋಡು· ನಾನು ಇಂಥ ಮೋಹನಾಂಗಿಯಾದ ಈಕೆಯಿಂದ ಬರೆಯಲ್ಪಟ್ಟೆನೆಂಬ ಎನಗೊಂದು ಬಹುಮಾನವುಂಟಾಗಿರುವುದು. ಆದರೂ ಈ ಕಾಂತೆಯು ಎನ್ನ ಭಾವಚಿತ್ರವನ್ನು ಬರೆಯುವ ಸಮಯದಲ್ಲಿ ಆನಂದದಿಂದುಂಟಾದ ಕಣ್ಣೀರುಗಳು ಅಲ್ಲಲ್ಲಿ ಸಿಡಿದು ಎನ್ನ ಶರೀರದಲ್ಲಿ ಬಿದ್ದು ಇರುವಂಥವುಗಳಾಗಿ, ಅವಳ ಕರಸ್ಪರ್ಶದಿಂದ ಎನ್ನ ಅಂಗದಲ್ಲಿ ಪುಟ್ಟಿದ ಬೆಮರ್ವನಿಗಳಂತೆ ಪರಿಶೋಭಿಸುತ್ತಿರುವುವು ನೋಡು" ಎಂದು ನುಡಿಯಲು;

ಆ ವಾಕ್ಯಮಂ ಕೇಳಿದ ಸಾಗರಿಕೆಯು ಸಂತೋಷಸಮುದ್ರದಲ್ಲಿ ಮುಳುಗುತ್ತ, ತನ್ನ ಮನವಂ ಕುರಿತು—"ಎಲೆ ಮನವೇ, ಈಗಲಾದರೂ ಸಮಾಧಾನವಂ ಪೊಂದುವುದಾಗು. ನಿನ್ನ ಮನೋರಥವೆಂಬ ಸಮುದ್ರವು ಎಲ್ಲೆಗಟ್ಟಂ ಮೀರಿ ಹರಿಯುತ್ತಿರುವುದು" ಎಂದು ನುಡಿಯಲು; ಸುಸಂಗತೆಯು—"ಎಲೆ ಕಾಂತೆಯೇ, ಈ ನಮ್ಮ ಮಹಾರಾಜನಿಂ ಈ ರೀತಿಯಿಂದ ಸ್ತೋತ್ರವಂಗೆಯ್ಸಿಕೊಳ್ಳುವೆಯಾದುದರಿಂದ ಈ ಭೂಮಂಡಲದಲ್ಲಿ ನೀನೊಬ್ಬಳೇ ಸಮಸ್ತ ಜನರ ಸ್ತೋತ್ರಕೆ ಪಾತ್ರಳಾಗಿರುವೆ· ನಿನ್ನ ಜನ್ಮವೇ ಸಫಲವಾದುದು" ಎಂದು ಪೊಗಳುತ್ತಿರಲು;

ವಿದೂಷಕನು ಪಾರ್ಶ್ವದಲ್ಲಿ ಪರಿಶೋಭಿಸುತ್ತಿರುವ ತಾವರೆಯೆಲೆಯ ಹಾಸಿಗೆಯಂ ನೋಡಿ—"ಎಲೈ ರಾಜೋತ್ತಮನೇ, ರಸವೊಡನೆ ಕೂಡಿದ ತಾವರೆಯೆಲೆಗಳಿಂದ ವಿರಚಿತವಾಗಿ ಮನ್ಮಥನ ಸಂತಾಪವನ್ನು ಸೂಚಿಸುತ್ತಿರುವ ಈ ಹಾಸಿಗೆಯು ಕಾಣುತ್ತಿರುವುದು ನೋಡು" ಎಂದು ನುಡಿಯಲು; ರಾಜನು ಚೆನ್ನಾಗಿ ಆ ಕಮಲದಳದ ಹಾಸಿಗೆಯಂ ನೋಡಿ—"ಎಲೈ ಮಿತ್ರನೇ, ಮನೋಹರವಾದ ಪದಾರ್ಥವಂ ತೋರಿಸಿದೆ. ಅದರೆ ಈ ಹಾಸಿಗೆಯು ಉಭಯಪಾರ್ಶ್ವಗಳಲ್ಲಿ ಯೌವನದಿಂದ ಕೊಬ್ಬಿ ಬೆಳೆದು ಉಬ್ಬಿ ಬಲಿತಿರುವ ಘನವಾದ ಜಘನಗಳಿಂದಲೂ, ಬಲವಾದ ಮೊಲೆಗಳಿಂದಲೂ ಬಾಡಿದಂಥದಾಗಿ, ಅತಿ ಸೂಕ್ಷ್ಮವಾದ ನಡುವಿನ ಸಂಸ್ಪರ್ಶನವಂ ಪೊಂದದೆ ಹಸುರುಬಣ್ಣದಿಂ ಯುಕ್ತವಾಗಿ, ವಿರಹದ ತಾಪವಂ ಪರಿಹರಿಸಲಾರದೆ ಮನಬಂದಂತೆ ನೀಡಿದ ತೋಳುಗಳಿಂದ ಕೆದರಿ ವ್ಯತ್ಯಾಸಮಂ ಪೊಂದಿರುವುದಾಗಿ, ಕೃಶಾಂಗಿಯಾದ ಈ ಕಾಂತೆಯು ಮನ್ಮಥನ ತಾಪವಂ ಚೆನ್ನಾಗಿ ಹೊರದೋರಿಸುತ್ತಿರುವುದು; ಮತ್ತು ಎದೆಯಲ್ಲಿ ಹತ್ತಿಸಿದ್ದ ವಿಸ್ತಾರವಾದ ತಾವರೆಯೆಲೆಯು ಅತ್ಯಂತವಾದ ವಿರಹತಾಪದಿಂ ಬಾಡಿರುವ ಮೆಯ್ಯುಳ್ಳ ಈ ಕಾಂತೆಯ ಕುಚಂಗಳ ವಿಸ್ತಾರವನ್ನು

ಅಲ್ಲಿ ಉಂಟಾಗಿರುವ ಮಂಡಲಾಕಾರವಾದ ಗುರುತುಗಳಿಂದ ವ್ಯಕ್ತವಾಗಿ ಪೇಳುವು ದಲ್ಲದೆ, ಅವಳ ಸಂತಾಪವನ್ನೂ ಸಹ ಪೇಳುತ್ತಿರುವುದು" ಎಂದು ನುಡಿಯಲು; ವಿದೂಷಕನು ಸಾಗರಿಕೆಯು ಕುಚಗಳ ಒತ್ತಿನಲ್ಲಿ ಧರಿಸಿದ್ದ ತಾವರೆಯ ದಂಟಿನ ಹಾ ರವಂ ಕರದಲ್ಲಿ ಪಿಡಿದು-"ಎಲೈ ಶೃಂಗಾರಶೇಖರನಾದ ರಾಜೇಂದ್ರನೇ, ಪೆರ್ಮೊ ಲೆಗಳ ಸಂದಿಯಲ್ಲಿ ಸಿಕ್ಕಿ ಕಂದಿ ಕಪ್ಪಾಗಿರುವ ಸೊಗಸುದೋರುವ ಮೃಣಾಳಹಾರ ಮಂ ನೋಡುವನಾಗು" ಎಂದು ನುಡಿಯಲು; ರಾಜೇಂದ್ರನು ಆ ತಾವರೆಯ ದಂ ಟಿನ ಹಾರವಂ ಕುರಿತು—"ಎಲೆ ಜಡಪ್ರಕೃತಿಯುಳ್ಳ ತಾವರೆಯ ದಂಟೇ, ಕೇಳು. ಮಹಾಸುಂದರಿಯಾದ ಈ ಮಂದಗಮನೆಯು ಪೆರ್ಮೊಲೆಗಳಿಂದ ವಿಯೋಗಮಂ ಪಡೆ ದೆನೆಂದು ಏತಕ್ಕೋಸುಗವಾಗಿ ವ್ಯಸನಮಂ ಪೊಂದುತ್ತಿರುವೆ? ನಿನ್ನಲ್ಲಿ ಪುಟ್ಟಿದ ಸೂಕ್ಷ್ಮವಾದ ನೂಲಿಗೂ ಆ ಕುಚಗಳ ಮಧ್ಯದಲ್ಲಿ ಸ್ಥಳವು ದೊರಕದೆ ಇದ್ದಲ್ಲಿ ನಿನ ಗೆ ಎಡಬಿಡದಿರುವ ಆ ಪೆರ್ಮೊಲೆಗಳಲ್ಲಿ ಸ್ಥಾನವು ಹೇಗೆ ದೊರಕೀತೋ!" ಎಂದು ನುಡಿಯಲು;

ಆ ವಾಕ್ಯವಂ ಕೇಳ್ದ ಸುಸಂಗತೆಯು—"ಬಲವಾದ ಅನುರಾಗದಿಂದ ವ್ಯಾ ಪ್ತವಾದ ಮನವುಳ್ಳ ನಮ್ಮ ರಾಯನು ಬಾಯಿಗೆ ಬಂದಂತೆ ಮಾತುಗಳನ್ನು ಆಡುವಲ್ಲಿ ಉದ್ಯುಕ್ತನಾಗಿರುವನು. ಇನ್ನುಮೇಲೆ ನಾನು ಉಪೇಕ್ಷೆಯಂ ಮಾಡಿ ಇಲ್ಲಿ ಇರು ವುದು ನ್ಯಾಯವಲ್ಲ" ವೆಂದು ತನ್ನ ಮನದಲ್ಲಿ ಆಲೋಚಿಸಿ, ಒತ್ತಿನಲ್ಲಿರುವ ಸಾಗರಿ ಕೆಯಂ ಕುರಿತು—"ಎಲೆ ಕಾಂತೆಯೇ, ನೀನು ಯಾವ ವಸ್ತುಗೋಸುಗವಾಗಿ ಅಧಿ ಕವಾದ ಆಯಾಸವಂ ಪೊಂದುತ್ತಿದ್ದೆಯೋ ಆ ವಸ್ತು ನಿನ್ನ ಮುಂದುಗಡೆಯಲ್ಲಿಯೇ ಇ ರುವುದು" ಎಂದು ನುಡಿಯಲು; ಸಾಗರಿಕೆಯು ಅವಳು ಆಡಿದ ನುಡಿಗೆ ಮನದಲ್ಲಿ ಸಂ ತೋಷವುಂಟಾಗಿದ್ದರೂ ಹೊರಗೆ ಅಸೂಯೆಯಂ ಪೊಂದಿ—"ಎಲೆ ಸುಸಂಗತೆ ಯೇ, ನಾನು ಯಾವ ವಸ್ತುಗೋಸುಗವಾಗಿ ಆಯಾಸವಂ ಪೊಂದಿದೆ? ಎನ್ನ ಮುಂ ದುಗಡೆಯಲ್ಲಿರುವ ಆ ವಸ್ತುವಾವುದು? ವಿಸ್ತಾರವಾಗಿ ವಿವರಿಸುವಳಾಗು" ಎಂದು ಹುಬ್ಬುಗಳಂ ಗಂಟಿಕ್ಕಿ ನುಡಿಯಲು; ಸುಸಂಗತೆಯು, ಇವಳ ಅಭಿಪ್ರಾಯವಂ ತಿಳಿ ದು ನಸುನಕ್ಕು—"ನಿನ್ನಲ್ಲಿ ನೀನೇ ಚಂಚಲವಂ ಪೊಂದುತ್ತಿರುವ ಚಂಚಲಚಿತ್ತಳಾದ ಎಲೆ ಕಾಂತೆಯೇ, ಕೇಳು. ಚಿತ್ರಪಟವು ಪೋದುದೆಂದು ಬಲವಾಗಿ ವ್ಯಸನವಂ ಪೊಂದುತಿದ್ದೆಯಷ್ಟೆ. ಆ ಚಿತ್ರಪಟವು ಮುಂದುಗಡೆಯಲ್ಲೇ ಇರುವುದು. ಅದನು ತೆಗೆದುಕೊಳ್ಳುವಳಾಗು" ಎಂದು ವಂಚಿಸಿ ನುಡಿಯಲು; ಸಾಗರಿಕೆಯು ಕಪಟವಾದ ಕೋಪವಂ ತಾಳಿ,—"ಎಲೆ ಕಾಂತೆಯೇ, ಇಲ್ಲಿರದೆ ಮತ್ತೊಂದು ಕಡೆಗೆ ಪೋಗು ತ್ತಲಿರುವೆನು. ನೀನು ಎನ್ನನ್ನು ವಕ್ರವಾದ ವಾಕ್ಯಗಳಿಂದ ವಂಚಿಸುತ್ತಿರುವೆ?" ಎಂದು ಎರಡು ಮೂರು ಹಜ್ಜೆಯನ್ನಿಟ್ಟು ಪೋಗುತ್ತಲಿರಲು; ಸುಸಂಗತೆಯು ತನ್ನ ಮನದಲ್ಲಿ ಏನೋ ಒಂದು ಯೋಚಿಸಿ ಪೋಗುತ್ತಿರುವ ಸಾಗರಿಕೆಯಂ ತಡೆದು

ನಿಲಿಸಿ,--“ ಹಾಸ್ಯದ ನುಡಿಗಳನ್ನು ಸಹಿಸಲಾರದೆ ಬರುವ ಕಾಂತೆಯೇ, ಒಂದು ಕ್ಷಣಮಾತ್ರವು ಈ ಸ್ಥಳದಲ್ಲೇ ಇರುವಳಾಗು. ನಾನು ಶೀಘ್ರದಿಂದ ಚಿತ್ರಪಟವನ್ನು ತೆಗೆದುಕೊಂಡು ಬರುವೆನು ” ಎಂದು ನುಡಿದು, ಆ ಕದಳೀಗೃಹವನ್ನು ಒಳಹೊಗಲು ;

ವಿದೂಷಕನು ಸುಸಂಗತೆಯನ್ನು ಕಂಡು ಭಯಭ್ರಾಂತನಾಗಿ ವೇಗದಿಂದೋಡಗೂಡಿ —“ ಎಲೈ ರಾಜೇಂದ್ರನೇ, ಶೀಘ್ರನಾಗಿ ಚಿತ್ರಪಟವಂ ಮುಚ್ಚುವನಾಗು. ದೇವಿಗೆ ಪರಿಚಾರಕಳಾದ ಸುಸಂಗತೆಯು ಬಂದಳು ” ಎಂದು ನುಡಿಯಲು ; ರಾಯನು ಪೊದ್ದಿದ್ದ ಧೋತ್ರದ ಅಂಚಿನಿಂದ ಚಿತ್ರಪಟವಂ ಮುಚ್ಚಿ ಮರೆಗೆಯ್ಯಲು; ಸುಸಂಗತೆಯು ರಾಯನ ಪುರೋಭಾಗವನ್ನು ಪೊಂದಿ—“ ಎಲೈ ರಾಜಾಧಿರಾಜನೇ, ನೀನು ಜಯವುಳ್ಳವನಾಗು ! ” ಎಂದು, ನಮಸ್ಕಾರವಂ ಗೆಯ್ಯಲು ; ರಾಯನು— “ ಎಲೆ ಸುಸಂಗತೆಯೇ, ಇಲ್ಲಿರುವ ಎನ್ನನ್ನು ನೀನು ಹೇಗೆ ತಿಳಿದೆ ? ” ಎಂದು ಬೆಸಗೊಳಲು : ಸುಸಂಗತೆಯು—“ ಎಲೈ ರಾಜೇಂದ್ರನೇ, ನಾನು ನಿನ್ನನ್ನು ಮಾತ್ರವೇ ತಿಳಿಯಲಿಲ್ಲ. ಇಲ್ಲಿ ನಡೆದ ಚಿತ್ರಪಟದ ವೃತ್ತಾಂತವನ್ನೂ ಸಹ ತಿಳಿದೆನು ” ಎಂದು ಬಿನ್ನೈಸಲು ; ವಿದೂಷಕನು ರಾಯನನ್ನು ಏಕಾಂತ ಕರೆದು —“ ಎಲೈ ಸ್ವಾಮಿಯೇ, ಇವಳು ಬಹಳವಾಗಿ ವಾಚಾಲಕಳಾದವಳು. ಈ ಚಿತ್ರಪಟದ ವೃತ್ತಾಂತವನ್ನು ಬಲ್ಲೆನೆಂದು ನುಡಿಯುತ್ತಿರುವಳು ದೇವಿಯಾದ ವಾಸವದತ್ತೆಗೆ ಈ ಸಂಗತಿಯನ್ನು ವಿಜ್ಞಾಪಿಸಿದರೆ ಬಹಳ ಸ್ರವಾದಕೆ ಕಾರಣವಾಗುವುದರಲ್ಲಿ ಸಂದೇಹವೇ ತೋರಲಾರದು. ಆದುದರಿಂದ ಇವಳನ್ನು ಭೂಷಣಾದಿಗಳನ್ನು ಕೊಟ್ಟಾದರೂ ಸ್ವಾಧೀನಳನ್ನಾಗಿ ಮಾಡುವುದು ಸರ್ವೋತ್ಕೃಷ್ಟಕಾರ್ಯವಾಗಿ ತೋರುತ್ತಿರುವುದು ” ಎಂದು ನುಡಿಯಲು ;

ಅಷ್ಟರಲ್ಲೇ ಸುಸಂಗತೆಯು—“ ನಾನು ಬಂದು ಬಹಳ ಹೊತ್ತಾದುದು. ಜಾಗ್ರತೆಯಿಂದ ಪೋಗಿ ದೇವಿಗೆ ಈ ವಾರ್ತೆಯನ್ನು ವಿಜ್ಞಾಪಿಸುವುದಕ್ಕೋಸುಗ, ಆಜ್ಞೆಯಾದಲ್ಲಿ, ಪೋಗುತ್ತಿರುವೆನು ” ಎಂದು ನುಡಿದು, ಒಂದೆರಡು ಅಡಿಯನ್ನಿಟ್ಟು ಪೋಗಲೆಳೆಸಲು; ರಾಯನು—“ ಎಲೆ ಕೋಪಶಾಲಿಯಾದ ಸುಸಂಗತೆಯೇ, ವಿನೋದಕ್ಕೋಸುಗವಾಗಿ ಏನೋ ಒಂದು ಚಿತ್ರಪಟವನ್ನು ಕಲ್ಪಿಸಿ ಇದ್ದಲ್ಲಿ ಇದನ್ನು ಯಥಾರ್ಥವಾಗಿ ತಿಳಿಯುವ ನಿನ್ನ ಜಾಣ್ಮೆಯನ್ನು ಏನೆಂದು ಬಣ್ಣಿಸಲಿ? ಏಕೆ ಪೋಗುತ್ತಿರುವೆ? ಬಾ ” ಎಂದು ಅವಳ ಸೀರೆಯನ್ನು ಸಮಜಾರುವಂತೆ ಪಿಡಿದೆಳೆದು, ತನ್ನ ಬತ್ತಿನಲ್ಲಿ ಕುಳ್ಳಿರಿಸಿಕೊಂಡು, ಬೆರಳುಕೊನೆಗಳಿಂದ ಮುಂಗುರುಳುಗಳನ್ನು ನೇವರಿಸಿ, ತುಟಿಯಂ ಪಿಡಿದು ಅಲುಗಿಸಿ, ಮುಡಿಯಂ ತಡವಿ, ತನ್ನ ಕತ್ತಿನಲ್ಲಿ ಮೊತ್ತವಾಗಿ ಉತ್ತಮವಾಗಿ ನೃತ್ಯವಾಗಿದ್ದ ಮುತ್ತಿನ ಕಂಠಸರವಂ ತೆಗೆದು, ಅವಳ ಕಂಠದಲ್ಲಿ ಹಾಕಿ — ‘ ಎಲೆ ಸುಸಂಗತೆಯೇ, ವಿನೋದಕ್ಕೆ

ವಿರಚಿತವಾದ ಈ ಚಿತ್ರಪಟದ ವೃತ್ತಾಂತವಂ ಪೇಳಿ ಕಾರಣವಿಲ್ಲದೆ ವಾಸವ ದತ್ತೆಗೆ ಕೋಪವಂ ಪುಟ್ಟಿಸುವುದು ನ್ಯಾಯವಲ್ಲ." ಎಂದು ಗಲ್ಲವಂ ಮುದ್ದಿಸಿ, ಉಲ್ಲಾಸವಂ ಪುಟ್ಟಿಸಲು; ಸುಸಂಗತೆಯು—ತಾನು ದೇವಿಗೆ ಈ ವಾರ್ತೆಯನ್ನು ನಿಜವಾಗಿ ಬಿನ್ನೈಸುವಳೆಂದು ರಾಯನು ಸಂದೇಹದೊಡನೆ ಕೂಡಿರುವನೆಂದು ತಿಳಿದು,—"ಎಲೈ ರಾಜೋತ್ತಮನೇ, ಕೇಳು. ನನ್ನಲ್ಲಿ ತಿಲಮಾತ್ರವೂ ಸಂದೇಹ ಬೇಡ. ತಮ್ಮಲ್ಲಿ ಬಲವಾದ ಸಲುಗೆಯಿರುವುದರಿಂದ ವಿನೋದಕೋಸುಗವಾಗಿ ಈ ವಾಕ್ಯವನ್ನು ನುಡಿದೆನು. ಎನಗೆ ಏತಕೆ ಈ ಉತ್ತಮವಾದ ಮುತ್ತಿನ ಹಾರವನ್ನೀಯುವಿರಿ? ಸ್ವಾಮಿಯವರ ದಯೆಯೇ ಮುಖ್ಯವಲ್ಲದೆ ಈ ಮುತ್ತಿನ ಹಾರದಿಂ ಪ್ರಯೋಜನವಂ ಕಾಣೆನು. ಆದರೆ ಒಂದು ಮುಖ್ಯವಾದ ವಾಕ್ಯವಂ ಬಿನ್ನೈಸುವೆನು, ಚಿತ್ತಕೆ ತರತಕ್ಕದು. ಎನಗೆ ಪ್ರಾಣಪ್ರಿಯಳಾದ ಕಾಂತೆಯು ನಿನ್ನ ಒತ್ತಿನಲ್ಲಿ ಎನ್ನನ್ನು ಏತಕೆ ಬರೆದೆಯೆಂದು ಕೋಪವಂ ತಾಳಿ, ಈ ಕದಳೀಗೃಹದ ಸಮೀಪದಲ್ಲಿ ಇರುವಳು. ದೇವರು ಆ ಸ್ಥಳಕೆ ಚಿತ್ತೈಸಿ ಅವಳ ಕೋಪವಂ ಪರಿಹರಿಸಬೇಕು" ಎಂದು ಬಿನ್ನೈಸಲು: ವಿದೂಷಕನು—"ಎಲೈ ರಾಜೇಂದ್ರನೇ, ನಿನ್ನ ಭಾಗ್ಯೋದಯವನ್ನು ಏನೆಂದು ಬಣ್ಣಿಸಲಿ? ದ್ರವ್ಯಾಂಜನವನ್ನು ಮಾಡಲೋಸುಗ ಮೂಲಿಕೆಯಂ ಕೀಳುವೆನೆಂದು ಭೂಮಿಯಂ ಅಗೆಯುತ್ತಿರುವ ಪುರುಷನಿಗೆ ನವನಿಧಿಗಳೇ ದೊರಕಿದಂತಾದುದು. ದೂತಳಾಗಿ ಬಂದ ಲಕ್ಷ್ಮಿಯನ್ನು ಉಪೇಕ್ಷೆಯಂ ಗೆಯ್ಯುವುದು ನ್ಯಾಯವಲ್ಲವು" ಎಂದು ನುಡಿಯಲು; ರಾಯನು—"ಎಲೆ ಸುಸಂಗತೆಯೇ, ನಿನ್ನ ಮಿತ್ರಳು ಎಲ್ಲಿ ಎಲ್ಲಿ" ಎಂದೆದ್ದು, "ಶೀಘ್ರದಿಂದ ತೋರು ತೋರು" ಎಂದು ತ್ವರೆಯಂ ತಾಳಿ, ಸುಸಂಗತೆಯನ್ನು ಬಲಾತ್ಕರಿಸಲು; ಅವಳು ರಾಯನ ತ್ವರೆಯನ್ನೂ ವಿದೂಷಕನು ಮಾಡುವ ಕಣ್ಣಾಸನ್ನೆಯನ್ನೂ ಸಹ ಕಂಡು, "ಎಲೈ ರಾಜೋತ್ತಮನೇ, ಕಾಂತೆಯೆಂದರೇನು? ಇಂಥವಳು ಇಲ್ಲಿ ಇರುವಳೆಂದರೇನು? ನಾನು ಹಾಸ್ಯವಂ ಗೆಯ್ದೆನು" ಎಂದು ನುಡಿಯಲು; ರಾಯನಂ ಕುರಿತು ವಿದೂಷಕನು—ದುಷ್ಟಳಾದ ಈ ನೀಚಹೆಂಗಸಿಗೆ ಕೊಟ್ಟ ಮುತ್ತಿನ ಹಾರವು ವ್ಯರ್ಥವಾಯಿತೆಂದು ಏಕಾಂತವಾಗಿ ನುಡಿಯುತ್ತಿರಲು; ರಾಯನು ಮನದ ಸಂತೋಷವಳಿದು ಖಿನ್ನಹೃದಯನಾಗಿ ನಿಲ್ಲಲು;

ವಿದೂಷಕನು—"ಎಲೈ ಸ್ವಾಮಿಯೇ, ಇವಳು ಪೇಳುವ ಮಾತು ಯಾವುದೂ ಗೊತ್ತಿಲ್ಲದೆ ಇರುವುದು" ಎಂದು "ನಾನು ಚಿತ್ರಪಟವನ್ನು ಇವಳಿಗೂ ತೋರಿಸದೆ ಮುಚ್ಚಿ ಮಡಗುವಲ್ಲಿ ಪ್ರಯೋಜನವುಂಟಾಗುವುದು" ಎಂದು ಯೋಚಿಸಿ ತನ್ನ ಉತ್ತರೀಯದಲ್ಲಿ ಸುತ್ತಿ ಕೌಂಕುಳಲ್ಲಿ ಇರುಕಿಸಿದನು.

ಸುಸಂಗತೆಯು ರಾಯನು ಖಿನ್ನಹೃದಯನಾಗಿ ನಿಂದ ಭಾವಮಂ ತಿಳಿದು, "ಎಲೈ ರಾಜೇಂದ್ರನೇ, ವ್ಯಸನನಂ ಪೊಂದಬೇಡ. ಆ ಬಾಲೇಂದುಫಾಲೆಯಂ

ತೋರಿಸುವೆನು ಚಿತ್ತೈಸಬೇಕು" ಎಂದು ಕರೆದುಕೊಂಡು ಬರುತ್ತಿರಲು;

ಸಾಗರಿಕೆಯು ಸ್ವಲ್ಪ ದೂರದಲ್ಲಿ ಬರುವ ವತ್ಸರಾಜನಂ ಕಂಡು, ಉದ್ಭವರೋಮಾಂಚನದಿಂ ಕೊಬ್ಬುಮನದಿಂ ಹಬ್ಬುವ ಅನುರಾಗದಿಂ ನಸುನಡುಗುವ ತೊಡೆಗಳಿಂ, ತಪ್ಪಿಡುವಡಿಗಳಿಂದೊಡಗೂಡಿ ಈ ಮಹಾರಾಜನಂ ಕಂಡು,—"ಇವನನ್ನು ನೋಡಿದಮಾತ್ರದಿಂದಲೇ ಎನ್ನ ತೊಡೆಗಳು ನಡುಗುತ್ತಿರುವುವು; ಹತ್ತಿರಕೆ ಬಂದಲ್ಲಿ ಎಂತು ಮಾತನಾಡಲಿ? ಹೇಗೆ ಭಯವಿಲ್ಲದೆ ಕಣ್ಣೆತ್ತಿ ನೋಡಲಿ? ಆಲಿಂಗಿಸಿದಲ್ಲಿ ಹೇಗೆ ತಾಳಲಿ? ಇವನ ಅಧರವಂ ಒಂದುಬಾರಿಯಾದರೂ ಇಂಬಾಗಿ ಚುಂಬನವಂ ಗೆಯ್ಯದಿರಲು, ಮನದಲ್ಲಿ ತುಂಬಿರುವ ಎನ್ನ ಹಂಬಲವು ಹೇಗೆ ತೊಲಗುವುದು? ಒಂದು ಬಾರಿಯಾದರೂ ಈ ಸುಂದರಾಂಗನನ್ನು ಪೊಂದಿದ ಮುಂದಗಮನೆಯ ಜನ್ಮವೇ ಸಫಲವಾದುದು." ಎಂದು ತಿಳಿದು, ರಾಯನನ್ನು ನೋಡಿಯೂ ನೋಡದಂತೆಯೇ ಏನೋ ಒಂದು ವ್ಯಾಜವಂತಾಳಿ ಕುಳಿತಿರಲು;

ವಿದೂಷಕನು ಜಗವಂ ಮೋಹಿಸುವ ಸಮ್ಮೋಹನವಿದ್ಯೆಯೇ ಮೂರ್ತಿಗೊಂಡು ರಾಜಿಸುವುದೋ ಎಂಬಂತೆ, ಕಣ್ಮನಗಳಂ ಕೈಸೂರೆಯಂ ಕೊಳ್ಳುತ್ತ ಕುಳಿತಿರುವ ಸಾಗರಿಕೆಯಂ ಕಂಡು ಆಶ್ಚರ್ಯವಂ ಪಟ್ಟು, "ಇಂಥ ಅಂದವಾದ ಸುಂದರಾಂಗಿಯು ಮನುಷ್ಯಸ್ತ್ರೀಯಲ್ಲಿ ಪುಟ್ಟುವುದು ದುರ್ಲಭವಾಗಿರುವುದು. ಎಲೈ ರಾಜೇಂದ್ರನೇ, ಚಂದವಾದ ಮಂದಾರವೃಕ್ಷದ ಜಗಲಿಯಲ್ಲಿ ಮಂಡಿಸಿರುವ ಕಾಂತೆಯು ನಿರ್ಮಾಣಕರ್ತನಾದ ಬ್ರಹ್ಮನು ಇವಳಂ ನಿರ್ಮಿಸಿ ಎನ್ನ ಸೃಷ್ಟಿಯಲ್ಲಿ ಇಂಥ ಸ್ತ್ರೀಯು ಪುಟ್ಟುವುದೂ ಉಂಟೇ ಎಂದು ಆಶ್ಚರ್ಯವಂ ಪೊಂದಿ, ಭ್ರಾಂತನಾಗಿರಬಹುದೆಂದು ಊಹಿಸುತ್ತಿರುವೆನು" ಎನಲು; ರಾಯನು ಸುಂದರವಾದ ಚಂದ್ರನ ಅಂದವಂ ನಿಂದಿಸುತ್ತ ಮಂದಹಾಸದಿಂದ ಬಂಧುರವಾದ ಮುಖಕಮಲದಿಂದ ಮುದ್ದಾಗಿರುವ ಸಾಗರಿಕೆಯಂ ಕಂಡು—"ಎಲೈ ಮಿತ್ರನೇ, ನೀನು ಪೇಳಿದಂತೆ ನಾನೂ ಊಹಿಸುತ್ತಿರುವೆನು. ಆದರೂ ಪೇಳುವೆನು ಕೇಳು. ಬ್ರಹ್ಮನು ಮೂರುಲೋಕಕ್ಕೂ ಅಲಂಕಾರಸ್ವರೂಪಳಾದ ಈ ಕಾಂತೆಯಂ ನಿರ್ಮಾಣವಂ ಗೆಯ್ದು ತನ್ನ ಎಂಟು ಕಣ್ಣುಗಳಂ ಚೆನ್ನಾಗಿ ತೆರೆದು ನೋಡಿ ಮೂಗಿನಲ್ಲಿ ಬೆರಳನ್ನಿಟ್ಟು ನಿರ್ಮಾಣಕುಶಲತ್ವವು ಲೇಸಾದುದು ಲೇಸಾದುದೆಂದು ತನ್ನ ನಾಲ್ಕುತಲೆಗಳನ್ನೂ ಒಂದುಬಾರಿ ತೂಗುತ್ತಿರುವನೆಂದು ಊಹಿಸುತ್ತಿರುವೆನು" ಎನಲು;

ಸಾಗರಿಕೆಯು ಸುಸಂಗತೆಯಂ ಕುರಿತು—"ಎಲೆ ಸುಸಂಗತೆಯೇ, ನೀನು ಕದಳೀಗೃಹಕ್ಕೆ ಪೋಗಿ ಚೆನ್ನಾಗಿ ಚಿತ್ರಪಟವಂ ತಂದೆ?" ಎಂದು ಮನದಲ್ಲಿ ಸಂತೋಷವಿದ್ದರೂ ಅದೇನೋ ಒಂದು ಬಗೆಯಾದ ಪುಸಿಯಾದ ಅಸೂಯೆಯಂ ಪೊಂದಿ, ತಾರಹಾರಗಳೂ ಬಟ್ಟಮೊಲೆಗಳೂ ಪುಟನೆಗೆದು ಹಾರುವಂತೆ ತಿರುಗಿ ನೋಡಿ ಪೋಗುತ್ತಿರಲು;

ರಾಯನು ಆ ನಾಗರಿಕೆಯಂ ಕುರಿತು—"ಎಲೆ ಮನೋಹರಾಂಗಿಯೇ, ನೀನು ಅತ್ಯಂತಕೋಪವಂ ತಾಳಿ ನೋಡಿದರೂ ಆ ದೃಷ್ಟಿಯು ಸ್ನೇಹದಿಂದೊಡಗೂಡಿ ಮನಸ್ಸಿಗೆ ಹರ್ಷವನ್ನೇ ಪುಟ್ಟಿಸುತ್ತಿರುವುದು. ಆದರೆ ಒಂದು ವಾಕ್ಯವಂ ಪೇಳುವೆನು ಕೇಳು. ತ್ವರೆಯನ್ನು ಬಿಟ್ಟು ಸುಂದರವಾದ ಮಂದಗಮನದಿಂದ ಪೋಗುವಳಾಗು. ಏಕೆಂದರೆ—ಅತ್ಯಂತ ಭಾರಗಳಾದ ನಿನ್ನ ನಿತಂಬ ಬಿಂಬಗಳು ಎನ್ನ ಮನದಲ್ಲಿ ಖೇದವಂ ಪುಟ್ಟಿಸುತ್ತಿರುವುವು" ಎಂದು ನುಡಿಯಲು; ಸುಸಂಗತೆಯು—"ಎಲೈ ಮಹಾರಾಜನೇ, ಈ ಕಾಂತೆಯು ಅಧಿಕವಾದ ಕೋಪದಿಂ ಯುಕ್ತಳಾಗಿರುವಳು. ಆದುದರಿಂದ ಇವಳ ಹಸ್ತವಂ ಪಿಡಿದು ಸಮಾಧಾನವಂ ಗೆಯ್ಯುವನಾಗು" ಎಂದು ನುಡಿಯಲು; ರಾಯನು—"ಎಲೆ ಸುಸಂಗತೆಯೇ, ನೀನು ಪೇಳಿದಂತೆ ನಾನು ವಿರಚಿಸುವೆನು" ಎಂದು ಅವಳ ಕೈಯ್ಯಂ ಪಿಡಿದು, ಅಧಿಕವಾದ ಆನಂದವಂ ತಾಳಲು; ವಿದೂಷಕನು—"ಎಲೈ ರಾಜೇಂದ್ರನೇ, ನೀನು ಪೂರ್ವದಲ್ಲಿ ಪಡೆಯದೆ ಇದ್ದಂಥ ಲಕ್ಷ್ಮಿಯನ್ನು ಪಡೆದೆ" ಎನಲು; "ಎಲೈ ಮಿತ್ರನೇ, ಯುಕ್ತವಾಗಿ ಪೇಳಿರುವೆ. ಇವಳು ಲಕ್ಷ್ಮಿಯೇ ಸರಿ: ಇವಳ ಕೋಮಲಹಸ್ತವು ಪಾರಿಜಾತವೃಕ್ಷದ ಪಲ್ಲವವೇ ಸರಿ: ಅಂತಲ್ಲದಿದ್ದರೆ ಬೆವರುಗಳೆಂಬ ನೆವದಿಂದ ಅಮೃತಬಿಂದುಗಳು ಹೇಗೆ ಜಾರುತ್ತಿರುವುವು, ಹೇಳು" ಎಂದು ಹೇಳಿ ನಾಗರಿಕೆಯಂ ಕುರಿತು—"ಎಲೆ ಕೋಮಲಾಂಗಿಯೇ, ಪುಷ್ಪಕಿಂತಲೂ ಮಿಕ್ಕವಾಗಿ ನಿನ್ನ ಮಿತ್ರಳಲ್ಲಿ ಮಾಡುವ ಕೋಪಾನುಬಂಧವು ಯುಕ್ತವಾಗಿಯೇ ಇರುವುದು" ಎನಲು; ಸುಸಂಗತೆಯು—"ಎಲೆ ನಲ್ಲಳೇ, ನೀನೇ ಧನ್ಯಳಲ್ಲವೆ? ರಾಜಾಧಿರಾಜನಿಂದ ಹಸ್ತದಲ್ಲಿ ಹಿಡಿಯಲ್ಪಟ್ಟವಳಾದರೂ ಕೋಪವಂ ಬಿಡದಿರುವೆ?" ಎನಲು; ನಾಗರಿಕೆಯು—"ಎಲೆ ಕಾಂತೆಯೇ, ಇನ್ನಾದರೂ ನಿನ್ನ ವಕ್ರವಾಕ್ಯವನ್ನು ಬಿಟ್ಟು ಸುಮ್ಮನಿರಬಾರದೆ?" ಎಂದು ಕಬ್ಬಿನ ಬಿಲ್ಲಿನಂತಿರುವ ಹುಬ್ಬುಗಳನ್ನು ಎಬ್ಬಿಸುತ್ತಿರಲು: ವಿದೂಷಕನು ನಾಗರಿಕೆಯಂ ನೋಡಿ—"ಎಲೈ ರಾಜೇಂದ್ರನೇ, ವಾಸವದತ್ತಾದೇವಿಯು ಬಂದಳು" ಎಂದು ನುಡಿಯಲು; ರಾಯನು ಫಳಿಲನೆ ನಾಗರಿಕೆಯ ಹಸ್ತವಂ ಬಿಡಲು; ನಾಗರಿಕೆಯು—"ಎಲೆ ಸುಸಂಗತೆಯೇ, ಈಗ ಏನುಮಾಡತಕ್ಕದು? ಎಲ್ಲಿ ಪೋಗತಕ್ಕದು?" ಎಂದು ಭಯದಿಂ ನುಡಿಯಲು; ಸುಸಂಗತೆಯು—"ಎಲೆ ಬಾಲೆಯೇ, ಶೀಘ್ರದಲ್ಲಿ ಒತ್ತಿನಲ್ಲಿ ಕತ್ತಲೆಯಾಗಿರುವ ಈ ಹೊಂಗೆಯ ಮರಗಳ ಪೊದರುಗಳ ಸೇರುವ, ನಡೆ" ಎಂದು ಆ ನಾಗರಿಕೆಯಿಂದೊಡಗೂಡಿ ಪೋದಳು. ಎಂಬಲ್ಲಿಗೆ

ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಪನ್ನೆರಡನೆಯ ಗುಚ್ಛಂ ಸಂಪೂರ್ಣಂ.

# ಹದಿಮೂರನೆಯ ಗುಚ್ಛಂ.

ಅನಂತರದಲ್ಲಿ ವತ್ಸರಾಜನು ವಾಸವದತ್ತಾದೇವಿಯು ಬಂದಳೆಂದು ನುಡಿದ ವಿದೂಷಕನ ವಾಕ್ಯವಂ ಕೇಳಿ, ಭಯಭ್ರಾಂತಿಯಿಂದ ಅವರು ಪೊರಮಟ್ಟು ಪೋದುದಂ ಕಂಡು, ಉಭಯ ಪಾರ್ಶ್ವವಂ ನೋಡಿ, ವಾಸವದತ್ತಾದೇವಿಯಂ ಕಾಣದೆ, ವಿದೂಷಕನಂ ಕುರಿತು,—"ಎಲೈ ಮಿತ್ರನೇ, ವಾಸವದತ್ತಾದೇವಿಯು ಬಂದಳೆಂದು ನುಡಿದೆಯಷ್ಟೆ. ಎಲ್ಲಿರುವಳು? ವಾಸವದತ್ತಾದೇವಿಯಂ ತೋರಿಸು" ಎಂದು ಬೆಸಗೊಳಲು; ವಿದೂಷಕನು ನಗುತ—"ಎಲೈ ಮಹಾರಾಜನೇ, ಪತ್ನಿಯ ಪೆಸರಂ ಪೇಳಿದ ಮಾತ್ರದಿಂದಲೇ ಬೆದರುತ್ತಿರುವವನೇ ಕೇಳು; ನೀನು ಕೈವಿಡಿದ ಕಾಂತೆಯು ಎಷ್ಟು ಉಪಚಾರಗಳಂ ಪೇಳಿದಾಗ್ಯೂ ಅಧಿಕವಾದ ರೋಷದಿಂದೊಡಗೂಡಿ ಕೋಪದಲ್ಲಿ ವಾಸವದತ್ತಾದೇವಿಗೆ ಸಮಳಾಗಿದ್ದ ಕಾರಣದಿಂದ ವಾಸವದತ್ತಾದೇವಿಯೇ ಬಂದಳೆಂದು ನುಡಿದೆನಲ್ಲದೆ, ದೇವಿಯು ಬಂದುದಂ ನುಡಿದವನಲ್ಲ. ಈ ವಾಕ್ಯವಂ ಕೇಳಿದ ಮಾತ್ರದಿಂದಲೇ ಕೈಗೆ ಸಿಕ್ಕಿದ್ದ ಮನೋಹರಾಂಗಿಯಾದ ಆ ಕಾಂತೆಯಂ ಕೈ ಬಿಡಬಹುದೇ ಪೇಳು" ಎನಲು; ರಾಯನು ಉದ್ದವಾಗಿ ನಿಟ್ಟುಸಿರುಗಳಂ ಬಿಟ್ಟು ಬಳಲಿ ಬಾಯಾರಿ ಬಸವಳಿದು—"ಎಲಾ ಮೂರ್ಖನಾದ ವಿದೂಷಕನೇ, ಕಲ್ಯಾಣಿಯಾಗಿ ಕಮಲನೇತ್ರೆಯಾಗಿ ಕಲಕಂಠಿಯಾಗಿ ಕಾಮಿತಾರ್ಥ ಸ್ವರೂಪಳಾದ ಕಾಂತೆಯನ್ನು ಕೈಬಿಡಿಸಿದುದಲ್ಲದೆ ಎನ್ನನ್ನೇ ನಿಂದಿಸುವುದಕ್ಕೆ ಯತ್ನಪಟ್ಟಿರುವ ನಿನ್ನ ಸಾಹಸವನ್ನು ಏನೆಂದು ಬಣ್ಣಿಸಬಹುದು! ಮುಂದೆಯಾದರೂ ಮಂದಗಮನೆಯಾಗಿ, ಅರವಿಂದಾಸ್ಯೆಯಾಗಿ, ಕುಂದದಂತೆಯಾಗಿ, ಬಾಲೇಂದುಫಾಲೆಯಾಗಿರುವ ಆ ಸುಂದರಿಯ ಸಂದರ್ಶನವು ಎಂದಿಗೆ ಎನಗೆ ಸಂಧಿಸುವುದು ಮಂದಮತಿಯೆ ಪೇಳು?" ಎಂದು ನಿಂದಿಸುತ್ತ, ಕಂದಿ ಕುಂದಿ ಮುಂದುಗಾಣದೆ, ದಿಕ್ಕುದಿಕ್ಕುಗಳಲ್ಲಿರುವ ವಸ್ತುಗಳೆಲ್ಲವನ್ನೂ ಆ ನಾಗರಿಕೆಯನ್ನಾಗಿಯೇ ಊಹಿಸುತ್ತ, ತಲ್ಲಣಗೊಳುತ್ತಿರಲು; ವಿದೂಷಕನು ಸಂತಾಪವಂ ಪೊಂದುವ ರಾಯನ ಅಂತರಂಗದಲ್ಲಿ ಪುಟ್ಟಿದ ಚಿಂತೆಯನ್ನು ತಿಳಿದು, "ಎಲೈ ಮಹಾರಾಜನೇ, ಈಗ ಹೇಗೆ ದೈವಯೋಗದಿಂದ ಆ ಕಾಂತೆಯು ಕರಗತವಾಗಿದ್ದಳೋ ಮುಂದೆಯೂ ಈ ರೀತಿಯಿಂ ದೊರಕುವಳು. ವಾಸವದತ್ತಾದೇವಿಯ ಪೆಸರನ್ನು ಉಸಿರಿದ ಮಾತ್ರದಿಂದಲೇ ಬೆಚ್ಚಿ ಬೆದರುತ್ತಿರುವ ಅಧೀರನಾದ ನೀನು ಶತ್ರುಗಳನ್ನೆಲ್ಲರಂ ರಣಭೂಮಿಯಲ್ಲಿ ಜಯಿಸಿರುವುದು ಅಪದ್ಧವಾಗಿಯೇ ತೋರುವುದು" ಎನಲು; ರಾಯನು—"ಎಲೈ ಹೆಡ್ಡನಾದ ವಿದೂಷಕನೇ, ಕೇಳು. ಪ್ರೌಢರಾಗಿ ಕೋಪಶಾಂತೆಯರಾಗಿ ಸುಂದರಿಯರಾದ ಕಾಂತೆಯರುಗಳು ಮತ್ತೊಬ್ಬರಾದ ಸ್ತ್ರೀಯರ ಪೆಸರನ್ನು ಪೇಳಿದ ಮಾತ್ರದಿಂದಲೇ ತಾಳಲಾರದ ತಾಪವಂ ಪೊಂದಿ ಪ್ರಾಣವಂ ಬಿಡುವುದರಲ್ಲಿ ಪ್ರಯತ್ನವಂ ಗೆಯ್ಯುತ್ತಿರುವರು.

ಇಂತಿರುವಲ್ಲಿ ವಾಸವದತ್ತಾದೇವಿಯು ಬರುವಲ್ಲಿ ಆ ಕಾಂತೆಯು ಕರಮಂ ಪಿಡಿದಿರ ಬಹುದೇ ಪೇಳು. ಹಿಂದುಮುಂದಂ ತಿಳಿಯದೆ ಮಂದಮತಿಯಂತೆ ನೀನು ಆಡಿದ ವಾಕ್ಯವು ಭಯವಂ ಪೊಂದಿಸದೆ ಇರದು" ಎಂದು ನುಡಿಯುತ್ತಿರಲು;

ಅತ್ತ ಸಾಗರಿಕೆಯು ಮನದಲ್ಲಿ ಕಳವಳವಂ ತಾಳಿ, "ಕೆಟ್ಟದೈವವು ಕೈಗೆ ದೊರಕಿದ ಕಾಮಿತಾರ್ಥವಂ ಕಾಡುಮಾಡಿ, ಕಾಮನ ಬಾಣಕ್ಕೆನ್ನಂ ಗುರಿಗೆಯ್ದುದು! ಆ ಮಹಾರಾಜನು ಕೆಯ್ಯಂ ಪಿಡಿದೆಳೆದಲ್ಲಿ ಇಂಬಾಗಿ ಮೆಯ್ಯನ್ನೀಯದೆ ದುಷ್ಟಲಜ್ಜೆಯಿಂದ ಬಿಗಿಗೆಯ್ದು ಮನೋರಥಕ್ಕೆ ಭಂಗವಂ ಸಂಪಾದಿಸಿದೆನು. ಲೋಕದಲ್ಲಿ ಕುಲಸ್ತ್ರೀಯರುಗಳಿಗೆ ಲಜ್ಜೆಯೇ ಸಕಲವಾದ ಮನದ ಬಯಕೆಯಂ ಕೆಡಿಸುತ್ತಿರುವುದು. ವಾಸವದತ್ತಾದೇವಿಯು ಬಂದಳೆಂಬ ಭಯಂಕರವಾಕ್ಯವಂ ಕೇಳಿದ ಮಾತ್ರದಿಂದಲೇ ತೆರಳಿ ಬಂದುದು ಸರ್ವೋತ್ತಮಕಾರ್ಯವಾದುದು. ಇದಲ್ಲದೆ ಅಲ್ಲಿ ನಿಂತಲ್ಲಿ ಪ್ರಾಣಾಂತಕವಾದ ಪ್ರಮಾದಕಾರ್ಯವೇ ಕೈಸೇರುತ್ತಿದ್ದಿತು. ಕಂದರ್ಪಸುಂದರನಾದ ವಸುಂಧರಾಧಿಪತಿಯ ಅಂದಮಂ ನೋಡಿ ಮಾತಾಡಿ ಕೈಗೂಡಿ ಜಾರಿ ಬಂದ ಮಂದಭಾಗ್ಯಳಾದ ನಾನು ಮುಂದಕ್ಕೆ ಅಡಿಯಿಟ್ಟು ಪೋಗುವೆನೆಂದರೆ, ತೊಡೆಗಳು ನಡುಗುತಿರ್ಪುವು. ಎನಗೆ ಪ್ರಾಣಾಪ್ತಳಾದ ಈ ಸುಸಂಗತೆಯೇ ಮುಂದಾದರೂ ಎನಗೊಂದು ಗತಿಯಂ ಕಲ್ಪಿಸಬೇಕಲ್ಲದೆ ಮತ್ತೊಬ್ಬಳಂ ಕಾಣೆನು" ಎಂದು ತನ್ನ ಮನದಲ್ಲಿ ಆಲೋಚಿಸಿ, ಅವಳಂ ಕುರಿತು—"ಎಲೆ ಪ್ರಾಣಪ್ರಿಯಳೇ, ದೈವದೂರಳಾದ ಎನಗೆ ಸಂಪತ್ತು ದೊರಕುವುದು ದುರ್ಲಭವಾಗಿರುವುದು. ಲೋಕದಲ್ಲಿ ದೈವಸಹಾಯವಿಲ್ಲದ ಮನುಜರಿಗೆ ಹಗ್ಗ ಹಾವಾಗಿ, ಅಮೃತ ವಿಷವಾಗಿ, ಹೊನ್ನು ಮಣ್ಣಾಗಿ, ಎಲ್ಲಿಯೂ ಇಲ್ಲದ ವಿಪತ್ತುಗಳು ತಲೆದೋರುವುವೆಂಬುದು ನ್ಯಾಯವಾಗಿರುವುದು. ಇನ್ನು ಹೆಚ್ಚು ಮಾತುಗಳಾಡಿ ಫಲವಿಲ್ಲ" ಎಂದು ಮುತ್ತುಗಳಂತೆ ಮುದ್ದಾದ ಕಣ್ಣೀರುಗಳಂ ಸುರಿಸುತ್ತಿರಲು; ಸುಸಂಗತೆಯು ವರ್ಷಾಕಾಲದ ನದಿಯಂತೆ ಉಕ್ಕಿಬರುವ ಕಣ್ಣೀರುಗಳುಳ್ಳಂಥ ಆ ಸಾಗರಿಕೆಯ ದುಃಖವಂ ತಿಳಿದು—"ಎಲೆ ಕಂಬುಕಂಠಿಯೇ, ಕಳವಳವಂ ಪೊಂದಬೇಡ. ದೇವಿಯ ಭಯ ಮೊದಲಾದ ಒಂದು ಕಾರ್ಯಕ್ಕೂ ಹಿಂದೆಗೆಯದೆ ಏನುಬಂದರೂ ಬರಲೆಂದು ನಿನಗೆ ಆನಂದವಂ ಪೊಂದಿಸುವುದರಲ್ಲಿ ಸಂದೇಹವೇ ಇಲ್ಲ" ವೆಂದು ತನ್ನ ಸೀರೆಯ ಸೆರಗಿನಿಂದ ಕಮಲದಳಗಳಂತೆ ಕಾಂತಿಗೀಡಾಗಿರುವ ಅವಳ ಕಂಗಳಿಂ ಪೊರಮಡುವ ಜಲಬಿಂದುಗಳನ್ನು ಒರಸಿ, ಕುರುಳುಗಳನ್ನು ಬೆರಳುಗಳ ಕೊನೆಗಳಿಂದ ತಿದ್ದಿ, ವ್ಯಸನವಂ ಸಮಾಧಾನವಂ ಗೆಯ್ದು, ಶಕುಂತಶಾಲೆಗೆ ಕರೆದುಕೊಂಡು ಪೋಗಲು;

ಇತ್ತಲು, ವಾಸವದತ್ತಾದೇವಿಯು ರಾಯನು ಅಕಾಲದೋಹಳವಿದ್ಯೆಯನ್ನು ರಾಮಾನಂದನೆಂಬ ಸಿದ್ಧಪುರುಷನಿಂದ ಕಲಿತು ಉಪವನವಂ ಪ್ರವೇಶಿಸಿದನೆಂದು ಕಾಂಚನಮಾಲೆಯ ಮುಖವಚನದಿಂ ಕೇಳಿ, ಅವಳಿಂದೊಡಗೂಡಿ ಉಪವನವಂ

ಪ್ರವೇಶಿಸಿ,—“ ಎಲೆ ಕಾಂಚನಮಾಲೆಯೇ, ಪೂಜ್ಯನಾದ ರಾಯನು ಸಂರಕ್ಷಿಸುವ ನವಮಾಲಿಕೆಯೆಂಬ ಲತೆಯು ಇನ್ನೆಷ್ಟು ದೂರವಿರುವುದು ? ” ಎನಲು ; ಕಾಂಚನ ಮಾಲೆಯು—“ ಎಲೌ ತಾಯೇ, ಮುಂದೆ ಕಾಣುವ ಸುಂದರವಾದ ಕನಕಕದಳೀಗೃಹ ವಂ ದಾಂಟಿ ಪೋದಲ್ಲಿ ಕಾಣುತ್ತಿರುವುದು. ಇತ್ತಲು ಬಿಜಯಂಗೆಯ್ಯಬಹುದು ” ಎಂದು ಬಿನ್ನೈಸುತ್ತ ಬರುತ್ತಿರಲು ;

ಇತ್ತಲು, ರಾಯನು—“ ಎಲೈ ವಿದೂಷಕನೇ, ಪ್ರಾಣಪ್ರಿಯಳಾದ ಆ ಕಾಂತೆಯನ್ನು ಇನ್ನುಮೇಲೆ ಎಲ್ಲಿ ನೋಡತಕ್ಕುದು ! ” ಎಂದು ನುಡಿಯುತ್ತಿರಲು ;

ಕಾಂಚನಮಾಲೆಯು—“ ಎಲೌ ದೇವಿಯೇ, ಈ ಸ್ಥಳದಲ್ಲಿ ನಮ್ಮ ರಾಯನು ವಿದೂಷಕನೊಡನೆ ಸಲ್ಲಾಪವಂ ಗೆಯ್ಯುವನಂತೆ ತೋರುವುದು. ನಿನ್ನ ಆಗಮನ ವನ್ನೇ ಬಯಸಿಕೊಂಡು ಮಿತ್ರನೊಡಗೂಡಿ ಕಾದಿರುವಂತೆ ತೋರುವುದು. ಜಾಗ್ರತೆ ಯಿಂದ ಚಿತ್ತೈಸುವಳಾಗು ” ಎಂದು ನುಡಿಯಲು ; ವಾಸವದತ್ತಾದೇವಿಯು ಮುಂದೆ ಸಾರಿ ಪೋಗಿ ರಾಯನಂ ಕಂಡು—“ ಎಲೈ ಪೂಜ್ಯನಾದ ಆರ್ಯಪುತ್ರನೇ, ಜಯವುಳ್ಳ ವನಾಗು ! ” ಎಂದು ನುಡಿದು ನಮಸ್ಕರಿಸಿ ನಿಲ್ಲಲು ; ಕಾಂಚನಮಾಲೆಯು ರಾಯನ ಚರಣಾರವಿಂದಗಳಿಗೆ ವಂದನೆಯಂ ಗೆಯ್ದು ಮುಂದೆಡೆಯಲ್ಲಿ ನಿಂದಿರಲು ; ವಿದೂಷ ಕನು ವಾಸವದತ್ತಾದೇವಿಯಂ ಕಂಡು ಭಯಾತುರನಾಗಿ,—“ ಎಲೈ ರಾಜೇಂದ್ರನೇ, ಮೊದಲು ಈ ಚಿತ್ರಪಟವನ್ನು ಮುಚ್ಚಿ ಮಡಗುವೆನು” ಎಂದು ಅದನ್ನು ತನ್ನ ಕೌಂಕು ಳಲ್ಲಿರಿಸಿ ತಾನು ಪೊದ್ದಿರುವ ಧೋತ್ರದಿಂ ಮುಚ್ಚಲು ; ರಾಯನು—“ ಎಲೌ ಕಾಂತೆ ಯೇ, ಮೊದಲಾಗಿ ಬಂದ ನಮ್ಮಿಂದ ನೀನು ಬರುವುದು ವಿಳಂಬವಾದುದರಿಂದ ನವ ಮಾಲಿಕೆಯೆಂಬ ಲತೆಯು ನೋಡಲ್ಪಡಲಿಲ್ಲವು ” ಎಂದು ನುಡಿಯಲು ; ದೇವಿಯು ಚೆನ್ನಾಗಿ ನೋಡಿ—“ ಎಲೈ ರಾಜೇಂದ್ರನೇ, ನಿನ್ನ ಮುಖಕಾಂತಿಯಿಂದಲೇ ನವ ಮಾಲಿಕಾಲತೆಯು ಪುಷ್ಪಗಳಿಂದ ಪೂರಿತಮಾದುದೆಂದು ತಿಳಿದು ಬಂದುದು. ಆದರೆ ದೋಹಳಕಾರ್ಯಮಂ ನೀನು ಗೆಯ್ಯದೆ ಇದ್ದಲ್ಲಿ ಅಂತಃಪುರವಂ ಕುರಿತು ಪೋಗುವೆನು ” ಎಂದು ನುಡಿಯಲು ; ದೇವಿಯು ಪೋಗುವಳೆಂಬ ಸಂತೋಷದಿಂದ ವಿದೂಷಕನು—“ ಎಲೈ ರಾಜೇಂದ್ರನೇ, ನಾವು ಗೆದ್ದೆವು. ದೇವಿಯು ಇಲ್ಲಿ ನಿಲ್ಲದೆ ಪೋಗುವಳು ” ಎಂದು ನುಡಿದು, ತನ್ನ ಭುಜಗಳನ್ನು ಮೇಲಕ್ಕೆ ಎತ್ತಿ ಕುಣಿಕುಣಿ ಯುತ್ತ, ತನ್ನ ಕೌಂಕುಳಿಂದ ಜಾರಿ ದೇವಿಯ ಮುಂದೆ ಬಿದ್ದ ಚಿತ್ರಪಟವಂ ಕಂಡು, ಮಹತ್ತರವಾದ ವಿಷಾದವಂ ಪೊಂದಿ ಬೆಪ್ಪುಬಡಿದವನಂತೆ ತನ್ನ ಮುಂದಲೆಗೆಯಿಂ ತುಟಿ ಯಂ ಸವರುತ್ತ, ದಿಕ್ಕುದಿಕ್ಕುಗಳಂ ಬಿಟ್ಟು ಕಣ್ಣುಗಳಂ ಮುಚ್ಚಿ ಹೆಚ್ಚಾಗಿ ನೋಡು ತ್ತಿರಲು ; ರಾಯನು ಹಿಂದಿರುಗಿ ವಿದೂಷಕನನ್ನು ಬೆರಳುಕೊನೆಯಿಂದ ಹೆದರಿಸಿ ತಲೆಯಂ ತೂಗುತ್ತಿರಲು ; ವಿದೂಷಕನು—“ ಅಯ್ಯಾ ಸ್ವಾಮಿಯೇ, ನೀನು ಕೋ ಪವಂ ತಾಳದಿರು. ನಾನು ಪ್ರತ್ಯುತ್ತರವಂ ಪೇಳುವ ಉಪಾಯವನ್ನು ಬಲ್ಲೆನು ”

ಎನಲು ; ಕಾಂಚನಮಾಲೆಯು ಶೀಘ್ರದಿಂ ಬಂದು ಆ ಚಿತ್ರಪಟಮಂ ತೆಗೆದುಕೊಂಡು ನೋಡಿ-"ಎಲೌ ಪೂಜ್ಯಳಾದ ದೇವಿಯೇ, ಇಲ್ಲಿ ಯಾರದೋ ಭಾವಚಿತ್ರವು ಬರೆದಿರುವುದು, ನೋಡು" ಎಂದು ದೇವಿಯ ಹಸ್ತಕೆ ಒಪ್ಪಿಸಲು ; ದೇವಿಯು ಆ ಭಾವಚಿತ್ರಮಂ ಬಲವಾಗಿ ನೋಡಿ— "ಎಲೆ ಕಾಂಚನಮಾಲೆಯೇ, ಇವನು ನಮ್ಮ ರಾಜೇಂದ್ರನು, ಇವಳು ಸಾಗರಿಕೆಯು. ಈ ಪಟವನ್ನು ಬರೆದವರಾರು ತಿಳಿಯಬೇಕು" ಎಂದು ನುಡಿದು, "ನಾನು ಎಷ್ಟುಪ್ರಕಾರವಾಗಿ ಸಾಗರಿಕೆಯು ರಾಯನ ದೃಷ್ಟಿಗೆ ಗೋಚರಿಸಲಾಗದೆಂದು ಮಾಡಿದ ಪ್ರಯತ್ನಗಳೆಲ್ಲವೂ ಭಗ್ನವಾಗಿಹೋದುವು. ಇಲ್ಲಿ ಸಾಗರಿಕೆಯು ಹೇಗೆ ಬಂದಳು? ಅಥವಾ ಬಂದ ರಾಯನನ್ನು ಒಡಗೂಡಿಸಿ ಈ ಪಟದಲ್ಲಿ ಇವಳಂ ಬರೆದವರಾರೋ?" ಎಂದು ಬಹುಪ್ರಕಾರವಾಗಿ ಆಲೋಚಿಸುತ್ತಿರಲು ; ಕಾಂಚನಮಾಲೆಯು—"ಎಲೌ ದೇವಿಯೇ, ಇಲ್ಲಿ ಪ್ರಾಣಿಮಾತ್ರವಾದರೂ ಪ್ರವೇಶಿಸುವುದಕ್ಕೆ ಆಗದೆ ಇರುವಲ್ಲಿ ಇನ್ನೊಬ್ಬರೂ ಬರೆದಹಾಗೆ ತೋರುವುದಿಲ್ಲ. ನಮ್ಮ ರಾಜೇಂದ್ರನೇ ಬರೆದಿರಬಹುದೆಂದು ಊಹಿಸುವೆನು" ಎಂದು ನುಡಿಯಲು ; ದೇವಿಯು ಚಿತ್ರಪಟವನ್ನು ತನ್ನ ಹಸ್ತದಲ್ಲಿ ಪಿಡಿದಿರುವುದಂ ಕಂಡು ರಾಯನು ತಾವರೆಯೆಲೆಯಮೇಲೆ ಬಿದ್ದ ನೀರಿನಂತೆ ಚಂಚಲವಾದ ಚಿತ್ತವುಳ್ಳವನಾಗಿ ಹಿಂದಿರುಗಿ ವಿದೂಷಕನ ಮುಖಮಂ ನೋಡಿ ಕಿವಿಯಲ್ಲಿ—"ಎಲೋ ಕೇಡಿಗನೇ, ಈಗ ದೇವಿಗೆ ನಾನು ಏನು ಪ್ರತ್ಯುತ್ತರವಂ ಪೇಳಲಿ?" ಎಂದು ನುಡಿಯಲಾವಿದೂಷಕನು ಧೈರ್ಯವಂ ತಂದುಕೊಂಡು-"ಅಯ್ಯಾ ಸ್ವಾಮಿಯೇ, ನೀನು ಯಾವುದಕ್ಕೂ ಯೋಚಿಸಬೇಡ. ನಾನು ಪೇಳುತ್ತಿರುವ ವಾಕ್ಯಗಳಂ ಕೇಳುತ್ತಿರುವನಾಗು" ಎಂದು, ದೇವಿಯಂ ಕುರಿತು—"ಎಲೌ ಪೂಜ್ಯಳಾದ ದೇವಿಯೇ, ನೀನು ಮತ್ತೊಂದು ಪ್ರಕಾರವಾಗಿ ಯೋಚಿಸಬೇಡ. ಈ ಚಿತ್ರಪಟದ ಸಂಗತಿಯನ್ನು ಬಿನ್ನೈಸುವೆನು, ಕೇಳು. ನೀನು ಈ ಉಪವನಕ್ಕೆ ಬರುವುದು ತಡವಾದಲ್ಲಿ ವಿನೋದದಿಂದ ಕಾಲವಂ ಕಳೆಯುವುದಕ್ಕೋಸುಗವಾಗಿ ವಿನೋದದಿಂದ ರಾಯನಂ ಕುರಿತು— ಎಲೈ ಮಹಾರಾಜನೇ, ಲೋಕದಲ್ಲಿ ಭಾವಚಿತ್ರಮಂ ಬರೆಯಬಲ್ಲ ಮನುಜರು ಎದುರಾಗಿರುವವನ ಆಕಾರವಂ ಬರೆವರಲ್ಲದೆ ತಮ್ಮ ಆಕಾರಗಳಂ ತಾವು ಬರೆಯಲಾರರು. ನೀನು ಸಮಸ್ತ ವಿದ್ಯಾಪಾರಂಗತನಾದುದರಿಂದ ಈ ಕದಳೀಗೃಹದಲ್ಲಿರುವ ಚಿತ್ರದ ಸಾಮಗ್ರಿಯನ್ನು ತೆಗ ಂಗಳಿಂ ಂಡು ನಿನ್ನ ಭಾವಚಿತ್ರವಂ ನೀನೇ ಬರೆಯುವನಾಗೆಂದು ನುಡಿದ ಎನ್ನ ವಾಕ್ಯವಂ ಕಂಡ ದ ರಾಯನು ಆದೇರೀತಿಯಿಂದ ತನ್ನ ಆಕಾರವನ್ನು ಬರೆಯಲು, ಅಂದವಾದ ಚಿತ್ರಪ ಕ್ಕೆ ನೋಡಿ, ಎಲೈ ಸ್ವಾಮಿಯೇ ನಿನ್ನ ಭಾವಚಿತ್ರಕೆ ಸರಿಯಾಗಿ ರೂಪಿನಲ್ಲಿ ರತಿದೇವಿಗಿಂತಲೂ ಅತಿಶಯಳಾಗಿ ಪೂರ್ವದಲ್ಲಿ ಎಲ್ಲಿಯೂ ನೋಡದೆ ಇರುವಂಥ ಸುಂದರಳಾದ ಒಬ್ಬಾಳೊಬ್ಬ ಸ್ತ್ರೀಯನ್ನು ಬರೆಯುವನಾಗೆಂದು ನಾನು ಬಲಾತ್ಕರಿಸಲಾಗಿ. ಎನ್ನ ವಾಕ್ಯವಂ ಮೀರಲಾರದೆ ಒಬ್ಬಾಳೊಬ್ಬ ಸ್ತ್ರೀಯನ್ನು

ಬರೆದಿರುವನು. ಇವಳು ನಿನ್ನ ಅಂತಃಪುರದ ಹೆಣ್ಣುಗಳಲ್ಲಿ ಯಾವವಳಂತೆ ನಿನಗೆ ತೋರುವಳೋ, ನಿನ್ನ ಚಿತ್ತದಲ್ಲಿ ಇನ್ನೇನು ಸಂದೇಹವಂ ಪೊಂದುತ್ತಿರುವೆಯೋ ತಿಳಿಯೆನು" ಎನಲು ; ವಾಸವದತ್ತೆಯು ನಸುನಕ್ಕು—"ವಸಂತಕನ ವಾಕ್ಯದ ಚಾತುರ್ಯವಂ ಕೇಳಿದೆಯಾ ?" ಎನಲು ; ರಾಯನು ಏನೋ ಒಂದು ಪರಿಯಾದ ಮುಖವರ್ಣವಂ ತಾಳಿ, "ಎಲೆ ದೇವಿಯೇ, ನೀನು ಸಂದೇಹವಂ ಪೊಂದಬೇಡ. ನಿಜವಾಗಿ ನಾನು ಒಬ್ಬ ಸ್ತ್ರೀಯನ್ನೂ ನೋಡಿ ಬರೆದವನಲ್ಲ. ನನ್ನ ಬುದ್ಧಿಯಿಂದಲೇ ಊಹಿಸಿ ಬರೆದೆನು" ಎಂದು ನುಡಿಯಲು ; ವಿದೂಷಕನು—"ಎಲೌ ದೇವಿಯೇ, ಒಬ್ಬಳಂ ನೋಡಿ ಬರೆದುದಲ್ಲವೆಂದು ನನ್ನ ಜನಿವಾರವಂ ಪಿಡಿದು ಪ್ರಮಾಣವಂ ಗೆಯ್ಯುವೆನು. ನಿಜವಾಗಿ ಇಂಥ ಕಾಂತೆಯನ್ನು ಎಲ್ಲಿಯೂ ಕಂಡುದಿಲ್ಲವು" ಎನಲು ; ದೇವಿಯು—"ವಸಂತಕನು ದಿನಕ್ಕೊಂದುನೂರು ಜನಿವಾರವಾದರೂ ಕಿತ್ತು ಮರಳಿ ಹಾಕುವುದರಲ್ಲಿ ಹಿಂದೆಗೆಯದೇ ಇರುವನು. ಇವನ ವಾಕ್ಯವನ್ನು ಸತ್ಯವೆಂದು ಹೇಗೆ ನಂಬಬಹುದು" ಎಂದು ಏಕಾಂತವಾಗಿ ಕಾಂಚನಮಾಲೆಯೊಡನೆ ನುಡಿಯಲು ; ಕಾಂಚನಮಾಲೆಯು—"ಎಲೌ ದೇವಿಯೇ, ಜಲದಲ್ಲಿ ಘುಣಗಳೆಂಬ ಹುಳುಗಳು ಸಂಚರಿಸುತ್ತಿರುವ ಸಮಯದಲ್ಲಿ ದೈವಯೋಗದಿಂದ ಒಂದು ಅಕ್ಷರವಾದಂತೆ ರಾಯನು ಸ್ವಬುದ್ಧಿಯಿಂದ ಊಹಿಸಿ ಬರೆದ ಭಾವಚಿತ್ರವು ನಾಗರಿಕೆಯಂತೆ ಆಗಿದ್ದರೂ ಆಗಿರಬಹುದು" ಎಂದು ದೇವಿಯಂ ಕುರಿತು ಪೇಳುತ್ತಿರಲು ; ದೇವಿಯು-"ಎಲೆ ಮರುಳುಗೊಂಡ ಮಾನಿನಿಯೇ, ಇವನಾರು ? ವಸಂತಕನಲ್ಲವೆ? ಇವನ ವಕ್ರವಾಕ್ಯದ ರೀತಿಯೂ ಮೋಸಗಾರಿಕೆಯೂ ನಿನಗೆ ತಿಳಿಯದು" ಎಂದು ಮೆಲ್ಲಗೆ ನುಡಿದು, ರಾಯನಂ ಕುರಿತು,—"ಎಲೈ ಸ್ವಾಮಿಯೇ, ಈ ಚಿತ್ರಪಟವಂ ನೋಡಿದಾರಭ್ಯವಾಗಿ ಬಲವಾಗಿ ತಲೆನೋವು ಬಂದುದು, ಇಲ್ಲಿ ನಿಂತಿರಲಾರೆನು" ಎಂದು ನುಡಿದು, ಅಂತರಂಗದಲ್ಲಿ ಅಧಿಕಕೋಪವಂ ತಾಳಿ ಪೋಗುತ್ತಿರಲು ; ರಾಯನು ವಾಸವದತ್ತೆಯ ಮುಂಜೆರಗಂ ಹಿಡಿದು—"ಎಲೆ ಕಾಂತೆಯೇ, ಪ್ರಸನ್ನಳಾಗು, ಎಂದು ಪೇಳುವೆನಾದರೆ, ಈಗ ನಿನಗೆ ಉಂಟಾಗಿರುವ ಕೋಪದಲ್ಲಿ ಅಂಥ ವಾಕ್ಯಕೆ ಅವಕಾಶವೇ ಇಲ್ಲದೆ ಇರುವುದು. ಇನ್ನುಮೇಲೆ ಇಂಥ ಕಾರ್ಯವಂ ಗೆಯ್ಯುವುದಿಲ್ಲವೆಂದರೆ, ಹಿಂದೆ ಮಾಡಿದುದು ಒಂದು ಅಪರಾಧವೆಂದು ನಿಶ್ಚಯವಾಗುವುದು. ಎನ್ನಲ್ಲಿ ಯಾವ ದೋಷವೂ ಇಲ್ಲವೆಂಬುದಂ ನೀನೇ ಬಲ್ಲೆ ಎಂಬೆನೇ, ಆ ವಾಕ್ಯವೂ ಸತ್ಯವಾಗಿ ತೋರಲಾರದು. ಆದುದರಿಂದ ನಾನು ನಿನಗೇನೆಂದು ಪ್ರತ್ಯುತ್ತರವಂ ಪೇಳಲಿ? ಏನು ಕಾರ್ಯವಂ ಗೆಯ್ಯಲಿ? ಎಂತು ಚಿಂತೆಯಿಲ್ಲದೇ ಇರಲಿ? ಪೇಳು" ಎಂದು ನುಡಿದರೂ ಆ ವಾಸವದತ್ತೆಯು ವಿನಯದಿಂ ತನ್ನ ಸೆರಗಂ ಬಿಡಿಸಿಕೊಂಡು, "ಎಲೈ ಮಹಾರಾಜನೇ, ನಿನ್ನ ಚಿತ್ತದಲ್ಲಿ ಇನ್ನೊಂದು ಪ್ರಕಾರವಾಗಿ ತಿಳಿಯಕೂಡದು, ನಿಶ್ಚಯವಾಗಿ ಶಿರೋವೇದನೆಯು ತಲೆದೋರಿರುವುದು" ಎಂದು ನುಡಿದು,

ನಿಲ್ಲದೆ, ಕಾಂಚನಮಾಲೆಯಿಂದೊಡಗೂಡಿ ಅಂತಃಪುರವಂ ಕುರಿತು ಪೋಗಲು ;

ವಿದೂಷಕನು—“ ಎಲೈ ಸ್ವಾಮಿಯೇ, ದೈವಯೋಗದಿಂದ ನಮಗೆ ಪ್ರಾಪ್ತವಾದ ಅಕಾಲಮೃತ್ಯುವು ಬಿಟ್ಟುಪೋದುದು ” ಎಂದು ಸಂತೋಷಯುಕ್ತನಾಗಿ ನುಡಿಯಲು ; ರಾಯನು—“ ಎಲೈ ಮೂರ್ಖನಾದ ವಿದೂಷಕನೇ, ದೇವಿಯು ಪೋದಳೆಂದು ಏಕೆ ಸಂತೋಷವಂ ಪೊಂದುತ್ತಿರುವೆ? ಆ ವಾಸವದತ್ತೆಯು ಸತ್ಕುಲದಲ್ಲಿ ಪುಟ್ಟಿದವಳಾದುದರಿಂದ ಏನು ಕೋಪವಿದ್ದರೂ ತನ್ನ ಅಂತರಂಗದಲ್ಲಿ ಅಡಗಿಸಿದಳಲ್ಲದೆ ಹೊರದೋರಿಸಲಿಲ್ಲ. ಆದುದರಿಂದ ಅವಳು ಸಂತೋಷದಿಂದ ಪೋದಳೆಂದು ತಿಳಿಯುತ್ತಿರುವೆ. ಆದರೆ ಪೇಳುವೆನು ಕೇಳು—ಕೋಪದಿಂದ ಹುಬ್ಬುಗಳು ಎದ್ದು ಕುಣಿಯುತ್ತಿದ್ದರೂ ನಾನು ಕಾಣೆನೆಂದು ಮುಖವಂ ಬಿಗಿಸುತ್ತಿರುವಳು ; ಮರ್ಮೋದ್ಘಾಟವಂ ಮಾಡುವ ಬಾಯಿನಿಂದ ಮಂದಹಾಸವಂ ಮಾಡುವಳು; ಸ್ವಲ್ಪವಾದರೂ ನಿಷ್ಠುರವಾಕ್ಯವಂ ಪೇಳಲಿಲ್ಲ; ದೃಷ್ಟಿಯು ಕಣ್ಣೀರುಗಳಿಂದ ನೆನೆದಿದ್ದರೂ ಚೆನ್ನಾಗಿ ಕಣ್ಣೆತ್ತಿ ನೋಡಲಿಲ್ಲ; ಎಷ್ಟುಪ್ರಕಾರವಾದ ವಿಷಾದವು ತೋರಿದರೂ ಎನ್ನಲ್ಲಿ ಮರ್ಯಾದೆಗೂಡಿದ ವಿನಯವನ್ನು ಬಿಡಲಿಲ್ಲ. ಆದುದರಿಂದ ಈಗ ನಾವಿರ್ವರೂ ಪೋಗಿ ಅವಳ ಮನಸ್ಸಿನಲ್ಲಿರುವ ಕಲ್ಮಷವಂ ನಿಶ್ಶೇಷವಾಗಿ ಪರಿಹರಿಸುವ, ನಡೆ ” ಎಂದು ವಿದೂಷಕನಿಂದೊಡಗೂಡಿ ಬರುತ್ತ, ಸಾಗರಿಕೆಯಂ ಸ್ಮರಿಸಿ— “ ಎಲೈ ಮಿತ್ರನೇ, ಮೂರು ಲೋಕದಲ್ಲಾದರೂ ಮಾರನ ಸಾಮ್ರಾಜ್ಯದೇವತೆಯಂತೆ ಇರುವ ಆ ನಾರೀಶಿರೋಮಣಿಯಂತೆ ರಾಜಿಸುವ ಕಾಂತೆಯು ಪುಟ್ಟಲಾರಳು. ಮುಂದೆ ಆ ಕುಂದರದನೆಯ ಸಂದರ್ಶನವು ಎಂದಿಗಾಗುವುದೋ ಎಂದು ಇಂದುಧರನಂ ಸ್ಮರಿಸುತ್ತಿರುವೆನು. ಈಗ ಮುಂದಕೆ ಪೋಗುವುದಕ್ಕೆ ಚರಣಂಗಳು ಸಮರ್ಥಗಳಾಗವು ” ಎಂದು ದಂತದ ಕೆಲಸಗಳಿಂದ ಕಾಂತಿಗೀಡಾದ ಹಜಾರದಲ್ಲಿ ಶಯ್ಯಾಗೃಹವಂ ಪೊಂದಿ, ಪದ್ಮರಾಗದ ಪಾದಗಳಿಂದ ಪರಿಶೋಭಿಸುತ್ತಿರುವ ಮಂಚದಲ್ಲಿ ಶಯನವಂ ಗೆಯ್ದು, “ ಅಯ್ಯಾ ಮಿತ್ರನೇ, ನೀನು ಪೋಗಿ ಮಿಂಚಿನ ಬಳ್ಳಿಯಂತೆ ತೋರಿ ಹಾರಿದ ವಾರಿಜಾಕ್ಷಿಯು ಎಲ್ಲಿರುವಳೋ, ಹೇಗೆ ಇಲ್ಲಿಗೆ ಬರುವಳೋ, ಅಂಥ ಕಾರ್ಯದಲ್ಲಿ ಉದ್ಯುಕ್ತನಾಗಿ ಸಂತತವಾದ ಸಂತಾಪವನ್ನು ಪರಿಹರಿಸುವನಾಗು. ಮತ್ತು ದೇವಿಯಾಗಲಿ, ಅವಳ ಸೇವಕಳಾದ ಕಾಂಚನಮಾಲೆ ಮುಂತಾದ ಕಾಂತೆಯರಾಗಲಿ ಎನ್ನನ್ನು ಎಲ್ಲಿರುವನೆಂದು ಕೇಳಿದಲ್ಲಿ ಅಧಿಕವಾದ ಆಯಾಸದಿಂದ ಶಯನವಂ ಗೆಯ್ದಿರುವನೆಂದು ನುಡಿಯುವನಾಗು ” ಎಂದು ವಿದೂಷಕನಿಗೆ ಆಜ್ಞೆಯನ್ನೀಯಲು ;

ಅವನು ಆಜ್ಞೆಯಾದಂತೆ ನಡೆದುಕೊಳ್ಳುವೆನೆಂದು ಬರುತ್ತ, “ ರಾಜಸೇವೆಯು ಬಲುಕಷ್ಟವಾಗಿರುವುದು. ಆ ಕಾಂತೆಯು ಎಲ್ಲಿರುವಳೋ, ಹೇಗೆ ಬರುವಳೋ, ನಿಂದಿಸಿ ನುಡಿವಳೋ, ಅವಳಿಗೆ ದೇವಿಯು ಏನು ನಿರ್ಬಂಧವಂ ಗೆಯ್ಯುವಳೋ, ತಿಳಿಯೆನು ” ಎಂದು ಯೋಚಿಸುತ್ತ ಬರುತ್ತಿರಲು ;

ಕಾಂಚನಮಾಲೆಯು ವಿದೂಷಕನಂ ಕಂಡು—“ ಎಲೈ ವಸಂತಕನೇ, ಏನೋ ಒಂದು ಬಲವಾದ ಯೋಚನೆಯಿಂದೊಡಗೂಡಿರುವನಂತೆ ನಿನ್ನ ಮುಖಕಾಂತಿ ಪೇಳುತ್ತಿರುವುದು ” ಎನಲು ; ಅವನು— “ ಎಲೆ ಕಾಂಚನಮಾಲೆಯೇ ಕೇಳು. ನಮ್ಮ ರಾಜೇಂದ್ರನು ಸುಕುಮಾರ ಶರೀರಿಯಾದುದರಿಂದ ವನವಿಹಾರವಂ ಗೆಯ್ಯು ವಲ್ಲಿ ಶೀತವಾದ ಗಾಳಿಯ ಸೋಂಕಿನಿಂದ ಶಿರೋವೇದನೆಯುಂಟಾಗಿ ಅಧಿಕವಾದ ಆಯಾಸವಂ ಪೊಂದುತ್ತಿರುವನು ” ಎಂದು ನುಡಿಯಲು ; ಅವಳು—“ ಆಯಾಸವಂ ತಾಳಿರುವ ರಾಯನಂ ಬಿಟ್ಟು ಎಲ್ಲಿಗೆ ಪೋಗುತ್ತಿರುವೆ? ” ಎನಲು ; ಅವನು—“ ಸರ್ವ ಸಿದ್ಧಿಯೆಂಬ ವೈದ್ಯನಂ ಕರೆಯಲೋಸುಗ ಪೋಗುತ್ತಿರುವೆನು ” ಎಂದು ನುಡಿದು, ಅಲ್ಲಿ ನಿಲ್ಲದೆ ಚಿತ್ರಮಂಟಪವಂ ಕುರಿತು ಪೋಗಲು ;

ಕಾಂಚನಮಾಲೆಯು—“ ರಾಯನು ಎಲ್ಲಿರುವನು ? ಏನು ಮಾಡುವನು ? ಸಮೀ ಪದಲ್ಲಿ ಯಾರಿರುವರು? ಇದನೆಲ್ಲವಂ ಚೆನ್ನಾಗಿ ವಿಚಾರಿಸಿಕೊಂಡು ಬರುವಂತೆ ದೇವಿ ಯು ಅಪ್ಪಣೆಯನ್ನಿತ್ತು ಕಳುಹಿಸಿದಳು. ಈಗ ಹಿಂದಿರುಗಿ ಪೋಗಿ ಈ ವಾರ್ತೆಯಂ ವಿಜ್ಞಾಪಿಸಿ ಬರುವೆನು ” ಎಂದು ದೇವಿಯ ಸಮೀಪವಂ ಪೊಂದಿ, ವಿದೂಷಕನು ಪೇ ಳಿದ ವೃತ್ತಾಂತವನ್ನು ಪೇಳಲು ;

ದೇವಿಯು ದಿಗಿಲಿನಿಂದೊಡಗೊಂಡು—“ ಎಲೆ ಕಾಂತೆಯೇ, ನೀನು ನಿಂತಲ್ಲಿ ನಿಲ್ಲದೆ ಸ್ವಾಮಿಯ ದೇಹಸ್ಥಿತಿಯನ್ನು ವಿಚಾರಿಸಿ ಬಂದು ವಿಜ್ಞಾಪಿಸುವಳಾಗು ” ಎಂದು ಅಜ್ಞಾಪಿಸಿ, ಬಳಿಕ ಸುಸಂಗತೆಯು ಆಪ್ತಳಾಗಿ ಬುದ್ಧಿವಂತಳಾಗಿ ಸಾಗರಿಕೆ ಯಲ್ಲೂ ಸಲಿಗೆಯುಳ್ಳವಳಾಗಿರುವಳೆಂದು ತಿಳಿದು, ಶಕುಂತಶಾಲೆಯಿಂದ ಅವಳಂ ಕರೆಯಿಸಿ, ಏಕಾಂತ ಸ್ಥಳಕ್ಕೆ ಅವಳಂ ಕರೆದುಕೊಂಡು ಪೋಗಿ, “ ಎಲೆ ಸುಸಂಗತೆ ಯೇ, ನೀನು ಬಾಲ್ಯದಿಂದ ಎನ್ನಿಂದ ಉದ್ಧಾರವಾಗಿ ವಿದ್ಯಾಬುದ್ಧಿಗಳಂ ಕಲಿತಿರುವೆ ಯಾದುದರಿಂದ ಎನಗೆ ಒಂದು ಕಾರ್ಯವಂ ಮಾಡಿಕೊಡತಕ್ಕದು. ಅದೇನೆಂದರೆ, ನಾನಾಪ್ರಕಾರಗಳಾದ ಪ್ರಯತ್ನಗಳಂ ವಿರಚಿಸಿ ಶಕುಂತಶಾಲೆಯಲ್ಲಿರುವ ಸಾಗರಿಕೆ ಯಂ ರಾಯನ ದೃಷ್ಟಿಗೆ ಬೀಳದಂತೆ ನಿರ್ಬಂಧವಂ ಗೆಯ್ದು ರಕ್ಷಿಸಿಕೊಂಡು ಇರು ವಳಾಗು ” ಎಂದು, ತಾನು ಧರಿಸಿಕೊಳುತಿರ್ದ ಒಂದು ತೊಡಿಗೆಯೊಡವೆಗಳನ್ನೂ ಸರಿ ಗೆಯ ಬರೆಹದ ಸೀರೆ ಕುಪ್ಪಸವನ್ನೂ ಸಹ ಕೊಟ್ಟು, ಒತ್ತಿನಲ್ಲಿದ್ದ ಮದನಿಕೆಯಂ ಕುರಿತು—“ ಎಲೆ ಬಾಲೆಯೇ, ಕಾಂಚನಮಾಲೆಯು ಪೋಗಿ ಬಹು ಹೊತ್ತಾದುದು. ಶೀಘ್ರದಿಂ ಬರುವಂತೆ ಪೇಳುವಳಾಗು ” ಎಂದು ಅಪ್ಪಣೆಯನ್ನೀಯಲು ;

ಅವಳು ಬರುತ್ತ ಕಾಂಚನಮಾಲೆಯು ಇಷ್ಟು ಸಾವಕಾಶವಾಗುವುದಕ್ಕೆ ಕಾರ ಣವೇನಿರುವುದೋ ತಿಳಿಯದೆಂದು ಯೋಚಿಸುತ್ತ, ಮುಂದುಗಡೆಯಲ್ಲಿ ಮಂದಗಮ ನದಿಂ ಬರುವ ಕಾಂಚನಮಾಲೆಯಂ ಕಂಡು, “ ಇದೋ ! ಇತ್ತಲು ನಮ್ಮ ಗೊತ್ತು ಗಾತಿಯು ಬರುತ್ತಿರುವಳು, ಅವಳ ಹತ್ತಿರ ಸೇರುತ್ತಿರುವೆನು ” ಎಂದು ಬರುತ್ತಿರಲು ;

ಕಾಂಚನಮಾಲೆಯು,—“ ಎಲೈ ಮಂತ್ರಿಯಾದ ವಿದೂಷಕನೇ, ನೀನು ಮಾಡಿದುದು ಲೇಸಾದುದು, ಲೇಸಾದುದು. ಸಂಧಿವಿಗ್ರಹಯಾನದ್ವೈಧೀಭಾವ ಸಮಾಶ್ರಯಗಳೆಂಬ ಷಡ್ಗುಣಗಳಿಂದಲೂ, ಸಮಾಧಾನ ಮೊದಲಾದ ಚತುರೋಪಾಯಗಳಿಂದಲೂ, ಪ್ರಭುಶಕ್ತಿ ಉತ್ಸಾಹಶಕ್ತಿ ಮಂತ್ರಶಕ್ತಿಗಳೆಂಬ ಶಕ್ತಿತ್ರಯಗಳಿಂದಲೂ, ಕ್ಷಯ ಸ್ಥಾನ ವೃದ್ಧಿಗಳೆಂಬ ವರ್ಗತ್ರಯದಿಂದಲೂ ಮಂತ್ರಿಯಾದ ಯೌಗಂಧರಾಯಣನಂ ತಿರಸ್ಕರಿಸುವೆ? ” ಎಂದು ನುಡಿಯುತ್ತ ಬರುತ್ತಿರಲು ;

ಮದನಿಕೆಯು ಕಾಂಚನಮಾಲೆಯ ಸಮೀಪವಂ ಸೇರಿ,–“ ಎಲೌ ಕಾಂತೆಯೇ, ವಸಂತಕನಿಂದ ಏನು ಕಾರ್ಯವು ಮಾಡಲ್ಪಟ್ಟಿತು? ಅವನನ್ನು ಏತಕ್ಕೋಸ್ಕರಮಾಗಿ ಈ ಪ್ರಕಾರವಾಗಿ ಸ್ತೋತ್ರವಂ ಗೆಯ್ಯುತ್ತಿರುವೆ? ” ಎಂದು ಬೆಸಗೊಳಲು ; ಅವಳು— “ ಎಲೆ ಮದನಿಕೆಯೇ, ಆ ವೃತ್ತಾಂತವನ್ನು ಏತಕೆ ಕೇಳುತ್ತಿದ್ದೀಯೆ? ನಿನಗೆ ಇನ್ನೂ ಬಾಲ್ಯವಯಸ್ಸಾದುದರಿಂದ ಈ ರಾಜರಹಸ್ಯವಂ ಸಂರಕ್ಷಿಸುವುದಕೆ ಸಮರ್ಥಳಾಗಲಾರೆ ” ಎಂದು ನುಡಿಯಲು ; ಅವಳು—“ ಎಲೌ ಪೂಜ್ಯಳಾದ ಕಾಂಚನಮಾಲೆಯೇ, ನೀನು ಪೇಳಿದ ವಾಕ್ಯವನ್ನು ಯಾರೊಡನೆಯೂ ಪೇಳುವುದಿಲ್ಲವೆಂದು ನಿನ್ನ ವಾಸವದತ್ತಾದೇವಿಯು ಚರಣಗಳಮೇಲೆ ಆಣೆಯನ್ನಿಡುವೆನು. ಅವನು ಮಾಡಿದ ವೃತ್ತಾಂತವನ್ನು ಕೇಳಬೇಕೆಂಬ ಕುತೂಹಲವು ಬಲವಾಗಿರುವುದು ” ಎಂದು ಬಲಾತ್ಕರಿಸಲು ; ಕಾಂಚನಮಾಲೆಯು—“ ಎಲೆ ಮದನಿಕೆಯೇ, ನೀನು ದೃಢವಾದ ಚಿತ್ತವೃತ್ತಿಯುಳ್ಳವಳಾದಲ್ಲಿ ಪೇಳುವೆನು, ಕೇಳು. ನಾನು ರಾಯನಿರುವ ದಂತದ ಹಜಾರದಿಂದ ಪೊರಟುಬರುತ್ತಿರಲು, ಸುಸಂಗತೆಯು ಅಧಿಕವಾದ ಸಂತೋಷಯುಕ್ತಳಾಗಿ, ಅವಳ ಕೌಂಕುಳಲ್ಲಿ ಇರುವ ಸೀರೆ ಕುಪ್ಪುಸವಂ ಇರುಕಿಕೊಂಡು ಏನೋ ಕೆಲವು ವಸ್ತುಗಳನ್ನು ಸೋಗಿಲಲ್ಲಿ ಕಟ್ಟಿಕೊಂಡು, ಮಂದಹಾಸವಂ ಗೆಯ್ಯುತ್ತ ಚಿತ್ರಶಾಲೆಯ ಒತ್ತಿನಲ್ಲಿ ನಿಂತು ಕೈಬೀಸಿಬೀಸಿ ಕರೆದು ವಿದೂಷಕನ ಸಮೀಪವಂ ಸೇರುತ್ತಿರಲು; ನಾನು ಈ ಸುಸಂಗತೆಯ ಸಂತೋಷಕೆ ಏನೋ ಒಂದು ಕಾರಣವಿರುವುದೆಂದು ಯೋಚಿಸಿ ಅವರಿರ್ವರೂ ಕಾಣದಂತೆ ಆ ಚಿತ್ರಶಾಲೆಯಂ ಬಳಸಿಕೊಂಡು ಒಳಪೊಕ್ಕು ಮರೆಗೊಂಡು ನಿಂದಿರಲು, ಸುಸಂಗತೆಯೂ ವಿದೂಷಕನೂ ಅಲ್ಲಿಗೆ ಬಂದು, ಕೆಲವು ವಾಕ್ಯಗಳನ್ನು ಆಡಿದರು. ಆದರೆ ಅನ್ನವನ್ನಿತ್ತು ಸಾಕಿದವರಿಗೆ ಮೋಸವಂ ಗೆಯ್ಯುವ ಜನರಿಗೆ ದೇವನು ಹೇಗೆ ಬುದ್ಧಿಯನ್ನೀಯುತ್ತಿರುವನೆಂದು ಹೃದಯದಲ್ಲಿ ಸಂತಾಪವುಂಟಾಗುವುದು ” ಎನಲು ; ಮದನಿಕೆಯು—“ ಎಲೌ ಕಾಂತೆಯೇ, ಅವರಿರ್ವರೂ ಏನೆಂದು ಮಾತನಾಡುತ್ತ ಇದ್ದರು ಆದನ್ನು ಪೇಳು ” ಎನಲು; ಅವಳು— “ ವಸಂತಕನಾಡಿದ ವಾಕ್ಯವನ್ನು ಕೇಳು. ‘ ಎಲೆ ಸುಸಂಗತೆಯೇ, ನಮ್ಮ ರಾಜೇಂದ್ರನ ಹೃದಯದಲ್ಲಿ ಪುಟ್ಟಿರುವ ಸಂತಾಪ ಪರಿಹಾರಕ್ಕೆ ಸಾಗರಿಕೆಯಂ ಬಿಟ್ಟು ಇನ್ನೊಬ್ಬಳು ಯೋಗ್ಯಳಾಗುವಳೇ? ಇದಕೆ ಪ್ರತಿಕ್ರಿಯೆಯನ್ನು ಯೋಚಿಸಿ

ದ್ದೀಯೋ ಪೇಳುವಳಾಗು ' ಎಂದು ನುಡಿದನು " ಎನಲು ; ಮದನಿಕೆಯು—" ಎಲೌ ಕಾಂತೆಯೇ, ಈ ಪ್ರಕಾರವಾಗಿ ಪೇಳಿದ ವಿದೂಷಕನಿಗೆ ಸುಸಂಗತೆಯು ಏನು ಪ್ರತ್ಯುತ್ತರವಂ ಪೇಳಿದಳು ?" ಎಂದು ನುಡಿಯಲಾಕಾಂಚನಮಾಲೆಯು—" ಎಲೆ ಕಾಂತೆಯೇ, ಸುಸಂಗತೆಯು ಪೇಳಿದ ವಾಕ್ಯವೇನೆಂದರೆ, ' ಎಲೈ ವಿದೂಷಕನೇ ವಾಸವದತ್ತಾದೇವಿಯು ಚಿತ್ರಪಟವಂ ನೋಡಿದುದರಿಂದ ಅಧಿಕವಾದ ಸಂದೇಹ ದೊಡನೆ ಕೂಡಿದವಳಾಗಿ ಶಕುಂತಶಾಲೆಯಲ್ಲಿದ್ದ ಎನ್ನಂ ಕರೆಯಿಸಿ, ಎಲೆ ಬಾಲೆಯೇ ನೀನು ಬಾಲ್ಯದಿಂದ ಎನ್ನಿಂದಲೇ ಸಮಸ್ತ ವಿದ್ಯಾಬುದ್ಧಿಗಳಂ ಕಲಿತು ವೃದ್ಧಿಯಂ ಪೊಂದಿರುವೆಯಾದುದರಿಂದಲೂ ಸಾಗರಿಕೆಯಲ್ಲಿ ಬಹಳ ಸಲಿಗೆ ಇರುವುದರಿಂದಲೂ, ಪೇಳುವುದೇನೆಂದರೆ—ಅನೇಕ ಪ್ರಯತ್ನಗಳಿಂದಲೂ ಈ ಸಾಗರಿಕೆಯನ್ನು ರಾಯನ ದೃಷ್ಟಿಗೆ ಬೀಳದಂತೆ ಸಲಹುತ್ತಿರುವಳಾಗು. ಯಾವ ಕಾಲಕ್ಕಾದರೂ, ಪಕ್ಷಿಶಾಲೆ ಯಿಂದ ಈಚೆಗೆ ಕಾಲೆತ್ತಿ ಮಡಗದಂತೆ ಜಾಗರೂಕಳಾಗಿ ಕಾದಿರುವುದೆಂದು ಹೇಳಿ, ತಾನು ಧರಿಸಿದ್ದ ಆಭರಣಗಳನ್ನೂ ಸೀರೆ ರವಕೆಗಳನ್ನೂ ಸಹ ಕೊಟ್ಟಿರು ವಳು ಎಂದು ಅವೆಲ್ಲವಂ ತೋರಿಸಲು, ಆ ವಿದೂಷಕನು ಆಭರಣ ವಸ್ತ್ರಗಳಂ ನೋಡಿ— ಎಲೆ ಸುಸಂಗತೆಯೇ, ಈ ರೀತಿಯಲ್ಲಿ ದೇವಿಯು ಚಿತ್ತದಲ್ಲಿ ಸಂಶಯವು ಬಲವಾಗಿ ಹಬ್ಬಿರುವಲ್ಲಿ ನಮ್ಮ ರಾಯನಿಗೆ ಆ ಸಾಗರಿಕೆಯ ಸಂಗವು ಹೇಗೆ ಉಂಟಾ ದೀತು ! ಇದಕ್ಕೆ ಬಲವಾಗಿ ಒಂದು ಉಪಾಯವನ್ನು ಕಲ್ಪಿಸಿದಲ್ಲದೆ ಕಾರ್ಯಸಿದ್ಧಿಯು ಕೈಗೂಡಲಾರದೆಂದು ನುಡಿಯಲು ; ದುಷ್ಟಳಾದ ಸುಸಂಗತೆಯು ಕ್ಷಣಮಾತ್ರವು ಯೋಚಿಸಿ, ' ಎಲೈ ವಿದೂಕನೇ, ದೇವಿಯು ಅಪ್ಪಣೆಯನ್ನಿತ್ತಿರುವುದು ಹಾಗಿರಲಿ. ನಮ್ಮ ಸ್ವಾಮಿಯಾದ ರಾಜೇಂದ್ರನಿಗೆ ಹಿತವನ್ನುಂಟುಮಾಡುವುದೇ ಎನಗೆ ಮುಖ್ಯ ವಾಗಿ ಇರುವುದು. ಈಗ ಒಂದು ಉಪಾಯವಂ ಯೋಚಿಸಿರುವೆನು ಕೇಳು. ದೇವಿ ಯು ಕೊಟ್ಟಿರುವ ಆಭರಣ ವಸ್ತ್ರಗಳಿಂದ ಸಾಗರಿಕೆಗೆ ವಾಸವದತ್ತಾದೇವಿಯು ವೇಷ ವಂ ಧರಿಸಿ, ನಾನು ಕಾಂಚನಮಾಲೆಯು ವೇಷವಂ ಧರಿಸಿಕೊಂಡು ಸಂಧ್ಯಾಕಾಲವಾ ಗುತ್ತಲೇ ಈ ಚಿತ್ರಮಂಟಪದ ಸಮೀಪಕ್ಕೆ ಸಾಗರಿಕೆಯಂ ಕರೆದುಕೊಂಡು ಬರುವೆನು. ನೀನು ಈ ಸ್ಥಳದಲ್ಲೇ ಕಾದಿರುವನಾಗು. ಈ ಮಕರಂದೋದ್ಯಾನದಲ್ಲಿರುವ ಮಾಧ ವೀ ಮಂಟಪದಲ್ಲಿ ಸಾಗರಿಕೆಗೂ ರಾಯನಿಗೂ ಸಂಗವನ್ನುಂಟುಮಾಡಿಸಬಹುದು ' ಎಂದು ನುಡಿಯಲಾವಾಕ್ಯಕ್ಕೆ ವಿದೂಷಕನು ಅಧಿಕವಾದ ಸಂತೋಷದಿಂ ಯುಕ್ತ ನಾಗಿ, ಎಲೆ ಸುಸಂಗತೆಯೇ, ನಿನ್ನ ಬುದ್ಧಿಯು ಬೃಹಸ್ಪತ್ಯಾಚಾರ್ಯನ ಬುದ್ಧಿಯನ್ನು ಧಿಕ್ಕರಿಸುತ್ತಿರುವುದು. ಆದರೆ ನೀನು ಈಗ ಪೇಳಿದಂತೆ ಸಾಗರಿಕೆಯನ್ನು ಕರೆದು ಕೊಂಡುಬರುವಳಾದರೆ ನಾನು ರಾಯನನ್ನು ಮಾಧವೀಮಂಟಪದಲ್ಲಿ ಕುಳ್ಳಿರಿಸಿ ಸಂಧ್ಯಾಕಾಲಕ್ಕೆ ಸರಿಯಾಗಿ ಬಂದು ಇಲ್ಲಿ ಕಾದುಕೊಂಡಿರುವೆನೆಂದು ನುಡಿದನು " ಎನಲು ; ಮದನಿಕೆಯು " ಎಲೌ ಕಾಂಚನಮಾಲೆಯೇ, ವಿದೂಷಕನಂತೂ ರಾಯನ

ಕಡೆಯುವನೆಂಬುವುದು ಸಿದ್ಧವಾಗಿಯೇ ಇದೆ. ಈ ಸುಸಂಗತೆಯು ಪಾಪದಲ್ಲಿ ಭೀತಿಯಿಲ್ಲದೆ ಪರಲೋಕದ ಸದ್ಗತಿಯೂ ಕೆಡುವುದೆಂಬ ಮತಿಯಂ ನಿಲಿಸದೆ ಅನ್ನವಸ್ತ್ರಗಳನ್ನಿತ್ತು ಪುತ್ರಿಗಿಂತಲೂ ಹೆಚ್ಚಾದ ಪ್ರೇಮದಿಂದ ಸಾಕಿದ ಒಡತಿಯನ್ನು ವಂಚಿಸುವ ಬುದ್ಧಿಯಂ ಮಾಡಿದಳಲ್ಲ. ಇಂಥ ಬುದ್ಧಿಯು ಇವಳಿಗೆ ಹೇಗೆ ಬಂದುದು!" ಎಂದು ನುಡಿಯಲಾಕಾಂಚನಮಾಲೆಯು—"ಎಲೆ ಕಾಂತೆಯೇ, ಕೆಟ್ಟತನಕೆ ಒಡಂಬಟ್ಟಂಥ ಜನರಿಗೆ ಪಾಪದಲ್ಲಿ ಭೀತಿಯೂ ಸದ್ಗತಿಯಂ ಸಾಧಿಸುವ ಬುದ್ಧಿಯೂ ಹೇಗೆ ಪುಟ್ಟೀತು! ಆದರೆ ಈಗ ನೀನು ಎಲ್ಲಿಗೆ ಪೋಗಲಿಚ್ಛೈಸುತ್ತಿರುವೆ?" ಎನಲು; ಅವಳು—"ಎಲೌ ಕಾಂತೆಯೇ, ರಾಯನ ಶರೀರದಲ್ಲಿ ಆಯಾಸವುಂಟಾಗಿರುವುದನ್ನು ವಿಚಾರಿಸಿಕೊಂಡು ಬರುವುದೆಂದು ಕಾಂಚನಮಾಲೆಯಂ ಕಳುಹಿಸಿದೆನು, ಅವಳೂ ಪೋಗಿ ಬಹಳ ಹೊತ್ತಾದುದು, ಏನು ನಿಮಿತ್ತಮೆಂದು ತಿಳಿದುಬರುವಂತೆ ದೇವಿಯು ಎನಗೆ ಅಪ್ಪಣೆಯನ್ನಿತ್ತುದರಿಂದ ನಿನ್ನನ್ನು ಅರಸಿಕೊಂಡು ಇಲ್ಲಿಗೆ ಬಂದೆನು" ಎಂದು ನುಡಿಯಲು; ಕಾಂಚನಮಾಲೆಯು ನಸುನಕ್ಕು, "ಎಲೆ ಮುಗ್ಧಳಾದ ಮದನಿಕೆಯೇ, ಕೇಳು. ರಾಯನು ತನ್ನ ದೇಹಕ್ಕೆ ಆಯಾಸವೆಂಬ ನೆವದಿಂದ ಮನ್ಮಥತಾಪವನ್ನು ಮರೆಗೆಯ್ಯುತ್ತ ದಂತದ ತೊಟ್ಟಿಯಲ್ಲಿ ಪವಡಿಸಿರುವನು. ನಮ್ಮ ದೇವಿಯು ಇಂಥ ವಂಚನವನ್ನು ತಿಳಿಯದೇ ಇದ್ದುದರಿಂದ ರಾಯನಿಗೆ ದೇಹಾಯಾಸವು ಯಥಾರ್ಥವಾಗಿ ಪ್ರಾಪ್ತವಾಗಿರುವುದೆಂದು ತಿಳಿದು ಎನ್ನನ್ನು ಕಳುಹಿಸಿಕೊಟ್ಟಳು. ಈಗ ನಡೆದಿರುವ ಸಂಗತಿಯನ್ನು ವಿಜ್ಞಾಪಿಸುವ, ನಡೆ" ಎಂದು ಅವಳಿಂದೊಡಗೂಡಿ ಪೋಗಲು;

ಇತ್ತಲು, ರಾಯನು ಸಾಗರಿಕೆಯಂ ಸ್ಮರಿಸಿ, ಉಕ್ಕಿಬರುವ ಮನ್ಮಥಸಂತಾಪವನ್ನು ಸಹಿಸಲಾರದೆ, ತನ್ನ ಮನವಂ ಕುರಿತು, "ಎಲೆ ಮನವೇ, ಮನ್ಮಥನಿಂದುಂಟಾಗಿರುವ ಸಂತಾಪವನ್ನು ಈಗ ಸಹಿಸಲಾರದೆ ಏಕೆ ಕುದಿಯುತ್ತಲಿದ್ದೀಯೆ? ಆ ಚಂಚಲಾಕ್ಷಿಯಾದ ಕಾಂತೆಯಂ ಹೊರತು ಇನ್ನೊಬ್ಬಳೂ ನಿನಗೆ ಪುಟ್ಟಿರುವ ಸಂತಾಪವಂ ಪರಿಹರಿಸಲಾರಳೋ? ಆದರೂ ಎನ್ನಮೇಲೆ ದೋಷವನ್ನು ಕಲ್ಪಿಸಬೇಡ. ಯಾವ ನನ್ನಿಂದ ಆ ಕಾಂತೆಯು ಅತ್ಯಂತ ಪ್ರಯಾಸದಿಂದ ಪಿಡಿಯಲ್ಪಟ್ಟವಳಾಗಿ ಸಾಂದ್ರವಾದಂಥ ಶ್ರೀಗಂಧರಸದಂತೆ ತಂಪಾಗಿರುವ ಆ ಕಾಮಿನಿಯು ಕರಸ್ಪರ್ಶನವು ನಿನಗೆ ಉಂಟುಮಾಡಲ್ಪಡಲಿಲ್ಲವೋ ಏನು? ಹೀಗಿರುವಲ್ಲಿ ನೀನು ತಾಪವನ್ನು ಪೊಂದಬೇಡ" ವೆಂದು ನುಡಿದು, ಮರಳಿ ಹೇರಳವಾಗಿ ನಿಟ್ಟುಸಿರುಗಳಂ ಬಿಟ್ಟು "ಆದರೆ ಮನಸ್ಸೆಂಬುವುದು ಅಣುರೂಪವಾಗಿ ಚಂಚಲವಾಗಿ ಕಣ್ಣಿಗೆ ಕಾಣತಕ್ಕುದಲ್ಲವಾಗಿ ಗುರಿಗೆಯ್ಯುವುದಕ್ಕೆ ತರವಲ್ಲದೆ ಇರುವರಾದರೂ ಅಂಥ ಮನಸ್ಸನ್ನು ಮನ್ಮಥನು ಅರವಿಂದ ಅಶೋಕ ಚೂತ ಮಲ್ಲಿಗೆ ನೀಲೋತ್ಪಲಗಳೆಂಬ ಐದು ಬಾಣಗಳಿಂದಲೂ ಏಕಕಾಲದಲ್ಲಿ ಹೇಗೆ ಗುರಿಗೆಯ್ದು ಪೊಡದಿರುವನೋ ಎಂದು ಎನಗೆ ಅಧಿಕ

ವಾದ ಆಶ್ಚರ್ಯವು ತೋರುತ್ತಿರುವುದು" ಎಂದು ನುಡಿದು, ಮನ್ಮಥನಂ ಕುರಿತು, "ಎಲೈ ಪುಷ್ಪಬಾಣನೇ, ಕೇಳು. ನಿನಗೆ ಐದು ಬಾಣಗಳಿರುವುವು. ಆ ಬಾಣಗಳಿಗೆ ಪಾತ್ರರಾಗಿ ಜನರುಗಳು ಅನೇಕವಾಗಿ ಇರುವರು. ಇದರಲ್ಲಿ ನಿನ್ನ ಬಾಣಗಳಿಗೆ ಎನ್ನಂಥ ಕಾಮಿಗಳೇ ಗುರಿಯಾಗಿರುವರು. ಹೀಗಿದ್ದರೂ ಲೆಕ್ಕಕೆ ನಿಲ್ಲದೆ ಕಾಮಿನೀ ಜನಗಳಂ ಭೇದಿಸಿ ಪಂಚತ್ವವನ್ನು ಪೊಂದಿಸುತ್ತಿರುವೆಯಾದುದರಿಂದ ನಿನ್ನ ಈ ಕಾರ್ಯವು ನಿನ್ನಲ್ಲಿ ಅತ್ಯಾಶ್ಚರ್ಯವಾಗಿ ಕಾಣುವುದು. ಆದರೂ ಈ ರೀತಿಯಾದ ಮನ್ಮಥಾವಸ್ಥೆಯನ್ನು ಪೊಂದಿರುವ ಎನ್ನ ದೇಹವನ್ನು ಕುರಿತು ವ್ಯಸನವನ್ನು ಪೊಂದಲಾರೆನು. ಯಾರೊಡನೆಯೂ ಪೇಳುವುದಕ್ಕೆ ಆಗದೆ ಇರುವ ಸಂತಾಪವನ್ನು ಅನುಭವಿಸುತ್ತ ದೀನಳಾಗಿ ದೇವಿಯ ನಿರ್ಬಂಧಕೆ ಸಿಲ್ಕಿರುವ ಎನ್ನ ಕಾಂತೆಯನ್ನು ಸ್ಮರಿಸಿ ತಲ್ಲಣಿಸುತ್ತಿರುವೆನು. ಆದರೆ ಆ ಚಂಚಲಾಕ್ಷಿಯು—ಯಾರು ತನ್ನ ಮುಖವನ್ನು ನೋಡಿ ವಿರಹಾತುರೆಯಾಗಿರುವಳೆಂದು ತಿಳಿಯುವರೋ, ಎಂದು ಸಖಿಯರ ಎದುರಾಗಿ ಮುಖವನ್ನು ತಗ್ಗಿಸುತ್ತಿರುವಳು ; ಇಬ್ಬರು ನಿಂತು ಯಾವುದಾದರೂ ಒಂದು ಮಾತನಾಡುತಿದ್ದಲ್ಲಿ ಎನ್ನ ಪ್ರಸಕ್ತಿಯನ್ನೇ ಪೇಳುತ್ತಿರುವರೆಂದು ಊಹಿಸುತ್ತಿರುವಳು ; ತನಗೆ ಪ್ರಾಣಕಾಂತೆಯರುಗಳಾದ ಸಖಿಯರುಗಳಲ್ಲಿ ತನ್ನ ಅಭಿಪ್ರಾಯವನ್ನು ಅಧಿಕವಾಗಿ ಸೂಚಿಸದೆ ಹೃದಯದಲ್ಲಿ ಇರಿಸಲ್ಪಟ್ಟ ಆತಂಕಗಳಿಂದ ಎಡೆಬಿಡದ ದುಃಖವುಳ್ಳವಳಾಗಿರುವಳೆಂದು ಊಹಿಸುತ್ತಿರುವೆನು. ಅವಳ ವೃತ್ತಾಂತವನ್ನು ತಿಳಿದುಕೊಂಡು ಬರುವಂತೆ ಕಳುಹಿಸಿದ ವಿದೂಷಕನು ಏನು ಕಾರಣದಿಂದಲೋ ಇನ್ನೂ ಎನ್ನಂ ಸೇರದೆ ತಡವಂಗೆಯ್ಯುತ್ತಿರುವನು" ಎಂದು ನುಡಿಯುತ್ತಿರಲು ;

ಅಷ್ಟರಲ್ಲೇ ವಿದೂಷಕನು ಆ ಸ್ಥಳಕೆ ಬರುತ್ತ ಅಧಿಕವಾದ ಸಂತೋಷವಂ ತಾಳಿ, "ನಮ್ಮ ರಾಯನಿಗೆ ಕೌಶಾಂಬೀ ಪಟ್ಟಣದ ರಾಜ್ಯಲಾಭವು ಕೈಸೇರಿದ್ದಾಗಲೂ ಇಂಥ ಸಂತೋಷವು ದೊರೆಯಲಿಲ್ಲ. ಅದಕ್ಕಿಂತಲೂ ಈಗ ನಾನು ಪೇಳುವ ವಚನವೇ ನಮ್ಮ ರಾಯನನ್ನು ಆನಂದಸಮುದ್ರದಲ್ಲಿ ಮುಳುಗಿಸುತ್ತಿರುವುದು" ಎಂದು ನುಡಿದು, ಪುರೋಭಾಗದಲ್ಲಿ ಕೊರಗುತ್ತಲಿರುವ ರಾಯನಂ ಕಂಡು, "ಈ ನಮ್ಮ ಸ್ವಾಮಿಯು ಆ ಸಾಗರಿಕೆಯನ್ನೇ ಹೃದಯದಲ್ಲಿ ಸ್ಮರಿಸುತ್ತ ಎನ್ನ ಆಗಮನವನ್ನೇ ಅಧಿಕವಾದ ಅಭಿಲಾಷೆಯಿಂದ ಎದುರು ನೋಡುತ್ತಿರುವನು" ಎಂದು ಜಾಗ್ರತೆಯಿಂದ ಸಮೀಪವಂ ಸೇರಿ, "ಎಲೈ ರಾಜೋತ್ತಮನೇ, ನೀನು ದೈವಯೋಗದಿಂದ ಪ್ರಾಪ್ತವಾದ ಇಷ್ಟಾರ್ಥವನ್ನು ಕೊಡುತ್ತಲಿರುವ ಕಾರ್ಯಸಿದ್ಧಿಯಿಂದ ವೃದ್ಧಿಯಂ ಪೊಂದುತ್ತಲಿರುವೆ" ಎಂದು ನುಡಿಯಲು ; ರಾಯನು—"ಎಲೈ ಮಿತ್ರನೇ, ಇದ್ದ ಕಾರ್ಯಗಳು ಹಾಗಿರಲಿ. ಎನಗೆ ಪ್ರಾಣಪ್ರಿಯಳಾದ ಕಾಂತೆಯು ಕ್ಷೇಮದಲ್ಲಿರುವಳೆ ಪೇಳು?" ಎನಲು ; "ನಿನ್ನ ಪ್ರಾಣಕಾಂತೆಯನ್ನು ಕ್ಷೇಮದಲ್ಲಿರುವುದನ್ನು ಶೀಘ್ರವಾಗಿ ನೀನೇ ನೋಡುತ್ತಿರುವಲ್ಲಿ ನಾನು ಪೇಳತಕ್ಕುದೇನಿರುವುದು?" ಎನಲು ;

ರಾಯನು ಶೀಘ್ರದಿಂದ ಹಾಸಿಗೆಯಲ್ಲೆದ್ದು ಕುಳಿತುಕೊಂಡು, "ಎಲೈ ಮಿತ್ರನೇ, ಕೋಮಲಾಂಗಿಯ ಸಂದರ್ಶನವು ಎನಗೆ ಉಂಟಾಗುತ್ತಿರುವುದೋ ಪೇಳು" ಎನಲು; ವಿದೂಷಕನು ಅಧಿಕವಾದ ಗರ್ವವಂ ತಾಳಿ, "ಎಲೈ ರಾಯನೇ, ಬುದ್ಧಿಯಿಂದ ಸುರಗುರುವಾದ ಬೃಹಸ್ಪತಿಯನ್ನು ಜಯಿಸಿರುವೆನಾದುದರಿಂದ ನಾನು ಮಂತ್ರಿಯಾಗಿರುವೆನು. ಎನ್ನ ಮಾತಿನಲ್ಲಿ ನಿನಗೆ ನಿಶ್ಚಯಜ್ಞಾನವಿಲ್ಲವೆ ಪೇಳು" ಎನಲು; ರಾಯನು ವಿನಯದಿಂದೊಡಗೂಡಿ ವಿದೂಷಕನು ಏನೋ ಒಂದು ಸಂವಿಧಾನವನ್ನು ರಚಿಸಿ ಆ ಕಾಂತೆಯನ್ನು ಕೈಗೆ ತೆಗೆದುಕೊಂಡಿರುವನಂತೆ ತೋರುವುದೆಂದು ಮನದಲ್ಲಿ ಯೋಚಿಸಿ, "ಅಯ್ಯಾ ಮಿತ್ರನೇ, ನೀನು ಪೇಳುವ ವಾಕ್ಯದಲ್ಲಿ ಎನಗೆ ಸಂದೇಹವೇ ಇಲ್ಲ. ಆದರೂ ನೀನು ಮಾಡಿರುವ ಸಂವಿಧಾನವನ್ನು ಕೇಳಿ ಸಂತೋಷವನ್ನು ಪೊಂದಬೇಕಾಗಿರುವುದು. ಆದುದರಿಂದ ನೀನು ಮಾಡಿರುವ ಕಾರ್ಯವನ್ನು ವಂಚಿಸದೆ ಪೇಳುವನಾಗು" ಎಂದು ಬೆಸಗೊಳಲು; ವಿದೂಷಕನು ರಾಯನ ಕತ್ತನ್ನು ತಬ್ಬಿಕೊಂಡು, ತಾನೂ ಸುಸಂಗತೆಯೂ ಯೋಚಿಸಿರುವ ಸಂಧಾನವನ್ನು ಪೇಳಲು; ರಾಯನು ಪಾರವಿಲ್ಲದ ಸಂತೋಷವಂ ಪೊಂದಿ, ತನ್ನ ಹಸ್ತದಲ್ಲಿದ್ದ ನವರತ್ನಮಯವಾದ ಕಡಗಗಳಂ ತೆಗೆದು, "ಎಲೈ ವಿದೂಷಕನೇ, ನಿನ್ನ ಜಾಣ್ಮೆಗೆ ಮೆಚ್ಚಿದೆನು. ನಿನ್ನಂಥ ಬುದ್ಧಿಶಾಲಿಯು ಮೂರುಲೋಕದಲ್ಲೂ ಇರಲಾರನು" ಎಂದು ಕೊಡಲು; ವಿದೂಷಕನು ರತ್ನಕಟಕಗಳನ್ನು ಹಸ್ತದಲ್ಲಿ ಧರಿಸಿ, ತನ್ನ ದೇಹವನ್ನು ತಾನೇ ನೋಡಿಕೊಂಡು, "ಎಲೈ ರಾಜೇಂದ್ರನೇ, ಅನೇಕರತ್ನಗಳಿಂದ ಮಂಡಿತವಾದ ಈ ಕಡಗಗಳಿಂದ ಅಲಂಕೃತವಾದ ಎನ್ನ ದೇಹವನ್ನು ಮನೆಗೆ ಹೋಗಿ ಎನ್ನ ಹೆಂಡತಿಗೆ ತೋರಿಸಿ ಬರುವೆನು" ಎಂದು ಪೋಗುತ್ತಿರಲು; "ಎಲೈ ಮೂರ್ಖನೇ, ಮನೆಗೆ ಪೋಗುವುದು ಯುಕ್ತವಲ್ಲ. ಈಗ ಪ್ರಾಪ್ತವಾಗಿರುವ ಕಾರ್ಯವೆಂಥದು. ಈಗ ನೀನು ಪಿಡಿದಿರುವ ಕಾರ್ಯವನ್ನು ಕೊನೆಮುಟ್ಟಿಸಿದ ಬಳಿಕ ಎಲ್ಲಿ ಬೇಕಾದರೂ ಪೋಗಬಹುದು. ಆದರೆ ಆ ಕಾಂತೆಯ ನಾಮಧೇಯವನ್ನು ನೀನು ತಿಳಿದಿರುವೆಯಾ?" ಎಂದು ಪೇಳಿದ ರಾಯನಂ ಕುರಿತು "ಅಯ್ಯಾ ರಾಜೇಂದ್ರನೇ, ಸುಸಂಗತೆಯು ಅವಳನ್ನು ಸಾಗರಿಕೆಯೆಂದು ಕರೆಯುತ್ತಲಿರುವಳಾದುದರಿಂದ ಅದೇ ನಾಮವಾಗಿರಬೇಕೆಂದು ಊಹಿಸಿದೆನು" ಎನಲು; ರಾಯನು – "ಎಲೈ ಮಿತ್ರನೇ, ಸಾಯಂಕಾಲಕ್ಕೆ ಇನ್ನು ಎಷ್ಟು ಗಳಿಗೆ ಉಳಿದಿರುವುದು ವಿಚಾರಿಸುವನಾಗು?" ಎಂದು ನುಡಿಯಲು; ವಿದೂಷಕನು,— "ಎಲೈ ಸ್ವಾಮಿಯೇ, ನೀನು ನೋಡುವುದಿಲ್ಲವೋ ಏನು? ಸಹಸ್ರರಶ್ಮಿಯಾದ ಸೂರ್ಯನು ಅಧಿಕವಾದ ಅನುರಾಗದಿಂದೊಡಗೂಡಿ ಸಂಜೆಯೆಂಬ ಕಾಂತೆಯಿಂದ ಮಾಡಲ್ಪಟ್ಟ ಸಂಕೇತಸ್ಥಾನಕ್ಕೆ ಪೋಗುವನೋ ಎಂಬಂತೆ ಅಸ್ತಗಿರಿಯ ಸಮೀಪದ ಆರಣ್ಯಮಧ್ಯವನ್ನು ಪೊಂದುತ್ತಿರುವನು" ಎಂದು ನುಡಿಯಲು; ರಾಯನು ಹಾಸಿಗೆಯಿಂದೆದ್ದು ಗವಾಕ್ಷದ್ವಾರದಿಂದ ಸೂರ್ಯನನ್ನು ನೋಡಿ,

“ ಇನ್ನೇನು ಸಂಧ್ಯಾಕಾಲವಾದುದು. ಆದರೆ ಸೂರ್ಯನು ಒಂದು ಗಾಲಿಯುಳ್ಳ ತನ್ನ ರಥವು ಅಧಿಕ ವಿಶಾಲವಾದಂಥ ಮಾರ್ಗವನ್ನು ಸುತ್ತಿ ಮರಳಿ ಪ್ರಾತಃಕಾಲವಾಗುತ್ತಲೇ ಸಮಸ್ತ ಲೋಕವನ್ನೂ ಸುತ್ತುವುದಕ್ಕೆ ಯೋಗ್ಯವಾಗುತ್ತಲಿದೆಯೋ ಇಲ್ಲವೋ ಎಂಬ ಚಿಂತೆಯಂ ತಾಳಿ, ಸಂಧ್ಯಾಂಗನೆಯಿಂದ ಪುಟ್ಟಿ ಉಳಿದಿರುವ? ತನ್ನ ಹಸ್ತಗಳಿಂದ ರಥಚಕ್ರನನ್ನು ಸ್ಪರ್ಶನವಂ ಗೆಯ್ಯುತ್ತ ಅಸ್ತಗಿರಿಯ ದಿಗ್ಭಾಗವನ್ನು ಪೊಂದಿರುವನು. ಮತ್ತು ‘ ಎಲೆ ಕಮಲಲತೆಯೇ, ಈಗ ಸಮಯುವಲ್ಲದುದರಿಂದ ಪೋಗಿ ಮರಳಿ ಬಂದು ಮಲಗಿರುವ ನಿನ್ನನ್ನು ಎಬ್ಬಿಸುತ್ತಿರುವೆನು. ನೀನು ಯಾವುದಕ್ಕೂ ಯೋಚಿಸಬೇಡ ’ ಎಂದು ತನ್ನ ಹಸ್ತಂಗಳಿಂದ ತಲೆಯಂ ಮುಟ್ಟಿ ಭಾಷೆಯಂ ಗೆಯ್ಯುವನೋ ಎಂಬಂತೆ ಅಸ್ತಗಿರಿಯ ಮಸ್ತಕದಲ್ಲಿ ಇರಿಸಲ್ಪಟ್ಟ ಪ್ರಶಸ್ತವಾದ ಹಸ್ತಗಳುಳ್ಳವನಾಗಿ ಅಸ್ತನಾಗುತ್ತಿರುವನು. ಆದುದರಿಂದ ನಾವಿರ್ವರೂ ಜಾಗರೂಕರಾಗಿ ಪರಿಮಳಭರಭರಿತವಾದ ಮಕರಂದೋದ್ಯಾನದ ಮಾಧವೀಮಂಟಪವಂ ಪೊಂದಿ ಪ್ರಾಣಕಾಂತೆಯು ಬರುವ ಸಮಯುವನ್ನು ಕಾದಿರುವ ” ಎಂದು ನುಡಿಯುತ್ತಿದ್ದನು.

ಎಂಬಲ್ಲಿಗೆ
ಶ್ರೀ ಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀ ಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್

ವತ್ಸರಾಜನ ಕಥೆಯಲ್ಲಿ

ತ್ರಯೋದಶ ಗುಚ್ಛಂ ಸಂಪೂರ್ಣಮ್.

## ಹದಿನಾಲ್ಕನೆಯ ಗುಚ್ಛಂ.

ಅನಂತರದಲ್ಲಿ ಆ ವತ್ಸರಾಜನು ಅಧಿಕಸಂತೋಷದಿಂದ ಭರಿತನಾಗಿ, ವಿದೂಷಕನಿಂದೊಡಗೂಡಿ, ತಾನಿದ್ದ ಸ್ಥಳವಂ ಬಿಟ್ಟು ಮಕರಂದೋದ್ಯಾನವಂ ಪ್ರವೇಶಿಸಲು; ವಿದೂಷಕನು ಎತ್ತಲೂ ಮೊತ್ತವಾಗಿ ಒತ್ತಿ ಬರುವ ಕತ್ತಲೆಯಂ ನೋಡಿ ರಾಯನಂ ಕುರಿತು—“ ಎಲೈ ರಾಜೇಂದ್ರನೇ, ಪ್ರಬಲವಾಗಿ ಮುಚ್ಚುತ್ತಿರುವ ವನ

ರಾಜಿಯುಳ್ಳಂಥ ಮಹತ್ತರವಾದ ಕೆಸರಿನಿಂದ ಬಲಿತಿರುವ ಕಾಡಾನೆ ಕೋಣ ಹಂದಿಗಳ ಹಿಂಡಿನಂತೆ ಕಪ್ಪುದೋರಿ ಏರಿ ಪೂರ್ವದಿಕ್ಕನ್ನು ಮುಚ್ಚುತ್ತಿರುವ ಕತ್ತಲೆಯ ಮೊತ್ತವಂ ನೋಡುವನಾಗು." ಎಂದು ನುಡಿಯಲು; ರಾಯನು—"ಎಲೈ ಮಿತ್ರನೇ, ಚೆನ್ನಾಗಿ ಪೇಳಿರುವೆ. ಪರಮೇಶ್ವರನ ಕತ್ತಿನ ಕಾಂತಿಯನ್ನಪಹರಿಸುತ್ತಲಿರುವ ಈ ಕತ್ತಲೆಯ ಮೊತ್ತವು ನೀನು ಪೇಳಿದಂತೆ ಮೊದಲು ಪೂರ್ವದಿಕ್ಕನ್ನು ಮುಚ್ಚಿ, ಆ ಬಳಿಕ ಸಮಸ್ತ ದೆಸೆಗಳನ್ನೂ ವ್ಯಾಪಿಸಿ, ಕ್ರಮವಾಗಿ ಹಬ್ಬಿ ಅಧಿಕತ್ವವಂ ಪೊಂದಿ, ಸಮಸ್ತ ಪ್ರಾಣಿಗಳ ನೇತ್ರಗಳನ್ನು ಕಾಣದಂತೆ ಮಾಡುತ್ತ, ತಾನಾಗಿ ವ್ಯಾಪಿಸುವುದು" ಎಂದು ನುಡಿಯಲು; ವಿದೂಷಕನು—"ಎಲೈ ಸ್ವಾಮಿಯೇ, ಮೊದಲೇ ಈ ವನಗಳು ವೃಕ್ಷಗಳ ಗುಂಪಿನಿಂದ ಯಾವಾಗಲೂ ಕತ್ತಲೆಯಂ ಸಲಹುತ್ತಿರುವುದು. ಈಗಲಾದರೋ ಅಧಿಕವಾದ ಅಂಧಕಾರದಿಂ ವ್ಯಾಪ್ತವಾಗಿ ಇದು ಇಂಥ ಸ್ಥಳವೆಂಬ ಗೊತ್ತನ್ನು ತೋರಿಸದೆ ಇರುವುದು" ಎಂದು ನುಡಿಯಲು; ರಾಯನು—"ಎಲೈ ವಿದೂಷಕನೇ, ಕೇಳು. ನೀನು ಪೇಳಿದಂತೆ ಮುಂದೆ ಪೋಗುವುದಕೆ ಮಾರ್ಗವೂ ಸಹ ಸ್ವಲ್ಪವಾದರೂ ಕಾಣಬರುವುದಿಲ್ಲವಾದರೂ ಮಂದಮಾರುತವು ತೆಗೆದುಕೊಂಡು ಬರುವ ಪರಿಮಳದಿಂದ ಇದು ಶ್ರೀಗಂಧದ ಸಾಲುಗಳೆಂತಲೂ, ಇದು ಸಂಪಗೆಯ ಗುಂಪುಗಳೆಂತಲೂ, ಇದು ಪಾದರಿಯ ಪಜ್ಜೆಗಳೆಂತಲೂ, ಇದು ತಂಡವಾಗಿರುವ ದುಂಡುಮಲ್ಲಿಗೆಯ ಸಾಲುಗಳೆಂತಲೂ ಲೇಸಾಗಿ ತಿಳಿಯಬಹುದು" ಎಂದು ನುಡಿಯಲು; ವಿದೂಷಕನು—"ಅಯ್ಯಾ ರಾಜೇಂದ್ರನೇ, ಗುಂಪುಗೂಡಿ ತುಂಬಿ ಬರುವ ತುಂಬಿಗಳಿಂದ ಇಂಬಾಗಿರುವ ಪುಷ್ಪಗಳ ಪರಿಮಳಗಳಿಂದ ಹತ್ತುದಿಕ್ಕುಗಳನ್ನೂ ಮುಚ್ಚಿ ಹೆಚ್ಚಾದ ಸಂತೋಷಕೆ ತವರುಮನೆಯಾಗಿ ಇರುವ ಮಾಧವೀಮಂಟಪದ ಸಮೀಪವಂ ಸೇರಿದೆವು. ನೀನು ವ್ಯಥೆಯನ್ನು ಪೊಂದದೆ ಧೈರ್ಯವಂ ಪಡೆದು ಈ ಮಾಧವೀಮಂಟಪದಲ್ಲಿ ಇರುವನಾಗು. ನಾನು ಶೀಘ್ರದಿಂದ ಪೋಗಿ ವಾಸವದತ್ತಾದೇವಿಯ ವೇಷವಂ ಧರಿಸಿಕೊಂಡಿರುವ ಸಾಗರಿಕೆಯನ್ನು ಕರೆದುಕೊಂಡು ಬರುವೆನು" ಎಂದು ನುಡಿದು, ಅಲ್ಲಿಂದ ಪೊರಮಟ್ಟು, ಚಿತ್ರಶಾಲೆಯಂ ಕುರಿತು ಬರುತ್ತಿರಲು;

ಇತ್ತಲು, ರಾಯನೊಬ್ಬನೇ ಆ ಮಾಧವೀಮಂಟಪದ ಮಧ್ಯದಲ್ಲಿ ಹೃದ್ಯವಾಗಿರುವ ಪಚ್ಚೆಯ ಹಾಸರೆಗಲ್ಲಿನಲ್ಲಿ ಕುಳಿತು, "ಎನಗೆ ಆಪ್ತನಾಗಿ ಹಿತವನ್ನೇ ಬಯಸುತ್ತಿರುವ ವಿದೂಷಕನು ಯಾವಾಗ ಬರುವನೋ? ಅವನು ಬರುವವರೆಗೂ ತಾರುಮಾರಾಗಿ ಹೇರಳವಾದ ಈ ಮಾರಬಾಧೆಯನ್ನು ಎಂತು ಸಹಿಸಲಿ? ಈಗ ವಿದೂಷಕನು ಮಾಡಿರುವ ಭೇದೋಪಾಯವ ದೇವಿಯು ತಿಳಿದಳಾದರೆ ಎನ್ನ ಪ್ರಾಣಕಾಂತೆಗೆ ವಿದೂಷಕನಿಗೆ ಸಹ ಪ್ರಾಣಸಂದೇಹವನ್ನು ಉಂಟುಮಾಡದೆ ಬಿಡಳು. ಅದರೆ ಧರ್ಮಪತ್ನಿಯಾದ ವಾಸವದತ್ತೆಯೇ ಮನಕೆ ವಿಷಾದವನ್ನುಂಟುಮಾಡು

ತ್ತಿರುವ ಎನಗೆ ನೂತನಳಾದ ಆ ಸಾಗರಿಕೆಯಲ್ಲಿ ಬಲವಾದ ಪಕ್ಷಪಾತವುಂಟಾಗಿರುವುದು. ಈಗ ಆ ಸಾಗರಿಕೆಯು ಇಲ್ಲಿಗೆ ಬಂದವಳಾದರೂ ಸ್ನೇಹದಿಂ ನೆನೆದಿರುವ ದೃಷ್ಟಿಯನ್ನು ಭಯದಿಂದ ಎನ್ನಲ್ಲಿ ಇರಿಸಳು. ನಾನು ಕಂಠಾಲಿಂಗನವಂ ಗೆಯ್ದರೂ ಹಿಂದೆಗೆಯದೆ ಇರಳು. ಅತ್ಯಂತ ಪ್ರಯತ್ನದಿಂದ ಪಿಡಿಯಲ್ಪಟ್ಟವಳಾದರೂ ಇಲ್ಲಿರಲೊಲ್ಲೆನು, ಪೋಗುವೆನು ಎಂಬ ಮಾತುಗಳನ್ನೇ ಪೇಳುತ್ತಿರುವಳು. ಈ ರೀತಿಯಲ್ಲಿದ್ದರೂ ಬಹು ಯುಕ್ತಿಗಳಂ ಗೆಯ್ದು ಆ ಸ್ತ್ರೀಯಂ ವಶಮಾಡಿಕೊಳ್ಳದೆ ಬಿಡೆನು" ಎಂದು ನಾನಾಪ್ರಕಾರಗಳಿಂದ ಯೋಚನೆಯಂ ಗೆಯ್ಯುತ್ತ, ಮಂದಮಾರುತದಿಂದ ಸ್ವಲ್ಪವಾಗಿ ತರಗೆಲೆಯು ಸದ್ದುದೋರಿದರೂ ತಾನಿದ್ದ ಸ್ಥಾನವಂ ಬಿಟ್ಟು ಸಾಗರಿಕೆಯು ಬಂದಳೆಂದು ಎದ್ದುಬರುತ್ತ, ಉದ್ದವಾಗಿ ಉಸಿರುಗಳಂ ಬಿಡುತ್ತ, ಒಂದು ಕ್ಷಣವನ್ನು ಒಂದು ಯುಗವಾಗಿ ಕಳೆಯುತ್ತಿರಲು ;

ಇತ್ತಲು, ಕಾಂಚನಮಾಲೆಯು ವಾಸವದತ್ತಾದೇವಿಯ ಸಮೀಪವಂ ಸೇರಿ, ಸುಸಂಗತೆಯೂ ವಿದೂಷಕನೂ ಮಾಡಿರುವ ಭೇದೋಪಾಯದ ಸಂಗತಿಯನು ದೇವಿಗೆ ವಿಸ್ತಾರವಾಗಿ ವಿಜ್ಞಾಪನೆಯಂ ಗೆಯ್ಯಲು ; ದೇವಿಯು ಕೋಪದಿಂದಲೂ ಆಶ್ಚರ್ಯದಿಂದಲೂ ಯುಕ್ತಳಾಗಿ—" ಎಲೆ ಕಾಂಚನಮಾಲೆಯೇ, ವಂಚಕರಾದ ಜನ್ನರುಗಳ ಹೃದಯವನ್ನು ತಿಳಿಯುವುದು ಅಧಿಕ ಪ್ರಯಾಸವಾಗಿ ತೋರುವುದು. ಆದರೂ ಆ ಸುಸಂಗತೆ ವಿದೂಷಕರು ಮಾಡಿರುವ ಭೇದೋಪಾಯವನ್ನು ಮುರಿಯುವುದಕ್ಕೆ ಏನು ಯುಕ್ತಿಯಂ ಯೋಚಿಸಿರುವೆ ಪೇಳು ? " ಎನಲು ; ಅವಳು—" ಎಲೆ ತಾಯೇ, ಇನ್ನಾವ ಯುಕ್ತಿಯು ತೋರಲಾರದು. ಸಂಧ್ಯಾಕಾಲಕ್ಕೆ ಸರಿಯಾಗಿ ಚಿತ್ರಶಾಲೆಯ ಸಮೀಪಕ್ಕೆ ನಿಮ್ಮ ವೇಷವಂ ಧರಿಸಿ ಸಾಗರಿಕೆಯಂ ಕರೆದುಕೊಂಡು ಬರುವೆನೆಂದು ಸುಸಂಗತೆಯು ಪೇಳಿರುವಳಷ್ಟೆ. ನಾವಿಬ್ಬರೂ ಅವಳು ಬರುವುದಕೆ ಮುಂಚಿತವಾಗಿಯೇ ಪೋಗಿದ್ದಲ್ಲಿ ವಿದೂಷಕನು ಕತ್ತಲೆಯಲ್ಲಿ ನಮ್ಮನ್ನು ಸಾಗರಿಕೆಯೆಂದು ತಿಳಿದು, ರಾಯನ ಸಮೀಪಕೆ ಕರೆದುಕೊಂಡು ಪೋಗುವನು" ಎಂದು ನುಡಿಯಲು ; ದೇವಿಯು ಅವಳು ಪೇಳಿದ ವಾಕ್ಯಕೆ ಸಂತೋಷವಂ ಪೊಂದಿ, " ಎಲೆ ಕಾಂತೆಯೇ, ಚೆನ್ನಾಗಿ ಯೋಚಿಸಿರುವೆ ? " ಎಂದು ಅವಳೊಂದೊಡಗೂಡಿ ಬರುತ್ತ, " ಎಲೆ ಕಾಂಚನಮಾಲೆಯೇ, ಸಾಗರಿಕೆಯು ಎನ್ನ ವೇಷವಂ ಧರಿಸಿ ಪೂಜ್ಯನಾದ ನಮ್ಮ ರಾಜೇಂದ್ರನಂ ಪೊಂದುವಳೆಂದು ನೀನು ಪೇಳಿದ ವಾಕ್ಯವು ಸತ್ಯವೆ ? " ಎಂದು ನುಡಿಯಲು ; ಅವಳು—" ಎಲೌ ದೇವಿಯೇ, ಅ ಸತ್ಯವಿಲ್ಲದ ವಾಕ್ಯವನ್ನು ಭೀತಿಯಿಲ್ಲದೆ ನಿಮ್ಮ ಸನ್ನಿಧಿಯಲ್ಲಿ ವಿಜ್ಞಾಪಿಸುವುದಕ್ಕೆ ನಾನು ಸಮರ್ಥಳಾಗುವೆನೆ ? ಹಾಗಲ್ಲದಿದ್ದರೆ ಈಗ ಚಿತ್ರಶಾಲೆಯಲ್ಲಿ ಬಾಗಲಲ್ಲಿ ಎನ್ನ ವಾಕ್ಯವು ಅಪದ್ಧ ಯಥಾರ್ಥವೆಂಬುದನ್ನು ವಿದೂಷಕನೇ ನಿಮಗೆ ನಿಶ್ಚಯಿಸಿಕೊಡುವನು " ಎಂದು ಬಿನ್ನೈಸಲು ; ದೇವಿಯು—" ಎಲೆ ಬಾಲೆಯೇ, ಸುಸಂಗತೆಯು ಬಾಲ್ಯದಿಂದಲೂ

ನನ್ನಿಂದ ವೃದ್ಧಿಯಂ ಪೊಂದಿ ಈಗಲೂ ಎನ್ನ ಕಟಾಕ್ಷಕೆ ಪಾತ್ರಳಾಗಿದ್ದು ಎನಗೆ ಇಂಥ ಮೋಸವಂ ಗೆಯ್ಯುವಳೆಂಬುವ ವಾಕ್ಯದಲ್ಲಿ ಎನಗೆ ಇನ್ನೂ ಸಂದೇಹವೇ ತೋರುವುದು. ಆದರೂ ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕೆಂಬ ಲೋಕ ಗಾದೆಯನ್ನು ಅನುಸರಿಸುವೆನು '' ಎಂದು ಆ ಚಿತ್ರಶಾಲೆಯ ಸಮೀಪವಂ ಸೇರಲು ;

ವಿದೂಷಕನು ಕಪ್ಪುಸಕಲಾತಿಯ ಟೊಪ್ಪಿಗೆಯಂ ಹೊದ್ದುಕೊಂಡು, ಮೇಲಾಗಿ ಬಂದು, ಸಾಗರಿಕೆಯು ಯಾವಾಗ ಬರುವಳೋ ಎಂದು ಕಾದಿದ್ದು, ವಾಸವದತ್ತಾಕಾಂಚನಮಾಲೆಯರ ಪಾದಗಳ ಸದ್ದುಗಳಂ ಕೇಳಿ,—“ ಇದೋ! ಈ ಚಿತ್ರಶಾಲೆಯ ಸಮೀಪದಲ್ಲಿ ಪಾದಶಬ್ದವು ಕೇಳಿಬರುತ್ತಿರುವುದು. ಸಾಗರಿಕೆಯು ಬಂದಳು ” ಎಂದು ಊಹಿಸುತ್ತ, ದಿಕ್ಕುದಿಕ್ಕುಗಳಂ ನೋಡುತ್ತ ಬರುತ್ತಿರಲು ;

ಕಾಂಚನಮಾಲೆಯು—“ ಎಲೌ ತಾಯೇ, ಇದೇ ಚಿತ್ರಶಾಲೆಯ ಬಾಗಿಲು ” ಎಂದು ನುಡಿದು, ಕರಡಿಯಂತೆ ಕಪ್ಪುಬಣ್ಣವಂ ತಾಳಿ ಕುಕ್ಕುಟಾಸನದಲ್ಲಿ ಕುಳಿತಿರುವ ವಿದೂಷಕನಂ ಕಂಡು,—“ ಇದೋ! ಒಡತಿಯೇ, ಇತ್ತನೋಡಿ. ಎಲ್ಲರಿಗೆ ಮೊದಲಾಗಿಯೇ ಬಂದು ಇಲ್ಲಿ ಕುಳಿತುಕೊಂಡು ಇಲಿಯಂ ಪಿಡಿಯುವುದಕೆ ಹೊಂಚುಗೊಂಡು ಕುಳಿತಿರುವ ಕೊತ್ತಿಯಂತೆ ಕಪ್ಪುಸಕಲಾತಿಯಂ ಮುಸುಕನ್ನಿಟ್ಟು ಕುಳಿತಿರುವ ವಿದೂಷಕನನ್ನು ನೋಡಿ ” ಎಂದು ತೋರಿಸಲು ; ದೇವಿಯು ವಿದೂಷಕನಂ ಕಂಡು ನಸುನಕ್ಕು—“ ಎಲೆ ಕಾಂತೆಯೇ, ನೀನು ಕೈಸನ್ನೆಯಿಂದ ಆ ವಿದೂಷಕನಂ ಕರೆಯುವಳಾಗು ” ಎಂದು ನುಡಿಯಲು ; ಕಾಂಚನಮಾಲೆಯು ಚಿಟಿಕೆಯಂ ಹಾಕಿ ಕೈಬೀಸಿ ವಿದೂಷಕನಂ ಕರೆಯುವಳಾಗಲು ; ವಿದೂಷಕನು ಕುಳಿತಿದ್ದ ಸ್ಥಳವಂ ಬಿಟ್ಟು ಎದ್ದು ಸಮೀಪವಂ ಸೇರಿ, ಕಾಂಚನಮಾಲೆಯನ್ನು ವೇಷಧಾರಿಯಾದ ಸುಸಂಗತೆಯೆಂದು ತಿಳಿದು, “ ಎಲೆ ಸುಸಂಗತೆಯೇ, ನೀನು ಧರಿಸಿರುವ ವೇಷದಿಂದ ಕಾಂಚನಮಾಲೆಗೂ ನಿನಗೂ ಸ್ವಲ್ಪವಾದರೂ ಭೇದ ಕಾಣುವುದಿಲ್ಲ. ಆದರೂ ಸಾಗರಿಕೆಯು ಎಲ್ಲಿ? ” ಎಂದು ಕೇಳಲು ; ಕಾಂಚನಮಾಲೆಯು ಮಾತನಾಡಿದರೆ ದನಿಯಂ ತಿಳಿದುಕೊಳ್ಳುವನೆಂದು, ಇವಳೇ ಸಾಗರಿಕೆಯೆಂದು ವಾಸವದತ್ತೆಯಂ ಬೆರಳಿಂ ತೋರಿಸಲು ; ವಿದೂಷಕನು ವಾಸವದತ್ತೆಯಂ ನೋಡಿ, ಆಶ್ಚರ್ಯದಿಂದೊಡಗೂಡಿ, “ ಇವಳೇ ಸಾಕ್ಷಾತ್ ವಾಸವದತ್ತಾದೇವಿಯೇ ಬಂದಿರ್ಪಳು ”, ಎಂದು ನುಡಿಯಲು ; ದೇವಿಯು ಕಳವಳವಂಗೊಂಡು,—“ ಈ ಬ್ರಾಹ್ಮಣಪುತ್ರನಾದ ವಿದೂಷಕನು ನನ್ನನ್ನು ಹೇಗೆ ತಿಳಿದನೋ? ಇನ್ನೇನು ಪ್ರತ್ಯುತ್ತರವಂ ನುಡಿಯಲಿ? ” ಎಂದು ತನ್ನ ಮನದಲ್ಲಿ ಯೋಚಿಸುತ್ತಿರಲು ;

ಅಷ್ಟರಲ್ಲೇ ವಿದೂಷಕನು ಚಿಟಿಕೆಯಂ ಹಾಕುತ್ತ, “ ಎಲೆ ಸಾಗರಿಕೆಯೇ, ಶೀಘ್ರದಿಂದ ರಾಯನಿರುವ ಮಾಧವೀಮಂಟಪವಂ ಸೇರುವಳಾಗು ” ಎನಲು ; ದೇವಿಯು—“ ಎನ್ನನ್ನು ನಿಜವಾಗಿ ತಿಳಿದವನಲ್ಲ. ವೇಷವಂ ಧರಿಸಿ ಎನ್ನಂತೆ ಸಾಗ

ರಿಕೆ ಬಂದಳೆಂದು ತಿಳಿದು ಪೇಳಿದ ವಾಕ್ಯವು" ಎಂದು ನಸುನಗುತ್ತ, ಕಾಂಚನಮಾಲೆಯ ಮುಖವಂ ನೋಡಲು; ಕಾಚನಮಾಲೆಯು ಮುಂದುಗಡೆಯಲ್ಲಿ ಮಾರ್ಗವಂ ತೋರಿಸುತ್ತ ಪೋಗುವ ವಿದೂಷಕನಂ ನೋಡಿ, ಬೆರಳ ಕೊನೆಯಂ ತೂಗುತ್ತ, "ಎಲೈ ದುಷ್ಟನಾದ ವಿದೂಷಕನೇ, ಯಾವಾಗಲೂ ಇಂಥ ಕೆಟ್ಟ ನಡತೆಗಳಂ ಬಿಡದೆ ಸಾಣೆಕಲ್ಲಿಗೂ ಬೋಳತಲೆಗೂ ಗಂಟಿಕ್ಕುತ್ತಲಿರುವೆ. ನಿನಗೆ ತಕ್ಕ ಶಿಕ್ಷೆಯನ್ನು ಮಾಡಿದಲ್ಲದೆ ನಿನ್ನ ಸೊಕ್ಕು ಮುರಿಯದು" ಎಂದು ಮೆಲ್ಲಗೆ ನುಡಿಯಲು; ವಿದೂಷಕನು—"ಎಲೆ ಸುಸಂಗತೆಯೇ, ಬಾಯಿಗೆ ಬಂದ ಮಾತುಗಳನ್ನು ಗೊಣಗುಟ್ಟದೆ ಗುಟ್ಟಾಗಿ ಬರುವಳಾಗು. ತುಂಟರಾದ ವಾಸವದತ್ತೆಯ ಹೆಣ್ಣುಗಳು ಕಂಡಲ್ಲಿ ಬಹುಕಷ್ಟವು ಕೈಗೂಡುವುದು" ಎಂದು ನುಡಿಯಲು; ದೇವಿಯು ವಿದೂಷಕನು ಪೇಳುವ ವಾಕ್ಯಕೆ ಕೋಪವನ್ನೂ ಸಂತೋಷವನ್ನೂ ಸಹ ತಾಳಿ, ಮೊತ್ತವಾದ ಕತ್ತಲೆಯಲ್ಲಿ ಯಾವಾಗಲೂ ನಡೆದವಳಲ್ಲವಾದುದರಿಂದ ಮಂದಗಮನದಿಂದ ಕಾಂಚನಮಾಲೆಯ ಕೈಲಾಗವಂ ಪಿಡಿದು ಬರುತ್ತಿರಲು; ವಿದೂಷಕನು ಮುಂದುಗಡೆಯಲ್ಲಿ ಪೋಗಿ ಹಿಂದಿರುಗಿ ನೋಡಿ, "ಎಲೆ ಸುಸಂಗತೆ ಸಾಗರಿಕೆಯರೇ, ಭೂಮಿಯನ್ನು ಅಳೆಯುವರಂತೆ ಪಾದಗಳನ್ನಿಟ್ಟು ಬರುವರಾದರೆ ನಿಮಗೆ ಸಂತೋಷವು ಹೇಗೆ ದೊರಕೀತು? ಗಾಳಿ ಬಂದಾಗಲೇ ತೂರಿಕೊಳಬೇಕೆಂಬ ಗಾದೆಯನ್ನು ಕೇಳಿಬಲ್ಲಿರೊ, ಇಲ್ಲವೊ? ಇಂಥ ಸಮಯದಲ್ಲಿ ಈ ರೀತಿಯಿಂದ ತಡವಂ ಗೆಯ್ವಲ್ಲಿ ಕಂತುರೂಪನಾದ ನಮ್ಮ ಭೂಕಾಂತನ ಸಮಾಗಮವೆಂತು ದೊರಕೀತು? ಬೇಗಬೇಗ ಬನ್ನಿರಿ" ಎಂದು ನುಡಿಯಲು;

ಇತ್ತಲು, ಮಾಧವೀಮಂಟಪದಲ್ಲಿದ್ದ ರಾಯನು ಕ್ಷಣಕೊಂದು ಒಗೆಯಾದ ಯೋಚನೆಯಂ ಗೆಯ್ಯುತ್ತ, "ಕೈಗೆ ದೊರಕಿದ ಕಾಂತೆಯಂ ಬಿಟ್ಟು ಎನಗೆ ಸಂತಾಪಮಾತ್ರ ಬಹಳ ಬಲವಾಗಿ ತೋರುವುದು. ಹೇಗೆಂದರೆ,—ವರ್ಷಾಕಾಲದ ಯಾವ ದಿವಸದಲ್ಲಿ ಮಳೆಯಾಗುತ್ತಿರುವುದೋ ಆ ದಿವಸವು ಅಧಿಕವಾಗಿ ಹೇಗೆ ಶಖೆಯಿಂದ ಕೂಡಿರುವುದೋ, ಆ ರೀತಿಯಿಂದ ಇಷ್ಟು ದಿವಸವೂ ಎನ್ನ ಹೃದಯದಲ್ಲಿ ಪುಟ್ಟಿದ ಸಂತಾಪವು ಸಹಿಸುವುದಕ್ಕೆ ಯೋಗ್ಯವಾಗಿದ್ದುದು. ಈಗಲಾದರೋ ತಾಳಲಾಗದೆ, ಪೇಳೆನಲು ಬಾರದಂಥ ಮನ್ಮಥನ ತಾಪವು ಸೊರಗಿಸಿ ಕರಗಿಸಿ ಕೊರಗಿಸುತ್ತಿರುವುದು" ಎಂದು ನುಡಿಯಲು;

ವಿದೂಷಕನು ಆ ವಾಕ್ಯವನ್ನು ಕಿವಿಗೊಟ್ಟು ಕೇಳಿ, "ಸಾಗರಿಕೆಯೇ, ನಿನ್ನ ವಿರಹಜ್ವರದಿಂದ ಪರಿತಪ್ತನಾದ ರಾಯನು ನಿನ್ನ ಆಗಮನವನ್ನೇ ಬಯಸುತ್ತ, ಮನಕೆ ಬಂದ ಮಾತುಗಳನ್ನಾಡುತ್ತ ತಾಪದಿಂದ ತಪಿಸುತ್ತಿರುವನು. ಆದುದರಿಂದ ಸಾಗರಿಕೆಯು ಬಂದಳೆಂದು ನಿನ್ನ ಆಗಮನವನ್ನೇ ಪೇಳುವೆನು" ಎಂದು ನುಡಿದು, ಅಲ್ಲಿಂದ ಪೋಗಿ, ರಾಯನಂ ಕುರಿತು,—"ಎಲೈ ಮಹಾರಾಜೇಂದ್ರನೇ, ಇನ್ನುಮೇಲೆ

ಮನದ ಸಂತಾಪವಂ ಬಿಡು. ಸಾಗರಿಕೆಯು ಸುಸಂಗತೆಯಿಂದೊಡಗೂಡಿ ಬಂದಳು.” ಎಂದು ಬಿನ್ನೈಸಲು; ರಾಯನು ಭಾಗ್ಯ ಬಂದ ಬಡವನಂತೆ, ಕಣ್ಣುಗಳು ಬಂದ ಕುರುಡನಂತೆ, ಚಂದ್ರನಂ ಕಂಡ ಚಕೋರದಂತೆ, ಅಧಿಕ ಸಂತೋಷದಿಂ ಯುಕ್ತನಾಗಿ, “ಎಲ್ಲಿ ಎಲ್ಲಿ?” ಎಂದು ಉಲ್ಲಾಸದಿಂದ ಮಾಧವೀಮಂಟಪವಂ ಬಿಟ್ಟು, ಮುಂದಕ್ಕೆ ಸಾರಲು; ವಿದೂಷಕನು—“ಇವಳೇ ಸಾಗರಿಕೆ” ಯೆಂದು ವಾಸವದತ್ತೆಯಂ ತೋರಲು; ರಾಯನು ಆ ವಾಸವದತ್ತೆಯ ಹಸ್ತವಂ ಪಿಡಿದು, ಅವಳ ಮುಖವನ್ನೆತ್ತಿ, “ಎಲೆ ಕಾಂತೆಯೇ, ನಿನ್ನ ಮುಖವೇ ಚಂದ್ರಬಿಂಬವು, ನೇತ್ರಗಳೇ ಕನ್ನೈದಿಲೆಗಳು, ಹಸ್ತಗಳೇ ಪ್ರಶಸ್ತಗಳಾದ ಕಮಲಗಳು, ತೋಳುಗಳೇ ತಾವರೆಯ ದಂಟುಗಳು, ನುಣ್ದೊಡೆಗಳೇ ಬಾಳೆಯ ಕಂಭಗಳು. ಈರೀತಿಯಿಂದ ಸಮಸ್ತ ತಾಪವಂ ಬರಿಗೆಯ್ಯುತ್ತಿರುವ ಅಂಗಗಳಿಂದ ಯುಕ್ತಳಾದ ಮಂಗಳಾಂಗಿಯಾದ ನೀನು ಎನ್ನನ್ನು ಚೆನ್ನಾಗಿ ಆಲಿಂಗನವಂ ಗೆಯ್ದು, ಕ್ರೂರನಾದ ಮಾರನ ಬಾಣಗಳಿಂದ ತಾರಾಗಿರುವ ಎನ್ನ ದೇಹಕೆ ಅಧಿಕ ತಂಪನ್ನು ಉಂಟುಮಾಡುವಳಾಗು” ಎಂದು ನುಡಿಯಲು; ದೇವಿಯು ಹಿಂದಿರುಗಿ—“ಎಲೆ ಕಾಂಚನಮಾಲೆಯೇ, ರಾಯನಾಡುವ ಈ ವಾಕ್ಯವನ್ನು ನಾನು ಕೇಳಬಹುದೇ! ಎನ್ನೊಡನೆ ಸಾಗರಿಕೆಯ ಪೆಸರಂ ಪೇಳಿ ಇಂಥ ವಾಕ್ಯವಂ ನುಡಿಯಬಹುದೇ!” ಎಂದು ಕಿವಿಯಲ್ಲಿ ಪೇಳಲು; ಅವಳು—“ಎಲೌ ತಾಯೇ, ಸಾಹಸಕಾರ್ಯವನ್ನು ಮಾಡುವುದಕೆ ಯತ್ನವಂ ಪೊಂದಿರುವ ರಾಯನು ಏನ ಪೇಳಿದರೂ ಕೇಳಬಹುದು” ಎಂದು ನುಡಿಯಲು; ವಿದೂಷಕನು ಆ ವಾಸವದತ್ತೆಯಂ ಕುರಿತು—“ಎಲೆ ಸಾಗರಿಕೆಯೇ, ನಿತ್ಯದಲ್ಲೂ ನಿಷ್ಠುರಳಾದ ವಾಸವದತ್ತೆಯ ಕ್ರೂರವಾಕ್ಯಗಳೆಂಬ ತಪ್ತನಾರಾಚಗಳಿಂದ ಬೆಂದಿರುವ ಕಿವಿಗಳುಳ್ಳ ನಮ್ಮ ರಾಯನಂ ಕುರಿತು ಸವಿಯಾಗಿ ಸೊಗಸಿನ ಸೋನೆಯಂ ಕರೆಯುತ್ತಿರುವ ಸರಸೋಕ್ತಿಗಳನ್ನಾಡಿ ಸಂತೋಷವಂ ಪುಟ್ಟಿಸಿ, ಬಟ್ಟಕುಚಗಳ ಸೋಂಕಿನಿಂದ ಮನವಂ ಕರಗಿಸದೆ ಮರದಂತೆ ಏತಕ್ಕೆ ಸುಮ್ಮನೆ ನಿಂದಿರುವೆ?” ಎಂದು ನುಡಿಯಲು; ದೇವಿಯು ಅಗ್ನಿಗೆ ಆಜ್ಯಾಹುತಿಯಂ ಗೆಯ್ದಂತೆ ಇಮ್ಮಡಿಯಾಗಿ ಕೋಪವಂ ತಾಳಿ, ಹಲ್ಲುಗಳನ್ನು ಕಡಿಯುತ್ತ “ಇಂಥ ದುರ್ಭಾಷೆಗಳನ್ನೇ ಆಡುತ್ತಿರುವುದರಿಂದಲೇ ನಮ್ಮ ರಾಯನಿಗೆ ಇವನು ಹಿತಕರವಾಗಿರುವನು. ಇನ್ನು ನಾನು ಇವನ ದುಷ್ಟವಾಕ್ಯವಂ ಕೇಳಲಾರೆನು” ಎಂದು ಏಕಾಂತವಾಗಿ ಪೇಳಲು; ಕಾಂಚನಮಾಲೆಯು—“ಎಲೌ ತಾಯೇ, ಈಗಲೇ ನೀನು ವ್ಯಕ್ತವಾಗಿ ಕೋಪವಂ ಪ್ರಕಾಶಂಗೆಯ್ಯಬೇಡ. ಇನ್ನು ವಿದೂಷಕನೂ ರಾಯನೂ ಸಹ ಇನ್ನು ಏನೇನು ವಾಕ್ಯಗಳನ್ನಾಡಿ ಇನ್ನು ಏನೇನು ಕಾರ್ಯಗಳಂ ಮಾಡುವರೋ ತಿಳಿಯುವಳಾಗು. ಕಾರ್ಯವಂ ಸಾಧಿಸುವವರಿಗೆ ಕೋಪವು ಪ್ರಯೋಜನಕೆ ಬರಲಾರದು” ಎಂದು ಏಕಾಂತವಾಗಿ ನುಡಿಯಲು: ವಿದೂಷಕನು ಪೂರ್ವದಿಕ್ಕನ್ನು ನೋಡಿ—“ಎಲೈ ರಾಯನೇ, ವಿನ

ಯುದೊಡನೆ ಮುನಿಸಿಕ್ಕೊಂಡಿರುವ ಕಾಂತೆಯ ಕಪೋಲದಂತೆ ಕೆಂಪುಬಣ್ಣವಂ ತಾಳಿ ಎಲ್ಲಾ ದಿಕ್ಕುಗಳನ್ನೂ ಉಲ್ಲಾಸವಂ ಗೆಯ್ಯುತ್ತ ಒತ್ತಿ ಬರುವ ಕತ್ತಲೆಯ ಮೊತ್ತವಂ ಕತ್ತರಿಸುತ್ತ ತಲೆದೋರುವ ಚಂದ್ರನಂ ನೋಡು " ಎಂದು ನುಡಿಯಲು ; ರಾಯನು ಮೂಡಣ ದಿಕ್ಕಿನಲ್ಲಿ ಬಡಬಾಗ್ನಿ ಜ್ವಾಲೆಗಳಿಂದ ಸುತ್ತುವರಿಯಲ್ಪಟ್ಟವನಂತೆ ರಕ್ತವರ್ಣವಾಗಿ ರಾಜಿಸುವ ರಾಜೀವವೈರಿಯ ನೋಡಿ ಬಳಿಕ—" ಎಲೌ ಪ್ರಾಣಪ್ರಿಯಳಾದ ಸಾಗರಿಕೆಯೇ, ಉದಯಗಿರಿಯ ಶಿಖರದಲ್ಲಿರುವ ಬೇಡರುಗಳು ಉಂಡೆಗೆಯ್ದು ಮಡಗಿದ ಮಾಂಸಪಿಂಡದಂತೆ ತಲೆದೋರುವ ಕಲಾಧಿಪತಿಯಾದ ಚಂದ್ರನ ಚೆಂದವನ್ನು ಚೆನ್ನಾಗಿ ನೋಡುವಳಾಗು. ಈ ಚಂದ್ರನು ಸುಂದರವಾದ ನಿನ್ನ ಮುಖದಿಂದ ನಿಂದಿಸಲ್ಪಟ್ಟವನಾಗಿ ಈಗ ನಿನ್ನಂ ಬೇಡಿಕೊಳ್ಳುವಂತೆ ತನ್ನ ಕಿರಣಗಳೆಂಬ ಹಸ್ತಗಳಂ ಮೇಲಕ್ಕೆ ವಿಸ್ತರಿಸಿ, ಏರಿ ಬರುತ್ತಿರುವನು " ಎಂದು ನುಡಿದು, ಮರಳಿ ಆ ವಾಸವದತ್ತೆಯ ಮುಖಕಮಲವನ್ನು ಎತ್ತಿ,—" ಎಲೆ ಪೂರ್ಣೇಂದುವಕ್ತ್ರೆಯಾದ ಸಾಗರಿಕೆಯೇ, ಕೇಳು. ನಿನ್ನ ಮುಖಚಂದ್ರನು ಕಮಲಗಳ ಕಾಂತಿಯನಪಹರಿಸುವುದಿಲ್ಲವೋ, ಜನಗಳ ನೇತ್ರಗಳಿಗೆ ಆನಂದವನ್ನುಂಟುಮಾಡುವುದಿಲ್ಲವೋ, ಮನ್ಮಥನಿಗೆ ಅಭಿವೃದ್ಧಿಯಂ ಪುಟ್ಟಿಸುವುದಿಲ್ಲವೋ ಪೇಳು. ಈರೀತಿಯಿಂದ ಚಂದ್ರನು ಮಾಡುವ ಕಾರ್ಯಗಳನ್ನು ನಿನ್ನ ಮುಖಚಂದ್ರನೇ ಮಾಡುತ್ತಿರುವಲ್ಲಿ ಈ ಚಂದ್ರನು ಕಾರ್ಯವಿಲ್ಲದೆ ಏಕೆ ಉದಯಿಸುತ್ತಿರುವನು ? ತನ್ನಲ್ಲಿ ಅಮೃತವಿದೆಯೆಂಬ ಗರ್ವದಿಂದ ಲಜ್ಜೆಯಿಲ್ಲದೆ ಉದಯಿಸುತ್ತಾನೆ-ಎಂದರೆ, ಅವನಲ್ಲಿ ಇರುವುದಕ್ಕಿಂತಲೂ ರುಚಿಕರವಾದ ಅಮೃತವು ತೊಂಡೆಯ ಹಣ್ಣಿನಂತಿರುವ ನಿನ್ನ ತುಟಿಯಲ್ಲೇ ಇರುವುದು " ಎಂದು ನುಡಿದು, ಮನಸೋತು, ಕಾಮಾತುರನಾಗಿ, ಆಲಿಂಗನಕೆ ಮೆಯ್ಯನ್ನೀಯದೆ ಹಿಂದು ಸಾರುತ್ತಿರುವ ವಾಸವದತ್ತೆಯ ಸಮೀಪವಂ ಸೇರಿ, ಲಲ್ಲೆ ಮಾತುಗಳಿಂದ ಉಲ್ಲಾಸವಂ ಪಟ್ಟು, ಹಂಬಲಿಸುತ್ತ, ಹಂಬಲಿಸಿ ಬಿಂಬಾಧರವಂ ಚುಂಬಿಸುವೆನೆಂದು ಮರಳಿ ಮುಖವನ್ನು ಎತ್ತಿ ನೋಡಿ, ಚಂದ್ರನ ಕಿರಣಗಳ ಕಾಂತಿಯಿಂದ ವಾಸವದತ್ತೆಯೆಂಬುದಂ ತಿಳಿದು, " ಭಾಗ್ಯಹೀನನು ಮಾಡಿದ ಕಾರ್ಯಗಳೆಲ್ಲವೂ ವ್ಯರ್ಥವು. ಅಮೃತವು ವಿಷವಾಗುವಂತೆ ಎನ್ನ ಪ್ರಯತ್ನಗಳೆಲ್ಲವೂ ದುಃಖಕ್ಕೆ ಕಾರಣಗಳಾದುವಲ್ಲದೆ ಸುಖವನ್ನುಂಟುಮಾಡಲಿಲ್ಲವು! " ಎಂದು ಯೋಚಿಸುತ್ತ, ಭಯವನ್ನೂ ವ್ಯಥೆಯನ್ನೂ ಸಹ ಪೊಂದಿ, ಏಕಾಂತವಾಗಿ ವಿದೂಷಕನಂ ಕುರಿತು,-" ಮೂಢನೇ, ನೀನು ಮಾಡಿದ ಕಾರ್ಯವನ್ನು ನಾನು ಏನೆಂದು ಪೇಳಲಿ ? ವಾಸವದತ್ತೆಯನ್ನು ಸಾಗರಿಕೆಯೆಂದು ಕರೆದುಕೊಂಡು ಬಂದು, ಅನರ್ಥಕಾರ್ಯವನ್ನುಂಟುಮಾಡಿರುವೆ ?" ಎನಲು; ವಿದೂಷಕನು ಚೆನ್ನಾಗಿ ನೋಡಿ, " ನಿಶ್ಚಯವಾಗಿ ವಾಸವದತ್ತೆಯೇ ನಿಜವು. ಸುಸಂಗತೆಯ ವಾಕ್ಯವನ್ನು ನಂಬಿ ನಾನು ಕೆಟ್ಟೆನು. ಇನ್ನುಮೇಲೆ ಎನ್ನ ಪ್ರಾಣಗಳು ನಿಲ್ಲುವ ಸಂಗತಿಯನ್ನು ಕಾಣೆನು. ಆದರೂ ಇಂಥ ವಿಪತ್ಕಾಲದಲ್ಲಿ ಧೈರ್ಯವಂ ಗೆಯ್ಯಬೇಕ

ಲ್ಲದೆ ಸುಮ್ಮನಿರಬಾರದು. ದೇವಿಯಂ ಕುರಿತು ಕೆಲವು ವಾಕ್ಯವನ್ನು ಪೇಳುವೆನು ” ಎಂದು ತನ್ನೊಳು ತಾನು ಆಲೋಚಿಸುತ್ತಿರಲು ; ರಾಯನು ಕೈಮುಗಿದುಕೊಂಡು, “ ಎಲೆ ಪ್ರಾಣಕಾಂತೆಯೇ, ” ಎಂದು ಸಮೀಪಕ್ಕೆ ಪೋಗಲು; ದೇವಿಯು ಅತ್ಯಂತ ಕೋಪವಂ ತಾಳಿ, ರಾಯನ ಮುಖವನ್ನು ನೋಡಬಾರದೆಂದು ತನ್ನ ಕೈಯನ್ನು ಅಡ್ಡಲಾಗಿ ಪಿಡಿದು, ಕಣ್ಣೀರುಗಳಂ ತುಂಬಿ, “ ಆರ್ಯಪುತ್ರನಾದ ಮಹಾರಾಜೇಂದ್ರನೇ ಕೇಳು. ಇಂಥ ಮಾತುಗಳಂ ಪೇಳುವುದು ನ್ಯಾಯವಲ್ಲವು. ನಿಮ್ಮ ಹೃದಯವು ಅನ್ಯಸ್ತ್ರೀಯಲ್ಲಿ ಆಸಕ್ತವಾಗಿರುವಲ್ಲಿ ಶುಷ್ಕೋಪಚಾರದ ವಾಕ್ಯದಿಂದ ಪ್ರಯೋಜನವಂ ಕಾಣೆನು. ಬಂಧನಕ್ಕೆ ಸಿಕ್ಕುವೆನೆಂಬ ಜ್ಞಾನವಿಲ್ಲದೆ ನಾಗಸ್ವರದ ಸ್ವರಕೆ ಮರುಳಾಗಿ ಬರುವ ಸರ್ಪದಂತೆ ಬಹಿರಂಗಕ್ಕೆ ಸವಿಯಾಗಿರುವ ನಿಮ್ಮ ವಚನಕ್ಕೆ ಒಳಗಾಗಿರುವ ಪಾಪಿಯಾದ ಎನ್ನೊಡನೆ ಪೂಜ್ಯರಾದ ನಿಮಗೆ ಸಲ್ಲಾಪವು ಯೋಗ್ಯವಲ್ಲವು” ಎಂದು ಮುಖವನ್ನು ಹಿಂದಿರುಗಿಸಿ ನಿಲ್ಲಲು; ವಿದೂಷಕನು ಕ್ರೋಧದಿಂದ ಪೊರಮಡುವ ದೇವಿಯ ವಾಕ್ಯವಂ ಕೇಳಿ, ಭಯದಿಂದ ನಡುಗುತ್ತ, “ ಈಗ ದೇವಿಗೆ ಏನು ಪ್ರತ್ಯುತ್ತರವಂ ಪೇಳಲಿ? ಹೇಗಾದರೂ ಬಲವತ್ತರವಾದ ದ್ವೇಷಕೆ ಕಾರಣನಾದೆನು. ಆದರೂ ಕೆಲವು ವಾಕ್ಯವಂ ಪೇಳದೆ ಇರಬಾರದು” ಎಂದು ತನ್ನ ಹೃದಯದಲ್ಲಿ ಆಲೋಚಿಸಿ,—“ ಎಲೌ ಪೂಜ್ಯಳಾದ ದೇವಿಯೇ, ನೀನು ಕರುಣಾಶಾಲಿಯು ಮಹಾನುಭಾವೆಯು ಎಂಬುವುದು ಲೋಕದಲ್ಲಿ ಪ್ರಸಿದ್ಧವಾಗಿರುವುದು. ಆ ಪ್ರಸಿದ್ಧಿಗೆ ಕೊರತೆಯಂ ತಾರದೆ ರಾಯನ ಅಪರಾಧವನ್ನು ಕ್ಷಮಿಸತಕ್ಕುದು ” ಎಂದು ನುಡಿಯಲು ; ದೇವಿಯು ರಕ್ತದಲ್ಲಿ ನೆನೆದ ಮೀನುಗಳಂತೆ ಕೆಂಪುಗೂಡಿರುವ ನೇತ್ರಗಳಿಂ ನೋಡಿ,—“ ಎಲ ವಿದೂಷಕನೇ, ನೀನು ಮಾಡಿದ ಸಂವಿಧಾನದಿಂದ ಉಂಟಾಗುತ್ತಿದ್ದ ಸಾಗರಿಕೆಯ ಪ್ರಥಮಸಂಗಮಕೆ ವಿಘ್ನವನ್ನುಂಟುಮಾಡಿ ನಾನು ಅಪರಾಧವುಳ್ಳವಳಾದೆನಲ್ಲದೆ ನಿನ್ನಿಂದಲೂ ಸ್ವಲ್ಪವಾದರೂ ಅಪರಾಧವು ಮಾಡಲ್ಪಡಲಿಲ್ಲವು. ಆದರೆ ಪೇಳುವೆನು ಕೇಳು. ಅಂತರಂಗದ ರಾಜ್ಯಸ್ವರೂಪವಾದ ಅಂತಃಪುರದ ವಿಚಾರಣೆಗೆ ನೀನು ಸೇರಿದಂತೆ ಬಹಿರಂಗದ ರಾಜ್ಯಭಾರದ ವಿಚಾರಣೆಗೆ ನಿನ್ನಂಥ ಕುಮಂತ್ರಿಯು ಸೇರಿ ಇದ್ದಲ್ಲಿ ಸಮಸ್ತವಾದ ದೇಶಕೋಶಗಳೂ ನಿರ್ನಾಮವಾಗುತ್ತ ಇದ್ದುವು. ದುಷ್ಟಮಂತ್ರಿಯಿಂದ ದೊರೆಯು ಕೆಡುವನು ಎಂದು ನೀತಿವಂತರು ಪೇಳಿರುವ ವಾಕ್ಯವು ಎಂದಿಗೂ ವ್ಯರ್ಥವಾಗಲಾರದು. ಈ ಯುಕ್ತಿಯೂ, ಈ ಸಂವಿಧಾನವೂ ರಾಜ್ಯವಿಚಾರಣೆಯಲ್ಲಿ ಇದ್ದಲ್ಲಿ ಇನ್ನಿಷ್ಟು ರಾಜ್ಯಲಾಭವೂ ಪ್ರಜಾಪರಿಪಾಲನೆಯೂ ಅಧಿಕವಾದ ಕೀರ್ತಿಯೂ ಸಹ ದೊರಕುತ್ತಲಿರುವುದರಲ್ಲಿ ಸಂದೇಹವೇ ತೋರಲಾರದು. ಕಾಂತೆಯರ ಲೀಲೆಗಳಲ್ಲಿ ತಗಲಿರುವ ಚಿತ್ತವೃತ್ತಿಯುಳ್ಳ ದೊರೆಗೆ ಸಮಸ್ತ ಕಾರ್ಯವೂ ಕೆಡುವುದೆಂಬ ಶಾಸ್ತ್ರವಾಕ್ಯವು ನಿಮ್ಮಂಥವರಿಂದ ನಿದರ್ಶನಕ್ಕೆ ಬರಬಹುದು. ಯೋಗಿಗಳಾದರೂ ದುಷ್ಟರ

ಸಹವಾಸದಿಂದ ಕೆಟ್ಟುಹೋಗುವರೆಂಬ ವಾಕ್ಯವು ನಿಶ್ಚಯವಾದುದು. ಎಷ್ಟು ಹಾಲಿದ್ದರೂ ಒಂದು ಬಿಂದು ಹುಳಿ ಬಿದ್ದಲ್ಲಿ ಆ ಕ್ಷೀರವು ಪ್ರಯೋಜನಕ್ಕೆ ಬಾರದೆ ವ್ಯರ್ಥವಾಗುವಂತೆ ನೀಚಾತ್ಮನಾದ ನಿನ್ನಿಂದ ನಮ್ಮ ರಾಯನಲ್ಲಿದ್ದ ಸಮಸ್ತ ಸದ್ಗುಣಂಗಳೂ ಪ್ರಯೋಜನಕ್ಕೆ ಬಾರದೆ ಪೋದುವು. ಇನ್ನು ಬಲುಮಾತುಗಳನ್ನಾಡಿ ಪ್ರಯೋಜನವನ್ನು ಕಾಣೆನು ” ಎಂದು ಮುಂದಕ್ಕೆ ಪೋಗುತ್ತಿರಲು ; ರಾಯನು ಅಡ್ಡಲಾಗಿ ಬಂದು ನಿಂತು,—“ ಎಲೆ ಕಲ್ಯಾಣಿಯೇ, ಪ್ರತ್ಯಕ್ಷವಾಗಿ ನೋಡಲ್ಪಟ್ಟ ಅಪರಾಧವುಳ್ಳ ನಾನು ನಿನಗೆ ಪ್ರತ್ಯುತ್ತರವನ್ನು ಏನು ಪೇಳಲಿ? ಆದರೆ ಕಮಲದಂತೆ ಮನೋಹರವಾದ ಈ ನಿನ್ನ ಪಾದಗಳಲ್ಲಿ ಲಾಕ್ಷಾರಸದಿಂದುಂಟಾಗಿರುವ ಕೆಂಪನ್ನು ಎನ್ನ ಮಸ್ತಕವು ಪೋಗಲಾಡಿಸುವುದರಲ್ಲಿ ಸಮರ್ಥವಾದೀತು. ಚಂದ್ರನಿಗೆ ಚಾತುರ್ಯವಂ ಬೋಧಿಸುತ್ತಿರುವ ಮುಖದಲ್ಲಿ ಕೋಪದಿಂ ಪುಟ್ಟಿರುವ ಕೆಂಪನ್ನು ಎನ್ನಲ್ಲಿ ಪುಟ್ಟಿದ ನಿನ್ನ ಕಾರುಣ್ಯವೇ ಪೋಗಲಾಡಿಸಬೇಕಲ್ಲದೆ ಎನ್ನಿಂದ ಆಗಲಾರದು ” ಎಂದು ಪಾದಕ್ಕೆ ನಮಸ್ಕಾರವಂ ಗೆಯ್ಯಲು ; ವಾಸವದತ್ತೆಯು—“ ಶಿವಶಿವ! ಇಂಥ ಪಾಪಕ್ಕೆ ಗುರಿಯಾಗಬೇಕೇ ” ಎಂದು ತನ್ನ ಕಾಲುಗಳಂ ಹಿಂದೆಗೆದು, “ ಎಲೆ ಕಾಂಚನಮಾಲೆಯೇ, ಈರೀತಿಯಿಂದ ನಾಚಿಕೆಗೆಟ್ಟ ಪುರುಷರಂ ಕಾಣೆನು. ತಾವು ಮಾಡಿದ ಅಪರಾಧವನ್ನು ತಿಳಿಯದೆ ಇಂತು ಕಾರ್ಯವಂ ಗೆಯ್ಯುವುದಕ್ಕೆ ಹೇಗೆ ಮನಸ್ಸು ಬಂದುದೋ? ಆದರೆ ಹೃದಯದಲ್ಲಿದ್ದ ರಾಯನ ವಿಶ್ವಾಸವನ್ನು ಚೆನ್ನಾಗಿ ಪರೀಕ್ಷೆಯಂ ಗೆಯ್ದಂತಾದುದು. ಇನ್ನು ಇಲ್ಲಿ ನಿಲ್ಲಬಾರದು ” ಎಂದು ಪೋಗುತ್ತಿರಲು; ಕಾಂಚನಮಾಲೆಯು—“ ಎಲೌ ಕರುಣಾಶಾಲಿಯಾದ ಕಲ್ಯಾಣಿಯೇ, ದೀನನಾಗಿ ನಮಸ್ಕರಿಸುವ ರಾಜೇಂದ್ರನನ್ನು ಒಡಂಬಡಿಸಿ ಪೋಗುವಳಾಗು. ಇಲ್ಲದೆ ಇದ್ದಲ್ಲಿ ಬಲವಾಗಿ ರಾಯನಿಗೆ ಪಶ್ಚಾತ್ತಾಪವು ತೋರುವುದು ” ಎನಲು; ದೇವಿಯು–“ ಎಲೌ ಮರುಳಾಗಿರುವ ತರಳಾಕ್ಷಿಯೇ, ಕೇಳು. ಈ ರಾಯನಲ್ಲಿ ಕಟಾಕ್ಷವಂ ಗೆಯ್ಯುವುದಕ್ಕೆ ಕಾಲವು ಬೇರೆ ಇರುವುದು. ಈಗ ಬಾಯಿ ಮುಚ್ಚಿಕೊಂಡು ನಡೆಯುವಳಾಗು ” ಎಂದು ನುಡಿದು, ಅಲ್ಲಿ ನಿಲ್ಲದೆ ಪೋಗಲು ; “ ನಿನ್ನ ಅಜ್ಞೆಯು ಹೇಗೆ ಆಗುವುದೋ ಆರೀತಿಯಿಂದ ನಡೆದುಕೊಳ್ಳುವೆನು ” ಎಂದು ದೇವಿಯನ್ನು ಅನುಸರಿಸಿ ಪೋಗಲು ; ರಾಯನು ಅಡ್ಡಬಿದ್ದುಕೊಂಡು “ ಎಲೆ ದೇವಿಯೇ, ಎನ್ನಲ್ಲಿ ಪ್ರಸನ್ನಳಾಗಿ ಇದೊಂದು ಎನ್ನ ಅಪರಾಧವನ್ನು ಕ್ಷಮಿಸುವಳಾಗು ” ಎಂದು ನುಡಿಯುತ್ತಿರಲು ;

ವಿದೂಷಕನು, ರಾಯನು ನಮಸ್ಕಾರವಂ ಗೆಯ್ದರೂ, ತಾನು ಪಿಡಿದ ಕೋಪವಂ ಬಿಡದೆ ದೇವಿಯು ಪೋದಳೆಂದು ದುಃಖವಂ ತಾಳಿ, ರಾಯನಂ ಕುರಿತು— “ ಎಲೆ ರಾಯನೇ, ಬರಿದೆ ಏತಕ್ಕೆ ಅರಣ್ಯರೋದನವಂ ಗೆಯ್ಯುತ್ತಿರುವೆ? ಗಂಡಸರಲ್ಲಿ ನಿನ್ನಂಥ ನಾಚಿಕೆಯಿಲ್ಲದೆ ಇರುವ ಪುರುಷರನ್ನು ಒಬ್ಬರನ್ನೂ ಕಾಣೆನು. ಏಳು

ಏಳು " ಎಂದು ಧಿಕ್ಕರಿಸಿ ನುಡಿಯಲು; ರಾಯನು ಮುಖವಂ ಎತ್ತಿ ನೋಡಿ— " ಎಲೈ ವಿದೂಷಕನೇ, ನಾನು ಎಷ್ಟು ಪ್ರಕಾರವಾಗಿ ನಮಸ್ಕಾರವಂ ಗೆಯ್ದರೂ ದೇವಿಯು ಎನ್ನಲ್ಲಿ ಪ್ರಸಾದವಂ ಗೆಯ್ಯದೆ ಪೋದಳಲ್ಲಾ! ಎಂದು ಎನ್ನ ಮನದಲ್ಲಿ ಬಲವಾದ ವಿಷಾದವು ತೋರುತ್ತಿರುವುದು " ಎನಲು; ಅವನು—" ಎಲೈ ಮುಗ್ಧನಾದ ರಾಯನೇ, ಕೇಳು. ಲೋಕದಲ್ಲಿ ಜನರುಗಳು ಯಾವ ದೊರೆಯ ಕೋಪ ಕಟಾಕ್ಷಗಳಿಗೆ ತಕ್ಕ ಕಾರ್ಯಗಳು ಪುಟ್ಟದೆ ಇದೆಯೋ, ಸ್ತ್ರೀಯರುಗಳು ನಪುಂಸಕರಾದ ಪುರುಷರನ್ನು ತಿರಸ್ಕರಿಸುವಂತೆ ಆ ರಾಯನನ್ನು ತಿರಸ್ಕರಿಸುತ್ತಲಿರುವರು. ಆದರೆ ಅವಳ ಪೆಟ್ಟಿನಿಂದ ನಿನ್ನ ಶರೀರದಲ್ಲಿ ಗಾಯಗಳು ಪುಟ್ಟಲಿಲ್ಲವಾದುದರಿಂದ ಅದೇ ನಿನ್ನಲ್ಲಿ ಬಲವಾದ ಕಟಾಕ್ಷವಂ ಗೆಯ್ದವಳಾದಳೆಂದು ತಿಳಿಯುವನಾಗು. ಭಿಕ್ಷಾಪಾತ್ರೆಗೆ ಯೋಗ್ಯರಾದಂಥ ನಮ್ಮಂಥ ಜನರು ನಿನ್ನಂತೆ ಲಜ್ಜೆಗೆಟ್ಟು ಹೆಂಡತಿಗೆ ನಮಸ್ಕಾರವಂ ಗೆಯ್ಯಲಾರರು." ಎಂದು ನುಡಿಯಲು; ರಾಯನು—" ಎಲಾ ಮೂರ್ಖನೇ, ಎನ್ನನ್ನು ಏಕೆ ಹಾಸ್ಯದ ನುಡಿಗಳಿಂದ ನಿಂದಿಸುತ್ತಿರುವೆ? ಇದೆಲ್ಲವೂ ನೀನು ಮಾಡಿದ ಅನರ್ಥವಾದ ಕಾರ್ಯವಾದುದರಿಂದ ಈರೀತಿಯಾಗಿ ದೇವಿಯೊಡನೆ ವಿರೋಧವು ಪ್ರಾಪ್ತವಾದುದು. ಬಹುದಿವಸದಿಂದ ಹಬ್ಬಿದ ಸ್ನೇಹದಿಂದಲೇ ದೇವಿಗೆ ಎನ್ನಲ್ಲಿ ನಂಬುಗೆಯೂ ಬಲವಾದ ಅನುರಾಗವೂ ಸಹ ಇದ್ದುದಾಯಿತು. ಯಾವಾಗಲೂ ಮಾಡದೆ ಈಗ ನಾನು ಮಾಡಿದ ಅಕಾರ್ಯದಿಂದ ದೇವಿಯು ತನ್ನ ಪ್ರಾಣಗಳಲ್ಲಿ ಆಸೆಯಿಲ್ಲದೆ ನಾನು ಮಾಡಿದ ನಮಸ್ಕಾರವಂ ಮೀರಿ ಪೋದಳು. ಲೋಕದಲ್ಲಿ ಬಲವಾಗಿ ಬಳೆದ ಮಿತ್ರತ್ವದಲ್ಲಿ ಇಂಥ ವಂಚನೆಗಳು ಪುಟ್ಟಿದಲ್ಲಿ ಅದು ಸಹಿಸುವುದಕ್ಕಾಗದೆ ಪ್ರಾಣಸಂಕಟವನ್ನುಂಟುಮಾಡುತ್ತಿರುವುದು. ಇನ್ನುಮೇಲೆ ದೇವಿಯು ಯಾವ ಕಾರ್ಯದಲ್ಲಿಯೂ ನಂಬುಗೆ ತಪ್ಪಿ ಇರುವಳು. ಇನ್ನು ಮಾಡತಕ್ಕ ಕಾರ್ಯವೇನು? " ಎಂದು ನುಡಿಯಲಾವಿದೂಷಕನು—" ಅಯ್ಯಾ ರಾಜೇಂದ್ರನೇ, ದೇವಿಯು ಇನ್ನುಮೇಲೆ ಸಾಗರಿಕೆಗೆ ಏನು ಸಂಕಟವನ್ನುಂಟುಮಾಡುತ್ತಿರುವಳೋ? ಕೋಮಲಾಂಗಿಯಾದ ಆ ಸಾಗರಿಕೆಯು ಪ್ರಾಣಗಳನ್ನು ಹೇಗೆ ಧರಿಸುವಳೋ? ಎಂದು ಎನ್ನ ಮನವು ಬಲವಾದ ಕಳವಳವಂ ಪೊಂದುತ್ತಿರುವುದು " ಎಂದು ನುಡಿಯಲು;

ಅತ್ತ ವಾಸವದತ್ತೆಯು ಕಾಂಚನಮಾಲೆಯು ಕೈಲಾಗವಂ ಪಿಡಿದು ಬರುತ್ತ— " ಎಲೆ ಬಾಲೆ, ನಾನು ಸುಸಂಗತೆಯನ್ನು ಸಾಕಿದ್ದು ಹಾವಿಗೆ ಹಾಲನ್ನೆರೆದಂತಾದುದು. ಇಷ್ಟು ಸಂವಿಧಾನಕ್ಕೂ ಮೂಲಕಾರಣಳಾದಂಥ ಆ ಬಾಲೆಗೆ ಬಲವಾಗಿ ಬಾಧೆಯಂ ಪುಟ್ಟಿಸಲ್ಲದೆ ಎನ್ನಲ್ಲಿ ಭೀತಿಯು ಸಂಜನಿಸಲಾರದು " ಎಂದು ಮುಂದುಗಡೆಯಲ್ಲಿ ಎಚ್ಚರಿಕೆ ಪರಾಕು ಪಾದಾವಧಾನವೆಂದು ಪೊಗಳುತ್ತಲಿರುವ ಮದನಿಕೆಯಂ ಕರೆದು—" ಎಲೆ ಕಾಂತೆಯೇ, ನೀನು ಶೀಘ್ರವಾಗಿ ಚಿತ್ರಮಂಟಪ ಮೊದಲಾದ

ಯಾವ ಸ್ಥಳದಲ್ಲಿದ್ದರೂ ಸುಸಂಗತೆಯಂ ಪಿಡಿದು ಯಾವ ವೇಷದಲ್ಲಿ ಇದ್ದಾಳೆಯೋ ಅದೇ ವೇಷದಲ್ಲಿ ಇರಿಸಿಕೊಂಡು ಒಬ್ಬರೊಡನೆಯೂ ಸಲ್ಲಾಪವಂ ಗೆಯ್ಯದಂತೆ ಕಾದಿರುವುದು" ಎಂದು ಅಪ್ಪಣೆಯನ್ನೀಯಲು; ಆ ಮದನಿಕೆಯು ಚಿತ್ರಶಾಲೆಗಾಗಿ ಬರುತ್ತ ಸಾಗರಿಕೆಗೆ ವಾಸವದತ್ತಾದೇವಿಯ ವೇಷವನ್ನು ಅಳವಡಿಸಿ ಕಾದುಕೊಂಡಿದ್ದ ಬೇಸಾರಿ ವಿದೂಷಕನನ್ನು ನೋಡುವೆನೆಂದು ಉಪವನದ ಮಾರ್ಗವನ್ನು ಅನುಸರಿಸಿ ಬರುತ್ತಲಿದ್ದ ಸುಸಂಗತೆಯಂ ಕಂಡು ಸೆರಗಂ ಪಿಡಿದು, "ಎಲೆ ಬಾಲೆಯೇ, ನೀನು ಮಾಡಿದ ಕಾರ್ಯಕ್ಕೆ ತಕ್ಕ ಫಲವಂ ಅನುಭವಿಸುವಳಾಗು ಎಂದು ದೇವಿಯ ಆಜ್ಞೆಯಾಗಿರುವಲ್ಲಿ ಎಲ್ಲಿಗೆ ಪೋಗುತ್ತಿರುವೆ, ನಡೆ" ಎಂದು ಎಳೆದುಕೊಂಡು ಪೋಗುತ್ತಿರಲು ; ಸುಸಂಗತೆಯು ಕೆಟ್ಟೆನೆಂದು ನಾಲಗೆ ಒಣಗಿ, ತೊಡೆ ನಡುಗಿ, ದಿಕ್ಕುಗಳಿಗೆ ಬಾಯಿಬಿಡುತ್ತ, ಇನ್ನೇನು ಗತಿ ಎಂದು ಯೋಚಿಸಿ, ಸಾಗರಿಕೆಯು ಜೀವವನ್ನು ಹೇಗೆ ಧರಿಸುವಳೆಂದು ಬರುತ್ತ, ಚಿತ್ರಮಂಟಪದಲ್ಲಿ ಕಟ್ಟಿರುವ ಗಿಳಿಯಂ ಕುರಿತು ಸಾಗರಿಕೆಯು ಕೇಳುವಂತೆ—"ಎಲೆ ಗಿಳಿಯೇ, ನಾನು ಮೃತ್ಯುವಿನ ಕೈಗೆ ಸಿಕ್ಕಿದಂತೆ ಈ ಮದನಿಕೆಯು ಮಾಡುವ ಬಂಧನಕ್ಕೆ ಒಳಗಾದೆನು. ಮುಂದೆ ನೀನು ಬದುಕುವ ರೀತಿಯನ್ನು ಸಾಧಿಸುವುದು" ಎಂದು ಗಟ್ಟಿಯಾಗಿ ಕೂಗಿ ನುಡಿದು ರೋದನವಂ ಗೆಯ್ಯುತ್ತ ಪೋಗಲು; ಸಾಗರಿಕೆಯು ಸುಸಂಗತೆಯ ಸೆರಗಂ ಪಿಡಿದು ಎಳೆದುಕೊಂಡು ಪೋಗುವ ಮದನಿಕೆಯಂ ಕಂಡು ಸುಸಂಗತೆಯು ಶುಕವಂ ನೆವಗೆಯ್ದು ಪೇಳಿದ ವಾಕ್ಯವಂ ಕೇಳಿ ನೀರಿನಲ್ಲಿ ಕಣ್ಣುಬಿಟ್ಟಂತೆ ದಿಗ್ಭ್ರಾಂತಿಯಂ ಪೊಂದಿ, "ಇಂದಿನ ದಿನಕ್ಕೆ ಎನಗೆ ನೂರು ವರ್ಷವು ತುಂಬಿತು. ಭೂಮಿಋಣಾನುಬಂಧವು ಮುಗಿದುದು. ಆಸೆಯೆಂಬ ಲತೆಯು ಬೇರು ಒಣಗಿದುದು. ವತ್ಸರಾಜನಂ ಪೊಂದಿ ಸುಪುತ್ರನಂ ಪಡೆ ಎಂದು ಎನ್ನ ತಾಯಿತಂದೆಗಳು ಹರಸಿದ ಹರಕೆಯು ನಿರರ್ಥಕವಾದುದು. ಇನ್ನುಮೇಲೆ ಇದ್ದೆನಾದರೆ ದೇವಿಯೆಂಬ ಮೃತ್ಯುವಿನ ಕೈಗೆ ಸಿಕ್ಕದೆ ಇರೆನು. ಅವಳು ಮಾಡುವ ಚಿತ್ರಹಿಂಸೆಯನ್ನು ಅನುಭವಿಸಿ ಪ್ರಾಣಗಳಂ ಬಿಡುವುದಕ್ಕಿಂತಲೂ 'ಆಪತ್ಕಾಲೇ ನಾಸ್ತಿಮರ್ಯಾದಾ' ಎಂಬ ನ್ಯಾಯವಿರುವುದರಿಂದ ನಾನು ಆತ್ಮದೋಷವನ್ನು ಗಣಿಸದೆ ಪ್ರಾಣವಂ ಬಿಡುವೆನು" ಎಂದು ನಿಶ್ಚಯಿಸಿ ಅಲ್ಲಿಂದ ಎದ್ದು ಮಕರಂದೋದ್ಯಾನವನ್ನು ಪ್ರವೇಶಿಸಿ, ಮಲ್ಲಿಗೆಯ ಹಂಬನ್ನು ಪಾಶವಂ ಗೆಯ್ದು ಅಶೋಕವೃಕ್ಷದ ಸಮೀಪವಂ ಸೇರಿದಳು.

ಎಂಬಲ್ಲಿಗೆ
ಶ್ರೀ ಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀ ಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಚತುರ್ದಶಗುಚ್ಛಂ ಸಂಪೂರ್ಣಮ್.

# ಹದಿನೈದನೆಯ ಗುಚ್ಛಂ.

ಅನಂತರದಲ್ಲಿ ಸಾಗರಿಕೆಯು ಭಯಮಂ ಪೊಂದಿ, ಅಶೋಕವೃಕ್ಷದ ಸಮೀಪಮಂ ಸೇರಿ, “ ಈಗ ನಾನು ಧರಿಸಿರುವ ವೇಷದಿಂದ ಇವಳು ಸಾಗರಿಕೆಯೆಂದು ಯಾರಿಗಾದರೂ ಎನ್ನನ್ನು ತಿಳಿಯಲಾಗದು. ಆದರೂ ಇನ್ನು ಮೇಲೆ ಈ ಲತಾಪಾಶವನ್ನು ಕತ್ತಿಗೆ ಹಾಕಿ ಈ ಅಶೋಕವೃಕ್ಷದ ಸಮೀಪದ ಕೊಂಬೆಗೆ ಕಟ್ಟಿಕೊಂಡು ಪ್ರಾಣವಂ ಬಿಡುವೆನು ” ಎಂದು ನಿಶ್ಚಯಿಸಿರಲು ;

ಇತ್ತಲು ವಿದೂಷಕನು ರಾಯನಂ ಕುರಿತು—“ ಅಯ್ಯಾ ರಾಯನೇ, ಮೂಢನಂತೆ ಏತಕ್ಕೆ ಸುಮ್ಮನಿರುತ್ತಲಿದ್ದೀಯೆ ? ಇನ್ನು ಇಲ್ಲಿ ಏನು ಉಪಾಯವಂ ಮಾಡತಕ್ಕುದು ? ” ಎಂದು ಬೆಸಗೊಳ್ಳಲು ; ರಾಯನು--“ ಎಲೈ ಮಿತ್ರನೇ, ಇನ್ನು ಏನು ಮಾಡತಕ್ಕುದೆಂದು ನಾನೂ ಅದನ್ನೇ ಆಲೋಚಿಸುತ್ತಿರುವೆನು ” ಎಂದು ಮಾತಾಡುತ್ತಿರಲು ;

ಇತ್ತಲು, ಸಾಗರಿಕೆಯು— “ ನಾನು ಕ್ರೂರಗಳಾದ ಎನ್ನ ಪ್ರಾಣಗಳನ್ನು ನಿಶ್ಚಯವಾಗಿ ಬಿಡುವೆನು. ಆಬಳಿಕ ವಾಸವದತ್ತಾದೇವಿಯು ಏನು ಮಾಡಿದರೂ ಮಾಡಬಹುದು. ‘ ಸತಾಂ ಮ್ಲಾನೇ ಮ್ಲಾನಮಥವಾ ದೂರಗಮನಂ ’ ಹೀಗೆಂದು ನೀತಿಯಿರುವುದರಿಂದ ಮಾನವಂ ಪೋಗಲಾಡಿಸಿಕೊಂಡು ಅಪಕೀರ್ತಿಯಂ ಪೊಂದಿ ಸುಖದಿಂದಿರುವೆನೆಂಬ ಇಚ್ಛೆಗಿಂತಲೂ ಈಗ ಎನಗೆ ಮರಣವೇ ಸರ್ವೋತ್ತಮವಾಗಿರುವುದು ” ಎಂದು ಚಿಂತಿಸುತ್ತಿರಲು ;

ಇತ್ತಲು ರಾಜನು, “ ಎಲೈ ಮಿತ್ರನೇ, ದೇವಿಯ ಕಟಾಕ್ಷವನ್ನು ಸಂಪಾದಿಸುವುದಕ್ಕಿಂತ ಇನ್ನೊಂದು ಉಪಾಯವು ತೋರಲಾರದು. ಆದುದರಿಂದ ಅವಳ ಸಮೀಪವಂ ಸೇರಿ ಹೃದಯದಲ್ಲಿರುವ ಕಲ್ಮಷವಂ ಪೋಗಲಾಡಿಸುವ, ನಡೆ ” ಎಂದು ಅವನಿಂದೊಡಗೂಡಿ ಬರುತ್ತಿರಲು ;

ವಿದೂಷಕನು ದೂರದಲ್ಲಿ ರೋದನವಂ ಗೆಯ್ಯುತ್ತಿರುವ ಸಾಗರಿಕೆಯ ಧ್ವನಿಯನ್ನು ಕಿವಿಗೊಟ್ಟು ಕೇಳಿ, “ ಅಯ್ಯಾ ರಾಜೇಂದ್ರನೇ, ದೂರದಲ್ಲಿ ಏನೋ ಒಂದು ಶಬ್ದವು ಕೇಳಿಬರುವುದು. ನೀನು ಮಾಡಿದ ನಮಸ್ಕಾರದಿಂದ ಮನದಲ್ಲಿ ಪಶ್ಚಾತ್ತಾಪವು ತೋರಿ ದೇವಿಯು ಹಿಂದಿರುಗಿ ಬರುವಳೆಂದು ತೋರುವುದು ” ಎನಲು ; ರಾಯನು—“ ಅಯ್ಯಾ ನಮ್ಮ ವಾಸವದತ್ತೆಯು ಬಹುದೊಡ್ಡವಳಾಗಿ ಯಾವಾಗಲೂ ಎನ್ನೊಡನೆ ಇಂತು ವಿರೋಧವಂ ಗೆಯ್ಯುವಳಲ್ಲವಾದುದರಿಂದ ನೀನು ಪೇಳಿರುವ ವಾಕ್ಯವೇ ಯುಕ್ತವಾಗಿ ಕಾಣುವುದು ” ಎನಲು ;

ಸಾಗರಿಕೆಯು ಮರದ ಕೊಂಬೆಗೆ ಲತಾಪಾಶವನ್ನು ಕಟ್ಟಿ ತನ್ನ ಕತ್ತಿಗೆ ಹಾಕಿಕೊಂಡು ತಾನು ಪುಟ್ಟಿದುದನ್ನೂ ತನಗೆ ಉಂಟಾಗಿದ್ದ ಸಮಸ್ತ ಐಶ್ವರ್ಯವನ್ನೂ ಅನೇಕ

ಸ್ತ್ರೀಯರಿಂದ ಸೇವೆಯುಂ ತೆಗೆದುಕೊಳ್ಳುತ್ತ ತಾನು ಮಾಡುತ್ತಿದ್ದ ಪುಷ್ಪಾಪಚಯ್ಯ ಕ್ರೀಡೆ ಮೊದಲಾದ ಲೀಲೆಗಳನ್ನೂ ತನಗೆ ಹಿತಕರವಾದ ತಾಯಿತಂದೆಗಳನ್ನೂ ಈಗ ತನಗೆ ಬಂದಿರುವ ವಿಪತ್ತನ್ನೂ ಸಹ ಸ್ಮರಿಸಿಕೊಂಡು, “ ಎಲೈ ತಂದೆಯೇ, ವತ್ಸರಾಜನ ರೂಪಿಗೂ ಐಶ್ವರ್ಯಕ್ಕೂ ಮರುಳಾಗಿ ಆ ವಾಸವದತ್ತೆಯೆಂಬ ಮೃತ್ಯುವಿನ ಬಾಯಿಗೆ ಎನ್ನನ್ನು ತುತ್ತುಮಾಡಬಹುದೇ! ಎಲೆ ತಾಯೇ, ನನ್ನ ಮರಣದ ವಾರ್ತೆಯನ್ನು ಕೇಳಿ ಹೇಗೆ ಪ್ರಾಣಗಳನ್ನು ಧರಿಸುವುದಕ್ಕೆ ಸಮರ್ಥಳಾಗುವೆ! ಎಲೆ ಕಲವಾಣಿ ಮೊದಲಾದ ಕಾಂತೆಯರುಗಳಿರಾ, ಎನ್ನ ವಿವಾಹ ಪ್ರಶಸ್ತದಲ್ಲಿ ಬಹುವಾಗಿ ಬಹುಮಾನವನ್ನು ಪೊಂದಬೇಕೆಂದು ಬಾಲ್ಯದಿಂದಲೂ ಬಲವಾಗಿ ಎನ್ನ ಸೇವೆಯು ಗೆಯ್ಯುತ್ತಿದ್ದ ನಿಮ್ಮ ಮನೋರಥಗಳೆಲ್ಲ ವ್ಯರ್ಥವಾದುವೇ! ” ಎಂದು ಸ್ವರವೆತ್ತಿ ರೋದನವಂ ಗೆಯ್ಯಲು ;

ವಿದೂಷಕನು ಆವಳ ದೀನಸ್ವರವನ್ನು ಚೆನ್ನಾಗಿ ಕೇಳಿ, ಮುಂದಕೆ ಓಡಿಪೋಗಿ ವಾಸವದತ್ತೆಯ ವೇಷವಂ ಧರಿಸಿರುವ ಸಾಗರಿಕೆಯುಂ ಕಂಡು, ಅವಳ ಸಮೀಪಕ್ಕೆ ಪೋಗುವುದಕ್ಕೆ ಭಯಮಂ ಪೊಂದಿ, ಹಿಂದಿರುಗಿ ಬಂದು, “ ಅಯ್ಯಾ ರಾಯನೇ, ವಾಸವದತ್ತೆಯು ಕತ್ತಿಗೆ ಪಾಶವಂ ಹಾಕಿಕೊಂಡು ಪ್ರಾಣಗಳಂ ಬಿಡುತ್ತಲಿರುವಳು. ಶೀಘ್ರದಿಂದ ಬಂದು ಸಂರಕ್ಷಿಸುವನಾಗು ” ಎಂದು ನುಡಿಯಲು ;

ರಾಯನು ಬಹಳವಾಗಿ ದಿಗಲಂ ಪೊಂದಿ ಓಡಿಪೋಗಿ “ ಎಲ್ಲಿ ಎಲ್ಲಿ ” ಎಂದು ಕೇಳಲು ; ಅವನು, “ ಅಶೋಕವೃಕ್ಷದ ಸಮೀಪದಲ್ಲಿ ” ಎಂದು ಸಾಗರಿಕೆಯುಂ ತೋರಿಸಲು ; ರಾಯನು ಸಾಗರಿಕೆಯುಂ ಕೇಳಿ, ನೋಡಿ, ವಾಸವದತ್ತೆಯೆಂ.. ತಿಳಿದು, ಕ್ಷಿಪ್ರದಿಂದ ಸಮೀಪವಂ ಸೇರಿ, ಕತ್ತಿಗೆ ಹಾಕಿದ್ದ ಲತಾಪಾಶವನ್ನು ತನ್ನ ಹಸ್ತದಿಂದ ಕಿತ್ತು, “ ಎಲೌ ದೇವಿಯೇ, ತಿಳಿಯದೆ ಇರುವ ಮೂಢಜನರು ಮಾಡುವಂಥ ಕಾರ್ಯವನ್ನು ನೀನು ಮಾಡುವುದು ನ್ಯಾಯವೇ! ನಿನ್ನ ಕಂಠದಲ್ಲಿರುವ ಲತಾಪಾಶವಂ ನೋಡಿ ಎನ್ನ ಪ್ರಾಣಗಳು ಎನ್ನ ಕಂಠದಲ್ಲಿ ಬಂದುಸೇರಿದುವು. ಯಾವುದೊಂದು ನಿಮಿತ್ತವೂ ಇಲ್ಲದೆ ಈ ರೀತಿಯಾದ ಸಾಹಸವಂ ಮಾಡುವುದು ಎಷ್ಟು ಮಾತ್ರಕ್ಕೂ ನ್ಯಾಯವಲ್ಲ ” ಎಂದು ನುಡಿಯಲು ; ಸಾಗರಿಕೆಯು ರಾಯನಂ ಕಂಡು ಸಂತೋಷದಿಂದೊಡಗೂಡಿ, “ ಎನ್ನ ವಿಪತ್ತನ್ನು ಪರಿಹರಿಸುವುದಕ್ಕೆ ರಾಜೇಂದ್ರನಾದ ವತ್ಸರಾಜನೇ ಬಂದಿರುವನು. ಆದುದರಿಂದ ನಾನು ಕೃತಾರ್ಥಳಾದೆನು. ಇನ್ನು ಮೇಲೆ ಎನ್ನ ಪ್ರಾಣಗಳನ್ನು ಬಿಡಲಾರೆನು ” ಎಂದು ಯೋಚಿಸಿ, ರಾಯನಂ ಕುರಿತು—“ ಎಲೈ ಮಹಾರಾಜೇಂದ್ರನೇ, ಪರಾಧೀನಳಾಗಿ ಯಾವುದೊಂದು ಕಾರ್ಯಕೆ ಯೋಗ್ಯಳಲ್ಲವಾದುರಿಂದ ಇಂಥ ಅವಸ್ಥೆಯು ಪ್ರಾಪ್ತವಾದುದು. ಇನ್ನುಮೇಲೆ ಎನ್ನ ಹಂಬಲದಿಂದ ಪ್ರಯೋಜನವಿಲ್ಲ ” ಎಂದು ರೋದನವಂ ಗೆಯ್ಯುತ್ತ, ಮರಳಿ ಲತಾಪಾಶವನ್ನು ಕತ್ತಿಗೆ ಹಾಕಿಕೊಳುವ ಪ್ರಯತ್ನವಂ ಗೆಯ್ಯಲು ; ರಾಯನು

ಚೆನ್ನಾಗಿ ನೋಡಿ—" ಎಲೈ ವಿದೂಷಕನೇ, ಎನ್ನ ಪ್ರಾಣಕಾಂತೆಯಾದ ಸಾಗರಿಕೆಯೇ ಇವಳು" ಎಂದು ಕತ್ತಿಗೆ ಒತ್ತಿಹಾಕುವ ಪಾಶವಂ ಕಿತ್ತು "ಎಲೈ ಪ್ರಾಣಕಾಂತೆಯೇ, ಈಗ ನೀನು ಮಾಡಿದ ಸಾಹಸಕಾರ್ಯದಿಂದ ಸಾಕುಸಾಕು. ಈ ಲತಾಪಾಶವಂ ತೆಗೆದು ಸ್ವಸ್ಥಾನವಂ ಬಿಟ್ಟು ಪೋಗುತ್ತಿರುವ ಪ್ರಾಣಗಳುಳ್ಳ ಎನ್ನ ಕಂಠದಲ್ಲಿ ಭುಜಗಳ ಪಾಶವನ್ನು ಸೇರಿಸುವಳಾಗು" ಎಂದು ಸಾಗರಿಕೆಯ ಕಂಠಾಲಿಂಗನವಂ ಗೆಯ್ದು, ಅವಳ ಸೋಂಕಿನಿಂದುಂಟಾದ ಸೌಖ್ಯವಂ ಪೊಂದಿ, "ಎಲೈ ವಿದೂಷಕನೇ, ಮೋಡವು ಮೂಡದೆ ಇದ್ದರೂ ಅಮೃತಧಾರೆಯಿಂದೊಡಗೂಡಿದ ಮಳೆಯಾದುದು" ಎಂದು ನುಡಿಯಲು; ವಿದೂಷಕನು—" ಎಲೈ ಸ್ವಾಮಿಯೇ, ವಾಸವದತ್ತಾದೇವಿಯೆಂಬ ಅಕಾಲವಾಯುವು ಈಗ ನಿನಗೆ ಉಂಟಾಗಿರುವ ಅಮೃತದ ಮಳೆಯನ್ನು ಇನ್ನೊಂದು ಕಡೆ ತೆಗೆದುಕೊಂಡು ಪೋಗದೆ ಇದ್ದಲ್ಲಿ ನೀನು ಪೇಳಿದ ವಾಕ್ಯವು ಯಥಾರ್ಥವಾಗುವುದು" ಎಂದು ನುಡಿಯುತ್ತಿರಲು;

ಅಷ್ಟರಲ್ಲೇ ವಾಸವದತ್ತಾದೇವಿಯು ಚಿತ್ರಶಾಲೆಯ ವರೆಗೂ ಪೋಗಿ, ತನ್ನ ಮನದಲ್ಲಿ ಪಶ್ಚಾತ್ತಾಪವು ತೋರಿ, ಕಾಂಚನಮಾಲೆಯಂ ಕುರಿತು—"ಎಲೆ ಬಾಲೆಯೇ, ಸ್ತ್ರೀಯರಿಗೆ ಪತಿಯೇ ಪರದೈವವಾಗಿರುವುದರಿಂದ ಈಗ ನಮ್ಮ ರಾಯನು ನಮಸ್ಕಾರವಂ ಗೆಯ್ದರೂ ಅದನ್ನು ಉಲ್ಲಂಘಿಸಿ ಬಂದುದು ಅತಿನಿಷ್ಠುರವಾದ ಕಾರ್ಯವಾದುದು. ಆದುದರಿಂದ ಈಗ ಮರಳಿ ಆ ರಾಜೇಂದ್ರನ ಸಮೀಪವಂ ಸೇರಿ, ಅವನ ಮನಕೆ ಅಧಿಕವಾದ ಸಂತೋಷವನ್ನುಂಟುಮಾಡುವ, ನಡೆ" ಎನಲು; ಕಾಂಚನಮಾಲೆಯು—" ಎಲೌ ದೇವಿಯೇ, ಇಂಥ ಉಚಿತವಾದ ಕಾರ್ಯವನ್ನುಂಟುಮಾಡುವುದರಲ್ಲಿ ನಿನ್ನಹೊರತು ಇನ್ನಾರು ಯೋಗ್ಯರಾಗುವರು ? ಆದುದರಿಂದ ಅಗತ್ಯವಾಗಿ ರಾಯನ ಸನ್ನಿಧಿಯಂ ಪೊಂದುವಳಾಗು" ಎಂದು ನುಡಿದು, ಮುಂದುಗಡೆಯಲ್ಲಿ ಮಾರ್ಗವಂ ತೋರಿಸುತ್ತ ಬರಲು;

ಇತ್ತಲು ಪ್ರತ್ಯುತ್ತರವಂ ನುಡಿಯದೆ ಆಲಿಂಗನಕೆ ಚೆನ್ನಾಗಿ ಮೆಯ್ಯನ್ನೀಯದೆ, ತೊಡೆಯ ಮೇಲೆ ಮೌನದಿಂ ಕುಳಿತಿರುವ ಸಾಗರಿಕೆಯಂ ಕುರಿತು—" ಎಲೆ ಮುಗ್ಧೆಯೇ, ನಿನ್ನಲ್ಲೇ ಪ್ರಾಣಗಳನ್ನಿರಿಸಿರುವ ಎನ್ನಂ ಏತಕ್ಕೆ ವ್ಯರ್ಥವಾದ ಮನೋರಥವುಳ್ಳವನನ್ನ ಮಾಡುತ್ತಿರುವೆ?" ಎಂದು ನುಡಿದ ರಾಯನ ವಾಕ್ಯವಂ ಕೇಳಿದ ಕಾಂಚನಮಾಲೆಯು "ಎಲೌ ದೇವಿಯೇ, ಇದೋ ! ಈ ಸ್ಥಳದಲ್ಲಿ ನಮ್ಮ ರಾಜೇಂದ್ರನು ಸಲ್ಲಾಪವಂ ಗೆಯ್ಯುವನಂತೆ ತೋರುವುದು. ನಿನ್ನ ಚಿತ್ತವೃತ್ತಿಯನ್ನು ಸಂತೋಷಪಡಿಸಲೋಸುಗ ಇದಿರುಗೊಂಡು ಬರುವನೆಂದು ಊಹಿಸುತ್ತಲಿರುವೆನು" ಎಂದು ನುಡಿಯಲು; ದೇವಿಯು ಅಧಿಕಸಂತೋಷದಿಂದ ಯುಕ್ತಳಾಗಿ—" ಎಲೆ ಕಾಂಚನಮಾಲೆಯೇ, ಮಾತನಾಡದೆ ಮೌನದಿಂ ಹಿಂದುಗಡೆಯಲ್ಲೇ ಪೋಗಿ ನಮ್ಮ ರಾಯನ ಕಂಠಾಲಿಂಗನವಂ ಗೆಯ್ಯುವೆನು" ಎಂದು ನುಡಿಯುತ್ತ ಬರಲು;

ಅಷ್ಟರಲ್ಲೀ ವಿದೂಷಕನು—“ಎಲೆ ಸಾಗರಿಕೆಯೇ, ಲಜ್ಜೆಯಂ ಬಿಟ್ಟು ಧೈರ್ಯವಂ ಪಡೆದು ರಾಯನ ಸಂಗಡ ಸರಸಸಲ್ಲಾಪವಂ ಗೆಯ್ಯುತ್ತ ಮನಕ್ಕೆ ಸುಖವಂ ಪುಟ್ಟಿಸುವಳಾಗು” ಎಂದು ನುಡಿಯಲು;

ದೇವಿಯು ವಿದೂಷಕನಾಡಿದ ವಾಕ್ಯವಂ ಕೇಳಿ, ಬಲವಾಗಿ ಕ್ರೋಧವಂ ತಾಳಿ—“ಎಲೆ ಕಾಂಚನಮಾಲೆಯೇ, ವಿದೂಷಕನು ಸಾಗರಿಕೆಯ ಪೆಸರಂ ಪೇಳುತ್ತಿರುವನು. ಆದುದರಿಂದ ಅವಳು ಮೊದಲು ನೀನು ಪೇಳಿದಂತೆ ಇಲ್ಲಿಗೆ ಬಂದಿದ್ದರೂ ಬಂದಿರಬಹುದು. ಆದುದರಿಂದ ಈ ಬಳ್ಳಿಗಳ ಪೊದರನ್ನು ಮರೆಗೊಂಡು ಇವರಾಡುವ ಮಾತುಗಳನ್ನು ಕೇಳುವ” ಎಂದು, ಅದೇ ರೀತಿಯಿಂದ ನಿಂತಿರಲು;

ರಾಯನು ಸಾಗರಿಕೆಯಂ ಕುರಿತು—“ಎಲೆ ಮನೋಹರಾಂಗಿಯಾಗಿ, ಕಿವಿಗಳಂ ದಬ್ಬುತ್ತಿರುವ ಲೋಚನಂಗಳಿಂ ಕೂಡಿ, ಚಂದ್ರನಂತೆ ಸುಂದರವಾಗಿರುವ ಮುಖದಿಂ ಪೊಳೆಯುತ್ತ, ಬಣ್ಣವೇರಿ ಒರುವ ಹವಳದಂತೆ ಹದವಾದ ತುಟಿಯುಳ್ಳ, ಸಾಗರಿಕೆಯೇ! ಕೆಟ್ಟ ಮನ್ಮಥನ ತಾಪದಿಂ ಬಾಡಿರುವ ಎನ್ನ ಕಾಯವನ್ನು ಸಂಪಗೆಯ ಹೂವಿನಂತೆ ಸೊಂಪುದೋರುವ ನಿನ್ನ ಅಂಗಗಳಿಂದ ಆಲಿಂಗನವಂ ಗೆಯ್ದು ಸಂತಾಪವಂ ಪರಿಹರಿಸಿ, ನೂತನವಾಗಿ ಅಮೃತಕ್ಕಿಂತಲೂ ರುಚಿಕರವಾಗಿರುವ ನಿನ್ನ ಮಾತುಗಳಿಂದ ಮನಕೆ ಸಂತೋಷವನ್ನೂ ಕಿವಿಗೆ ಹಿತವನ್ನೂ ಸಹ ಪುಟ್ಟಿಸಿ, ಅಮೃತವಂ ತುಂಬಿದ ಕಲಶಗಳಂತೆ ಕಾಂತಿಯಂ ಬೀರುವ ಬಟ್ಟಮೊಲೆಗಳಿಂದ ಗಟ್ಟಿಸಿ ಆನಂದವಂ ಪಡಿಸಿ, ವಿರಹಾಗ್ನಿಜ್ವಾಲೆಯಿಂದ ಬಾಯಾರಿರುವ ಎನಗೆ ನಿನ್ನ ಅಧರಾಮೃತವನ್ನಿತ್ತು ದಾಹಶಾಂತಿಯನ್ನು ಪೊಂದಿಸಬಾರದೇ? ಏಕೆ ಮೌನದಿಂದ ಲಜ್ಜೆಯಂ ತಾಳಿ ಕುಳಿತಿರುವೆ?” ಎಂದು ನುಡಿಯಲು; ಸಾಗರಿಕೆಯು –“ಎಲೈ ರಾಜೇಂದ್ರನೇ, ಏತಕೆ ಎನ್ನಲ್ಲಿ ಅಪದ್ಧವಾದ ವಾಕ್ಯವನ್ನೇ ಪೇಳುತ್ತಿರುವೆ. ನೀನು ದಕ್ಷಿಣನಾಯಕನೆಂಬುದು ಅನೃತವಾಗಿ ತೋರುವುದು. ಪ್ರಾಣಗಳಿಗಿಂತಲೂ ಪ್ರಿಯಕರಳಾದ ವಾಸವದತ್ತಾದೇವಿಯಲ್ಲಿ ವ್ಯರ್ಥವಾಗಿ ಅಪರಾಧವುಳ್ಳವನಾಗುವುದು ನ್ಯಾಯವಲ್ಲವು” ಎಂದು ನುಡಿಯಲು; ರಾಯನು—“ಎಲೆ ಕಾಂತೆಯೇ, ನೀನು ಅಪದ್ಧಗಳಂ ಪೇಳುವಳಾಗುತ್ತಿರುವೆ. ಏಕೆಂದರೆ—ವಾಸವದತ್ತಾದೇವಿಯು ಮಹಾಕೋಪವುಳ್ಳವಳಾದುದರಿಂದ ಅವಳ ಮನಸ್ಸಿನ ಸಂತೋಷಕೋಸುಗವಾಗಿ ಮೃದುವಾದ ವಚಸ್ಸುಗಳನ್ನಾಡುತ್ತ ಸಮಯದಲ್ಲಿ ನಮಸ್ಕಾರಾದ್ಯುಪಚಾರಂಗಳಂ ಗೆಯ್ಯುತ್ತಲಿರುವೆನಲ್ಲದೆ ಯಥಾರ್ಥವಾದ ವಿಶ್ವಾಸದಿಂದ ಅವಳೊಡನೆ ಕೂಡಿ ಇರತಕ್ಕವನಲ್ಲ. ಪ್ರಾಣಕಿಂತಲೂ ಪ್ರೀತಿಕರವಾದ ಯಾವ ಅನುರಾಗವಿರುವುದೋ ಅಂಥ ಅನುರಾಗವನ್ನು ನಿನ್ನಲ್ಲಿ ಇರಿಸಿರುವೆನಲ್ಲದೆ ವಾಸವದತ್ತೆಯಲ್ಲಿ ಮಾಡತಕ್ಕ ಉಪಚಾರಗಳೆಲ್ಲಾ ಕೃತ್ರಿಮವೆಂದು ತಿಳಿಯುವಳಾಗು” ಎನಲು; ವಿದೂಷಕನು—“ಎಲೆ ಸಾಗರಿಕೆಯೇ, ಕೇಳು. ರೂಪಿನಲ್ಲೂ ಗುಣದಲ್ಲೂ ಸವಿಯಾದ ಮಾತುಗಳಲ್ಲಿಯೂ ಆ ವಾಸವ

ದತ್ತಾದೇವಿಯು ಎಷ್ಟು ಸುತಪಸ್ಸನ್ನು ಗೆಯ್ದು ತಲೆಕೆಳಕಾದರೂ ನಿನ್ನ ಸಮಾನಕ್ಕೆ ಬರಲಾರಳೆಂಬುವುದು ನಿಶ್ಚಯವಾಗಿಯೇ ಇದೆ” ಎಂದು ನುಡಿಯಲು;

ದೇವಿಯು ಇವರಿಬ್ಬರಾಡಿದ ವಾಕ್ಯವಂ ಕೇಳಿ ತರಗೆಲೆಯುಂ ಪೊಂದಿದ ಅಗ್ನಿಯಂತೆ ಪ್ರಜ್ವಲಿಸುವ ಕೋಪದಿಂದೊಡಗೂಡಿ ರಾಯನ ಮುಂದುಗಡೆ ಬಂದುಸೇರಿ, “ಎಲೈ ರಾಜೇಂದ್ರನೇ, ನೀನೂ ವಿದೂಷಕನೂ ಸಹ ಪೇಳಿದ ಮಾತು ಯುಕ್ತವೇ ಸರಿ. ನಿಮ್ಮ ಚಿತ್ತದಲ್ಲಿ ಈರೀತಿಯಾದ ಕಪಟವಾದ ಅನುರಾಗವಿದೆ ಎಂದು ಎಷ್ಟು ಮಾತ್ರವೂ ನಾನು ತಿಳಿದವಳಲ್ಲ. ಇನ್ನು ಬಹುಮಾತುಗಳಾಡಿ ಫಲವಿಲ್ಲ. ಎಲಾ ಬ್ರಾಹ್ಮಣರಲ್ಲಿ ನೀಚನಾದ ವಿದೂಷಕನೇ, ನಾನು ಗುಣವಂತೆಯುಲ್ಲವೆಂತಲೂ ಸುರೂಪಿಯುಲ್ಲವೆಂತಲೂ ಸಮಸ್ತರೂ ಬಲ್ಲರು. ಉತ್ತಮಕುಲದಲ್ಲಿ ಪುಟ್ಟಿ ಸ್ತ್ರೀಮಧ್ಯಸ್ಥವೆಂಬ ನೀಚಕಾರ್ಯದಲ್ಲಿ ಆಸಕ್ತನಾಗಿರುವ ನಿನ್ನನ್ನು ಸುಡಬೇಕು” ಎಂದು ಕೆಂಡದಂತೆ ಕಣ್ಣುಗಳಂ ಕೆಂಪುಮಾಡಿರಲು; ರಾಯನು ಲೋಕದಲ್ಲಿ ಶ್ರೇಯಸ್ಸುಗಳೆಂಬುವು ಬಹು ವಿಘ್ನವುಳ್ಳವೆಂದು ಜನರು ಪೇಳುವ ವಾಕ್ಯವು ಯಥಾರ್ಥವೇ ಸರಿ. ಈ ಸಮಯದಲ್ಲಿ ಪ್ರತ್ಯುತ್ತರವನ್ನು ಪೇಳದೆ ಸುಮ್ಮನಿರುವುದು ಯುಕ್ತವಲ್ಲವೆಂದು ಯೋಚಿಸಿ, “ಎಲೌ ದೇವಿಯೇ, ಏಕೆ ಎನ್ನನ್ನು ನಿಂದಿಸುತ್ತಿರುವೆ? ಇವಳು ನಿನ್ನ ವೇಷವನ್ನು ಧರಿಸಿ ಇರುವುದರಿಂದ ಯಥಾರ್ಥವಾಗಿ ನೀನೇ ಬಂದಿರುವೆ ಎಂದು ಭ್ರಾಂತಿಯಂ ಪೊಂದಿರುವೆನು. ಇದೊಂದು ಅಪರಾಧವನ್ನು ಕ್ಷಮಿಸುವಳಾಗು” ಎಂದು ಮರಳಿ ನಮಸ್ಕಾರವಂ ಗೆಯ್ಯಲು; ದೇವಿಯು— “ಎಲೈ ರಾಜೇಂದ್ರನೇ, ಏತಕ್ಕೋಸುಗವಾಗಿ ಎನ್ನಲ್ಲಿ ಪಾಪವನ್ನು ಪೊಂದಿಸುತ್ತಿರುವೆ? ಈಗಲೂ ಎನ್ನಲ್ಲೂ ಇನ್ನು ದುರ್ನಡತೆಯುಂ ನಡೆಯುತಕ್ಕವನಲ್ಲವಾದುದರಿಂದ ನಿನ್ನ ವಾಕ್ಯವು ಎನಗೆ ಪ್ರಮಾಣವಲ್ಲವು” ಎಂದು ನುಡಿಯಲು; ವಿದೂಷಕನು— “ವೇಷಸಾಮ್ಯದಿಂದ ವಂಚಿತನಾಗಿ ನಾನು ರಾಯನನ್ನು ಇಲ್ಲಿಗೆ ಕರೆದುಕೊಂಡು ಬಂದೆನು. ಈ ಲತಾಪಾಶದಿಂದ ಪ್ರಾಣವಂ ಬಿಡುತ್ತಿರುವ ನಿನ್ನನ್ನು ಕಂಡು ಯಾರಾದರೂ ಸುಮ್ಮನಿರುವುದಕ್ಕೆ ಯೋಗ್ಯರಾಗುವರೇ ಪೇಳು. ಇದೇ ನೋಡು, ಇದೇ ಲತಾ ಪಾಶವು” ಎಂದು ತೋರಿಸಲು; ದೇವಿಯು— “ಎಲೆ ಕಾಂಚನಮಾಲೆಯೇ ಈ ದುಷ್ಟ ಬ್ರಾಹ್ಮಣನ ಮುಖವನ್ನು ನೋಡುತ್ತ ಏತಕೆ ಸುಮ್ಮನಿರುವೆ? ಅವನ ಕೈಯಲ್ಲಿರುವ ಲತಾ ಪಾಶದಿಂದ ಅವನ ತೋಳುಗಳನ್ನು ಬಿಗಿದು ತೆಗೆದುಕೊಂಡು ಪೋಗುವುದಲ್ಲದೆ ನೀಚಳಾದ ಈ ಬಾಲೆಯನ್ನೂ ಅದೇರೀತಿಯಲ್ಲಿ ಮಾಡುವಳಾಗು” ಎಂದು ಅಜ್ಞೆಯನ್ನೀಯಲು; ಕಾಂಚನಮಾಲೆಯು— “ಆಜ್ಞೆ ಹೇಗೆ ಆಗುತ್ತಲಿದೆಯೋ ಆ ರೀತಿಯಿಂದ ನಡೆದುಕೊಳ್ಳುವೆನು” ಎಂದು ಆ ಲತಾ ಪಾಶದಿಂದ ಅವನ ತೋಳುಗಳಂ ಬಿಗಿದು, “ಎಲೈ ನೀಚೋತ್ತಮನಾದ ವಿದೂಷಕನೇ, ನೀನು ಮಾಡುವ ದುಷ್ಟಕಾರ್ಯಕ್ಕೆ ತಕ್ಕ ಫಲವಂ ಅನುಭವಿಸುವನಾಗು. ಎಲೈ ಸಾಗರಿಕೆಯೇ, ನೀನು ದೇವಿಯ

ಆಜ್ಞೆಯಾದಂತೆ ಪಕ್ಷಿಶಾಲೆಯಲ್ಲಿರದೆ ಕೊಬ್ಬಿ ಬಂದು ಹುಲಿಯಾಗುವೆನೆಂದು ನರಿಯು ಬರೆಗಳಂ ಹಾಕಿಕೊಂಡಂತೆ ದೇವಿಯಾಗುವೆನೆಂದು ಧರಿಸಿದ ವೇಷಕೆ ತಕ್ಕ ಪ್ರಾಯಶ್ಚಿತ್ತವಾದುದು" ಎಂದು ಬತ್ತಿನಲ್ಲಿ ಮಲ್ಲಿಗೆಯ ಬಳ್ಳಿಯನ್ನು ಕಿತ್ತು, ಸಂಪಗೆಯ ದಂಡೆಗಳಂತೆ ಸೊಂಪುದೋರುತ್ತ ಬಾಹುಪುರಿಗೆ ಯೋಗ್ಯವಾದ ಬಾಹುಗಳನ್ನು ಬಿಗಿಯಾಗಿ ಬಿಗಿದು, "ಮುಂದೆ ನಡೆ" ಎಂದು ದಬ್ಬುತ್ತ ಇರಲು; ಸಾಗರಿಕೆಯು ಮುತ್ತುಗಳಂತೆ ಕಣ್ಣೀರುಗಳಂ ಬಿಡುತ್ತ, ಬೇಡನ ಕೈಗೆ ಸಿಕ್ಕಿದ ಹುಲ್ಲೆಯ ಮರಿಯಂತೆ ತಲ್ಲಣಿಸುತ್ತ, ಬೆಕ್ಕಿನ ಕೈಗೆ ಸಿಕ್ಕಿದ ಗಿಳಿಯಂತೆ ಕೊರಗುತ್ತ, "ಎಲೆ ಕೆಟ್ಟ ದೈವವೆ! ನಾನು ಮಹತ್ತರವಾದ ಸಂಪತ್ತನ್ನು ಪಡೆಯದೆ ಮರಣವನ್ನು ಪೊಂದುವೆನೆಂದು ಬಂದರೂ ಈ ದುರ್ದಶೆಯನ್ನುಂಟುಮಾಡಿದೆಯಾ?" ಎಂದು ನಿಟ್ಟುಸಿರುಗಳಂ ಬಿಡುತ್ತಿರಲು; ವಿದೂಷಕನು—"ಅಯ್ಯಾ ರಾಜೇಂದ್ರನೇ, ಬಹುದಿನದಿಂದಲೂ ನಿನ್ನ ಪಾದಾರವಿಂದಗಳನ್ನು ಸಂಜಿದ ಎನ್ನನ್ನು ಮರೆಯದಿರು. ನಾನಾದರೋ ಈ ದೇವಿಯು ಕಟ್ಟಿಸಿರುವ ಕಟ್ಟಿಸಿಂದಲೆ ಪ್ರಾಣಗಳಂ ಬಿಟ್ಟು ಪರಲೋಕವಂ ಪೊಂದುವೆನು." ಎಂದು ಮುಖಕೆ ವಸ್ತ್ರವಂ ಮುಚ್ಚಿ ರೋದನವಂ ಗೆಯ್ಯುತ್ತ ಕಾಂಚನಮಾಲೆಯೊಡನೆ ಪೋಗಲು; ದೇವಿಯು ರಾಯನ ಮುಖವಂ ನೋಡದೆ ವ್ಯಸನದಿಂ ಪೋಗಲು ;

ರಾಯನು ಬಾಡಿದ ಮನಸ್ಸುಳ್ಳವನಾಗಿ, "ಈಗ ಬಹಳವಾದ ಕಷ್ಟವು ಕೈಗೂಡಿತು. ಈಗ ನಾನು ರೋಷದಿಂದ ಭಯಂಕರವಾದ ದೇವಿಯ ಮುಖವಂ ನೋಡಿ ವ್ಯಸನವಂ ಪೊಂದಲೆ? ದೇವಿಯು ಬೆದರಿಸುವುದರಿಂದ ದಿಕ್ಕುದಿಕ್ಕುಗಳಿಗೆ ಬಾಯಿಬಿಡುತ್ತ ದೀನಳಾದ ಸಾಗರಿಕೆಯಂ ಸ್ಮರಿಸಿ ರೋದನವಂ ಗೆಯ್ಯಲೆ? ಬಲವಾದ ಬಂಧನಕೆ ಒಳಗಾಗಿ ಕಳವಳಂಗೊಳ್ಳುತ್ತ ಪೋದ ವಿದೂಷಕನಂ ನೆನೆನೆನೆದು ವ್ಯಸನವಂ ಪೊಂದಲೇ? ಈಗ ಯಾರನ್ನು ಕುರಿತು ವ್ಯಸನವಂ ಪೊಂದಲಿ? ಯಾರು ಎನಗೆ ನಂಬುಗೆಯಂ ಪೇಳುವರು? ಸರ್ವಪ್ರಕಾರದಲ್ಲಿಯೂ ವ್ಯಸನವಂ ಮುಚ್ಚಿಕೊಂಡು ಒಂದು ಕ್ಷಣವಾದರೂ ಸುಖವಂ ಪೊಂದುವುದಕೆ ಇಲ್ಲವಾದುದು. ಈಗ ಇಲ್ಲಿ ನಾನೊಬ್ಬನೇ ಇದ್ದು ಪ್ರಯೋಜನವೇನು? ಎನ್ನ ಶಯನ ಗೃಹವಂ ಪೊಂದುವೆನು" ಎಂದು ಅಲ್ಲಿಂದ ಪೊರಮಟ್ಟು ಬರುತ್ತ, "ಈಗ ವಸಂತಕ ಸುಸಂಗತೆ ಸಾಗರಿಕೆ ಈ ಮೂರು ಜನಕ್ಕೂ ಬಲವತ್ತರವಾದ ಶಿಕ್ಷೆಯನ್ನುಂಟುಮಾಡಿರುವುದರಿಂದ ಅವರು ಪ್ರಾಣಗಳಂ ಬಿಡುವುದರಲ್ಲಿ ಸಂದೇಹವೇ ತೋರಲಾರದು. ಈಗ ದೇವಿಯಂ ನಿಗ್ರಹಿಸಿ ಎನ್ನ ಪ್ರಭುತ್ವಶಕ್ತಿಯಿಂದ ಮೂರು ಜನಗಳನ್ನು ಬಿಡಿಸಿ ಸೌಖ್ಯವನ್ನುಂಟುಮಾಡುವೆನೆಂದರೆ ವಾಸವದತ್ತೆಯು ಮಹಾಕೋಪಶಾಲಿಯಾಗಿರುವುದರಿಂದ ತನ್ನ ಪ್ರಾಣಗಳಂ ಬಿಟ್ಟು ಲೋಕದಲ್ಲಿ ಎನಗೆ ಬಲವಾದ ಅಪಕೀರ್ತಿಯನ್ನುಂಟುಮಾಡದೆ ಬಿಡಳು. ಆದುದರಿಂದ ದೇವಿಯ ಸಮೀಪವಂ ಸೇರಿ, ಉಪಚಾರೋಕ್ತಿಗಳಂ ಪೇಳಿ,

ಅವರುಗಳಂ ಬಿಡಿಸುವೆನು " ಎಂದು ತನ್ನ ಮನದಲ್ಲಿ ನಿಶ್ಚಯಿಸಿ ಬರುತ್ತಿರಲು ;

ವಾಸವದತ್ತೆಯು ಮುತ್ತಿನ ಹಜಾರಕ್ಕೆ ಬಂದು ಕುಳಿತು, ಕಾಂಚನಮಾಲೆಯಂ ಕರೆದು—" ಎಲೆ ಬಾಲೆಯೇ, ಸುಸಂಗತೆಯೂ ನಾಗರಿಕೆಯೂ ವಿದೂಷಕನೂ ಈ ಮೂರು ಜನಗಳೂ ಮಾಡಿದ ಕೃತ್ರಿಮಸಂಧಾನವನ್ನು ಸ್ಮರಿಸಿ ಎನ್ನ ಮನದಲ್ಲಿ ಬಲವತ್ತರವಾದ ಆಶ್ಚರ್ಯವು ತೋರುತ್ತಿರುವುದು. ಈ ಮೂರು ಜನಕ್ಕೂ ಏನು ಶಿಕ್ಷೆಯಂಗೆಯ್ಯಬೇಕು? ಎಲ್ಲಿ ರಾಯನು ಕಾಣದಂತೆ ಇರಿಸತಕ್ಕುದು? ಈಗ ಅವರನ್ನು ಎಲ್ಲಿ ಇರಿಸಿದ್ದೀಯೆ?" ಎಂದು ನುಡಿಯಲು ; ಆ ಕಾಂಚನಮಾಲೆಯು ಇದೇ ಸಮಯದಲ್ಲಿ ನಾಗರಿಕೆಗೆ ತಕ್ಕ ಶಿಕ್ಷೆಯನ್ನುಂಟುಮಾಡಿ ಎಂದೆಂದಿಗೂ ತಲೆಯೆನೆತ್ತದಂತೆ ಮಾಡಿಸುವೆನೆಂದು ಮನದಲ್ಲಿ ನಿಶ್ಚಯಿಸಿ ದೇವಿಯಂ ಕುರಿತು—" ಎಲೆ, ತಾಯೇ, ವಸಂತಕನನ್ನು ಶಕುಂತಶಾಲೆಯ ಬಾಗಿಲಲ್ಲಿ, ಸುಸಂಗತೆಯನ್ನು ಮುತ್ತಿನ ಹಜಾರದ ಹೊಗಸಾಲೆಯಲ್ಲಿ, ನಾಗರಿಕೆಯನ್ನು ಹವಳದ ಹಜಾರದ ಜಗಲಿಯಲ್ಲಿ ಬೇರೆ ಬೇರೆ ಒಬ್ಬರೊಬ್ಬರು ಮಾತನಾಡದಂತೆ ಇರಿಸಿರುವೆನು. ಆದರೆ ಬೇಲದ ಬೀಜವಂ ಬಿತ್ತಿ ಕಾಲಿಗೆ ಮುಳ್ಳು ಮಾಡಿಕೊಳ್ಳುವುದು ಯುಕ್ತವಲ್ಲವೆಂತಲೂ, ಎಂದಿದ್ದರೂ ನಾಗರಿಕೆಯು ಪೂಜ್ಯಳಾದ ನಿನಗೆ ಪ್ರತಿಕಕ್ಷಿಯಾಗಿ ನಿಲ್ಲದೆ ಬಿಡಳು, ತನಗೆ ಹಾನಿಯನ್ನುಂಟುಮಾಡುವ ಪದಾರ್ಥವನ್ನು ಆಕ್ಷಣದಲ್ಲೇ ಬಿಟ್ಟು ಕಳೆಯಬೇಕೆಂತಲೂ, ಇನ್ನೂ, ನಾನಾಪ್ರಕಾರವಾದ ಮಾತುಗಳನ್ನು ವಿಜ್ಞಾಪನೆಯಂ ಗೆಯ್ದಾಗ್ಯೂ ನನ್ನ ಬಿನ್ನಪವು ಆಗ ಚಿತ್ತಕೆ ಹಿತವಾಗಿ ತೋರಲಿಲ್ಲ. ಈಗಲಾದರೂ ಸೇವಕಳಾದ ನಾನು ಅರಿಕೆಗೆಯ್ಯುವ ವಾಕ್ಯವನ್ನು ವಿಹಿತವೆಂದು ಚಿತ್ತಕೆ ತರುವುದಾದಲ್ಲಿ ಬಿನ್ನೈಸುವೆನು " ಎಂದು ನುಡಿಯಲು ; ದೇವಿಯು —" ಎಲೆ ಕಾಂತೆಯೇ, ನೀನು ಪೇಳಿದ ವಾಕ್ಯವೆಲ್ಲವು ಈಗ ನಿದರ್ಶನಕ್ಕೆ ಬಂದುದು. ಯುಕ್ತಿಯಿಂದ ಯುಕ್ತವಾಗಿ ವಿಹಿತವಾದ ವಾಕ್ಯವನ್ನು ಬಾಲರು ಪೇಳಿದರೂ ಗಿಳಿಗಳು ಪೇಳಿದರೂ ಅಗತ್ಯವಾಗಿ ಗ್ರಹಿಸಬೇಕೆಂದು ಲೋಕದಲ್ಲಿ ಪ್ರಸಿದ್ಧಿ ಇರುವುದರಿಂದ, ನೀನು ಎನಗೆ ಹಿತಕರಳಾದ ಸೇವಕಳಾದುದರಿಂದ ಹೇಗೆ ಬಿನ್ನೈಸುತ್ತಿರುವಿಯೋ ಆ ಮೇರೆ ಕಾರ್ಯವನ್ನು ನಡೆಯಿಸುವೆನು ', ಎಂದು ಅಪ್ಪಣೆಯನ್ನೀಯಲು ; ಕಾಂಚನಮಾಲೆಯು ನಾಗರಿಕೆಯಲ್ಲಿ ಯಾವಾಗಲೂ ಅಸೂಯೆಯುಳ್ಳವಳಾದುದರಿಂದ ಮೊದಲು ನಾಗರಿಕೆಗೆ ಬಲವಾಗಿ ಬಂಧನವನ್ನುಂಟುಮಾಡಿಸಿ, ಈ ಅಂತಃಪುರದಿಂದ ಹೊರಡಿಸುವ ರೀತಿಯಂ ಮಾಡಬೇಕೆಂದು ಯೋಚಿಸಿ, " ಎಲೌ ತಾಯೇ, ಕೇಳು. ಈ ನಾಗರಿಕೆಯನ್ನು ಯಾವ ವರೆಗೆ ಅಂತಃಪುರದಲ್ಲಿ ಇರಿಸಿಕೊಂಡಿರುವೆಯೋ ಅವರೆಗೂ ನಿನಗೂ ವ್ಯಸನವು ತಪ್ಪದು. ನಮ್ಮಲ್ಲಿರುವ ಸ್ತ್ರೀಯರುಗಳು ವಂಚನೆಗೆ ಅಭಿಮಾನದೇವತೆಗಳಂತೆ ಇರುವರು. ಈಗ ಸುಸಂಗತೆಯನ್ನು ಶಿಕ್ಷಿಸಿದಾಗ್ಯೂ ಇನ್ನಾವಳಾದರೂ ನಾಗರಿಕೆಗೆ ಒಳಗಾಗಿ ರಾಯನಲ್ಲಿ ಮಧ್ಯಸ್ತವನ್ನು ನಡೆಸದೆ ಬಿಡಳು. ಈಗ ಶಿಕ್ಷಿಸಿ ಹೊರಕ್ಕೆ ಕಳುಹಿಸಿ

ದಲ್ಲಿ ರಾಯನು ಕರೆಯಿಸಿ ಒಂದು ಸ್ಥಳದಲ್ಲಿ ನಿನಗಿಂತಲೂ ಹೆಚ್ಚಾದ ಸಂಪತ್ತಿನಲ್ಲಿ ಇರಿಸುವುದರಲ್ಲಿ ಸಂದೇಹವೇ ತೋರುವುದಿಲ್ಲ. ಆದುದರಿಂದ ಒಂದು ಉಪಾಯವು ತೋರುವುದು. ಏನೆಂದರೆ—ಸಾಗರಿಕೆಯು ಪಾದಗಳಿಗೆ ಬಲವಾಗಿ ಸಂಕಲೆಗಳನ್ನು ತೊಡಿಸಿ ಎಂದೆಂದಿಗೂ ಬಿಡದಂತೆ ನಿಮ್ಮ ತಂದೆಯಾದ ಪ್ರದ್ಯೋತರಾಯನಿಗೆ ವಿಜ್ಞಾಪನಾಪತ್ರಿಕೆಯಂ ಬರೆದು ಇವಳನ್ನು ನಿನಗೆ ತೌರುಮನೆಯಾದ ಉಜ್ಜಯಿನೀಪಟ್ಟಣಕೆ ಕಳುಹಿಸಿಕೊಟ್ಟಲ್ಲಿ ನಿನಗೆ ಸಂತೋಷವೂ ದೊರಕುವುದಲ್ಲದೆ ಮುಂದೆ ಎಂದಿಗೂ ಇಂಥ ಸವತಿಯು ಮತ್ಸರವೂ ದೊರಕಲಾರದು. ಈಗಲಾದರೂ ಎನ ವಾಕ್ಯವನ್ನು ಹಿತವನ್ನಾಗಿ ತಿಳಿದು ಈ ಕಾರ್ಯವಂ ಜಾಗ್ರತೆಯಾಗಿ ನಡೆಸುವುದು" ಎಂದು ವಿಜ್ಞಾಪಿಸಲು; ಒತ್ತಿನಲ್ಲಿ ಕೇಳುತಿದ್ದ ಊಳಿಗದ ಹೆಣ್ಣುಗಳೆಲ್ಲರೂ, "ಈ ಕಾಂಚನಮಾಲೆಯಂಥ ಕೇಡಿಗೆಯಾದ ಸ್ತ್ರೀಯು ಭೂಮಿಯಲ್ಲಿ ಪುಟ್ಟಲಾರಳು. ರತ್ನಮಯವಾದ ಕಾಲುಸರ ಪಾಡಗಕ್ಕೆ ಯೋಗ್ಯವಾದ ಆ ಸಾಗರಿಕೆಯು ಕಾಲುಗಳಿಗೆ ಸಂಕಲೆಯಂ ತೊಡಿಸುವಂತೆ ದುರ್ಬೋಧನೆಯಂ ಬೋಧಿಸುವುದಕ್ಕೆ ಇವಳಿಗೆ ಹೇಗೆ ಮನಸ್ಸು ಒಡಂಬಟ್ಟಿತೋ!" ಎಂದು ಮನದಲ್ಲಿ ಮರಗುತ್ತಿರಲು; ವಾಸವದತ್ತಾದೇವಿಯು ಕಾಂಚನಮಾಲೆಯ ವಾಕ್ಯವನ್ನು ಹಿತವಾಗಿ ತಿಳಿದು—"ಎಲೆ ಕಾಂಚನಮಾಲೆಯೇ, ನೀನು ಪೇಳುವ ವಾಕ್ಯವು ಯುಕ್ತವೇ ಸರಿ. ಶೀಘ್ರದಿಂದ ಸಂಕಲೆಯಂ ತರಿಸಿ ಸಾಗರಿಕೆಯನ್ನು ಕರೆಸು" ಎಂದು ನುಡಿಯಲಾಕ್ರೂರಳಾದ ಕಾಂಚನಮಾಲೆಯು ದೇವಿಯ ಅಪ್ಪಣೆಯಾಗುವುದಕ್ಕಿಂತಲೂ ಮುಂಚಿತವಾಗಿ ತರಿಸಿದ್ದ ಸಂಕಲೆಯನ್ನೂ ಸಾಗರಿಕೆಯನ್ನೂ ಸಹ ದೇವಿಯ ಮುಂದಕ್ಕೆ ತಂದು ತೋರಿಸಲು; ದೇವಿಯು ದಯಾಶಾಲಿನಿಯಾದುದರಿಂದಲೂ ಅವಳ ಮಾತುಗಳನ್ನು ಮೀರಲಾರದೆ ಇರುವುದರಿಂದಲೂ ಸಾಗರಿಕೆಗೆ ತಾನು ಎದುರಾಗಿ ಕುಳಿತು ಸಂಕಲೆಯಂ ಹಾಕಿಸುವುದಕ್ಕೆ ಮನಸ್ಸು ಬಾರದೆ, "ಎಲೆ ಕಾಂಚನಮಾಲೆಯೇ, ನಿನ್ನ ಮನಬಂದಂತೆ ಶಿಕ್ಷೆಯಂ ನಡೆಸುವಳಾಗು" ಎಂದು ಒತ್ತಿನಲ್ಲಿದ್ದ ನಿರಾಜಿಯ ತೆರೆಯ ಮರೆಯಂ ಸೇರಿ ಕುಳಿತು, "ಈ ಸಾಗರಿಕೆಯಲ್ಲಿ ಎನಗೆ ಏನೋ ಒಂದು ವಿಶ್ವಾಸವೇ ತೋರುವುದಲ್ಲದೆ ಇವಳು ಎಷ್ಟು ಅಪರಾಧವಂ ಗೆಯ್ದರೂ ಕೋಪವು ತೋರುವುದಿಲ್ಲ. ಇವಳನ್ನು ಅಂತಃಪುರದಿಂದ ಉಜ್ಜಯಿನೀಪಟ್ಟಣಕೆ ಕಳುಹಿಸುವುದು ನ್ಯಾಯವಲ್ಲ" ಎಂದು ತಿಳಿದು, ಮದನಿಕೆಯಂ ಕರೆದು—"ಎಲೆ ಬಾಲೆಯೇ, ಬಲವಾಗಿ ಬಂಧಿಸಿರುವ ಸಾಗರಿಕೆಯ ತೋಳುಗಳಂ ಬಿಚ್ಚಿಬಿಡುವುದು" ಎಂದು ಪೇಳಲು; ಅಷ್ಟರಲ್ಲೇ ಕಾಂಚನಮಾಲೆಯು ದೇವಿಯ ಆಜ್ಞೆಯಂ ಪೇಳಿದ ಮದನಿಕೆಯ ವಾಕ್ಯವಂ ಧಿಕ್ಕರಿಸಿ ಸಾಗರಿಕೆಯ ಕಾಲುಗಳನ್ನು ಎಳೆದು,—"ಎಲೆ ಬಾಲೆಯೇ, ತನಗೆ ಯೋಗ್ಯವಾದ ಭೋಜನ ಪದಾರ್ಥಗಳನ್ನೂ ಗಂಧ ಪುಷ್ಪ ತಾಂಬೂಲಾದಿಗಳನ್ನೂ ಸಹ ದೇವಿಯು ಕಳುಹಿಸುತ್ತಿರಲು ಅದನ್ನು ನಿತ್ಯದಲ್ಲೂ ಅನುಭವಿಸಿಕೊಂಡು ಸುಮ್ಮ

ನಿರಲಾರದೆ ಮನದಲ್ಲಿ ಕೊಬ್ಬು ಹೆಚ್ಚಿ ತೀಟೆಯಿಂದ ಮಾಡಿದ ಆಟಗಳಿಗೆ ತಕ್ಕ ಫಲವನ್ನನುಭವಿಸುವಳಾಗು" ಎಂದು ನುಡಿದು, ಸಂಕಲೆಯಂ ತೊಡಿಸಿ, ನಾಲ್ಕು ಜನ ಸಖಿಯರುಗಳನ್ನು ಕರೆದು, ಇವಳನ್ನು ಎತ್ತಿಕೊಂಡು ಹೋಗುವುದಕ್ಕೆ ಸಜ್ಜುಗೊಳಿಸಿ, ದೇವಿಗಾಜ್ಞಾಪಿಸುವುದಕ್ಕೆ ಹೋಗಲು;

ನಾಗರಿಕೆಯು ದೀನಳಾಗಿ ದಿಕ್ಕುಗೆಟ್ಟು ತನಗೆ ಉಂಟಾದ ವಿಪತ್ತನ್ನು ನೋಡಿ, ದೈವಸಂಕಲ್ಪವೇ ದೊಡ್ಡದಲ್ಲದೆ ಮನುಷ್ಯಯತ್ನವು ಎಷ್ಟುಮಾತ್ರಕ್ಕೂ ನಡೆಯಲಾರದು, ಇದಕ್ಕೆ ವ್ಯಸನವಂ ಹೊಂದಿ ಪ್ರಯೋಜನವಿಲ್ಲವೆಂದು ಮಹಾರಾಜಪುತ್ರಿಯಾದುದರಿಂದ ಧೈರ್ಯವಂ ಪಿಡಿದು, ಮುಖವಂ ಮುಚ್ಚಿ, ತಲೆಯಂ ತಗ್ಗಿಸಿ, ಕುಳಿತಿರಲು;

ಕಾಂಚನಮಾಲೆಯು—"ಎಲೌ ದೇವಿಯೇ, ನಿನ್ನ ಅಪ್ಪಣೆಯಾದಂತೆ ಉಜ್ಜಯಿನೀ ಪಟ್ಟಣಕ್ಕೆ ಕಳುಹಿಸುವೆನು" ಎನಲು; ದೇವಿಯು ಅವಳನ್ನು ಕಳುಹಿಸಿಕೊಡುವುದಕ್ಕೆ ಮನದಲ್ಲಿ ಸಮ್ಮತಿಯಂ ಪಡೆಯದೆ, "ಎಲೆ ಕಾಂಚನಮಾಲೆ, ಈ ನಾಗರಿಕೆಯಂ ಉಜ್ಜಯಿನೀ ಪಟ್ಟಣಕ್ಕೆ ಕಳುಹಿಸಿದಲ್ಲಿ ಇಂಥ ರೂಪು ಗುಣ ವಿದ್ಯೆ ಮೊದಲಾದ ಸದ್ಗುಣಶಾಲಿಯಾದ ಕಾಂತೆಯು ನಮ್ಮ ಅಂತಃಪುರದಲ್ಲಿರುವಳೇ ಪೇಳು. ಬ್ರಹ್ಮಸೃಷ್ಟಿಯಲ್ಲಿ ಇವಳಂಥ ಸ್ತ್ರೀಯು ಪುಟ್ಟುವುದು ದುರ್ಲಭವಾದುದರಿಂದ ಇವಳನ್ನು ಗೋಪ್ಯವಾದಂಥ ಸ್ಥಾನದಲ್ಲಿಟ್ಟು ಉಜ್ಜಯಿನೀ ಪಟ್ಟಣಕ್ಕೆ ಕಳುಹಿಸಿದಳೆಂಬ ವಾರ್ತೆಯನ್ನು ಪುಟ್ಟಿಸುತ್ತಿರುವುದು ಯುಕ್ತವಾಗಿ ತೋರುವುದು." ಎಂದು ಪೇಳಲಾ ಕಾಂಚನಮಾಲೆಯು,—"ಎಷ್ಟು ಅಪರಾಧವಂ ಗೆಯ್ದರೂ ನಾಗರಿಕೆಯಲ್ಲಿ ದೇವಿಗೆ ಇನ್ನೂ ಅಭಿಮಾನವು ಬಿಡಲಿಲ್ಲ. ಯಾವ ತೆರದಲ್ಲಾದರೂ ಉಜ್ಜಯಿನೀಪಟ್ಟಣಕ್ಕೆ ಸಾಗಿಸಬೇಕೆಂಬದಾಗಿ ಯೋಚಿಸಿ, "ಎಲೌ ದೇವಿಯೇ ಚಿನ್ನದ ಕತ್ತಿಯಿಂದು ಕತ್ತು ಕೊಯ್ದುಕೊಳ್ಳುವುದು ಯುಕ್ತವೇ? ಹುಲಿಯ ಮರಿಯು ಚೆಲುವಾಗಿ ಇದೆ ಎಂದು ಸಲಿಗೆಯಿಂದ ಸಾಕಬಹುದೇ? ಹಾವಿನ ಮರಿಯು ಹಸನಾಗಿ ಇದೆ ಎಂದು ಹಾಲಂ ಹೊಯ್ದು ವೃದ್ಧಿಯಂ ಹೊಂದಿಸಬಹುದೇ ಪೇಳು. ವಜ್ರದ ಸಲಾಕಿಯು ನೈಸವಾಗಿ ಇದೆ ಎಂದು ಕಣ್ಣುಗಳಂ ಚುಚ್ಚಿಕೊಳ್ಳಬಹುದೆ? ಶತ್ರುವಾದ ಈ ನಾಗರಿಕೆಯು ವಿದ್ಯಾಬುದ್ಧಿಯುಳ್ಳವಳೆಂದು ಇವಳಲ್ಲಿ ಗುಣಗಳಂ ಎಣಿಸುತ್ತ ರೂಪಿಗೆ ಮರುಳಾಗಿ, ಮಾಡಿದ ಅಪರಾಧಗಳಂ ಮರೆತು, ಮುಂದೆ ನಿನಗೆ ಹಾನಿ ಬರುವುದಂ ತಿಳಿದು, ರಾತ್ರಿಯಲ್ಲಿ ಕಂಡ ಬಾವಿಗೆ ಹಗಲು ಬುದ್ಧಿಪೂರ್ವಕವಾಗಿ ಬೀಳಲಿಚ್ಛೈಸುವ ನಿನಗೆ ಇನ್ನು ಹೆಚ್ಚಾಗಿ ವಿಜ್ಞಾಪನೆಯಂ ಗೆಯ್ಯುವುದಕ್ಕೆ ಶಕ್ತಳಾಗಲಾರೆನು. ಈಗ ಉಗುರಲ್ಲಿ ಹೋಗುವ ಶತ್ರುವಾದ ಪದಾರ್ಥವು ಮುಂದೆ ಕೊಡಲಿಯಿಂದ ಕಡಿದಾಗ್ಯೂ ಸಮೆಯದಂತಾಗಿ ಬಹಳವಾದ ವಿಪತ್ತನ್ನುಂಟುಮಾಡುವುದು. ಇದರಮೇಲೆ ನಿನ್ನ ಚಿತ್ತಕೆ ಬಂದಂತೆ ಮಾಡಬಹುದು. ಬಂಧುತ್ವವಂ ಬಳಸಿಯಾದರೂ ಅನೇಕ ದ್ರವ್ಯವಂ ವ್ರಯವಂ ಗೆಯ್ದಾದರೂ ಮಿತ್ರತ್ವವಂ ಸಂಪಾದಿಸಿ

ಯಾದರೂ ವಿಷಚೂರ್ಣ ಮೊದಲಾದ ಮಾರಿಗಳಾದ ಯಂತ್ರ ಮಂತ್ರ ತಂತ್ರ ಪ್ರಯೋಗಗಳಿಂದಾದರೂ ಶತ್ರುವಂ ಶೀಘ್ರವಾಗಿ ಜಯಿಸಬೇಕೆಂದು ಕಳಿಂಗ ಬೃಹಸ್ಪತಿ ಮುಂತಾದ ನೀತಿಯಂ ಬಲ್ಲವರು ಪೇಳುತ್ತಿರುವರು. ಹೀಗಿರುವಲ್ಲಿ ಶತ್ರುವೆಂದು ತಿಳಿದಃ ಮಾಡಿದ ವಿರೋಧಕಾರ್ಯಗಳಂ ಸಹ ಕಂಡು ಸಾಗರಿಕೆಯಲ್ಲಿ ದಯೆಯಂ ಗೆಯ್ಯುವುದಕ್ಕೆ ಇನ್ನೇನು ಸಂಬಂಧ ವಿರುವುದೋ ತಿಳಿಯದು " ಎಂದು ನುಡಿಯಲಾ ದೇವಿಯು—" ಇವಳಿಗೆ ಸಾಗರಿಕೆಯಲ್ಲಿ ಬಲವಾದ ದ್ವೇಷವಿರುವುದು. ಈಗ ಇವಳು ಪೇಳುವ ವಾಕ್ಯವು ನ್ಯಾಯವಾಗಿರುವುದು. ಆದರೂ ಅಂತಃಪುರವಂ ಬಿಡಿಸಿ ಕಳುಹಿಸುವುದು ನ್ಯಾಯವಲ್ಲ " ಎಂದು ಯೋಚಿಸಿ, ಕಾಂಚನಮಾಲೆಯಂ ಕರೆದು—" ಎಲೆ ಬಾಲೆಯೇ, ನೀನು ಪೇಳುವ ವಾಕ್ಯವು ಯುಕ್ತವಾಗಿರುವುದು; ಎನಗೆ ಹಿತಕರವಾಗಿಯೂ ಯುಕ್ತಿಯಾಗಿಯೂ ನೀತಿಮಾರ್ಗಕೆ ನ್ಯಾಯವಾಗಿಯೂ ಇರುವುದು. ಒಂದುವೇಳೆ ನಮ್ಮ ರಾಯನು ಇಲ್ಲಿಗೆ ಬಂದರೂ ಬರಬಹುದು. ಅದಕ್ಕೆ ಮುಂಚಿತವಾಗಿ ಯಾರೂ ಕಾಣದಂತೆ ಒಂದು ಸ್ಥಳದಲ್ಲಿ ಇವಳನ್ನು ಇರಿಸುವಳಾಗು. ನಾನು ನಮ್ಮ ತಂದೆಯ ಹೆಸರಿಗೆ ಒಂದು ಪತ್ರಿಕೆಯಂ ಬರೆದು ಕೊಡುವೆನು " ಎಂಬುವಷ್ಟರಲ್ಲೇ ಬಾಗಿಲ ಕಾವಲಗಾತಿಯಾದ ಮದನಿಕೆಯು ಓಡಿ ಬಂದು—" ಎಲೌ ತಾಯೇ, ರಾಯನು ಇಲ್ಲಿಗೆ ಬಿಜಯಂ ಗೆಯ್ಯುವನು " ಎಂದು ಬಿನ್ನೈಸಲು; ಕಾಂಚನಮಾಲೆಯು ತ್ವರಿತದಿಂದ ಆ ಸಾಗರಿಕೆಯನ್ನು ಸಾಗಿಸಿಕೊಂಡು ಪೋಗಲು; ವಿದೂಷಕನು ದೇವಿಯ ಸಮೀಪವಂ ಕುರಿತು ಬರುವ ರಾಯನಂ ಕಂಡು ಕುಳಿತಿದ್ದ ಸ್ಥಳವಂ ಬಿಟ್ಟೆದ್ದು, " ಅಯ್ಯಾ ರಾಯನೇ, ನಮ್ಮ ಪ್ರಾಣಗಳು ನಿನ್ನ ಕೈಯಲ್ಲಿರುವುವು " ಎಂದು ಕೂಗಲು; ರಾಯನು ಬಂಧನಕೆ ಸಿಕ್ಕಿದ ಕಪಿಯಂತೆ ಇರುವ ವಿದೂಷಕನಂ ಕಂಡು ಮನದಲ್ಲಿ ಮರುಗುತ್ತ ದೇವಿಯು ಇರುವ ಹಜಾರಕ್ಕೆ ಬಂದು ಸೇರಿ, ನಿದ್ರೆಯಂ ಗೆಯ್ಯುವಂತೆ ಕಪಟದಿಂ ಮಲಗಿರುವ ದೇವಿಯ ಸಮೀಪವಂ ಸೇರಿ ಕುಳಿತಿರಲು; ದೇವಿಯು ನಾಲ್ಕು ಗಳಿಗೆಯಮೇಲೆ ಕಣ್ದೆರೆದು ನೋಡಿ, ಆಗತಾನೆ ಕಂಡವಳಂತೆ ಏನೋ ಒಂದು ಪರಿಯಾಗಿ ಎದ್ದು ನಮಸ್ಕಾರವಂ ಗೆಯ್ದು, ಮುಖವಂ ತಿರುಗಿಸಿ, ತೆರೆಯ ಮರೆಯಂ ಸೇರಿ, ಊಳಿಗದ ಪೆಣ್ಣುಗಳಲ್ಲಿ ತಪ್ಪಿಲ್ಲದೆ ಇದ್ದರೂ ಕಡುನುಡಿಯಂ ನುಡಿದು, ಕೋಪಿಸಿಕೊಳ್ಳುತ್ತ, ಎಲೈ ದೇವಿಯೇ ಎಂದು ನುಡಿಯುವ ರಾಯನ ವಾಕ್ಯವಂ ಕಿವಿಗೊಳಿಸದೆ ಇರಲು; ರಾಯನು ಸಮೀಪವಂ ಸಾರಿ, ಅವಳ ಕೈಗಳಂ ಪಿಡಿದು—" ಎಲೆ ಕಾಂತೆಯೇ, ಇದೊಂದು ಬಾರಿ ಎನ್ನ ಅಪರಾಧವಂ ಕ್ಷಮಿಸಿ, ಎನಗೋಸುಗವಾಗಿ ಬಂಧನಕೆ ಒಳಗಾಗಿರುವ ಸಾಗರಿಕೆ ಸುಸಂಗತೆ ವಸಂತಕ ಈ ಮೂರು ಜನವನ್ನೂ ಬಿಟ್ಟು ಕಳುಹಿಸುವಳಾಗು " ಎಂದು ಬೇಡಿಕೊಂಡಾಗ್ಯೂ ಪ್ರತ್ಯುತ್ತರವಂ ಪೇಳದೆ, ಸ್ನಾನಕೆ ಪೊತ್ತುಪೋದುದೆಂದು ಅಲ್ಲಿ ನಿಲ್ಲದೆ ಎದ್ದು ಪೋಗಲು; ರಾಯನು ಭಗ್ನಮನೋರಥ

ವುಳ್ಳವನಾಗಿ, “ ನಾನು ಬಂದ ಮಾರ್ಗದಲ್ಲಿ ವಿದೂಷಕನಿರುವನು. ನಾನು ದೇವಿಯ ಸಮೀಪಕ್ಕೆ ಬಂದುದರಿಂದ ಎಲ್ಲರಿಗೂ ಕ್ಷೇಮವುಂಟಾಗುತ್ತದೆ ಎಂದು ತಿಳಿದಿರುವನು. ಈಗ ಅವನಿಗೆ ಮುಖಮಂ ಹೇಗೆ ತೋರಿಸಲಿ? ” ಎಂದು ಆ ಮಾರ್ಗವನ್ನೇ ಬಿಟ್ಟು ಶಯನಗೃಹವಂ ಕುರಿತು ಪೋಗಲು; ದೇವಿಯು ಸಖಿಯರುಗಳಿಂದ ರಾಯನು ಪೋದ ವೃತ್ತಾಂತವಂ ತಿಳಿದು ಎಂದಿನಂತೆ ತಾನಿದ್ದ ಹಜಾರಕ್ಕೆ ಬಂದು ಕುಳಿತಳು.

ಎಂಬಲ್ಲಿಗೆ
ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಪದಿನೈದನೆಯ ಗುಚ್ಛಂ ಸಂಪೂರ್ಣಮ್.

## ಹದಿನಾರನೆಯ ಗುಚ್ಛಂ

ಅನಂತರದಲ್ಲಿ ವಾಸವದತ್ತಾದೇವಿಯು—“ ಇನ್ನು ಬಲವತ್ತರವಾದ ಮೂರ್ಖತ್ವವನ್ನು ಮಾಡಿದಲ್ಲಿ ರಾಯನ ಚಿತ್ತದಲ್ಲಿ ಬಲವಾದ ವಿರೋಧವು ತೋರುತ್ತಲಿರುವುದು. ಆದುದರಿಂದ, ಇವರಿಗೆ ಮಾಡತಕ್ಕ ಶಿಕ್ಷೆಯನ್ನು ಮಾಡಿದ್ದಾಯಿತು. ಇನ್ನು ಮೇಲೆ ಸಾಗರಿಕೆ ಮುಂತಾದ ಮೂರು ಜನವನ್ನೂ ಬಿಟ್ಟು ಕಳುಹಿಸುವೆನು ” ಎಂದು ಮನದಲ್ಲಿ ನಿಶ್ಚಯಿಸುತ್ತಿರಲು ; ಕಾಂಚನಮಾಲೆಯು, ರಾಯನು ಬಂದು ಸಾಗರಿಕೆ ಮುಂತಾದ ಮೂರು ಜನವನ್ನೂ ಬಿಟ್ಟುಬಿಡಬೇಕೆಂದು ಹೇಳಿಕೊಂಡ ಸಂಗತಿಯನ್ನು ತಿಳಿದು, ಇಲ್ಲವಾದ ಕಾರ್ಯಗಳಂ ಕಲ್ಪಿಸಿಯಾದರೂ ಸಾಗರಿಕೆ ಮುಂತಾದವರ ಸಂಕಲೆಯುಂ ತೆಗೆಯಿಸಬಾರದೆಂದು ಯೋಚಿಸಿ, ದೇವಿಯ ಸಮೀಪವಂ ಪೊಂದಿ, “ ಎಲೆ ದೇವಿಯೇ, ನಿನ್ನ ಅಪ್ಪಣೆಯಮೇರೆ ಸಾಗರಿಕೆಯನ್ನು ಅಂತಃಪುರದಲ್ಲಿರುವ ಸೆರೆಯ ಮನೆಗೆ ಕರೆದುಕೊಂಡು ಪೋಗುತ್ತಿರಲು, ಅವಳು—‘ ಎಲೆ ನೀಚಳಾದ ಕಾಂಚನಮಾಲೆಯೇ, ನಾನು ಜೀವದಲ್ಲಿ ಉಳಿದುಕೊಂಡವಳಾದರೆ ನಿನಗೂ ವಾಸವದತ್ತೆಗೂ ಸಹ ಇದೇ ಶಿಕ್ಷೆಯನ್ನು ಮಾಡಿಸದೆ ಇದ್ದಲ್ಲಿ ಈ ನನ್ನ ಮೊಲೆಗಳು ಎಕ್ಕದ ಕಾಯಿಗಳಲ್ಲವೆ ’ ಎಂದು ಎದೆಯನ್ನು ತನ್ನ ಕೈಗಳಿಂದ ಬಡಿದು

ಆಡಿದ ಇನ್ನು ಕೆಲವು ಮಾತುಗಳು ಈ ನಿನ್ನ ಸನ್ನಿಧಿಯಲ್ಲಿ ವಿಜ್ಞಾಪಿಸುವುದಕ್ಕೆ ಯೋಗ್ಯಗಳಲ್ಲವೆಂದು ಸುಮ್ಮನಿರುವೆನು. ನಿನ್ನಲ್ಲಿ ಅವಳಿಗೆ ಉಂಟಾಗಿರುವ ವಿರೋಧವನ್ನು ನೋಡಿದಲ್ಲಿ ಯಾವಾಗ ಏನು ಮೋಸವಾದ ಕಾರ್ಯವಂ ಗೆಯ್ಯುವಳೋ ಎಂದು ಭಯವು ಎನ್ನ ಮನಕೆ ಬಲವಾಗಿ ತೋರುವುದು " ಎಂದು ಬಿನ್ನೈಸಲು; ದೊರೆಗಳಿಗೆ ಕಿವಿಗಳೇ ಕಣ್ಣುಗಳಾದುದರಿಂದ ದೇವಿಯು ಕಾಂಚನಮಾಲೆಯ ವಾಕ್ಯವನ್ನು ಯಥಾರ್ಥವಾಗಿ ತಿಳಿದು, " ಎಲೆ ಬಾಲೆಯೇ, ಅವಳನ್ನು ನಾಳೆ ನಾಡಿದ್ದರಲ್ಲೇ ಉಜ್ಜಯಿನೀ ಪಟ್ಟಣಕ್ಕೆ ಕಳುಹಿಸಿಕೊಡುವೆನು. ಈಗ ರಾಜೇಂದ್ರನು ಬಂದು ಹೇಳಿಕೊಂಡುದಕ್ಕೆ ವಿದೂಷಕನನ್ನೂ ಸುಸಂಗತೆಯನ್ನೂ ಬಂಧನದಿಂದ ಬಿಟ್ಟು ಕಳುಹಿಸುವುದು ಯುಕ್ತವಾಗಿ ಇದೆ ಎಂದು ವಿದೂಷಕನನ್ನು ಕರೆಯಿಸಿ ಅನೇಕ ಉಪಚಾರೋಕ್ತಿಗಳಂ ಪೇಳಿ ಬಿಟ್ಟು ಕಳುಹಿಸು. ಸುಸಂಗತೆಯನ್ನು ಕರೆಯಿಸಿ—ಎಲೆ ಬಾಲೆಯೇ, ನೀನು ಬಾಲ್ಯದಿಂದಲೂ ಎನ್ನಿಂದ ಪಾಲಿತಳಾದುದಕೆ ಎನಗೆ ಹಿತವಾದ ಕಾರ್ಯವನ್ನು ಗೆಯ್ದುವಳಾದೆ. ಇನ್ನುಮೇಲೆ ಬುದ್ಧಿಗೆಟ್ಟು ನಡೆದಲ್ಲಿ ಇದಕ್ಕಿಂತಲೂ ನೂರು ಮಡಿಯಾದ ಶಿಕ್ಷೆಯುಂಟಾಗುವುದರಲ್ಲಿ ಸಂದೇಹವೇ ಇಲ್ಲವು " ಎಂದು ನುಡಿದು, ಬಿಡಿಸಿ ಕಳುಹಿಸಲು;

ಸುಸಂಗತೆಯು ಮೃತ್ಯುವಿನಿಂದ ಬಿಡಿಸಿಕೊಂಡು ಬಂದವಳಂತೆ ಬಹುಸಂತೋಷದಿಂದ ಯುಕ್ತಳಾಗಿ ಬರುತ್ತ, " ನಮ್ಮ ಸಾಗರಿಕೆಯ ವೃತ್ತಾಂತವೇ ತಿಳಿಯಲಿಲ್ಲ, ವಿದೂಷಕನು ಏನಾದನೋ, ಮೇಧಾವಿನಿಯೆಂಬ ಶಾರಿಕೆಯು ಬಂದು ಪಕ್ಷಿಶಾಲೆಯಂ ಸೇರಿತೋ ಇಲ್ಲವೋ ತಿಳಿಯುವೆನು " ಎಂದು ಸುತ್ತಲೂ ನೋಡುತ್ತ, ಶಕುಂತಶಾಲೆಯಂ ಕುರಿತು ಬರುತ್ತಿರಲು;

ಸಾಗರಿಕೆಯು ದೈವಯೋಗದಿಂದ ಈ ಮಾರ್ಗವಾಗಿ ಸುಸಂಗತೆಯಾಗಲೀ ವಿದೂಷಕನಾಗಲೀ ಬಂದಲ್ಲಿ ಅಮೋಘವಾದ ಈ ರತ್ನಮಾಲೆಯನ್ನು ಅವರ ಹಸ್ತಕೆ ಒಪ್ಪಿಸಿ ಸ್ಪಷ್ಟವಾಗಿ ಪ್ರಾಣಗಳಂ ಬಿಡಬಹುದೆಂದು ಯೋಚಿಸುತ್ತ ಹಿಂದುಗಡೆಯಲ್ಲಿರುವ ಗವಾಕ್ಷಮಾರ್ಗದಿಂದ ನೋಡಿ, ಸುಸಂಗತೆಯಂ ಕಂಡು, ಕೈ ಬೀಸಿ ಕರೆಯಲು;

ಸುಸಂಗತೆಯು ಸಾಗರಿಕೆಯಂ ಕಂಡು ಮನದಲ್ಲಿ ಸಂಕಟವಂ ಪೊಂದಿ, " ಈ ಸಾಗರಿಕೆಗೆ ಸೆರೆಮನೆಯು ಪ್ರಾಪ್ತಿಯಾದುದು ? ಇನ್ನೇನು ಗತಿ ? " ಎಂದು ಹತ್ತಿರಕೆ ಸೇರಲು; ಸಾಗರಿಕೆಯು ಕಣ್ಣೀರುಗಳಂ ಬಿಡುತ್ತಾ " ಎಲೆ ಪ್ರಾಣಪ್ರಿಯಳೇ, ನಿನ್ನ ಮುಖವಂ ಕಂಡು ಸಂತುಷ್ಟಳಾದೆನು. ಈ ರತ್ನಮಾಲೆಯನ್ನು ಯೋಗ್ಯನಾದ ಬ್ರಾಹ್ಮಣನಿಗೆ ಕೊಡುವಳಾಗು. ಈ ಸಂಕಲೆಯ ಸಂಕಟದಲ್ಲೇ ಪ್ರಾಣಗಳಂ ಬಿಡುವೆನು " ಎಂದು ನುಡಿದು, ಆ ರತ್ನಮಾಲೆಯನ್ನು ಅವಳ ಹಸ್ತಕೆ ಕೊಟ್ಟು, " ಇನ್ನು ಹೆಚ್ಚಾಗಿ ಮಾತನಾಡುವಳಾಗಬೇಡ " ಎಂದು ನುಡಿಯಲು;

ಸುಸಂಗತೆಯು ಆ ರತ್ನಮಾಲೆಯನ್ನು ಕೈಯಿಂದ ಮುಚ್ಚಿ ಪಿಡಿದು, ಶಕುಂತಶಾಲೆಗೆ ಬಂದು, ಅಲ್ಲಿರುವ ಊಳಿಗದ ಹೆಣ್ಣುಗಳಂ ಕುರಿತು— “ ಎಲೆ ಬಾಲೆಯರುಗಳಿರಾ, ಮೇಧಾವಿನಿಯೆಂಬ ಶಾರಿಕೆಯು ಬಂದು ತನ್ನ ಗೂಡನ್ನು ಸೇರಿದುದೇ? ” ಎಂದು ಬೆಸಗೊಳಲು; ಆ ಬಾಲೆಯರು, “ ಇವಳು ದೇವಿಯು ಮಾಡಿದ ಬಂಧನಕೆ ಒಳಗಾಗಿದ್ದಳೆಂಬ ವಾರ್ತೆಯನ್ನು ಕೇಳಿದೆವು. ಇವಳು ಮಾತ್ರವೇ ಈ ಪಕ್ಷಿಶಾಲೆಗೆ ಬಂದಿರುವಳು. ನಾಗರಿಕೆಯ ವಾರ್ತೆಯನ್ನು ತಿಳಿಯೆವು ” ಎಂದು ಮನದಲ್ಲಿ ಯೋಚಿಸಿ, “ ಎಲೌ ಪೂಜ್ಯಳಾದ ಸುಸಂಗತೆಯೇ, ನೀನು ನಮಗೆ ಆಜ್ಞೆಯನ್ನಿತ್ತು ಪೋದಾಗಲೇ ಮಕರಂದೋದ್ಯಾನದಿಂದ ಹಾರಿ ಬಂದುದರಿಂದ ಆ ಮೇಧಾವಿನಿಯನ್ನು ಪಿಡಿದು ಪಂಜರದಲ್ಲಿ ಕೂಡಿದೆವು ” ಎಂದು ಆ ಪಂಜರವನ್ನು ತಂದು ತೋರಿಸಲು;

ಸುಸಂಗತೆಯು ಅಲ್ಲಿಂ ಪೊರಮಟ್ಟು, ಪಾದರಸದಂತೆ ಚಂಚಲವಾದ ಮನೋವೃತ್ತಿಯುಳ್ಳವಳಾಗಿ ಬರುತ್ತ, ನಾಗರಿಕೆಯಂ ಸ್ಮರಿಸಿ— “ ಎಲೆ ಪ್ರಿಯಸಖೀ! ಎಲೆ ನಿರಾಲಂಬಳಾದ ಬಾಲೆಯೇ! ಎಲೆ ಲಜ್ಜಾವತಿಯಾಗಿ ಲಾವಣ್ಯಸಮುದ್ರಳಾದ ಕಾಂತೆಯೇ! ನೀನು ಸೆರೆಮನೆಯಲ್ಲಿ ಯಾರೊಡನೆ ಮಾತನಾಡುವೆ? ಯಾರೊಡನೆ ಮಿತ್ರತ್ವವಂ ಬಳಸುವೆ? ಯಾರಿಂದ ಸೇವೆಯಂ ತೆಗೆದುಕೊಳ್ಳುವೆ? ಯಾರು ನಿನ್ನಂ ಸಲಹುವರು? ಬಾಗೆಯ ಹೂವಿಗಿಂತಲೂ ಮೃದುವಾದ ನಿನ್ನ ಶರೀರಕೆ ಸ್ನಾನ ಮುಂತಾದ ನಿನ್ನ ಉಪಚಾರವಂ ಗೆಯ್ದು ಅರಿಸಿನವಂ ಪರಿಮಳಗಂಧವಂ ಯಾರು ಅನುಲೇಪನವಂ ಗೆಯ್ಯುವರು? ಇಲ್ಲಿಂದ ಉಜ್ಜಯಿನೀಪಟ್ಟಣಕೆ ಪೋದಮೇಲೆ ಹೇಗೆ ಪ್ರಾಣಧಾರಣವಂ ಗೆಯ್ಯುವೆ? ಶರತ್ಕಾಲದ ಚಂದ್ರನಂತೆ ಕಂಗಳಿಗೆ ಮಂಗಳಾಕಾರವಾದ ನಿನ್ನ ಮುಖವಂ ಇನ್ನು ಒಂದುಬಾರಿ ಹೇಗೆ ಕಾಣುವೆನು? ” ಎಂದು ತನ್ನ ಮುಖಕ್ಕೆ ಸೀರೆಯ ಸೆರಗನ್ನು ಮುಚ್ಚಿ ಯಾರೂ ಕಾಣದಂತೆ ರೋದನವಂ ಗೆಯ್ದು ನಿಟ್ಟುಸಿರುಗಳಂ ಬಿಟ್ಟು ದಿಕ್ಕುಗಳಂ ನೋಡುತ್ತ, “ ಎಲೈ ದುಷ್ಟದೈವವೇ! ರಕ್ಷಕರಿಲ್ಲದೆ ಸೆರೆಮನೆಗೆ ಸೇರಿದ ಆ ನಾಗರಿಕೆಯಲ್ಲಿ ಉತ್ತಮವಾದ ರೂಪವನ್ನೂ ದೋಷರಹಿತವಾದ ವಿದ್ಯೆಯನ್ನೂ ಆಶ್ಚರ್ಯಕರವಾದ ಬುದ್ಧಿಯನ್ನೂ ಸಹ ಏಕೆ ನಿರ್ಮಾಣವಂ ಗೆಯ್ದಿರುವೆ? ಅಥವಾ ನಿರ್ಮಾಣವಂ ಗೆಯ್ದರೂ ನೀಚವಾದ ಸೆರೆಮನೆಯನ್ನು ಸೇರಿಸಬಹುದೆ? ಅಥವಾ ಸೇರಿಸಿದರೂ ಕಮಲಗಳಿಗೆ ಕಾಂತಿಯನ್ನೀಯುವ ಅವಳ ಕಾಲುಗಳಿಗೆ ಸಂಕಲೆಯು ಪ್ರಾಪ್ತವಾಗುವಂತೆ ಮಾಡಬಹುದೇ ಪೇಳು? ಗುಣವಂತರಿಗೆ ಕಷ್ಟವನ್ನು ದುಷ್ಟರಿಗೆ ಸಕಲೈಶ್ವರ್ಯವನ್ನುಂಟುಮಾಡುವ ನಿನ್ನ ಕ್ರೂರಚರ್ಯೆಗಳಂ ಹೇರಳವಾಗಿ ನಿಂದಿಸಿ ಫಲವಿಲ್ಲ. ಯಾರಿಗಾದರೂ ಒಬ್ಬ ಬ್ರಾಹ್ಮಣನಿಗೆ ಕೊಡುವಂತೆ ನನ್ನ ಹಸ್ತಕೆ ಕೊಟ್ಟಿರುವ ರತ್ನಮಾಲೆಯನ್ನು ಯಾವ ಬ್ರಾಹ್ಮಣನಿಗೆ ಕೊಡಲಿ? ” ಎಂದು ಕೆಲವುದೂರ ಬಂದು, ಇದಿರುನೋಡಿ, ಬರುವ

ವಿದೂಷಕನಂ ಕಂಡು, “ ಇದೋ ನಮಗೆ ಆಪ್ತನಾದ ವಿದೂಷಕನು ಸಂತೋಷ ದಿಂದ ಯುಕ್ತನಾಗಿ ಬರುವನಂತೆ ತೋರುವುದು. ಈ ರತ್ನಮಾಲೆಯನ್ನು ಇವನಿಗೆ ಕೊಡುವೆನು ” ಎಂದು ನಿಶ್ಚಯಿಸಿ ಬರುತ್ತಿರಲು ;

ಅಷ್ಟರಲ್ಲೇ ವಿದೂಷಕನು ಅತಿಸಂತೋಷದಿಂದ ಯುಕ್ತನಾಗಿ, “ ಈಗ ನಮ್ಮ ರಾಜೇಂದ್ರನು ಬಂದುದರಿಂದ ಕೋಪವಂ ಬಿಟ್ಟು ಪ್ರಸನ್ನಳಾದ ವಾಸವದತ್ತಾದೇವಿಯು ಬಂಧನದಿಂದ ಎನ್ನಂ ಬಿಡಿಸಿ ತನ್ನ ಹಸ್ತದಿಂದ ಕೊಟ್ಟ ಹೂರಣ ಗಡುಬುಗಳಿಂದ ತುಂಬುವುದಕ್ಕೆ ಆಗದೆ ಇದ್ದ ಎನ್ನ ಹೊಟ್ಟೆಯಂ ತುಂಬಿದೆನು. ಮತ್ತು ಪಟ್ಟೆಯ ಮಡಿಗಳನ್ನೂ ರತ್ನಗಳಿಂದ ಕೆತ್ತಲ್ಪಟ್ಟ ಕರ್ಣಾಭರಣ ಮೊದಲಾದ ಆಭರಣಗಳನ್ನೂ ಸಹ ತೆಗೆದುಕೊಂಡು ಅಲಂಕೃತನಾಗಿರುವ ಎನ್ನ ಶರೀರವಂ ತೋರಿಸಲೋಸುಗ ರಾಜೇಂದ್ರನಾದ ವತ್ಸರಾಜನ ಸಮೀಪವಂ ಕುರಿತು ಪೋಗುವೆನು ” ಎಂದು ನುಡಿಯುತ್ತ ಬರಲು ;

ಸುಸಂಗತೆಯು ರೋದನವಂ ಗೆಯ್ಯುತ್ತ ಪೋಗಿ ವಿದೂಷಕನನ್ನು ತಬ್ಬಿಕೊಂಡು,— “ ಎಲೈ ವಿದೂಷಕನೇ, ಒಂದು ಕ್ಷಣಮಾತ್ರವು ಎನ್ನ ದುಃಖವಂ ಕೇಳಿ ಆ ಬಳಿಕ ಮುಂದಕೆ ಪೋಗುವನಾಗು ” ಎಂದು ನುಡಿಯಲು; ವಿದೂಷಕನು—“ ಎಲೆ ಸುಸಂಗತೆಯೇ ಏತಕೆ ಅಳುತ್ತ ಇದ್ದೀಯೆ ? ದೇವಿಯು ಎನಗೂ ನಿನಗೂ ಸಹ ಬಂಧನವಂ ಗೆಯ್ದಿದ್ದು ಬಿಟ್ಟಳು. ಇದಕೆ ವ್ಯಸನವಂ ಗೆಯ್ದು ಪ್ರಯೋಜನವಿಲ್ಲ. ಆದರೆ ಸಾಗರಿಕೆಗೆ ಏನಾದರೂ ಬಲವಾದ ವಿಪತ್ತು ಪ್ರಾಪ್ತವಾಯಿತೆ? ಈಗ ಅವಳು ಎಲ್ಲಿರುವಳು ? ” ಎಂದು ಬೆಸಗೊಳಲು ; ಅವಳು—“ ಅಯ್ಯಾ ವಿದೂಷಕನೇ, ಕೇಳು. ದೀನಳಾದ ಆ ಸಾಗರಿಕೆಗೆ ಸಂಕಲೆಯಂ ತೊಡಿಸಿ ಉಜ್ಜಯಿನೀ ಪಟ್ಟಣಕೆ ಕಳುಹಿಸಿದೆವೆಂಬ ವಾರ್ತೆಯಂ ಪುಟ್ಟಿಸಿ, ಈಗ ಅಂತಃಪುರದಲ್ಲಿರುವ ಸೆರೆಮನೆಯಲ್ಲಿ ಇರಿಸಿರುವಳು. ಇನ್ನುಮೇಲೆ ಏನು ಅವಸ್ಥೆಯಂ ಪೊಂದಿಸುವಳೋ ತಿಳಿಯೆನು ” ಎಂದು ನುಡಿಯಲು ; ವಿದೂಷಕನು ಬಹಳವಾದ ವ್ಯಸನವಂ ಪೊಂದಿ— “ ಎಲೆ ಸುಸಂಗತೆಯೇ, ದೇವಿಯು ದಯಾಶೂನ್ಯಳಾಗಿ ಅಧಿಕವಾದ ನಿಷ್ಠುರಕಾರ್ಯಗಳನ್ನು ಮಾಡಿರುವಳು. ಇಂಥ ಬಂಧನಕೆ ಆ ಸಾಗರಿಕೆಯು ಯೋಗ್ಯಳಲ್ಲವಾದರೂ ಲೋಕದಲ್ಲಿ ಸವತಿಯ ಮತ್ಸರವೆಂಬುದು ದೊಡ್ಡದು.” ಎಂದು ನುಡಿಯಲು ; ಸುಸಂಗತೆಯು—“ ಎಲೈ ಪೂಜ್ಯನೇ, ಕೇಳು. ತನ್ನ ಪ್ರಾಣಗಳಲ್ಲಿ ತೃಣಮಾತ್ರವೂ ಆಸೆಯಿಲ್ಲದೆ ಇರುವ ಸಾಗರಿಕೆಯು, ಎನಗೆ ಆಪ್ತನಾದ ವಸಂತಕನಿಗೆ ಕೊಡುವುದೆಂದು ತನ್ನ ಕತ್ತಿನಲ್ಲಿ ಧರಿಸಿದ್ದ ರತ್ನಮಾಲೆಯನ್ನು ಕೊಟ್ಟಿರುವಳು. ಈ ಮಾಲಿಕೆಯಂ ತೆಗೆದುಕೊಂಡು ಅವಳಿಗೆ ಸಂಪೂರ್ಣವಾಗಿ ಆಶೀರ್ವಾದವಂ ಗೆಯ್ಯುವನಾಗು ” ಎಂದು ಆ ರತ್ನಮಾಲೆಯಂ ಕೊಡುವುದಕ್ಕೆ ಪೋಗಲು ; ಅವನು ಕಣ್ಣೀರುಗಳಂ ಬಿಡುತ್ತ—“ ಎಲೆ ಕಾಂತೆಯೇ, ಇಂಥ ಅವಸ್ಥೆಯು ಆ ಸಾಗರಿಕೆಗೆ ಪ್ರಾ

ಪ್ಪವಾಗಿರುವಲ್ಲಿ ಅವಳ ಕತ್ತಿನಲ್ಲಿದ್ದ ರತ್ನಹಾರವಂ ತೆಗೆದುಕೊಳ್ಳುವುದಕೆ ಎನ್ನ ಕೈಗಳು ಮುಂದುವರಿದು ಬರಲಾರವು. ಇಂಥ ಅವಸ್ಥೆಯುನ್ನು ಕೇಳಬೇಕಾದುದು!" ಎಂದು ಸುಸಂಗತೆಯು ಕತ್ತನ್ನು ತಬ್ಬಿಕೊಂಡು ರೋದನವಂ ಗೆಯ್ಯುತ್ತಿರಲು; ಅವಳು ಕೈಗಳಂ ಮುಗಿದು—"ಅಯ್ಯಾ ಪೂಜ್ಯನೇ, ಅವಳಿಗೆ ಅನುಗ್ರಹವಂ ಮಾಡುವುದಕ್ಕೋಸುಗವಾಗಿ ಈ ರತ್ನಮಾಲೆಯುನ್ನು ತೆಗೆದುಕೊಳ್ಳುವನಾಗು" ಎಂದು ಬಹಳವಾಗಿ ಒಡಂಬಡಿಸಲು; ವಿದೂಷಕನು ಒಂದು ಗಳಿಗೆ ಯೋಚಿಸಿ—"ಎಲೆ ಕಾಂತೆಯೇ, ಈ ಮಾಲಿಕೆಯು ನನಗೆ ಯೋಗ್ಯವಲ್ಲ. ಆದರೂ ನಾಗರಿಕೆಯು ಅಗಲಿಕೆಯಿಂದ ಹೇರಳವಾದ ಸಂತಾಪವನ್ನು ಪೊಂದುತ್ತಿರುವ ವತ್ಸರಾಜನ ದುಃಖವಂ ಪರಿಹರಿಸುವುದಕೆ ಯೋಗ್ಯವಾದುದು" ಎಂದು ಆ ರತ್ನಮಾಲೆಯುಂ ತೆಗೆದುಕೊಂಡು ಚೆನ್ನಾಗಿ ನೋಡಿ ಆಶ್ಚರ್ಯವಂ ಪೊಂದಿ—"ಎಲೆ ಕಾಂತೆಯೇ, ಸಮಸ್ತ ಭೂಮಂಡಲಕ್ಕೆ ಪತಿಯಾದ ವತ್ಸರಾಜನಿಗೂ ದೊರೆಯದೇ ಇರುವ ಈ ರತ್ನಮಾಲೆಯು ಈ ನಾಗರಿಕೆಗೆ ಹೇಗೆ ಬಂದುದು? ಇವಳಾರು?" ಎಂದು ಕೇಳಲು; —"ಅಯ್ಯಾ ಪೂಜ್ಯನೇ, ಕೇಳು. ಅವಳಲ್ಲಿ ನಾನೂ ಇದೇ ಸಂದೇಹವಂ ಪೊಂದಿ ಅವಳ ವಾರ್ತೆಯುನ್ನು ತಿಳಿಯುವೆನೆಂಬ ಕುತೂಹಲದಿಂದ ಒಂದು ದಿನ ಅವಳನ್ನು ಕೇಳಿದೆನು. ಅದಕ್ಕೆ ನಾಗರಿಕೆಯು ಅಧಿಕವಾದ ವ್ಯಸನವಂ ಪೊಂದಿ ಉದ್ದವಾಗಿ ಉಸಿರುಗಳಂ ಬಿಟ್ಟು—ಎಲೆ ಕಾಂತೆಯೇ, ಮನಕೆ ಸಂಕಟವಂ ಪುಟ್ಟಿಸುವ ಕಥೆಯುಂ ಕೇಳಿ ಫಲವಿಲ್ಲವು, ಎಂದು ಬಲವಾಗಿ ರೋದನವಂ ಗೆಯ್ಯುವುದಕ್ಕೆ ಯತ್ನಪಟ್ಟುದರಿಂದ ನಾನು ವಿಶೇಷವಾಗಿ ಕೇಳಲಿಲ್ಲ." ಎಂದು ನುಡಿಯಲು; ವಿದೂಷಕನು—"ಎಲೆ ನಾರಿಯೇ, ಅವಳು ತನ್ನ ವೃತ್ತಾಂತವನ್ನು ಪೇಳದೆ ಇದ್ದರೂ ಅವಳ ಸೌಂದರ್ಯವೂ ವಿದ್ಯೆಯೂ ಗುಣವೂ ಈ ರತ್ನಮಾಲೆಯೂ ಸಹ ನಾಗರಿಕೆಯು ಯಾವವಳೋ ಒಬ್ಬ ದೊರೆಯ ಮಗಳೆಂಬುದನ್ನು ವ್ಯಕ್ತವಾಗಿ ಪೇಳುತ್ತಿರುವುದು" ಎನಲು; ಅವಳು—"ಅಯ್ಯಾ ವಸಂತಕನೇ, ನಮ್ಮ ರಾಯನು ಈಗ ಒಂದೆರಡು ಗಳಿಗೆಯಲ್ಲಿ ದೇವಿಯ ಸಮೀಪಕ್ಕೆ ಬಂದಿದ್ದು ಈಗ ಅಲ್ಲಿಂದ ಪೊರಮಟ್ಟು ಸ್ಫಟಿಕಶಿಲೆಯಿಂದ ನಿರ್ಮಿಸಲ್ಪಟ್ಟ ಮಂಟಪದಲ್ಲಿ ಇರುವನಾಗಿ ತೋರುವುದು. ಅಲ್ಲಿಗೆ ಪೋಗಿ ಅವನ ವಿರಹವ್ಯಥೆಯುನ್ನು ಪೋಗಲಾಡಿಸುವನಾಗು. ನಾನು ದೇವಿಯ ಸಮೀಪವಂ ಸೇರಿ ನಾಗರಿಕೆಯ ವೃತ್ತಾಂತವು ಇನ್ನೇನು ನಡೆಯುವುದೋ ಅದನ್ನು ತಿಳಿದುಕೊಂಡು ಬರುವೆನು" ಎಂದು ನುಡಿದು ಪೋಗಲು; ವಸಂತಕನು, ರಾಯನ ಸಮೀಪವಂ ಸೇರುವೆನೆಂದು ಬರುತ್ತಿರಲು;

ಇತ್ತಲು, ರಾಯನು ಸ್ಫಟಿಕಶಿಲಾಮಂಟಪದಲ್ಲಿ ಕುಳಿತು, "ದೇವಿಯು, ನಿಮಿತ್ತವಿಲ್ಲದೆ ಇರುವ ಅನೇಕ ಶಪಥಗಳಿಂದಲೂ ಸವಿಯಾಗಿ ಪ್ರೀತಿಕರವಾದ ವಾಕ್ಯಗಳಿಂದಲೂ ಚಿತ್ತದ ಅನುವರ್ತನೆಯಿಂದಲೂ ಅನೇಕವಾದ ದೀನೋಕ್ತಿಯಿಂದಲೂ

ಅನೇಕಗಳಾದ ಪ್ರೀತಿಕರವಾದ ಸಖಿಯರುಗಳಿಂದ ಪೇಳಿದ ವಾಕ್ಯಗಳಿಂದಲೂ ಎಷ್ಟು ಒಡಂಬಡಿಕೆಯಂ ಹೇಳಿದರೂ ತನ್ನ ಮನದಲ್ಲಿ ಬೇರೂರಿರುವ ಕೋಪವಂ ಬಿಡದೆ ಪೋದಳು. ಸುಸಂಗತೆ ಸಾಗರಿಕೆ ವಸಂತಕ ಈ ಮೂರುಜನದ ವೃತ್ತಾಂತವೇನಾದುದೋ ತಿಳಿಯೆನು. ಈಗಲಾದರೋ ಸಾಗರಿಕೆಯ ವಿರಹವ್ಯಥೆಯು ಬಲವಾಗಿ ಎನ್ನನ್ನು ಬಾಧಿಸುತ್ತಿರುವುದು. ಮತ್ತು ಆ ಸಾಗರಿಕೆಯು ಕೋಪವಂ ತಾಳಿದ ದೇವಿಯಿಂದ ಭಯವನ್ನು ಪೊಂದಿ, ರಕ್ಷಣೆಗೋಸುಗವಾಗಿ ಮದನಬಾಣದ ಪೆಟ್ಟಿನಿಂದ ಉಂಟಾದ ರಂಧ್ರಗಳಿಂದ ಎನ್ನ ಹೃದಯವಂ ಪೊಕ್ಕು ಬಲವಾದ ವ್ಯಥೆಯನ್ನು ಪೊಂದಿಸುತ್ತಿರುವಳು. ಈ ಸಂಗತಿಯನ್ನೇ ಪೇಳುವೆನೆಂದರೆ ಎನ್ನ ವಿಶ್ವಾಸಕೆ ಯೋಗ್ಯನಾದ ವಸಂತಕನೂ ದೇವಿಯ ಬಂಧನಕೆ ಒಳಗಾದನು. ಈಗ ಯಾರಿಗಾಗಿ ರೋದನವಂ ಗೆಯ್ಯಲಿ? " ಎಂದು ಅಧಿಕವಾಗಿ ಸಂತಾಪವಂ ಪೊಂದಿ ನಿಟ್ಟುಸಿರಂ ಬಿಡುತ್ತಿರಲು;

ವಿದೂಷಕನು ಬರುತ್ತ ರಾಯನಂ ಕಂಡು, " ಇದೋ! ನಮ್ಮ ರಾಯನು ಸಂಪೂರ್ಣವಾದ ವಿರಹವ್ಯಥೆಯಿಂದ ಕೃಶನಾದಂಥದಾದರೂ ಅಧಿಕವಾದ ಲಾವಣ್ಯವನ್ನು ವಹಿಸಿಕೊಂಡಿರುವ ಶರೀರವಂ ತಾಳಿ ಪಾಡ್ಯದ ಚಂದ್ರನಂತೆ ಪುರೋಭಾಗದಲ್ಲಿ ಪರಿಶೋಭಿಸುತ್ತಿರುವನು. ಶೀಘ್ರದಿಂ ಪೋಗಿ ಕಾಣುವೆನು " ಎಂದು ರಾಯನ ಸಮ್ಮುಖವಂ ಪೊಂದಿ—' ಎಲೈ ರಾಜೇಂದ್ರನೇ, ನಿನಗೆ ಮಂಗಳವುಂಟಾಗಲಿ. ದೇವಿಯ ಬಂಧನದಿಂದ ಬಿಡಿಸಿಕೊಂಡು ಬಂದ ನಾನು ದೈವಯೋಗದಿಂದ ನಿನ್ನ ಕಂಡೆನು, ಎನ್ನ ಕಣ್ಣುಗಳು ಪುಣ್ಯವುಳ್ಳವು " ಎಂದು ನುಡಿಯಲು; ರಾಯನು ಕತ್ತೆತ್ತಿ ನೋಡಿ ವಿದೂಷಕನನ್ನು ಸಂತೋಷದಿಂದೊಡಗೂಡಿ, " ಎಲೈ ಪ್ರಾಣಮಿತ್ರನೇ, ಶೀಘ್ರದಿಂದ ಬಂದು ಎನ್ನನ್ನು ಆಲಿಂಗಿಸುವನಾಗು. ಈಗ ನಿನಗೆ ಪುಟ್ಟಿರುವ ಸಂತೋಷವೇ ನಿನ್ನಲ್ಲಿ ಅಧಿಕವಾದ ದೇವಿಯ ಸಂತೋಷವನ್ನು ಸೂಚಿಸುವುದು. ಸಾಗರಿಕೆಯ ವೃತ್ತಾಂತವೇನಾದುದು ಪೇಳುವನಾಗು? " ಎನಲು; ವಿದೂಷಕನು ಪ್ರತ್ಯುತ್ತರವಂ ಪೇಳದೆ, ಒಂದು ಕ್ಷಣಕಾಲವು ಅಧೋಮುಖನಾಗಿ ಕುಳಿತಿರಲು; ರಾಯನು—" ಎಲೈ ಮಿತ್ರನೇ, ಏಕೆ ಎನಗೆ ಪ್ರತ್ಯುತ್ತರವಂ ಪೇಳದೆ ತಲೆಯಂ ತಗ್ಗಿಸಿ ಕುಳಿತಿರುವೆ? " ಎಂದು ನುಡಿಯಲು; ಆವನು—' ಎಲೈ ರಾಜೇಂದ್ರನೇ, ಅಮಂಗಳವಾದ ವಾಕ್ಯವನ್ನು ಹೇಗೆ ವಿಜ್ಞಾಪಿಸತಕ್ಕುದೆಂದು ಪ್ರತ್ಯುತ್ತರವಂ ಪೇಳದೆ ಸುಮ್ಮನಿರುವೆನು. " ಎನಲು; ರಾಯನು ಹಾಹಾಕಾರವಂಗೆಯ್ದು—" ಎಲೈ ಮಿತ್ರನೇ, ಅಮಂಗಳವೆಂದರೇನು? ಎನ್ನ ಪ್ರಾಣಕಾಂತೆ ಜೀವವಂ ಬಿಟ್ಟಳೇ? " ಎಂದು ಮೂರ್ಛೆಯಂ ಪೊಂದಿ, ಬುಡವಂ ಕಡಿದ ಮರನಂತೆ ನೆಲದಿಂ ಬೀಳಲು; ವಿದೂಷಕನು ದಿಗಿಲಂ ಪೊಂದಿ, ಶೀತೋಪಚಾರಗಳಿಂದ ಉಪಚರಿಸಿ, ಪ್ರಜ್ಞೆ ಬರುವಂತೆ ಗೆಯ್ದು,—' ಎಲೈ ರಾಜೋತ್ತಮನೇ, ನಾನು ಪೇಳಿದ ವಾಕ್ಯ

ವನ್ನು ಇನ್ನೊಂದು ಪ್ರಕಾರವಾಗಿ ಊಹಿಸಬೇಡ. ದೇವಿಯು ಸಾಗರಿಕೆಯನ್ನು ನಿಗಳಬಂಧನವಂ ಗೆಯ್ದು ಉಜ್ಜಯಿನೀಪಟ್ಟಣಕೆ ಕಳುಹಿಸಿದಳಾದುದರಿಂದ ಈ ಅಮಂಗಳವಾದ ವಾಕ್ಯವನ್ನು ಪೇಳಬಾರದೆಂದು ಸುಮ್ಮನಿದ್ದೆನು" ಎಂದು ನುಡಿಯಲು ; ರಾಯನು ಕರ್ಣಕಠೋರವಾದ ವಿದೂಷಕನ ವಾಕ್ಯವಂ ಕೇಳಿ, ತನ್ನ ಪ್ರಾಣಗಳಂ ಕುರಿತು—“ ಎಲೈ ಪ್ರಾಣಗಳೇ, ಅಸಮರ್ಥನಾದ ಎನ್ನನ್ನು ಬಿಟ್ಟು ಬಿಡಿ. ಎನ್ನ ವಾಕ್ಯವನ್ನು ಕೇಳಿ ಮದ್ದಾನೆಯಂತೆ ಮುದ್ದಾದ ನಡೆಯುಳ್ಳ ಕೋಮಲಾಂಗಿಯಾದ ಎನ್ನ ಪ್ರಾಣಕಾಂತೆಯು ಬಹುದೂರವಾಗಿ ಪೋಗಿರುವಳು. ನೀವು ತಡವಂ ಗೆಯ್ಯದೆ ಪೋಗಿ ಅವಳಂ ಸೇರಿ ಸುಖವಂ ಪೊಂದಿರಿ" ಎಂದು, ವಿದೂಷಕನಂ ಕುರಿತು—“ ಎಲೈ ಮಿತ್ರನೇ, ದೇವಿಯು ಎನ್ನಲ್ಲಿ ಮಾಡಿದ ಕರುಣಾಶೂನ್ಯತ್ವವಂ ನೋಡಿದೆಯಾ? ಉಜ್ಜಯಿನೀ ಪಟ್ಟಣಕೆ ಸಾಗರಿಕೆಯಂ ಕಳುಹಿಸಿದಳೆಂದು ಯಾರು ನಿನ್ನೊಡನೆ ಪೇಳಿದವರು?" ಎಂದು ನುಡಿಯಲು; ಅವನು— “ಸುಸಂಗತೆಯು ಪೇಳಿ, ಇನ್ನೇನು ವಿಶೇಷ ವೃತ್ತಾಂತವು ನಡೆಯುವುದೋ ತಿಳಿದು ಬರುವೆನೆಂದು ನುಡಿದು ದೇವಿಯ ಸಮೀಪಕ್ಕೆ ಪೋದಳು. ಮತ್ತು ಸುಸಂಗತೆಯು ಸಾಗರಿಕೆಯು ನಿನ್ನ ಸಮೀಪದಲ್ಲಿ ಇರಲೀ ಎಂದು ಏನು ನಿಮಿತ್ತವಾಗಿಯು ಈ ರತ್ನಮಾಲೆಯನ್ನು ಎನ್ನ ಹಸ್ತಕೆ ಕೊಟ್ಟು ಪೋದಳು?" ಎಂದು ಆ ರತ್ನಮಾಲೆಯಂ ತೋರಿಸಲು ; ರಾಯನು—“ ಇನ್ನಾವ ನಿಮಿತ್ತವೂ ತೋರುವುದಿಲ್ಲ. ವಿರಹವ್ಯಥೆಯಿಂದ ಕೊರಗುತ್ತಿರುವ ಎನ್ನ ಮನಕ್ಕೆ ಸಂತೋಷವಂ ಪುಟ್ಟಿಸುವುದಕ್ಕೂ, ತನ್ನ ಸ್ಮರಣೆಯು ಎನಗೆ ಸರ್ವದಾ ಉಂಟಾಗಿರಲಿ ಎಂದೂ ಎನ್ನ ಪ್ರಾಣಕಾಂತೆಯು ಕತ್ತಿನಲ್ಲಿದ್ದುದನ್ನು ತೆಗೆದುಕೊಟ್ಟಿರುವಳು. ಎನ್ನ ಪ್ರಾಣಗಳಿಗೆ ಈ ರತ್ನಮಾಲೆಯೇ ಆಧಾರವಾದುದು." ಎಂದು ಆ ಮಾಲೆಯಂ ತೆಗೆದುಕೊಂಡು, ಕಣ್ಣಿಗೆ ಒತ್ತಿಕೊಂಡು, ಎದೆಯಲ್ಲಿರಿಸಿ, ಅದನ್ನು ಕುರಿತು,—“ ಎಲೈ ರತ್ನಮಾಲೆಯೇ, ಆ ಕೋಮಲಾಂಗಿಯ ಕಂಠಾಲಿಂಗನವಂ ಪೊಂದಿ, ಭ್ರಷ್ಟನಾದ ಎನ್ನ ಸಮಾನವಾದ ಅವಸ್ಥೆಯಂ ಪೊಂದಿರುವ, ನೀನು ಪ್ರಿಯಕರಳಾದ ದೂತಿಯಂತೆ ಹೃದಯಕೆ ಆನಂದವಂ ಪುಟ್ಟಿಸುತ್ತಿರುವೆ" ಎಂದು, “ ಎಲೈ ಮಿತ್ರನೇ, ಈ ರತ್ನಮಾಲೆಯನ್ನು ಮಾಸಿಪೋಗದಂತೆ ನಿನ್ನ ವಸ್ತ್ರದ ಅಂಚಿನಿಂದ ಸುತ್ತಿ ಪಿಡಿಯುವನಾಗು. ನಾನು ಸ್ವಲ್ಪ ಧೈರ್ಯವಂ ಅವಲಂಬಿಸುತ್ತಿರುವೆನು" ಎನಲು; ವಿದೂಷಕನು—“ ಅಜ್ಞೆಯಾದಂತೆ ನಡೆಯುವೆನು" ಎಂದು, ಅದೇರೀತಿಯಿಂದ ಆ ಮಾಲೆಯನ್ನು ಪಿಡಿದು ನಿಂದಿರಲು ; ರಾಯನು— “ ಎಲೈ ಮಿತ್ರನೇ, ಇನ್ನು ಮೇಲೆ ಸನ್ನುತಾಂಗಿಯಾದ ಆ ಸಾಗರಿಕೆಯ ದರುಶನವು ಎನಗೆ ದೊರಕುವುದು ಬಹಳ ದುರ್ಲಭವಾದುದು" ಎಂದು ನುಡಿಯಲು ; ವಿದೂಷಕನು—“ ಎಲೈ ರಾಜೇಂದ್ರನೇ, ದೈವಗತಿಯು ಹೀಗೆಯೇ ಸರಿ ಎಂದು ನಿಶ್ಚಯಿಸುವುದಕ್ಕೆ ಯಾರಿಂದಲೂ ಆಗದು. ಮತ್ತು ಆ ಸಾಗರಿಕೆಯ ದರ್ಶನವು ಅಗತ್ಯವಾಗಿ ಆಗುವುದು, ಸಂದೇಹವಾಗಿ ತೋರುವುದಿಲ್ಲ. ಏಕೆಂದರೆ? ಅಂಥ ರೂಪವತಿ

ಯಾದ ಕಾಂತೆಯು ನಿನಗೆ ಯೋಗ್ಯಳಲ್ಲದೆ, ಈ ಭೂಮಂಡಲದಲ್ಲಿ ಇನ್ನಾವ ಪುರುಷ ನಿಗೂ ಯೋಗ್ಯಳಲ್ಲ. ಆದರೆ ದೇವಿಯು ಸೇವೆಯು ಗೆಯ್ಯುವ ವಸುಂಧರೆಯೆಂಬ ಕಾಂತೆಯು ಬರುವಂತೆ ತೋರುವುದು" ಎಂದು ನುಡಿಯಲು ;

ಅಷ್ಟರಲ್ಲೀ ಕೈಯಲ್ಲಿ ಖಡ್ಗವಂ ಪಿಡಿದ ವಸುಂಧರೆಯು ರಾಯನ ಸಮೀಪವಂ ಪೊಂದಿ, ನಮಸ್ಕಾರವಂ ಗೆಯ್ದು, "ಎಲೈ ಮಹಾರಾಜೇಂದ್ರನೇ, ರುಮಣ್ವಂತನ ಸೋದರದಳಿಯನಾದ ವಿಜಯವರ್ಮನು ಶತ್ರುವಿಜಯವಾರ್ತೆಯನ್ನು ವಿಜ್ಞಾಪಿಸ ಲೋಸುಗ ಬಾಗಿಲೊಳ್ ಬಂದು ನಿಂತಿರುವನು" ಎಂದು ವಿಜ್ಞಾಪಿಸಲು ; ರಾಯನು "ಎಲೆ ವಸುಂಧರೆಯೇ, ಶೀಘ್ರದಿಂ ಅವನಂ ಕರೆದುಕೊಂಡು ಬರುವುದು" ಎಂದು ಅಪ್ಪಣೆಯಂ ಕೊಡಲು : ಅವಳು—"ಅಜ್ಞೆಯಾದಂತೆ ನಡೆದುಕೊಳ್ಳುವೆನು" ಎಂದು ಹಿಂದಿರುಗಿ ಬಂದು, ವಿಜಯವರ್ಮನಂ ಕರೆದುಕೊಂಡು ಬರುತ್ತ, "ಎಲೈ ವಿಜಯ ವರ್ಮನೇ, ಇದೋ ಪೂರ್ವಭಾಗದಲ್ಲಿ ಇರುವ ಸ್ಫಟಿಕಶಿಲಾಮಂಟಪದ ಮಧ್ಯದಲ್ಲಿ ಮನಕೆ ಸೊಗಸಂ ಬೀರುತ್ತ ರಾಜೇಂದ್ರನು ಕುಳಿತಿರುವನು. ಶೀಘ್ರದಿಂದ ಭಯ ಭಕ್ತಿಯುಕ್ತನಾಗಿ ಸಮೀಪವಂ ಪೊಂದುವುದು" ಎಂದು ಅಜ್ಞೆಯಂ ಕೊಡಲು ;

ವಿಜಯವರ್ಮನು ರಾಯನ ಪುರೋಭಾಗವಂ ಸೇರಿ ಸಾಷ್ಟಾಂಗನಮಸ್ಕಾರ ವಂ ಗೆಯ್ದು "ಎಲೈ ಮಹಾರಾಜೇಂದ್ರನೇ! ನಿನ್ನ ಸೇನಾಪತಿಯಾದ ರುಮಣ್ವಂತನ ವಿಜಯವಾರ್ತೆಯಿಂದ ವೃದ್ಧಿಯಂ ಪೊಂದಿದೆ!" ಎಂದು ನುಡಿಯಲು ; ರಾಯನು ಸಂತೋಷಭರಿತನಾಗಿ—"ಎಲೈ ವಿಜಯವರ್ಮನೇ, ಎನಗೆ ಶತ್ರುಗಳಾದ ಕೋಸಲ ದೇಶದ ಅರಸುಗಳು ಸೇನಾಪತಿಯಿಂದ ಜಯಿಸಲ್ಪಟ್ಟರೇ ಪೇಳು?" ಎನಲು ; ವಿಜ ಯವರ್ಮನು—"ಎಲೈ ಸ್ವಾಮಿಯೇ, ಅದಕ್ಕೆ ಸಂದೇಹವೇ ಇಲ್ಲವು" ಎಂದು ನುಡಿ ಯಲು ; ರಾಯನು—"ಭಳಿರೆ! ರುಮಣ್ವಂತನೇ! ನೀನು ಸೇನೆಯಂ ತೆಗೆದು ಕೊಂಡು ಪೋದುದಕೆ ಸಾರ್ಥಕವಾದ ಕಾರ್ಯವಂ ಗೆಯ್ದಿರುವೆ!" ಎಂದು, "ಎಲೈ ವಿಜ ಯವರ್ಮನೇ, ಎನಗೆ ಕೋಸಲದೇಶದ ವಿಜಯವಾರ್ತೆಯು ಬಹಳ ಪ್ರಯೋಜನ ವಾದ ಕಾರ್ಯವಾದುದರಿಂದ ವಿಸ್ತಾರವಾಗಿ ವಿಳಂಬವಾಗಿ ಕೇಳಲಿಚ್ಛೈಸುತ್ತಿರುವೆನು" ಎಂದು ನುಡಿಯಲು ; ವಿಜಯವರ್ಮನು—"ಎಲೈ ರಾಜೇಂದ್ರನೇ, ವಿಸ್ತಾರವಾಗಿ ಪೇಳುವೆನು ಕೇಳು. ಸೇನಾಪತಿಯಾದ ರುಮಣ್ವಂತನು ಪೂಜ್ಯನಾದ ನಿನ್ನ ಸನ್ನಿ ಧಿಯಿಂದ ಅಜ್ಞೆಯಂ ಪಡೆದು ನೀನು ಅಪ್ಪಣೆಯನ್ನಿತ್ತ ಮಾರ್ಗವಾಗಿ ಕೆಲವು ಪಾದ ಚಾರದಿಂದಲೂ ಕೆಲವು ಚತುರಂಗದಿಂದೊಡಗೂಡಿದ ಸೇನಾಸಮೂಹದಿಂದಲೂ ಪೋಗಿ ವಿಂಧ್ಯದುರ್ಗದಲ್ಲಿ ವಾಸವಂ ಗೆಯ್ಯುತ್ತಿದ್ದ ಕೋಸಲಪತಿಯನ್ನು ಮುತ್ತಿ ಗೆಯಂ ಗೆಯ್ಯಲಾಕೋಸಲರಾಜನು ಇವನಿಂದುಂಟಾದ ಅಪಮಾನವನ್ನು ಸೈರಿಸ ಲಾರದವನಾಗಿ ಆನೆಗಳಿಂದ ಅಧಿಕವಾಗಿರುವ ಸೇನಾಸಮೂಹವಂ ಸನ್ನಾಹವಂ ಗೆಯ್ದು ತೆಗೆದುಕೊಂಡು ಪೋದನು" ಎಂದು ನುಡಿಯುತ್ತಿರಲು ;

ವಿದೂಷಕನು—" ಎಲೈ ಶೂರನೇ, ಕೂಗಿ ನುಡಿಯದಿರು. ಈ ಯುದ್ಧವಾರ್ತೆಯನ್ನು ಕೇಳುವ ಎನ್ನ ಎದೆಯು ನಡುಗುತ್ತಿರುವುದು " ಎನಲು ;

ವಿಜಯವರ್ಮನು ಮಾಡಲ್ಪಟ್ಟ ನಿಶ್ಚಯವುಳ್ಳವನಾಗಿ ಆ ಕ್ಷಣದಲ್ಲೇ ವಿಂಧ್ಯ ಪರ್ವತದಿಂದ ಹೊರಮುಟ್ಟ ಮತ್ತೊಂದು ವಿಂಧ್ಯಪರ್ವತವೋ ಎಂಬಂತೆ ಮೆರೆಯುವ ಆನೆಗಳ ಸಮೂಹದಿಂದ ಸುತ್ತುವರಿಯಲ್ಪಟ್ಟವನಾಗಿ ಬಾಣಗಳನ್ನು ಬಹುವೇಗದಿಂ ಬಿಡುತ್ತ ಮದ್ದಾನೆಯಕಾಲುಗಳಿಂದ ಕಾಲಾಳುಗಳನ್ನು ತುಳಿಯಿಸುತ್ತಿರುವ ಆ ರುಮಣ್ವಂತನು ಇಮ್ಮಡಿಸಿದ ಮನೋಭೀಷ್ಟಾರ್ಥವಂ ಪಡೆದನು. ಮತ್ತು ನಾನಾಪ್ರಕಾರಗಳಾದ ಅಸ್ತ್ರಪ್ರಯೋಗಗಳಿಂದ ಸೇನಾಜನರ ಮಸ್ತಕಗಳೆಲ್ಲವೂ ಛೇದಿತಗಳಾಗುತ್ತಿರಲು ರಕ್ತನದಿಯು ಎತ್ತೆತ್ತಲೂ ಅಭಿವೃದ್ಧಿಯಂ ಪೊಂದಿ ಹರಿಯುತ್ತ ಯುದ್ಧರಂಗದಲ್ಲಿ ಬಿದ್ದಿರುವ ಹೆಣಗಳನ್ನೂ ಸಹ ಎಳೆದುಕೊಂಡು ಪೋಗುತ್ತಿರಲು, ಒಬ್ಬರೊಬ್ಬರು ಪೊಡೆಯುವುದರಿಂದ ಧ್ವನಿಯನ್ನುಂಟುಮಾಡುತ್ತಲಿರುವ ಆಯುಧಂಗಳು ಮಿಂಚುಗಳಂತೆ ದಿಕ್ಕುಗಳನ್ನು ಬೆಳಗುತ್ತಲಿರಲು, ಜಾಗ್ರತೆಯಿಂದ ಆ ಯುದ್ಧಮು ಖದಲ್ಲಿ ಕೋಸಲದೇಶಾಧಿಪತಿಯು ತನ್ನ ನಿಜಸೇನೆಗಳಿಂದ ಭಂಗಪನ್ನು ಪೊಂದುತ್ತಿರಲಾಸಮಯದಲ್ಲಿ ನಿನ್ನ ಸೇನಾಪತಿಯಾದ ರುಮಣ್ವಂತನು ಮದ್ದಾನೆಯ ಮಸ್ತಕದಲ್ಲಿ ಮುದ್ದಾಗಿ ಕುಳಿತಿರುವ ಆ ಕೋಸಲಪತಿಯ ಶಿರವನ್ನು ತನ್ನ ಕರದಲ್ಲಿದ್ದ ಭಲ್ಲಾಯುಧದಿಂದ ಛೇದಿಸಿದನು " ಎಂದು ನುಡಿಯಲು ;

ವಿದೂಷಕನು—" ಎಲೈ ರಾಜೇಂದ್ರನೆ, ನಮ್ಮಗಳಿಂದ ಸರ್ವವೂ ಜಯಿಸಲ್ಪಟ್ಟಿತು " ಎಂದು ಎದ್ದು ಕುಣಿಯುತ್ತಿರಲು ;

ವತ್ಸರಾಜನು—" ಎಲೈ ವಿಜಯವರ್ಮನೇ, ಆ ಕೋಸಲಪತಿಯ ಶತ್ರುಗಳಾದ ನಾವೂಕೂಡ ಅವನ ಪರಾಕ್ರಮವನ್ನೇ ವರ್ಣಿಸಬೇಕಾಯಿತು. ಆದುದರಿಂದ ಅವನ ಮರಣವಾರ್ತೆಯು ನಮಗೂ ಶ್ಲಾಘ್ಯವಾದುದು " ಎಂದು ನುಡಿಯಲು ; ವಿಜಯವರ್ಮನು—" ಎಲೈ ಸ್ವಾಮಿಯೇ, ರುಮಣ್ವಂತನು ಲೋಕದೇಶದ ರಕ್ಷಣೆಗೋಸುಗವಾಗಿ ತನ್ನ ಕಿರಿಯತಮ್ಮನಾದ ಜಯವರ್ಮನನ್ನು ಸ್ಥಾಪನೆಯಂಗೆಯ್ದು ರಣರಂಗದಲ್ಲಿ ಗಾಯವಡೆದಿರುವ ಗಜಸೇನೆಯನ್ನೂ ಮಿಕ್ಕಿದ್ದ ಚತುರಂಗಬಲವನ್ನೂ ಸಹ ಹಿಂತಿರುಗಿಸಿದಂಥವನಾಗಿ ಮೆಲ್ಲಮೆಲ್ಲನೆ ಕೌಶಾಂಬೀನಗರಿಯನ್ನೇ ಕುರಿತು ಬರುತ್ತಿರುವನು " ಎಂದು ವಿಜ್ಞಾಪಿಸಲು ; ರಾಯನು—" ಎಲೆ ವಸುಂಧರೆಯೇ, ನೀನು ಜಾಗ್ರತೆಯಿಂ ಪೋಗಿ ಮಂತ್ರಿಯಾದ ಯೌಗಂಧರಾಯಣನಂ ಕುರಿತು ಪೇಳುವುದೇನೆಂದರೆ—ಈಗ ಕೋಸಲದೇಶದ ಅರಸನ್ನು ಸಂಹಾರವಂ ಗೆಯ್ದು ಸಮಸ್ತ ಸೇನೆಯಿಂದಲೂ ಒಡಗೂಡಿ ಬರುವ ರುಮಣ್ವಂತನಿಗೆ ಇದಿರುಗೊಂಡು ಪೋಗಿ ಅನೇಕವಾದ ಸತ್ಕಾರವಂ ಗೆಯ್ಯುವಂತೆ ಎನ್ನ ಅಜ್ಞೆಯಾಗಿರುವುದೆಂದು ಪೇಳುವಳಾಗು "

ಎನಲಾದ್ವಾರಪಾಲಕಿಯು—“ ಹೇಗೆ ಆಜ್ಞೆಯಾಗುತ್ತಲಿರುವುದೋ ಆ ರೀತಿಯಿಂದ ನಡೆದುಕೊಳ್ಳುವೆನು ” ಎಂದು ಪೋಗಲು ;

ಇತ್ತಲು ವಾಸವದತ್ತಾದೇವಿಯು ಇರುವ ಅಂತಃಪುರಕ್ಕೆ ಮಂತ್ರಿಯಾದ ಯೌಗಂಧರಾಯಣನು ಬಂದು, ನಮಸ್ಕಾರವಂ ಗೆಯ್ದು, “ ಎಲೌ ಪೂಜ್ಯಳಾದ ದೇವಿಯೇ, ನಿಮ್ಮ ತೌರುಮನೆಯಾದ ಉಜ್ಜಯಿನೀಪಟ್ಟಣದಿಂದ ಒಬ್ಬಾನೊಬ್ಬ ಇಂದ್ರಜಾಲವಿದ್ಯೆಯಲ್ಲಿ ಬುದ್ಧಿವಂತನಾದ ಪುರುಷನು ಬಂದು ತಾನು ಕಲಿತಿರುವ ವಿದ್ಯಾಕೌಶಲವಂ ತೋರಿಸಿ ಬಹುಮಾನವನ್ನು ಪಡೆಯಬೇಕೆಂದು ಇಚ್ಛೈಸುತ್ತಿರುವನು ” ಎಂದು ವಿಜ್ಞಾಪಿಸಲಾದೇವಿಯು ಸಂತುಷ್ಟಳಾಗಿ ಮಂತ್ರಿಗೆ ಹೂವಿನ ಹಾರವನ್ನೂ ಸುತ್ತುವೀಳ್ಯವನ್ನೂ ಪಲಬಗೆಗಳಾದ ಫಲಗಳನ್ನೂ ಸಹ ತರಿಸಿಕೊಟ್ಟು ಸತ್ಕರಿಸಿ ಕಳುಹಿಸಿ, ಕಾಂಚನಮಾಲೆಯಂ ಕುರಿತು—“ ಎಲೆ ಬಾಲೆಯೇ, ಈಗ ನಮ್ಮ ಉಜ್ಜಯಿನೀ ಪಟ್ಟಣದಿಂದ ಬಂದಿರುವ ಐಂದ್ರಜಾಲಿಕ ವಿದ್ಯಾಪರೀಕ್ಷೆಯನ್ನು ನಾನು ಕುಳಿತು ನೋಡುವುದು ಯುಕ್ತವಲ್ಲ. ಯಾವ ಪರಿಯಿಂದಲಾದರೂ ನಮ್ಮ ರಾಜೇಂದ್ರನಂ ಇಲ್ಲಿಗೆ ಕರೆದುಕೊಂಡುಬರುವಳಾದರೆ ನನ್ನ ಮನಕ್ಕೆ ಬಹಳ ಸಂತೋಷವು ಪುಟ್ಟುತ್ತಲಿರುವುದು ” ಎಂದು ನುಡಿಯಲಾಕಾಂಚನಮಾಲೆಯು—“ ನಾವು ಮಾಡಿದ ನಿಷ್ಠುರವಾದ ಕಾರ್ಯವನ್ನು ಸ್ಮರಿಸಿದಲ್ಲಿ ನಮ್ಮ ಮುಖವನ್ನು ನಮ್ಮ ರಾಜೇಂದ್ರನು ಕಣ್ಣೆತ್ತಿನೋಡಿ ಮಾತನಾಡಲಾರನು. ಆದರೂ ನಿನ್ನ ಆಜ್ಞೆಯಾಗಂತೆ ನಡೆದುಕೊಳ್ಳುವೆನು ” ಎಂದು ಅಲ್ಲಿಂದ ಪೊರಮಟ್ಟು, ಸರಿಗೆಯ ಸೀರೆಯ ಸೆರಗನ್ನು ಒಂದುಸರಿಯಾಗಿ ಎಡಗೆಯ್ಯಿಂದ ಮುಂದು ಪಿಡಿದೆತ್ತಿ, ಕಾಲುಂಗರ ಕಾಲುಸರ ಗಗ್ಗರಗಳ ಸದ್ದುಗಳು ನಿದ್ದೆಗೆಯ್ಯುತ್ತಿರುವ ಮನ್ಮಥನನ್ನು ಎಬ್ಬಿಸುತ್ತಿರುವುವೋ ಎಂಬಂತೆ ದಿಕ್ಕುಗಳನ್ನು ತುಂಬುತ್ತಿರಲು, ಊಳಿಗದ ಹೆಣ್ಣುಗಳೆಲ್ಲವನ್ನೂ ಅಲ್ಲೇ ನಿಲ್ಲಿಸಿ ಹುಲ್ಲೆಯ ಮರಿಯಂತೆ ಚಂಚಲವಾದ ದೃಷ್ಟಿಯನ್ನು ತಾಳಿ ಬರುತ್ತಿರಲು ;

ದ್ವಾರಪಾಲಕಿಯು ಶೀಘ್ರದಿಂ ಬಂದು, “ ಎಲೈ ರಾಜೇಂದ್ರನೇ, ನೀನಿರುವ ಸ್ಥಾನವಂ ಕುರಿತು ಕಾಂಚನಮಾಲೆಯು ಬರುತ್ತಿರುವಳು ” ಎಂದು ಬಿನ್ನೈಸಲು ; ಅಲ್ಲಿದ್ದ ವಿಜಯವರ್ಮನು ಎದ್ದು ರಾಯನಿಗೆ ವಂದನೆಯಂ ಗೆಯ್ದು ಪೋಗಲು ; ವಿದೂಷಕನು— “ ಎಲೈ ರಾಜೇಂದ್ರನೇ, ಈಗ ಕಾಂಚನಮಾಲೆಯು ಇನ್ನೇನು ದುಷ ಕಾರ್ಯವಂ ಗೆಯ್ಯುವುದಕೆ ಬರುವಳೋ ಎಂದು ಎನ್ನ ಮನವು ಚಂಚಲವಾಗುತ್ತಿರುವುದು ” ಎಂದು ನುಡಿಯುತ್ತಿರಲು ;

ಅಷ್ಟರಲ್ಲೇ ಕಾಂಚನಮಾಲೆಯು ಮಿಂಚಿನ ಬಳ್ಳಿಯಂತೆ ಕಾಂಚನವಸ್ತ್ರದಿಂದ ಭೂಷಿತಳಾಗಿ ರಾಯನ ಸಮೀಪಕ್ಕೆ ಭಯದಿಂದೊಡಗೂಡಿ ಬಂದು ನಮಸ್ಕಾರವಂ ಗೆಯ್ದು ನಿಂದಿರಲು ; ರಾಯನು ಆವಳ ಮುಖವನ್ನು ನೋಡದೆ, ಬತ್ತಿನಲ್ಲಿದ್ದ ವಿದೂ

ಷಕನಿಗೆ ಕಣ್ಣುಸನ್ನೆಯಂ ಗೆಯ್ಯಲು; ಅವನು— “ ಎಲೆ ಕಾಂಚನಮಾಲೆಯೇ, ನಮ್ಮ ರಾಜೇಂದ್ರನ ಸಮೀಪಕ್ಕೆ ಈಗ ನೀನು ಬಂದುದು ಅತ್ಯಂತಾಶ್ಚರ್ಯವಾಗಿರುವುದು. ಬಂದ ವೃತ್ತಾಂತವನ್ನು ಮರೆಗೆಯ್ಯದೆ ಪೇಳುವಳಾಗು ” ಎಂದು ನುಡಿಯಲು; ಅವಳು ರಾಯನಂ ಕುರಿತು,—“ ಎಲೈ ಮಹಾರಾಜನೇ, ಈಗ ಉಜ್ಜಯಿನೀಪಟ್ಟಣದಿಂದ ಒಬ್ಬ ಇಂದ್ರಜಾಲವಿದ್ಯೆಯಲ್ಲಿ ಬುದ್ಧಿವಂತನಾದ ಪುರುಷನು ಬಂದಿರುವನು. ಅವನ ವಿದ್ಯಾಪರೀಕ್ಷೆಯಂ ತೆಗೆದುಕೊಂಡು ಅವನಿಗೆ ಬಹುಮಾನವನ್ನುಂಟುಮಾಡಿಕೊಡಬೇಕೆಂದು ವಾಸವದತ್ತಾದೇವಿಯವರು ಬಿನ್ನೈಸುವಂತೆ ಅಪ್ಪಣೆಯನಿತ್ತು ಕಳುಹಿಸಿದರು ” ಎಂದು ಬಿನ್ನೈಸಲು; ರಾಯನು—“ ಎಲೆ ಕಾಂಚನಮಾಲೆಯೇ, ಆ ಇಂದ್ರಜಾಲವಿದ್ಯವುಳ್ಳವನನ್ನು ಇಲ್ಲಿಗೆ ಕರೆದುಕೊಂಡು ಬರುವಳಾದರೆ ಅವನ ವೃತ್ತಾಂತವಂ ತಿಳಿದು ವಿದ್ಯಾಪರೀಕ್ಷೆಯಂ ಗೆಯ್ಯಬಹುದು ” ಎಂದು ನುಡಿಯಲು; ಕಾಂಚನಮಾಲೆಯು—“ ಆಜ್ಞೆಯಾದಂತೆ ನಡೆದುಕೊಳ್ಳುವೆನು ” ಎಂದು ಅಲ್ಲಿ ನಿಲ್ಲದೆ ಪೋಗಿ, ಆ ವಾರ್ತೆಯನ್ನು ವಾಸವದತ್ತಾದೇವಿಗೆ ಶ್ರುತಪಡಿಸಿ, ಅವಳ ಆಜ್ಞೆಯಿಂದ ಮಂತ್ರಿಯ ಸಮೀಪದಲ್ಲಿದ್ದ ಆ ಇಂದ್ರಜಾಲದವನಂ ಕರೆದುಕೊಂಡು ರಾಯನ ಸಮೀಪವಂ ಪೊಂದಿ ರಾಯನಂ ಕುರಿತು—“ ಎಲೈ ರಾಜೇಂದ್ರನೇ, ಇವನೇ ” ಎಂದು ನವಿಲುಗರಿಯುಳ್ಳ ಕರದಿಂ ವಿರಾಜಿತನಾಗಿರುವ ಇಂದ್ರಜಾಲಿಕನನ್ನು ತೋರಿಸಲು;

ಅವನು ರಾಯನಿಗೆ ನಮಸ್ಕಾರವಂ ಗೆಯ್ದು—“ ಈ ಎನ್ನ ವಿದ್ಯಕೆ ಇಂದ್ರನೇ ಅಧಿದೈವನಾದುದರಿಂದ ಇಂದ್ರನ ಚರಣಗಳಿಗೆ ವಂದನೆಯಂಗೆಯ್ದು, ಮಾಯಾವಿದ್ಯಾವಿಚಾರಗಳಿಗೆಲ್ಲಾ ಗುರುವಾದ ಶಂಬರಾಸುರನಿಗೆ ವಂದನೆಯಂಗೆಯ್ಯುವೆನು ” ಎಂದು ನುಡಿದು, ಬಳಿಕ, “ ಎಲೈ ಮಹಾರಾಜೇಂದ್ರನೇ ಜಯವುಳ್ಳವನಾಗು. ಈಗ ನಾನು ಭೂಮಿಯಲ್ಲಿ ಚಂದ್ರನನ್ನು, ಆಕಾಶದಲ್ಲಿ ಪರ್ವತಂಗಳನ್ನು ಜಲದಲ್ಲಿ ದಳ್ಳುರಿಯನ್ನೂ ಅರ್ಧರಾತ್ರಿಯಲ್ಲಿ ಹಗಲನ್ನೂ ಸಹ ತೋರಿಸುವೆನು. ಎಲೆ ರಾಜೇಂದ್ರನೇ, ಎನ್ನ ವಿದ್ಯಾಚಾತುರ್ಯ ನಿಮಿತ್ತ ಮಂತ್ರಪ್ರಭಾವದಿಂದ ಯಾವ್ಯಾವುದು ಅಸಾಧ್ಯವಾಗಿ ತೋರುತ್ತಲಿರುವುದೋ ಅವುಗಳನ್ನು ಸುಲಭವಾಗಿ ಸಾಧ್ಯವಾಗಿ ತೋರಿಸುವೆನು ” ಎಂದು ಪ್ರತಿಜ್ಞೆಯನ್ನು ವಿರಚಿಸುತ್ತಿರಲು;

ವಿದೂಷಕನು,—“ ಎಲೈ ರಾಜೇಂದ್ರನೇ, ನಿನ್ನ ಸಮೀಪದಲ್ಲಿ ಇವನು ಬಹುವಾಗಿ ಕೊಬ್ಬಿನಿಂದ ನುಡಿಯುತ್ತಿರುವನಾದುದರಿಂದ ಇವನಲ್ಲಿ ಪೇಳುವ ಗುಣಗಳೆಲ್ಲವೂ ನಿಜವಾಗಿರುವುದಾಗಿ ತೋರುತ್ತಿರುವುದು ” ಎಂದು ನುಡಿಯಲು;

ರಾಯನು ಕಾಂಚನಮಾಲೆಯಂ ಕುರಿತು—“ ಎಲೆ ಕಾಂತೆಯೇ, ಈ ಐಂದ್ರಜಾಲಿಕನು ನಿನ್ನ ತೌರುಮನೆಯಾದ ಉಜ್ಜಯಿನೀ ಪಟ್ಟಣದವನಾಗಿರುವುದರಿಂದಲೂ, ಇಲ್ಲಿಗೆ ನೀನು ಬಂದಲ್ಲಿ ಈ ಸ್ಥಳವು ವಿಶೇಷವಾದ ಜನಗಳಿಂದ ಶೂನ್ಯವಾಗಿರುವುದರಿಂ

ದಲೂ, ಇಲ್ಲಿಗೆ ನೀನೇ ಬಂದಲ್ಲಿ ಇಲ್ಲಿ ಕುಳಿತು ನಾವಿರ್ವರೂ ಇವನ ವಿದ್ಯಾಪರೀಕ್ಷೆಯನ್ನು ತೆಗೆದುಕೊಳ್ಳಬಹುದೆಂದು ವಾಸವದತ್ತೆಗೆ ಪೇಳಿ ಅವಳನ್ನು ಕರೆದುಕೊಂಡು ಬರುವುದು ” ಎಂದು ಅಪ್ಪಣೆಯನ್ನೀಯಲು ; ಅವಳು—ಅಜ್ಞೆಯಾದಂತೆ ನಡೆದು ಕೊಳ್ಳುವೆನೆಂದು ವಾಸವದತ್ತಾದೇವಿಯ ಸಮೀಪಮಂ ಸಾರ್ದಳು.

ಎಂಬಲ್ಲಿಗೆ
ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್

ವತ್ಸರಾಜನ ಕಥೆಯಲ್ಲಿ

ಹದಿನಾರನೆಯ ಗುಚ್ಛಂ ಸಂಪೂರ್ಣಮ್.

## ಹದಿನೇಳನೆಯ ಗುಚ್ಛಂ

ಅನಂತರದಲ್ಲಿ ಕಾಂಚನಮಾಲೆಯು ರಾಯನ ಅಜ್ಞೆಯಂ ಪಡೆದು, ವಾಸವದತ್ತಾದೇವಿಯ ಸಮೀಪಮಂ ಸೇರಿ, “ ಎಲೌ ಪೂಜ್ಯಳಾದ ವಾಸವದತ್ತಾದೇವಿಯೇ, ಐಂದ್ರಜಾಲಿಕನ ವೃತ್ತಾಂತವನ್ನು ವಿಜ್ಞಾಪಿಸುವಲ್ಲಿ ರಾಯನು ಸುಮುಖನಾಗಿ ಕೋಪಮಂ ತಾಳದೆ ನಸುನಗುತ್ತ ಪೂಜ್ಯಳಾದ ನಿನ್ನನ್ನೇ ಅಲ್ಲಿಗೆ ಕರೆದುಕೊಂಡು ಬರುವಂತೆ ಅಪ್ಪಣೆಯನ್ನಿತ್ತಿರುವನು. ಈ ಸಮಯದಲ್ಲಿ ತಡವಂ ಮಾಡದೆ ನಡೆಯುವಳಾಗಿ ಪೋಗಿ ಆ ಮಹಾರಾಜೇಂದ್ರನಿಗೆ ಸಂತೋಷವನ್ನುಂಟುಮಾಡುವಳಾಗು. ಒಂದುವೇಳೆಯಲ್ಲಿ ಸಾಗರಿಕೆಯ ವೃತ್ತಾಂತವನ್ನು ಕೇಳಿದಾಗ್ಯೂ ವಿರೋಧವಿಲ್ಲದ ವಾಕ್ಯವನ್ನು ಪೇಳುವಳಾಗು ” ಎನಲಾದೇವಿಯು—“ ಎಲೆ ಬಾಲೆಯೇ, ಕೇಳು. ಯಾವ ರಾಜೇಂದ್ರನಂ ನಮಸ್ಕಾರಾದಿಗಳಂ ಮಾಡಿದಾಗ್ಯೂ ಲಕ್ಷಿಸದೆ ತಿರಸ್ಕಾರವಂ ಗೆಯ್ದಿರ್ಪೆನೋ ಈ ಆ ರಾಜೇಂದ್ರನಿಗೆ ಮುಖವಂ ತೋರಿಸುವುದಕೆ ಲಜ್ಜೆಯಂ ಪೊಂದುತ್ತಿರುವೆನು. ಆದರೂ ನಮ್ಮ ತೌರೂರಿನಿಂದ ಬಂದಿರುವ ಈ ಐಂದ್ರಜಾಲಿಕನಿಗೆ ಬಹುಮಾನವನ್ನು ಮಾಡಿಸುವುದಕ್ಕೋಸುಗವಾಗಿ ಪೋಗಬೇಕಾಗಿರುವುದು ” ಎಂದು ನುಡಿದು, ಅಲ್ಲಿಂದ ಪೊರಮಟ್ಟು, ಕಾಂಚನಮಾಲೆಯಿಂದೊಡಗೂಡಿ ಬರುತ್ತ, “ ಎಲೆ ಬಾಲೆಯೇ, ಐಂದ್ರಜಾಲಿಕನು ನಮ್ಮ ಉಜ್ಜಯಿನೀಪಟ್ಟ

ಣದಿಂದ ಬಂದಿರುವನಾದುದರಿಂದ ಅವನಲ್ಲಿ ಎನಗೆ ಬಲವತ್ತರವಾದ ಅಭಿಮಾನವು ಉಂಟಾಗಿರುವುದು " ಎಂದು ನುಡಿಯಲು ; ಅವಳು—" ಎಲೈ ದೇವಿಯೇ, ಸಮಸ್ತ ಸ್ತ್ರೀಯರಿಗೂ ತೌರುಮನೆಯಲ್ಲಿ ಅಭಿಮಾನವಿರುವುದು ಯುಕ್ತವಾಗಿರುವುದು " ಎಂದು ನುಡಿಯಲು ; ದೇವಿಯು ರಾಯನಿರುವ ಸ್ಥಾನವಂ ಕುರಿತು ಬಂದು, " ಎಲೈ ರಾಜೇಂದ್ರನೇ, ಜಯವುಳ್ಳವನಾಗು " ಎಂದು ನುಡಿದು ನಮಸ್ಕಾರವಂ ಗೆಯ್ದು ನಿಂದಿರಲು;

ರಾಯನು ಸಾಗರಿಕೆಗೆ ಮಾಡಿದ ಹಿಂಸೆಯನ್ನು ಸ್ಮರಿಸಿ, ಒಂದು ಕ್ಷಣಮಾತ್ರ ವಾಸವದತ್ತೆಯ ವದನವಂ ನೋಡದೆ, ಏನೋ ಒಂದು ವಸ್ತುವಂ ನೋಡುವನಂತೆ ಮುಖವನ್ನು ತಿರುಗಿಸಿರಲು ; ವಿದೂಷಕನು ರಾಯನ ಅಭಿಪ್ರಾಯವಂ ತಿಳಿದು, " ಎಲೈ ರಾಜೇಂದ್ರನೇ, ನೀನಾಗಿ ವಾಸವದತ್ತೆಯಂ ಕರೆಯಿಸಿ ಅವಳ ಯೋಗಕ್ಷೇಮವಂ ಕೇಳದೆ, ಅಪಮಾನವಂ ಗೆಯ್ಯುವುದು ನ್ಯಾಯವಲ್ಲ. ಮನಸ್ಸಿನಲ್ಲಿ ಎಷ್ಟು ವಿರೋಧವಿದ್ದಾಗ್ಯೂ ಮುಸಕೆ ಕೊರತೆಯಂ ವಿರಚಿಸಬಾರದು " ಎಂದು ನುಡಿಯಲು ; ರಾಯನು ಅವನ ವಚನಕ್ಕೆ ಒಡಂಬಟ್ಟು, ಮುಖವಂ ತಿರುಹಿ " ಎಲೆ ವಾಸವದತ್ತೆಯೇ, ನಿನಗೆ ಕ್ಷೇಮವೆ? " ಎಂದು ನುಡಿದು, " ಈ ಐಂದ್ರಜಾಲಕನು ಬಹುವಾದ ವಿದ್ಯೆಗಳು ತನ್ನಲ್ಲಿ ಇರುವುವೆಂದು ಗರ್ವಿಸಿ ನುಡಿಯುತ್ತಿರುವನು. ಇವನನ್ನು ಪರೀಕ್ಷಿಸಬೇಕಾಗಿರುವುದು. ಆದುದರಿಂದ ಇಲ್ಲಿ ಬಂದು ಕುಳ್ಳಿರುವುದು " ಎಂದು ತನ್ನ ಒತ್ತಿನಲ್ಲಿ ಕುಳ್ಳಿರಿಸಿಕೊಳ್ಳಲು ;

ದೇವಿಯು ರಾಯನ ಇಂಗಿತವಂ ತಿಳಿದು, ಕಾಂಚನಮಾಲೆಯಂ ಕುರಿತು— " ಎಲೆ ಬಾಲೆಯೇ, ರಾಯನ ನಡೆವಳಿಕೆ ಬೇರೊಂದು ಪರಿಯಾಗಿ ತೋರುತ್ತಲಿರುವುದು. ಆದರೂ ಮುಂದೆ ಕಾರ್ಯದಲ್ಲಿ ತಿಳಿಯಬೇಕು " ಎಂದು ರಹಸ್ಯವಾಗಿ ನುಡಿಯುತ್ತಿರಲು ;

ರಾಯನು—" ಎಲೈ ಐಂದ್ರಜಾಲಿಕನೇ, ನಿನ್ನ ವಿದ್ಯಾಕೌಶಲಮಂ ತೋರಿಸುವನಾಗು " ಎಂದು ಅಪ್ಪಣೆಯನ್ನೀಯಲು ;

ಅವನು ನವಿಲುಗರಿಯ ಕಂತೆಯನ್ನು ವೈಯಾರದಿಂ ತಿರುಹುತ್ತ, " ಇದೋ ! ಇದೋ ! ಆಕಾಶದಲ್ಲಿ ಹರಿಹರಬ್ರಹ್ಮಾದಿಗಳೂ, ದೇವಾಧಿಪತಿಯಾದ ಇಂದ್ರನೂ, ಇನ್ನೂ ಸಿದ್ಧವಿದ್ಯಾಧರಗರುಡಗಂಧರ್ವರುಗಳೂ, ಅಪ್ಸರಸ್ತ್ರೀಯರುಗಳಿಂದೊಡಗೂಡಿ ನಾಟ್ಯಮಂ ಗೆಯ್ಯುತ್ತಿರುವರು " ಎಂದು ನುಡಿಯಲು ;

ವಿದೂಷಕನು ಆಕಾಶಮಂ ನೋಡಿ, ಕುಳಿತಿದ್ದ ಸ್ಥಾನದಿಂದೆದ್ದು ನಿಂತು, ಕೈಗಳಂ ಮುಗಿದುಕೊಂಡು, " ಎಲೈ ರಾಜೇಂದ್ರನೇ, ಇದೋ ! ಬ್ರಹ್ಮನು ಪದ್ಮಾಸನದಲ್ಲಿ ಮಂಡಿಸಿ ತೋರುತ್ತಿರುವನು. ಚಂದ್ರನ ಕಲೆಯಿಂದ ಸುಂದರನಾದ ಶಿವನು ಕೈಲಾಸದಂತೆ ಒಪ್ಪುತ್ತಲಿರುವ ವೃಷಭಾರೂಢನಾಗಿ ಪಾರ್ವತೀಸಮೇತನಾಗಿ ಪ್ರಮ

ಥಗಣಗಳಿಂ ಪರಿವೃತನಾಗಿ ತೋರುತ್ತಲಿರುವನು. ವಿಷ್ಣುವು ಗದಾ ಚಕ್ರಾದಿಗಳಿಂದ ಶುಭವಾಗಿ ಶೋಭಿಸುತ್ತಿರುವ ನಾಲ್ಕು ತೋಳುಗಳಿಂದ ರಮಣೀಯನಾಗಿ ಲಕ್ಷ್ಮೀಸಮೇತನಾಗಿ ಪಕ್ಷಿಗಳಿಗೆಲ್ಲಾ ಪತಿಯಾದ ಗರುಡನ ಹೆಗಲನ್ನೇರಿ ರಾಜಿಸುತ್ತಿರುವನು. ದೇವಾಧಿಪತಿಯಾದ ಇಂದ್ರನು ಸಿದ್ಧಸಾಧ್ಯ ಕಿನ್ನರ ಕಿಂಪುರುಷ ಮುಂತಾದ ದೇವಗಣದಿಂದ ಪರಿವೃತನಾಗಿ ರಂಭೋರ್ವಶೀಮೇನಕಾ ತಿಲೋತ್ತಮೆ ಮೊದಲಾದ ಅಪ್ಸರಸ್ತ್ರೀಯರ ನಾಟ್ಯಮಂ ನೋಡುತ್ತ ನಲಿಯುತ್ತಿರುವನು " ಎಂದು ಅತ್ಯಾಶ್ಚರ್ಯದಿಂದ ಯುಕ್ತನಾಗಿ ನೋಡುತ್ತಿರಲು ;

ರಾಯನು ಗಗನವಂ ನೋಡಿ, ಆಶ್ಚರ್ಯವಂ ಪೊಂದಿ, " ಭಳಿರೇ ! ಐಂದ್ರಜಾಲಿಕನೇ ! ನಿನ್ನ ಸಮಾನರಾದ ವಿದ್ಯಾವಂತರನ್ನು ಈ ಲೋಕದಲ್ಲಿ ಕಾಣೆನು " ಎಂದು ಶ್ಲಾಘನೆಯಂ ಗೆಯ್ಯುತ್ತಿರುವುದರಲ್ಲೇ ವಿದೂಷಕನು ತನ್ನಲ್ಲಿ ತಾನು ಆಲೋಚಿಸಿ—" ಎಲೊ, ದಾಸೀಪುತ್ರನಾದ ಐಂದ್ರಜಾಲಿಕನೇ, ಈಗ ನೀನು ತೋರಿಸಿದ ಇಂದ್ರಚಂದ್ರ ಮುಂತಾದ ದೇವತೆಗಳಿಂದ ಏನು ಪ್ರಯೋಜನವು? ಈ ರಾಯನಿಂದ ಬಹುಮಾನವಂ ಪಡೆದು ಹೆಸರನ್ನು ಸಂಪಾದಿಸಬೇಕಾದಲ್ಲಿ ನಾಗರಿಕೆಯನ್ನು ತೋರಿಸುವನಾಗು. ಇಲ್ಲವಾದಲ್ಲಿ ಇಲ್ಲಿ ನಿನಗೆ ಒಂದು ತೃಣ ಪ್ರಯೋಜನವೂ ದೊರಕಲಾರದು " ಎಂದು ನುಡಿಯುತ್ತಿರಲು ;

ಅಷ್ಟರಲ್ಲೇ ದ್ವಾರಪಾಲಕಿಯು ವೇಗದಿಂ ಬಂದು ರಾಯನಿಗೆ ನಮಸ್ಕಾರವಂ ಗೆಯ್ದು, " ಎಲೈ ರಾಜೇಂದ್ರನೇ, ಯೌಗಂಧರಾಯಣನು ವಿಜ್ಞಾಪನೆಯಂ ಗೆಯ್ಯುವಂತೆ ಪೇಳಿರುವುದೇನೆಂದರೆ—ಈಗ ಸಿಂಹಳ ದೇಶಕ್ಕೆ ಮಂತ್ರಿಯಾಗಿ ದೇವಿಯವರಿಗೆ ಮಾವನಾದ ವಸುಭೂತಿಯು ಬಾಭ್ರವ್ಯನೆಂಬ ಕಂಚುಕಿಯೊಂದೊಡಗೂಡಿ ನಿಮ್ಮ ಕಾಣಲೋಸುಗ ಬಂದಿರುವನಾದುದರಿಂದ ಸ್ವಾಮಿಯವರು ಶುಭಮುಹೂರ್ತದಲ್ಲಿ ಅವರನ್ನು ಕಾಣುವುದು ಯುಕ್ತವು. ನಾನು ರಾಜಕಾರ್ಯಶೇಷವಂ ಸಮಾಪ್ತಿಯಂಗೆಯ್ದು ಸನ್ನಿಧಿಯಂ ಕುರಿತು ಬರುವೆನೆಂದು ವಿಜ್ಞಾಪಿಸುವನು " ಎನಲು ;

ಆ ವಾಕ್ಯವಂ ಕೇಳಿದ ವಾಸವದತ್ತಾದೇವಿಯು—" ಎಲೈ ಮಹಾರಾಜನೇ, ಈ ಇಂದ್ರಜಾಲವಿದ್ಯೆಯನ್ನು ಇನ್ನೊಂದು ವೇಳೆಯಲ್ಲಿ ನೋಡಬಹುದು. ಈಗ ಸಿಂಹಳದೇಶದಿಂದ ಬಂದ ಮಾವನಾದ ವಸುಭೂತಿಯನ್ನು ಕಾಣುವುದು ಯುಕ್ತವಾಗಿರುವುದು " ಎಂದು ನುಡಿಯಲು ;

ರಾಯನು—" ದೇವಿಯೇ, ನಿನಗೆ ಯಾವುದು ಸಮ್ಮತವೋ ಆ ರೀತಿಯು ಎನಗೂ ಸಮ್ಮತವೇ ಸರಿ " ಎಂದು, " ಎಲೈ ಐಂದ್ರಜಾಲಿಕನೇ, ನಿನ್ನ ವಿದ್ಯೆಯನ್ನು ಇನ್ನೊಂದುಬಾರಿ ನೋಡುವೆವು. ಈಗ ನಿನ್ನ ಸಾಮಗ್ರಿಯಂ ತೆಗೆದುಕೊಂಡು ಪೋಗುವನಾಗು " ಎಂದು ನುಡಿಯಲು ; ಅವನು—" ಎಲೈ ಸ್ವಾಮಿಯೇ, ನಿನ್ನ ಅಪ್ಪಣೆಯಾದಂತೆ ನಡೆದುಕೊಳ್ಳುವೆನು. ಆದರೂ ಇನ್ನೊಂದು ವಿದ್ಯೆಯು ಸ್ವಾಮಿ

ಣದಿಂದ ಬಂದಿರುವನಾದುದರಿಂದ ಅವನಲ್ಲಿ ಎನಗೆ ಬಲವತ್ತರವಾದ ಅಭಿಮಾನವು ಉಂಟಾಗಿರುವುದು " ಎಂದು ನುಡಿಯಲು ; ಅವಳು—" ಎಲೈ ದೇವಿಯೇ, ಸಮಸ್ತ ಸ್ತ್ರೀಯರಿಗೂ ತೌರುಮನೆಯಲ್ಲಿ ಅಭಿಮಾನವಿರುವುದು ಯುಕ್ತವಾಗಿರುವುದು " ಎಂದು ನುಡಿಯಲು ; ದೇವಿಯು ರಾಯನಿರುವ ಸ್ಥಾನವಂ ಕುರಿತು ಬಂದು, " ಎಲೈ ರಾಜೇಂದ್ರನೇ, ಜಯವುಳ್ಳವನಾಗು " ಎಂದು ನುಡಿದು ನಮಸ್ಕಾರವಂ ಗೆಯ್ದು ನಿಂದಿರಲು;

ರಾಯನು ಸಾಗರಿಕೆಗೆ ಮಾಡಿದ ಹಿಂಸೆಯನ್ನು ಸ್ಮರಿಸಿ, ಒಂದು ಕ್ಷಣಮಾತ್ರ ವಾಸವದತ್ತೆಯ ವದನವಂ ನೋಡದೆ, ಏನೋ ಒಂದು ವಸ್ತುವಂ ನೋಡುವನಂತೆ ಮುಖವನ್ನು ತಿರುಗಿಸಿರಲು ; ವಿದೂಷಕನು ರಾಯನ ಅಭಿಪ್ರಾಯವಂ ತಿಳಿದು, " ಎಲೈ ರಾಜೇಂದ್ರನೇ, ನೀನಾಗಿ ವಾಸವದತ್ತೆಯಂ ಕರೆಯಿಸಿ ಅವಳ ಯೋಗಕ್ಷೇಮವಂ ಕೇಳದೆ, ಅಪಮಾನವಂ ಗೆಯ್ಯುವುದು ನ್ಯಾಯವಲ್ಲ. ಮನಸ್ಸಿನಲ್ಲಿ ಎಷ್ಟು ವಿರೋಧವಿದ್ದಾಗ್ಯೂ ಮನಕೆ ಕೊರತೆಯಂ ವಿರಚಿಸಬಾರದು " ಎಂದು ನುಡಿಯಲು ; ರಾಯನು ಅವನ ವಚನಕ್ಕೆ ಒಡಂಬಟ್ಟು, ಮುಖವಂ ತಿರುಹಿ " ಎಲೆ ವಾಸವದತ್ತೆಯೇ, ನಿನಗೆ ಕ್ಷೇಮವೆ? " ಎಂದು ನುಡಿದು, " ಈ ಐಂದ್ರಜಾಲಕನು ಬಹುವಾದ ವಿದ್ಯೆಗಳು ತನ್ನಲ್ಲಿ ಇರುವುವೆಂದು ಗರ್ವಿಸಿ ನುಡಿಯುತ್ತಿರುವನು. ಇವನನ್ನು ಪರೀಕ್ಷಿಸಬೇಕಾಗಿರುವುದು. ಆದುದರಿಂದ ಇಲ್ಲಿ ಬಂದು ಕುಳ್ಳಿರುವುದು " ಎಂದು ತನ್ನ ಒತ್ತಿನಲ್ಲಿ ಕುಳ್ಳಿರಿಸಿಕೊಳ್ಳಲು ;

ದೇವಿಯು ರಾಯನ ಇಂಗಿತವಂ ತಿಳಿದು, ಕಾಂಚನಮಾಲೆಯಂ ಕುರಿತು— " ಎಲೆ ಬಾಲೆಯೇ, ರಾಯನ ನಡೆವಳಿಕೆ ಬೇರೊಂದು ಪರಿಯಾಗಿ ತೋರುತ್ತಲಿರುವುದು. ಆದರೂ ಮುಂದೆ ಕಾರ್ಯದಲ್ಲಿ ತಿಳಿಯಬೇಕು " ಎಂದು ರಹಸ್ಯವಾಗಿ ನುಡಿಯುತ್ತಿರಲು ;

ರಾಯನು—" ಎಲೈ ಐಂದ್ರಜಾಲಿಕನೇ, ನಿನ್ನ ವಿದ್ಯಾಕೌಶಲಮಂ ತೋರಿಸುವನಾಗು " ಎಂದು ಅಪ್ಪಣೆಯನ್ನೀಯಲು ;

ಅವನು ನವಿಲುಗರಿಯ ಕಂತೆಯನ್ನು ವೈಯಾರದಿಂ ತಿರುಹುತ್ತ, " ಇದೋ ! ಇದೋ ! ಆಕಾಶದಲ್ಲಿ ಹರಿಹರಬ್ರಹ್ಮಾದಿಗಳೂ, ದೇವಾಧಿಪತಿಯಾದ ಇಂದ್ರನೂ, ಇನ್ನೂ ಸಿದ್ಧವಿದ್ಯಾಧರಗರುಡಗಂಧರ್ವರುಗಳೂ, ಅಪ್ಸರಸ್ತ್ರೀಯರುಗಳಿಂದೊಡಗೂಡಿ ನಾಟ್ಯಮಂ ಗೆಯ್ಯುತ್ತಿರುವರು " ಎಂದು ನುಡಿಯಲು ;

ವಿದೂಷಕನು ಆಕಾಶಮಂ ನೋಡಿ, ಕುಳಿತಿದ್ದ ಸ್ಥಾನದಿಂದೆದ್ದು ನಿಂತು, ಕೈಗಳಂ ಮುಗಿದುಕೊಂಡು, " ಎಲೈ ರಾಜೇಂದ್ರನೇ, ಇದೋ ! ಬ್ರಹ್ಮನು ಪದ್ಮಾಸನದಲ್ಲಿ ಮಂಡಿಸಿ ತೋರುತ್ತಿರುವನು. ಚಂದ್ರನ ಕಲೆಯಿಂದ ಸುಂದರನಾದ ಶಿವನು ಕೈಲಾಸದಂತೆ ಒಪ್ಪುತ್ತಲಿರುವ ವೃಷಭಾರೂಢನಾಗಿ ಪಾರ್ವತೀಸಮೇತನಾಗಿ ಪ್ರಮ

ಥಗಣಗಳಿಂ ಪರಿವೃತನಾಗಿ ತೋರುತ್ತಲಿರುವನು. ವಿಷ್ಣುವು ಗದಾ ಚಕ್ರಾದಿಗಳಿಂದ ಶುಭವಾಗಿ ಶೋಭಿಸುತ್ತಿರುವ ನಾಲ್ಕು ತೋಳುಗಳಿಂದ ರಮಣೀಯನಾಗಿ ಲಕ್ಷ್ಮೀಸಮೇತನಾಗಿ ಪಕ್ಷಿಗಳಿಗೆಲ್ಲಾ ಪತಿಯಾದ ಗರುಡನ ಹೆಗಲನ್ನೇರಿ ರಾಜಿಸುತ್ತಿರುವನು. ದೇವಾಧಿಪತಿಯಾದ ಇಂದ್ರನು ಸಿದ್ಧ ಸಾಧ್ಯ ಕಿನ್ನರ ಕಿಂಪುರುಷ ಮುಂತಾದ ದೇವಗಣದಿಂದ ಪರಿವೃತನಾಗಿ ರಂಭೋರ್ವಶೀಮೇನಕಾ ತಿಲೋತ್ತಮೆ ಮೊದಲಾದ ಅಪ್ಸರಸ್ತ್ರೀಯರ ನಾಟ್ಯಮಂ ನೋಡುತ್ತ ನಲಿಯುತ್ತಿರುವನು" ಎಂದು ಅತ್ಯಾಶ್ಚರ್ಯದಿಂದ ಯುಕ್ತನಾಗಿ ನೋಡುತ್ತಿರಲು ;

ರಾಯನು ಗಗನವಂ ನೋಡಿ, ಆಶ್ಚರ್ಯವಂ ಪೊಂದಿ, "ಭಳಿರೇ ! ಐಂದ್ರಜಾಲಿಕನೇ ! ನಿನ್ನ ಸಮಾನರಾದ ವಿದ್ಯಾವಂತರನ್ನು ಈ ಲೋಕದಲ್ಲಿ ಕಾಣೆನು" ಎಂದು ಶ್ಲಾಘನೆಯಂ ಗೆಯ್ಯುತ್ತಿರುವುದರಲ್ಲೇ ವಿದೂಷಕನು ತನ್ನಲ್ಲಿ ತಾನು ಆಲೋಚಿಸಿ— "ಎಲೊ, ದಾಸೀಪುತ್ರನಾದ ಐಂದ್ರಜಾಲಿಕನೇ, ಈಗ ನೀನು ತೋರಿಸಿದ ಇಂದ್ರ ಚಂದ್ರ ಮುಂತಾದ ದೇವತೆಗಳಿಂದ ಏನು ಪ್ರಯೋಜನವು ? ಈ ರಾಯನಿಂದ ಬಹುಮಾನವಂ ಪಡೆದು ಹೆಸರನ್ನು ಸಂಪಾದಿಸಬೇಕಾದಲ್ಲಿ ನಾಗರಿಕೆಯನ್ನು ತೋರಿಸುವನಾಗು. ಇಲ್ಲವಾದಲ್ಲಿ ಇಲ್ಲಿ ನಿನಗೆ ಒಂದು ತೃಣ ಪ್ರಯೋಜನವೂ ದೊರಕಲಾರದು" ಎಂದು ನುಡಿಯುತ್ತಿರಲು ;

ಅಷ್ಟರಲ್ಲೇ ದ್ವಾರಪಾಲಕಿಯು ವೇಗದಿಂ ಬಂದು ರಾಯನಿಗೆ ನಮಸ್ಕಾರವಂ ಗೆಯ್ದು, "ಎಲೈ ರಾಜೇಂದ್ರನೇ, ಯೌಗಂಧರಾಯಣನು ವಿಜ್ಞಾಪನೆಯಂ ಗೆಯ್ಯುವಂತೆ ಪೇಳಿರುವುದೇನೆಂದರೆ—ಈಗ ಸಿಂಹಳ ದೇಶಕ್ಕೆ ಮಂತ್ರಿಯಾಗಿ ದೇವಿಯವರಿಗೆ ಮಾವನಾದ ವಸುಭೂತಿಯು ಬಾಭ್ರವ್ಯನೆಂಬ ಕಂಚುಕಿಯಿಂದೊಡಗೂಡಿ ನಿಮ್ಮ ಕಾಣಲೋಸುಗ ಬಂದಿರುವನಾದುದರಿಂದ ಸ್ವಾಮಿಯವರು ಶುಭಮುಹೂರ್ತದಲ್ಲಿ ಅವರನ್ನು ಕಾಣುವುದು ಯುಕ್ತವು. ನಾನು ರಾಜಕಾರ್ಯಶೇಷವಂ ಸಮಾಪ್ತಿಯಂಗೆಯ್ದು ಸನ್ನಿಧಿಯಂ ಕುರಿತು ಬರುವೆನೆಂದು ವಿಜ್ಞಾಪಿಸುವನು" ಎನಲು ;

ಆ ವಾಕ್ಯವಂ ಕೇಳಿದ ವಾಸವದತ್ತಾದೇವಿಯು—"ಎಲೈ ಮಹಾರಾಜನೇ, ಈ ಇಂದ್ರಜಾಲವಿದ್ಯೆಯನ್ನು ಇನ್ನೊಂದು ವೇಳೆಯಲ್ಲಿ ನೋಡಬಹುದು. ಈಗ ಸಿಂಹಳದೇಶದಿಂದ ಬಂದ ಮಾವನಾದ ವಸುಭೂತಿಯನ್ನು ಕಾಣುವುದು ಯುಕ್ತವಾಗಿರುವುದು" ಎಂದು ನುಡಿಯಲು ;

ರಾಯನು—"ದೇವಿಯೇ, ನಿನಗೆ ಯಾವುದು ಸಮ್ಮತವೋ ಆ ರೀತಿಯು ಎನಗೂ ಸಮ್ಮತವೇ ಸರಿ" ಎಂದು, "ಎಲೈ ಐಂದ್ರಜಾಲಿಕನೇ, ನಿನ್ನ ವಿದ್ಯೆಯನ್ನು ಇನ್ನೊಂದುಬಾರಿ ನೋಡುವೆವು. ಈಗ ನಿನ್ನ ಸಾಮಗ್ರಿಯಂ ತೆಗೆದುಕೊಂಡು ಪೋಗುವನಾಗು" ಎಂದು ನುಡಿಯಲು ; ಅವನು—"ಎಲೈ ಸ್ವಾಮಿಯೇ, ನಿನ್ನ ಅಪ್ಪಣೆಯಾದಂತೆ ನಡೆದುಕೊಳ್ಳುವೆನು. ಆದರೂ ಇನ್ನೊಂದು ವಿದ್ಯೆಯು ಸ್ವಾಮಿ

ಯುವರು ನೋಡುತಕ್ಕುದಾಗಿ ಇದ್ದುದು " ಎಂದು ಬಿನ್ನೈಸಲು ; ರಾಯನು " ಹಿಂದಿನಿಂದ ನೋಡುವೆವು, ಪೋಗು " ಎಂದು ಕಳುಹಿಸಿ, ದ್ವಾರಪಾಲಕನಂ ಕರೆದು, " ಎಲೈ ಕಂಚುಕಿಯೇ, ಆ ವಸುಭೂತಿಯನ್ನು ಕರೆದುಕೊಂಡು ಬರುವನಾಗು. ಎಂದೂ, " ಎಲೆ ಕಾಂಚನಮಾಲೆಯೇ ಈ ಐಂದ್ರಜಾಲಿಕನಿಗೆ ಭೂಷಣಾಂಬರಗಳಂ ಕೊಡಿಸುವಳಾಗು " ಎಂದೂ ಅಪ್ಪಣೆಯನ್ನೀಯಲು ; ಅವಳು ಆಟಗಾರನಿಗೆ " ಸ್ವಾಮಿಯವರ ಅಜ್ಞೆಯಾದಂತೆ ನಡೆದುಕೊಳ್ಳುವನಾಗು " ಎಂದು ಹೇಳಿ ಅವನೊಡಗೂಡಿ ಪೋಗಲು ;

ರಾಯನು—" ಎಲೈ ವಸಂತಕನೇ, ಆ ಸಿಂಹಳದೇಶದ ಮಂತ್ರಿಯನ್ನು ಇದಿರುಗೊಂಡು ಕರೆದುಕೊಂಡು ಬರುವನಾಗು " ಎಂದು ನುಡಿಯಲು ;

ವಿದೂಷಕನು, " ಹೇಗೆ ಅಪ್ಪಣೆಯಾಗುವುದೋ ಆ ರೀತಿಯಿಂದ ನಡೆದುಕೊಳ್ಳುವೆನು " ಎಂದು ನುಡಿದು, ದ್ವಾರಪಾಲಕಿಯಾದ ವಸುಂಧರೆಯೆಂಬ ಕಾಂತೆಯಿಂದೊಡಗೊಂಡು ಪೋಗಿ ಆ ವಸುಭೂತಿಗೆ ವಂದನೆಯಂ ಗೆಯ್ದು, ಕುಶಲಪ್ರಶ್ನೆಯಂ ವಿರಚಿಸಿ, ಕರೆದುಕೊಂಡು ಬರುತ್ತಿರಲು ;

ಆ ವಸುಭೂತಿಯು ಸುತ್ತಲೂ ನೋಡಿ, ಆಶ್ಚರ್ಯವಂ ಪೊಂದಿ ಒತ್ತಿನಲ್ಲಿರುವ ಬಾಭ್ರವ್ಯನಂ ಕುರಿತು,—" ಎಲೈ ಬಾಭ್ರವ್ಯನೇ, ಈ ನಮ್ಮ ವತ್ಸರಾಜನ ಪ್ರಭಾವವು ಅಧಿಕವಾಗಿರುವುದು. ಈ ದ್ವಾರಪ್ರದೇಶವೇ ಇಂತಿರುವ ಸಂಪತ್ತಿನಿಂದ ಆಶ್ಚರ್ಯವಾಗಿರುವುದು. ಆದರೆ ಇಲ್ಲಿರುವ ಆನೆಗಳೆಲ್ಲಾ ಐರಾವತಗಳಾಗಿಯೂ, ಇಲ್ಲಿರುವ ಕುದುರೆಗಳೆಲ್ಲಾ ಉಚ್ಚೈಶ್ಶ್ರವಸ್ಸುಗಳಾಗಿಯೂ, ಹಾಡುವ ಗಾಯಕರೆಲ್ಲಾ ಗಂಧರ್ವರಾಗಿಯೂ, ಇಲ್ಲಿರುವ ಸ್ತ್ರೀಯರುಗಳೆಲ್ಲಾ ಅಪ್ಸರಸ್ತ್ರೀಯರಾಗಿಯೂ, ಈ ಕೌಶಾಂಬೀನಗರಿಯೇ ಸ್ವರ್ಗವಾಗಿಯೂ ತೋರುತ್ತಿರುವುದು. ಮತ್ತು ಇದೋ! ಇತ್ತಲು ಸುಗಂಧದಿಂ ದಿಕ್ಕುಗಳನ್ನೆಲ್ಲಾ ಮುಚ್ಚುತ್ತಲಿರುವ ಕಲ್ಪವೃಕ್ಷಗಳು ತಲೆದೋರುತ್ತಿರುವುವು. ರತ್ನರಾಶಿಗಳು ನಿಜಕಾಂತಿಯಿಂದ ಗಗನದಲ್ಲಿರುವ ಇಂದ್ರಚಾಪದ ಶಂಕೆಯನ್ನುಂಟುಮಾಡುತ್ತಲಿರುವುವು. ಇಲ್ಲಿರುವ ಗೋವುಗಳು ಕಾಮಧೇನುಗಳಂತೆ ಜನರುಗಳಿಗೆ ಕಾಮಿತಾರ್ಥವಂ ಕರೆಯುತ್ತಲಿರುವುವು. ಮತ್ತು ವತ್ಸರಾಜನಂ ನೋಡಲು ಇಚ್ಛೈಸಿ ಬಂದಿರುವ ಎನಗೆ ಏನೋ ಒಂದು ಅವಸ್ಥೆಯು ಸಂತೋಷದಿಂದುಂಟಾದುದು. ಹೇಗೆಂದರೆ—ಇಲ್ಲಿ ವತ್ಸರಾಜನ ಆಜ್ಞಾಬಲದಿಂದ ಪುಟ್ಟಿದ ಭಯವು ಹೆಚ್ಚಾದ ನಡುಕವನ್ನು ಪುಟ್ಟಿಸುತ್ತಿರುವುದು. ಸಂತೋಷದಿಂದುಂಟಾದ ಆನಂದಬಾಷ್ಪಗಳು ದೃಷ್ಟಿಗಳನ್ನು ಮುಚ್ಚುತ್ತಲಿರುವುವು. ಗದ್ಗದವು ಅಕ್ಷರಗಳಿಂದ ಶೂನ್ಯವಾದ ವಚನಗಳನ್ನು ಪುಟ್ಟಿಸುತ್ತಿರುವುದು. ಈ ಅವಸ್ಥೆಗಳೆಲ್ಲವೂ ಎನಗೆ ಪುಟ್ಟಿರುವಮಟ್ಟಿಗೆ ಸಹಾಯವನ್ನುಂಟುಮಾಡುತ್ತಲಿರುವುವು " ಎಂದು ನುಡಿಯುತ್ತಿರಲು ;

ವಿದೂಷಕನು—“ ಅಯ್ಯಾ ಪೂಜ್ಯನಾದ ಮಂತ್ರಿಶ್ರೇಷ್ಠನಾದ ವಸುಭೂತಿಯೇ, ಈ ರತ್ನಮಯವಾದ ಈ ಚಂದ್ರಶಾಲೆಯ ಸೋಪಾನವನ್ನು ಅವಧಾನದಿಂದ ಹತ್ತುವನಾಗು ” ಎಂದು ನುಡಿಯುತ್ತಿರಲು ;

ಆ ವಸುಭೂತಿಯು ವಸಂತಕನ ಕತ್ತಿನಲ್ಲಿರುವ ರತ್ನಮಾಲೆಯಂ ನೋಡಿ, ಹಿಂದಿರುಗಿ ನೋಡಿ,—“ ಎಲೈ ಬಾಭ್ರವ್ಯನೇ, ನಮ್ಮ ರತ್ನಾವಳಿಯ ಕಂಠಕೆ ಅಲಂಕಾರವಂ ಗೆಯ್ದು ಕಳುಹಿಸಿದ ರತ್ನಮಾಲೆಯಂತೆ ಇವನ ಕತ್ತಿನಲ್ಲಿರುವ ರತ್ನಹಾರವು ತೋರುತ್ತಲಿರುವುದು ” ಎಂದು ನುಡಿಯುತ್ತಿರಲು ;

ಅವನು—“ ಎಲೈ ಮಂತ್ರಿಶ್ರೇಷ್ಠನೇ, ನೀನು ಅಪ್ಪಣೆಯನ್ನಿತ್ತ ವಾಕ್ಯವು ಯುಕ್ತವೇ ಸರಿ. ಆದರೆ ಈ ರತ್ನಮಾಲೆಯು ಇವನಿಗೆ ಹೇಗೆ ಸೇರಿತೋ ತಿಳಿಯಬೇಕು ” ಎಂದು ನುಡಿಯಲು ; ಆ ಮಂತ್ರಿಯು—“ ಎಲೈ ಬಾಭ್ರವ್ಯನೇ, ನಾವು ವಿಚಾರಿಸುವುದು ಯುಕ್ತವಾಗಿ ತೋರಲಾರದು. ಏಕೆಂದರೆ— ಮಹಾರಾಜನಾದ ಈ ವತ್ಸರಾಜನ ಮಂದಿರದಲ್ಲಿ ಇಂಥ ರತ್ನಮಾಲೆಯು ಮೊದಲಾದ ಅಮೋಘವಾದ ಭೂಷಣಗಳು ಇರುವುವು. ಈ ಪುರುಷನು ರಾಜಪ್ರಸಾದಕೆ ಯೋಗ್ಯನಾಗಿರುವುದರಿಂದ ಸಂತುಷ್ಟನಾಗಿ ವತ್ಸರಾಜನು ಇವನಿಗೆ ಈ ಮಾಲಿಕೆಯನ್ನು ಇತ್ತಿರಬಹುದು ” ಎಂದು ತಮ್ಮೊಳು ತಾವು ನುಡಿಯುತ್ತಿರಲು ;

ವಿದೂಷಕನು—“ ಎಲೈ ಮಂತ್ರಿಶ್ರೇಷ್ಠನೇ, ಇದೋ ! ಇತ್ತಲು ರಾಜೋತ್ತಮನಾದ ವತ್ಸರಾಜನು ರತ್ನಪೀಠದಲ್ಲಿ ರಾಜಿಸುತ್ತಿರುವನು.. ನೀನು ಭಯಭಕ್ತಿಯುಕ್ತನಾಗಿ ಪೊಂದುವನಾಗು ” ಎಂದು ನುಡಿಯಲು ;

ಆ ವಸುಭೂತಿಯು ರಾಯನ ಸಮೀಪವಂ ಸೇರಿ— “ ಎಲೈ ರಾಜೇಂದ್ರನೇ, ನೀನು ಸಮಸ್ತ ಸೌಖ್ಯಗಳಿಂದೊಡಗೂಡಿ ಸರ್ವೋತ್ತಮವಾದ ಜಯವನ್ನು ಪೊಂದುವನಾಗು ! ” ಎಂದು ನುಡಿಯಲು !

ವೃದ್ಧನಾದ ವಸುಭೂತಿಯನ್ನು ಕಂಡು ವತ್ಸರಾಜನು ತಾನು ಕುಳಿತಿದ್ದ ಪೀಠದಿಂದೆದ್ದು, “ ಎಲೈ ಪೂಜ್ಯನಾದ ವಸುಭೂತಿಯೇ, ನಿನಗೆ ನಮಸ್ಕಾರವಂ ಗೆಯ್ಯುವೆನು ” ಎಂದು ನುಡಿದು, ವಂದನೆಯಂ ಗೆಯ್ಯುವುದಕೆ ಪೋಗುವುದರಲ್ಲೇ ವಸುಭೂತಿಯು ವತ್ಸರಾಜನಂ ಕಂಡೆದ್ದು ಆಲಿಂಗನವಂ ಗೆಯ್ದು, ರಮ್ಯಪೀಠದಲ್ಲಿ ಕುಳಿತು, “ ಎಲೈ ರಾಜೇಂದ್ರನೇ, ಬಹುದಿವಸದಿಂದಲೂ ರಾಜಸೇವೆಯಲ್ಲಿ ತತ್ಪರನಾದ ಬಾಭ್ರವ್ಯನೂ ನಮಸ್ಕಾರವಂ ಗೆಯ್ಯುವನು ” ಎಂದು ಕಳಿತು ನುಡಿಯಲು : ವತ್ಸರಾಜನು “ ಎಲೈ ಬಾಭ್ರವ್ಯನೇ, ಕ್ಷೇಮವೇ ? ಕುಳಿತುಕೊಳ್ಳುವನಾಗು ” ಎಂದು ಅಪ್ಪಣೆಯನ್ನೀಯಲು ; ಅವನು ವಂದನೆಯಂ ಗೆಯ್ದು, ಭಯಭಕ್ತಿಯಿಂದ ದೂರದಲ್ಲಿ ಕುಳಿತುಕೊಳ್ಳಲು ;

ವಿದೂಷಕನು— “ ಅಯ್ಯಾ ಪೂಜ್ಯನಾದ ಮಂತ್ರಿಯೇ. ವಾಸವದತ್ತಾದೇ

ವಿಯು ನಮಸ್ಕಾರವಂ ಗೆಯ್ಯುವಳು" ಎಂದು ನುಡಿಯುತ್ತಿರುವಷ್ಟರಲ್ಲೇ ವಾಸವದತ್ತಾದೇವಿಯು ಬಂದು ವಂದನೆಯಂ ಗೆಯ್ಯಲು ; ವಸುಭೂತಿಯು—"ಎಲೌ ಪೂಜ್ಯಳಾದ ದೇವಿಯೇ, ದೀರ್ಘಾಯುಷ್ಯಮಂ ಪೊಂದಿ ನಿನ್ನ ಸದ್ಗುಣಕೆ ಸಮನಾದ ಪುತ್ರನಂ ಪಡೆಯುವಳಾಗು" ಎಂದು ಆಶೀರ್ವಾದವಂ ಗೆಯ್ಯಲು ;

ರಾಯನು—"ಎಲೈ ಮಂತ್ರಿಯೇ, ಸಿಂಹಳದೇಶಾಧಿಪತಿಯಾದ ವಿಕ್ರಮಬಾಹುರಾಯನು ಕ್ಷೇಮದಲ್ಲಿರುವನೇ ಪೇಳು" ಎನಲು ? ; ಆ ವಸುಭೂತಿಯು ಆಕಾಶವಂ ನೋಡಿ ಉದ್ದವಾಗಿ ಉಸಿರುಗಳಂ ಬಿಟ್ಟು "ಎಲೈ ರಾಜೇಂದ್ರನೇ, ನೀನು ಅಪ್ಪಣೆಯನ್ನಿತ್ತ ವಾಕ್ಯಕೆ ಉತ್ತರವಂ ಪೇಳುವುದಕೆ ಶಕ್ತನಾಗಲಾರೆನು" ಎಂದು ನುಡಿಯಲು ;

ವಾಸವದತ್ತೆಯು ವಿಷಾದದಿಂದೊಡಗೂಡಿ ಈ ವಸುಭೂತಿಯು ಆಡಿದ ನುಡಿಯಿಂದ ಸಿಂಹಳದೇಶದ ರಾಯನಿಗೆ ಏನೋ ಒಂದು ಅಮಂಗಳವು ಸೂಚಿಸಲ್ಪಡುವುದಾದುದೆಂದು ತನ್ನ ಮನದಲ್ಲಿ ಯೋಚಿಸುತ್ತಿರಲು ;

ರಾಯನು ವಾಸವದತ್ತಾದೇವಿಯಂ ನೋಡಿ—"ಎಲೆ ಕಾಂತೆಯೇ, ಈ ವಾಕ್ಯವಂ ಕೇಳಿದಮಾತ್ರಕೆ ಏತಕೆ ವ್ಯಾಕುಲವಂ ಪೊಂದುತ್ತಿರುವೆ ? ಎಂದು ನುಡಿಯಲು ;

ಬಾಭ್ರವ್ಯನು—"ಎಲೈ ಮಂತ್ರಿಯೇ, ಬಲುಹೊತ್ತು ಹೇಳತಕ್ಕ ಸಮಸ್ತ ವೃತ್ತಾಂತವನ್ನು ಪೇಳುವನಾಗು" ಎಂದು ನುಡಿಯಲು ;

ವಸುಭೂತಿಯು ಕಣ್ಣೀರುಗಳಂ ಬಿಡುತ್ತ, "ಎಲೈ ರಾಜೇಂದ್ರನೇ, ಮಂದಭಾಗ್ಯನಾದ ನಾನು ಪೇಳುವೆನು ಕೇಳು. ಆಯುಷ್ಮತಿಯಾದ ವಾಸವದತ್ತಾದೇವಿಯು ಉರಿಯ ಮನೆಯಲ್ಲಿ ಸಿಕ್ಕಿ ದಗ್ಧಳಾದಳೆಂಬ ವಾರ್ತೆಯನ್ನು ಕೇಳಿದ ವಿಕ್ರಮಬಾಹುರಾಯನು ಬಹುದುಃಖವನ್ನು ಹೊಂದಿ ನಿಮಗೆ ಅಭಿಮತವಾಗಿ ಸರ್ವಾಂಗಸುಂದರಿಯಾದ ತನ್ನ ಮಗಳಾದ ರತ್ನಾವಳಿಯನ್ನು ಕಳುಹಿಸಿಕೊಟ್ಟನು" ಎಂದು ನುಡಿಯಲು ;

ರಾಯನು ದೇವಿಯಂ ಕುರಿತು, "ಎಲೆ ಕಾಂತೆಯೇ, ಈ ವಸುಭೂತಿಯು ಪೇಳುವ ವಾಕ್ಯವು ಆಶ್ಚರ್ಯಕರವಾಗಿರುವುದು" ಎಂದು ನುಡಿಯಲು; ದೇವಿಯು ನಸುನಗುತ್ತ—"ಎಲೈ ಸ್ವಾಮಿಯೇ, ಈ ಮಂತ್ರಿಯು ಪೇಳುವ ವಾಕ್ಯಕೆ ತಾತ್ಪರ್ಯವೇ ಆಗಲಿಲ್ಲ. ಆದರೆ ನಿನ್ನ ಸನ್ನಿಧಿಯಲ್ಲಿ ಇವನು ಸುಳ್ಳುಮಾತುಗಳನ್ನು ಪೇಳಲಾರನು" ಎಂದು ಏಕಾಂತವಾಗಿ ಪೇಳಲು;

ವಿದೂಷಕನು ವಸುಭೂತಿಯಂ ಕುರಿತು—"ಅಯ್ಯಾ ಮಂತ್ರಿಗಳೇ ನಿಮ್ಮ ದೊರೆಯ ಮಗಳಾದ ರತ್ನಾವಳಿಯು ಏನಾದಳು ?" ಎಂದು ಬೆಸಗೊಳಲು ;

ವಸುಭೂತಿಯು— "ಅಯ್ಯಾ ರಾಜೇಂದ್ರನೇ, ನಿಮ್ಮ ಸನ್ನಿಧಿಗೆ ನಾವೆಲ್ಲರೂ ಕರೆದುಕೊಂಡು ಬರುತ್ತಿರಲು, ದೈವಯೋಗದಿಂದ ಸುಳಿಗಾಳಿಗೆ ಸಿಕ್ಕಿ ಮಧ್ಯದಲ್ಲಿ

ರುವ ಪರ್ವತದ ಗುಂಡುಗಲ್ಲಿಗೆ ತಗಲಿ ಕುಳಿತಿದ್ದ ಹಡಗು ಮುರಿದು ಸಮುದ್ರದಲ್ಲಿ ಮುಳುಗಿ ಹೋದಳು." ಎಂದು ನುಡಿದು, ಮುಖಕ್ಕೆ ವಸ್ತ್ರವನ್ನು ಮುಚ್ಚಿಕೊಂಡು ಅಳುತ್ತಿರಲು ;

ವಾಸವದತ್ತಾದೇವಿಯು ಹೆಚ್ಚಾಗಿ ಕೂಗುತ್ತಾ "ಎಲೆ ತಂಗಿಯಾದ ರತ್ನಾವಳಿಯೇ, ಎನ್ನಂ ಬಿಟ್ಟು ಎಲ್ಲಿ ಹೋಗಿರುವೆ? ಎನಗೆ ಪ್ರತಿವಚನಂಗಳಂ ಕೊಡುವಳಾಗು" ಎಂದು ರೋದನವಂ ಗೆಯ್ಯುತ್ತಿರಲು ;

ರಾಯನು—"ಎಲೆ ದೇವಿಯೇ, ದುಃಖವನ್ನು ಬಿಡುವಳಾಗು. ದೈವಂಯೋಗವು ಹೀಗೆಂದು ನಿಶ್ಚಯಿಸುವುದಕ್ಕಾಗದು. ಇದಕೆ ಆವಳೊಡನೆ ಸಮುದ್ರದಲ್ಲಿ ಮುಳುಗಿದ್ದು ಎದ್ದು ಬಂದಿರುವ ಈ ಬಾಭ್ರವ್ಯ ವಸುಭೂತಿಗಳೇ ನಿದರ್ಶನವಾಗಿರುವುದು" ಎಂದು ನುಡಿಯಲು; ದೇವಿಯು—"ಎಲೈ ಸ್ವಾಮಿಯೇ, ನೀನು ಅಪ್ಪಣೆಯನ್ನಿತ್ತಂತೆ ಇವರೋಪಾದಿಯಲ್ಲಿ ಎನ್ನ ತಂಗಿಯಾದ ರತ್ನಾವಳಿಯು ಸಮುದ್ರದಿಂದೆದ್ದು ಎನ್ನ ಸಮೀಪಕೆ ಬಂದಲ್ಲಿ ನಾನು ಭಾಗ್ಯವಂತಳೆಂದು ತಿಳಿಯುವೆನು. ಅಂಥ ಪುಣ್ಯವು ಎನಗೆ ದೊರಕುವುದೋ!" ಎಂದು ಬಿಕ್ಕಿ ಬಿಕ್ಕಿ ಅಳುತ್ತಿರಲು ;

ರಾಯನು ವಸುಭೂತಿಯನ್ನು ಹೊರದಟ್ಟಿ "ಎಲೈ ಬಾಭ್ರವ್ಯನೇ, ಇದರ ವೃತ್ತಾಂತವೇನಿರುವುದು? ಇದರ ಅಭಿಪ್ರಾಯವೇ ತಿಳಿಯಲಿಲ್ಲವು" ಎಂದು ನುಡಿಯಲು;

ಅವನು—"ಎಲೈ ರಾಜೇಂದ್ರನೇ, ಈ ವೃತ್ತಾಂತವನ್ನು ವಿಸ್ತಾರವಾಗಿ ವಿಜ್ಞಾಪನೆಯಂ ಗೆಯ್ಯುವೆನು" ಎಂದು ನುಡಿಯುವಷ್ಟರಲ್ಲೇ ಅಂತಃಪುರದ ದ್ವಾರಪಾಲಕನು ಓಡಿಬಂದು,—"ಮಹಾರಾಜೇಂದ್ರನೇ, ತನ್ನ ಕಾಂತಿಗಳಿಂದ ಉಪ್ಪರಿಗೆಗಳ ಚಿನ್ನದ ಕಲಶಗಳ ಕಾಂತಿಯನ್ನು ಮುಚ್ಚುತ್ತ, ಪಾರ್ಶ್ವದಲ್ಲಿರುವ ವೃಕ್ಷಲತೆಗಳನ್ನು ಕರಿಯಾಗಿ ಮಾಡುತ್ತ, ಬಲವಾಗಿ ಹೊರಡುವ ಹೊಗೆಗಳಿಂದ ಕ್ರೀಡಾಪರ್ವತದಲ್ಲಿ ಮೋಡದ ಸಿರಿಯನ್ನುಂಟುಮಾಡುತ್ತ, ಒಳಗಿರುವ ಸ್ತ್ರೀಯರುಗಳಿಗೆ ಹಾಹಾಕಾರವನ್ನುಂಟುಮಾಡಿಸುತ್ತ, ಅಂತಃಪುರವೆಲ್ಲವಂ ಮುಚ್ಚಿ, ಅಗ್ನಿಯು ಪ್ರಜ್ವಲಿಸುತ್ತಲಿರುವುದು" ಎಂದು ಬಿನ್ನೈಸಲು ;

ರಾಯನು ಪೀಠದಿಂದೆದ್ದು, ದಿಗಿಲಿನಿಂದ ವಾಸವದತ್ತೆಯು ಅಂತಃಪುರದಲ್ಲೇ ಇರುವಳೆಂದು ತಿಳಿದು, "ಹೋ ಹೋ! ಬಲವಾದ ಕಷ್ಟವು ಪ್ರಾಪ್ತವಾದುದು. ವಾಸವದತ್ತೆಯು ಉರಿಯಲ್ಲಿ ಸಿಕ್ಕೆ ದಗ್ಧಳಾದಳು. ಮೊದಲು ದೇವಿಯು ದಗ್ಧಳಾದಳೆಂಬ ಲೋಕಾಪವಾದವನ್ನು ಯಥಾರ್ಥವಂ ಗೆಯ್ಯಲೋಸುಗ ಈಗ ಅಂತಃಪುರದಲ್ಲಿ ಅಗ್ನಿಯು ಪುಟ್ಟಿದಂತೆ ತೋರುವುದು. ಮುಂದೆ ಗತಿಯೇನು? ಎಲೆ ಪ್ರಾಣಕಾಂತಳಾದ ವಾಸವದತ್ತೆಯೇ!" ಎಂದು ದೀನಸ್ವರದಿಂ "ನಿನ್ನಂ ರಕ್ಷಿಸುವರಾರು?" ಎಂದು ನುಡಿಯುತ್ತಿರಲು ;

ದೇವಿಯು—“ ಎಲೈ ಸ್ವಾಮಿಯೇ, ದುಃಖದಿಂದಲೂ ದಿಗಿಲಿನಿಂದಲೂ ನಿನ್ನ ಬತ್ತಿನಲ್ಲಿರುವ ಎನ್ನನ್ನು ಮರೆತು, ಈ ರೀತಿಯಾದ ವ್ಯಸನವಂ ಪೊಂದುವುದು ನ್ಯಾಯವಲ್ಲ. ನನ್ನ ವಿಚಾರದಲ್ಲಿ ನೀನು ವ್ಯಸನವಂ ಪೊಂದಲಾಗದು. ದಯಾಶೂನ್ಯಳಾದ ನಾನು ಸಂಕಲೆಯಂ ತೊಡಿಸಿ ಸೆರೆಮನೆಯಲ್ಲಿ ಸೇರಿಸಿರುವ ಸಾಗರಿಕೆಯಂ ಕಂಡು ವ್ಯಸನವಂ ಪೊಂದಬೇಕಾಗಿರುವುದು. ವ್ಯರ್ಥವಾಗಿ ಉರಿಯಲ್ಲಿ ಕರಿಯಾಗಿ ಪೋಗುವಳು. ಅವಳನ್ನು ರಕ್ಷಿಸಿ ಎನಗೆ ಉಂಟಾಗುವ ಲೋಕಾಪವಾದವಂ ತಪ್ಪಿಸುವನಾಗು” ಎಂದು ದೀನೋಕ್ತಿಗಳಿಂದ ಕೈಗಳನ್ನೊಡ್ಡಿ ಬೇಡಿಕೊಳ್ಳಲಾರಾಯನು—“ ಎಲೆ ವಾಸವದತ್ತೆಯೇ, ಇದೋ ! ಈಕ್ಷಣದಲ್ಲಿ ನಾನೇ ಪೋಗಿ ಅವಳನ್ನು ಸಂರಕ್ಷಿಸುವೆನು ” ಎಂದು ಪೋಗುತ್ತಿರಲು ;

ವಸುಭೂತಿಯು—“ ಎಲೈ ರಾಜೇಂದ್ರನೇ, ಒಬ್ಬ ಸ್ತ್ರೀಗೋಸುಗವಾಗಿ ಲೋಕಕ್ಕೆಲ್ಲ ಅಧಿಪತಿಯಾದ ನೀನು ಬಲವಾಗಿ ಉರಿಯುತ್ತಿರುವ ಈ ಅಗ್ನಿಯಲ್ಲಿ ಪತಂಗದ ಹುಳುವಿನಂತೆ ಬಿದ್ದು ಕರಿಗೊಳ್ಳುವುದು ನ್ಯಾಯವಲ್ಲ” ಎನಲು ; ಬಾಭ್ರವ್ಯನು—“ ಎಲೈ ಸ್ವಾಮಿಯೇ, ಮಂತ್ರಿಯು ಯುಕ್ತವಾಗಿ ಬಿನ್ನೈಸುತ್ತಿರುವನು. ನೀನು ಹೋಗುವುದು ಉಚಿತವಾದ ಕಾರ್ಯವಲ್ಲವು” ಎಂದು ವಿಜ್ಞಾಪಿಸಲು ; ವಿದೂಷಕನು—“ ಎಲೈ ರಾಜೇಂದ್ರನೇ, ಅರಿಸುವುದಕ್ಕಾಗದೆ ದಳ್ಳುರಿಗಳನ್ನು ಬೀರುತ್ತಿರುವ ಅಗ್ನಿಯಲ್ಲಿ ನೀನು ಸಾಹಸವಂ ತೋರಿಸುವುದು ನ್ಯಾಯವಲ್ಲವು ” ಎಂದು, ಅವನು ಹೊದ್ದು ಇದ್ದ ವಸ್ತ್ರದ ಸೆರಗನ್ನು ಪಿಡಿಯಲು ;

ರಾಯನು—“ ಎಲೈ ಮೂರ್ಖನಾದ ವಿದೂಷಕನೇ, ಕೇಳು. ಪ್ರಾಣಕಾಂತೆಯಾದ ಸಾಗರಿಕೆಯು ಉರಿದು ಪೋಗುತ್ತಿರುವಲ್ಲಿ ಇನ್ನು ಎನಗೆ ಪ್ರಾಣದಮೇಲೆ ಆಸೆ ಇರುವುದೇ ? ” ಎಂದು ತಾನು ಹೊದ್ದು ಇರುವ ವಸ್ತ್ರವಂ ಬಿಟ್ಟು, ಪ್ರಜ್ವಲಿಸುತ್ತಿರುವ ಅಗ್ನಿಯನ್ನು ಪ್ರವೇಶಿಸಿ, ಹೊಗೆಯಿಂದ ಮುಚ್ಚಲ್ಪಟ್ಟ ಶರೀರವುಳ್ಳವನಾಗಿ, ಅಗ್ನಿಯಂ ಕುರಿತು, “ ಎಲೆ ಅಗ್ನಿಯೇ, ಸುಮ್ಮನಿರು ಸುಮ್ಮನಿರು. ಈ ಪೊಗೆಯ ಮೊತ್ತವನ್ನು ಪರಿತ್ಯಜಿಸುವನಾಗು. ಏತಕೆ ವ್ಯರ್ಥವಾಗಿ ನಿನ್ನ ಜ್ವಾಲೆಗಳ ಸಮೂಹವನ್ನು ಹೆಚ್ಚುಮಾಡುತ್ತಲಿರುವೆ? ಈ ಪ್ರಳಯಕಾಲದ ಅಗ್ನಿಯ ಹಾಗೆ ಪ್ರಜ್ವಲಿಸುತ್ತಿರುವ ಪ್ರಾಣಕಾಂತೆಯಾದ ಸಾಗರಿಕೆಯ ವಿರಹಾಗ್ನಿಯ ದೆಸೆಯಿಂದ ದಗ್ಧನಾಗದೆ ಇರುವ ಎನ್ನನ್ನು ಈಗ ಸ್ವಲ್ಪನಾಗಿರುವ ನೀನು ಏನು ಮಾಡಬಲ್ಲೆ ? ಅಂಥ ಸಾಗರಿಕೆಯೇ ನಿನ್ನಲ್ಲಿ ದಗ್ಧಳಾಗಿ ಪೋಗುತ್ತಲಿರುವಲ್ಲಿ ಈ ಎನ್ನ ಶರೀರವನು ನಿನಗೆ ಸೌದೆಯನ್ನಾಗಿ ಮಾಡುವೆನು ” ಎಂದು ನುಡಿಯುತ್ತಿರಲು ;

ಬಾಭ್ರವ್ಯನು—“ ಭರತವಂಶವಂ ನಾಶವಂ ಗೆಯ್ಯುತ್ತಿರುವನು ! ಮುಂದೆ ಗತಿ ಯೇನು ? ” ಎಂದು ನುಡಿಯುತ್ತಿರಲು ;

ದೇವಿಯು—“ ಎಲೈ ಬಾಭ್ರವ್ಯನೇ, ಬಹುವಾಕ್ಯಗಳಂ ಪೇಳಿ ಫಲವಿಲ್ಲ. ಲೋಕಕೆಲ್ಲ ಬಹು ದುಃಖವನ್ನುಂಟುಮಾಡುತ್ತಲಿರುವ ಎನ್ನ ವಾಕ್ಯದಿಂದ ರಾಯನು ವ್ಯರ್ಥವಾಗಿ ದಗ್ಧನಾಗುತ್ತಿರುವನು. ಅಂಥ ಮಹಾರಾಜೇಂದ್ರನೇ ಹೋಗಿ ಲೋಕಾಪವಾದವು ಬಲವಾಗಿ ಬರುತ್ತಲಿರುವಲ್ಲಿ ಈ ದೇಹವನ್ನು ಇರಿಸಿಕೊಂಡಿರುವುದು ನ್ಯಾಯವಲ್ಲ. ಪತಿಯೊಡನೆ ಮೃತಿಯಂ ಪೊಂದಿದ ಕಾಂತೆಯರಿಗೆ ಸದ್ಗತಿಯುಂಟಾಗುವುದೆಂದು ಶಾಸ್ತ್ರವಿರುವುದು. ಲೋಕಾಪವಾದಕ್ಕಿಂತಲೂ ಮರಣವೇ ಯುಕ್ತವಾದ ಕಾರ್ಯವು ” ಎಂದು ನುಡಿದು, ತಾನೂ ಅಗ್ನಿಪ್ರವೇಶವಂ ಗೆಯ್ಯಲೋಸುಗ ಪೋಗುತ್ತಿರಲು; ವಿದೂಷಕನು ಅಡ್ಡಲಾಗಿ ಬಂದು ನಿಂತು—“ ಎಲೌ ತಾಯೇ, ನೀನು ಈರೀತಿಯಂ ಗೆಯ್ಯುವುದು ನ್ಯಾಯವಲ್ಲ. ಮೊದಲು ನಾನು ಅಗ್ನಿಯಲ್ಲಿ ಬಿದ್ದಮೇಲೆ ನಿನ್ನ ಮನಬಂದಂತೆ ಮಾಡಬಹುದು ” ಎಂದು ವಿಜ್ಞಾಪಿಸುತ್ತಿರಲು;

ವಸುಭೂತಿಯು—“ ಹೋ ಹೋ! ವತ್ಸರಾಜನು ಅಗ್ನಿಯಂ ಹೊಕ್ಕನು. ಮುಂದೆ ಗತಿ ಏನು? ” ಎಂದು ಕೂಗುತ್ತಿರಲು; ಬಾಭ್ರವ್ಯನು—“ ಇಂಥ ರಾಜೇಂದ್ರನೇ ಅಗ್ನಿಯಂ ಹೊಕ್ಕಿರುವಲ್ಲಿ ಸೇವಕನಾದ ನಾನು ಪ್ರಾಣವಂ ಧರಿಸಿ ಫಲವೇನು? ” ಎಂದು ನುಡಿಯುತ್ತಿರಲು;

ರಾಯನು ಸ್ವಲ್ಪದೂರದಲ್ಲಿ ಸಾಗರಿಕೆಯಂ ಕಂಡು ಆನಂದಪರವಶನಾಗಿ “ ಇದೋ! ಮುಂದುಗಡೆಯಲ್ಲಿ ಎನಗೆ ಪ್ರಾಣಾಧಾರಳಾದ ಸಾಗರಿಕೆಯು ಕಾಣುವಳು ” ಎಂದು ತ್ವರೆಯಿಂದ ಪೋಗುತ್ತಿರಲು;

ಸಾಗರಿಕೆಯು ಸುತ್ತಲೂ ಮೊತ್ತವಾಗಿ ಮುತ್ತಿರುವ ಅಗ್ನಿಜ್ವಾಲೆಯಂ ಕಂಡು ಓಡಿಪೋಗುವುದಕೆ ಸಂಕಲೆಯು ಬಲವಾಗಿ ಕಾಲುಗಳಲ್ಲಿ ಕೀಲಿಸಿರುವುದರಿಂದ ಇದ್ದ ಸ್ಥಳದಿಂದ ಎದ್ದು ಪೋಗಲಾರದೆ ಕುಳಿತು, “ ಈಗ ಎನಗೆ ಬಹಳ ಸಂತೋಷವಾದುದು. ಏಕೆಂದರೆ? ಪ್ರಜ್ವಲಿಸುವ ಅಗ್ನಿಯು ಈ ಸಂಕಟವನ್ನು ಪರಿಹರಿಸಿ ಪ್ರಾಣಾವಸಾನವನ್ನುಂಟುಮಾಡುತ್ತಿರುವುದು ” ಎಂದು ನುಡಿಯುತ್ತಿರಲು:

ಅಷ್ಟರಲ್ಲೇ ರಾಯನು ವೇಗದಿಂ ಪೋಗಿ ನೋಡಿ, “ ಈ ಬಲವಾದ ಉರಿಯಲ್ಲಿ ಸಾಗರಿಕೆಯು ಉಳಿದಿರುವುದು ಆಶ್ಚರ್ಯವು ” ಎಂದು ನುಡಿಯುತ್ತಿರಲು;

ಅನಿತರಲ್ಲೇ ಸಾಗರಿಕೆಯು ರಾಯನಂ ಕಂಡು, “ ಇದೇನು! ಈ ಉರಿಯಂ ಪೊಕ್ಕು ಎನ್ನ ಪ್ರಾಣಕಾಂತನಾದ ರಾಯನು ಬಂದಿರುವನು. ಈ ಮಹಾರಾಜನಂ ನೋಡಲಾಗಿ, ಎನಗೆ ಮರಳಿ ಪ್ರಾಣಗಳಲ್ಲಿ ಅಭಿಲಾಷೆಯುಂಟಾದುದು ” ಎಂದು ರಾಯನಂ ಕುರಿತು—“ ಎಲೈ ಪೂಜ್ಯನಾದ ರಾಜೇಂದ್ರನೇ, ಎನ್ನನು ಸಲಹುವುದು ” ಎಂದು ಕೂಗಿ ನುಡಿದು ಕೈಗಳನ್ನು ನೀಡಲು; ರಾಯನು—“ ಪ್ರಾಣವಲ್ಲಭೆಯೇ, ದುಃಖವಂ ಪೊಂದಬೇಡ. ಒಂದು ಮುಹೂರ್ತವು ಈ ಬಲವಾದ ಧೂಮಸಮೂಹವನ್ನು ಸಹಿಸುವಳಾಗು. ಸ್ತನಗಳಿಂದ ಜಾರಿದ ಸೆರಗನ್ನು ಅಗ್ನಿಯು ದಹಿ

ಸುತ್ತಲಿರುವುದು, ಇಲ್ಲಿಂದ ಶೀಘ್ರವಾಗಿ ಪೋಗುವುದಕ್ಕೆ ನಿಗಳಬಂಧನದಿಂದ ಮುಗ್ಗುತ್ತಲಿರುವೆಯಾದುದರಿಂದ ಎನ್ನ ಕತ್ತನ್ನು ತಪ್ಪಿಕೊಳ್ಳುವಳಾಗು" ಎಂದು ನುಡಿಯಲು; ಅವಳು ಅದೇರೀತಿಯಿಂದ ರಾಯನ ಕತ್ತಂ ತಬ್ಬಲು; ರಾಯನು— "ಎಲೆ ಕಾಂತೆಯೇ, ಒಂದು ಕ್ಷಣದಲ್ಲೆ ಎನಗೆ ಉಂಟಾಗಿದ್ದ ಸಂತಾಪವೆಲ್ಲವೂ ಪೋದುದು. ನೀನು ಭಯವಂ ಪೊಂದದೆ ಎನ್ನಂ ಚೆನ್ನಾಗಿ ಆಲಿಂಗಿಸುವಳಾಗು. ಯಾವಕಾರಣ ನಿನ್ನ ಅಂಗಸ್ಪರ್ಶವು ಎನ್ನ ಹೃದಯತಾಪವನ್ನೂ ಹೊರಗಿನ ಅಗ್ನಿ ಜ್ವಾಲೆಯ ತಾಪವನ್ನೂ ಸಹ ಪರಿಹರಿಸಿ ಮನಕ್ಕೆ ಸಂತೋಷವನ್ನುಂಟುಮಾಡಿರುವುದೋ ಅದುದರಿಂದ ಈ ಅಗ್ನಿಯು ನಿನ್ನನ್ನು ದಹಿಸಲಾರದು" ಎಂದು ಪೇಳುತ್ತಾ ಸಾಗರಿಕೆಯನ್ನು ಎತ್ತಿಕೊಂಡು ಬಂದು, ಒಂದು ಸ್ಥಳದಲ್ಲಿ ಇರಿಸಿ, ಸುತ್ತಲೂ ನೋಡಿ, ಸ್ವಲ್ಪವಾದರೂ ಅಗ್ನಿಜ್ವಾಲೆಯಂ ಕಾಣದೆ, "ಇದೇನಾಶ್ಚರ್ಯವು! ಕಾಡುಗಿಚ್ಚಿನಂತೆ ಉರಿಯುತಿರ್ದ ಉರಿಯು ಎಲ್ಲಿಪೋದುದು? ಅಂತಃಪುರವು ದಗ್ಧವಾಗದೆ ಎಂದಿನಂತೆ ಇರುತ್ತಿರುವುದು" ಎಂದು, ಮುಂದೆ ಬಂದು ನಿಂತಿರುವ ವಾಸವದತ್ತೆಯಂ ಕಂಡು, "ಇದೇನು ಪ್ರದ್ಯೋತರಾಯನ ಪುತ್ರಿಯಾದ ವಾಸವದತ್ತೆಯು ಇತ್ತನಲ್ಲಿರ್ಪಳು" ಎಂದು ನುಡಿದು ನಿಂದಿರಲು; ವಾಸವದತ್ತೆಯು ರಾಯನ ಪ್ಡೆದಡಹಿ, "ದೈವಯೋಗದಿಂದ ನಮ್ಮ ರಾಜೇಂದ್ರನು ಸ್ವಲ್ಪವಾಗಿ ಉರಿಯಲ್ಲಿ ಕಂದದೆ ಬಂದನು" ಎಂದು ನುಡಿಯಲು; ಬಾಭ್ರವ್ಯನು ರಾಯನ ಚರಣಗಳಿಗೆ ವಂದನೆಯಂ ಗೆಯ್ದು, "ಎಲೈ ಸ್ವಾಮಿಯೇ, ಈಗ ನಾವೆಲ್ಲರೂ ಜೀವದೊಡನೆ ಕೂಡಿದೆವು" ಎನಲು; ರಾಯನ ಚರಣಗಳಿಗೆ ನಮಸ್ಕರಿಸಿದ ವಸುಭೂತಿಯು—"ಎಲೈ ಮಹಾರಾಜನೇ, ಈಗ ಜಗತ್ತುಗಳಿಗೆಲ್ಲ ಆನಂದವುಂಟಾದುದು" ಎಂದು ನುಡಿಯಲು; ರಾಯನು ವಿದೂಷಕನಂ ನೋಡಿ, "ಎಲೈ ಮಿತ್ರನೇ, ಈ ಕಾರ್ಯವು ಸ್ವಪ್ನವೋ ಇಲ್ಲವಾದಲ್ಲಿ ಬುದ್ಧಿಭ್ರಾಂತಿಯೋ, ಇಲ್ಲವಾದಲ್ಲಿ ಇಂದ್ರಜಾಲವೋ ತಿಳಿಯಲಿಲ್ಲವು" ಎನಲು; ವಿದೂಷಕನು "ಎಲೈ ರಾಜೇಂದ್ರನೇ, ನೀನು ಸಂದೇಹವಂ ಪೊಂದಬೇಡ. ಇದು ಇಂದ್ರಜಾಲವಿದ್ಯೆಯೇ ಸರಿ. ದಾಸೀಪುತ್ರನಾದ ಐಂದ್ರಜಾಲಿಕನು ಎನ್ನಲ್ಲಿ ಇನ್ನೊಂದು ನೋಡತಕ್ಕ ವಿದ್ಯೆಯು ಇದೆ. ಅದನ್ನು ಅಗತ್ಯವಾಗಿ ನೋಡತಕ್ಕುದೆಂದು ನುಡಿದುಹೋದನು. ಈ ಜ್ವಾಲೆಯು ಅವನ ವಿದ್ಯಾಪ್ರಭಾವವೇ ಸರಿ" ಎಂದು ನುಡಿಯಲು; ರಾಯನು— "ಅಯ್ಯಾ ವಿದೂಷಕನೇ, ನೀನು ಪೇಳಿದ ವಾಕ್ಯವು ಯುಕ್ತವೇ ಸರಿ. ಅವನು ಹೇಳಿದುದು ನಿಶ್ಚಯವೇ ಸರಿ. ಆದರೆ ನಾನು ಮಂತ್ರಿಯ ಸಂದರ್ಶನದಲ್ಲಿ ಕುತೂಹಲವುಳ್ಳವನಾಗಿ ಅವನ ವಾಕ್ಯವಂ ಲಕ್ಷ್ಯವಂ ಗೆಯ್ಯಲಿಲ್ಲವು" ಎಂದು, ವಾಸವದತ್ತೆಯಂ ನೋಡಿ— "ಎಲೌ ಕಾಂತೆಯೇ, ನಿನ್ನ ಮಾತಿನಿಂದ ಸಾಗರಿಕೆಯನ್ನು ಕರೆದುಕೊಂಡು ಬಂದಿರುವೆನು" ಎನಲು; ಅವಳು— "ಎಲೈ ಮಹಾರಾಜೇಂದ್ರನೇ, ಉತ್ತಮವಾದ ಕಾರ್ಯವಂ ಗೆಯ್ದಿರುವೆ" ಎಂದು ನುಡಿ

ಯುತ್ತಿರಲು ;

ಅಷ್ಟರಲ್ಲೇ ವಸುಭೂತಿಯು ಸಂಕಲೆಗಳಿಂದ ಅಂಕಿತಳಾಗಿರುವ ಸಾಗರಿಕೆಯಂ ನೋಡಿ, "ಎಲೈ ಬಾಭ್ರವ್ಯನೇ, ನಮ್ಮ ವಿಕ್ರಮಬಾಹುರಾಯನ ಪುತ್ರಿಯಾದ ರತ್ನಾವಳಿಗೆ ಈ ಬಾಲೆಯು ಸಮಾನಳಾಗಿರುವಳು" ಎಂದು ಸಾಗರಿಕೆಯಂ ತೋರಿಸಲು ; ಬಾಭ್ರವ್ಯನು— "ಎಲೈ ಮಂತ್ರಿಶ್ರೇಷ್ಠನೇ, ಎನಗೂ ಅದೇರೀತಿಯಿಂದ ಸಂದೇಹವು ತೋರುತ್ತಿರುವುದು" ಎಂದು ನುಡಿಯಲು ; ಆ ಮಂತ್ರಿಯು—"ಎಲೈ ಮಹಾರಾಜೇಂದ್ರನೇ, ಈ ಬಾಲೆಯು ಎಲ್ಲಿಂದ ಬಂದಳು? ಯಾರು ತಂದು ಕೈಗಾಣಿಕೆಯನ್ನು ಒಪ್ಪಿಸಿರುವರು? ಅದನ್ನು ಅಪ್ಪಣೆಯನೀಯಬೇಕು" ಎಂದು ರಾಯನಂ ಬೆಸಗೊಳಲು ; ರಾಯನು— "ಎಲೈ ಮಂತ್ರಿಯೇ, ನೀನು ಕೇಳಿದ ಸಂಗತಿಯು ಎನಗೂ ತಿಳಿಯದು. ವಾಸವದತ್ತಾದೇವಿಯಂ ಕೇಳುವನಾಗು" ಎಂದು ಪೇಳಲು ; ದೇವಿಯು—"ಎಲೈ ಮಂತ್ರಿಶ್ರೇಷ್ಠನಾದ ವಸುಭೂತಿಯೇ, ಈ ಬಾಲೆಯು ಸಮುದ್ರದಲ್ಲಿ ತೇಲಿಹೋಗುತ್ತ ಇದ್ದು ಧನಗುಪ್ತನೆಂಬ ವರ್ತಕನ ಕೈಗೆ ಸಿಕ್ಕಲಾಗಿ ಅವನು ತಂದು ಒಪ್ಪಿಸಿರುವನು. ನಿನ್ನ ಸನ್ನಿಧಿಯ ಸೇವೆಗೆ ಯೋಗ್ಯಳೆಂದು ನಮ್ಮ ಮಂತ್ರಿಯಾದ ಯೌಗಂಧರಾಯಣನು ತಂದು ಒಪ್ಪಿಸಿದುದರಿಂದ ನಾನು ಸಾಗರಿಕೆ ಎಂದು ಪೆಸರನ್ನಿಟ್ಟಿರುವೆನು" ಎಂದು ನುಡಿಯಲು ; ರಾಯನು ಆಶ್ಚರ್ಯವಂ ಪೊಂದಿ, "ಇವಳು ಧನಗುಪ್ತನಿಗೆ ಹೇಗೆ ಸಮುದ್ರದಲ್ಲಿ ದೊರಕಿದಳೋ, ಅವನು ಎನಗೆ ವಿಜ್ಞಾಪಿಸದೆ ಹೇಗೆ ಮಂತ್ರಿಗೆ ವಿಜ್ಞಾಪಿಸಿದನೋ, ಆ ಮಂತ್ರಿಯಾದರೂ ಎನಗೆ ಶ್ರುತಪಡಿಸದೆ ದೇವಿಗೆ ಹೇಗೆ ಒಪ್ಪಿಸಿದನೋ: ಈ ವೃತ್ತಾಂತವು ತಿಳಿಯಲಿಲ್ಲವು" ಎಂದು ತನ್ನ ಹೃದಯದಲ್ಲಿ ಆಲೋಚಿಸುತ್ತಿರಲು ; ವಸುಭೂತಿಯು—"ಹೀಗಲ್ಲದೆ ಇದ್ದಲ್ಲಿ ನಮಗೆ ಗೊತ್ತಾಗಿರುವ ಈ ರತ್ನಮಾಲೆಯು ಈ ವಸಂತಕನ ಕಂಠದಲ್ಲಿರುವುದಕ್ಕೆ ನಿಮಿತ್ತವಿಲ್ಲ. ನಾವು ಹೇಗೆ ಸಮುದ್ರದಲ್ಲಿ ಬಿದ್ದು ಎದ್ದು ಬಂದಿರುವೆವೋ ಅದೇರೀತಿಯಿಂದ ಇವಳೂ ಆ ವರ್ತಕನ ಹಸ್ತಕೆ ದೊರಕಿರುವಳಾದುದರಿಂದ ನಿಶ್ಚಯವಾಗಿ ಸಿಂಹಳೇಶ್ವರನ ಮಗಳಾದ ರತ್ನಾವಳಿಯೇ ಸರಿ" ಎಂದು ತನ್ನ ಮನದಲ್ಲಿ ನಿಶ್ಚಯಿಸಿ ಕಣ್ಣೀರುಗಳಂ ಬಿಡುತ್ತ, "ಎಲೈ ರಾಜಪುತ್ರಿಯಾದ ರತ್ನಾವಳಿಯೇ, ನಿನಗೆ ಈ ಅವಸ್ಥೆಯು ಬರಬಹುದೆ !" ಎಂದು ಸಾಗರಿಕೆಯಂ ಆಲಿಂಗನವಂ ಗೆಯ್ದು ರೋದನವಂ ಗೆಯ್ಯಲು ; ಸಾಗರಿಕೆಯು—"ಎಲೈ ಮಂತ್ರಿಯಾದ ವಸುಭೂತಿಯೇ, ನಿನ್ನನ್ನು ಕಂಡು ಎನ್ನ ಪ್ರಾಣಗಳು ಸಂತೋಷವನ್ನು ಪೊಂದಿದುವು" ಎಂದು ಸ್ವರವೆತ್ತಿ ರೋದನವಂ ಗೆಯ್ಯಲಾಮಂತ್ರಿಯು-"ಎಲೆ ತಾಯೇ, ಆ ರೀತಿಯಾದ ಐಶ್ವರ್ಯದಲ್ಲಿದ್ದ ನಿನ್ನನ್ನು ಮಂದಭಾಗ್ಯನಾದ ನಾನು ಈ ಅವಸ್ಥೆಯಲ್ಲಿರುವುದನ್ನು ಹೇಗೆ ನೋಡಲಿ?" ಎಂದು ಕೂಗಿ ಅಳುತ್ತಾ ಭೂಮಿಯಲ್ಲಿ ಬಿದ್ದು ಹೊರಳುತ್ತಿರಲು; ಸಾಗರಿಕೆಯು ಆ ವಸುಭೂತಿಯ ಮೇಲೆ ಬಿದ್ದು, "ಎಲೈ ತಂದೆ

ಯಾದ ವಿಕ್ರಮಬಾಹುವೇ, ಎಲೌ ತಾಯಿಯಾದ ಕಮಲಾವಳಿಯೇ, ಎಲ್ಲಿ ಇದ್ದೀರಿ ! ಎನಗೆ ಪ್ರತಿವಾಕ್ಯವನ್ನು ಪೇಳಿ ', ಎಂದು ನುಡಿದು, ಮೂರ್ಛೆಯಂ ಪೊಂದಲು ; ವಾಸವದತ್ತೆಯು, " ಎಲೈ ಬಾಭ್ರವ್ಯನೇ, ಇವಳು ಎನ್ನ ತಂಗಿಯಾದ ರತ್ನಾವಳಿಯೇ? " ಎನಲು ; ಅವನು-" ಎಲೌ ಪೂಜ್ಯಳಾದ ದೇವಿಯೇ, ಅರತ್ನಾವಳಿಯೇ ಇವಳು " ಎಂದು ನುಡಿಯಲು ; ದೇವಿಯು-" ತಂಗಿಯಾದ ಎಲೌ ರತ್ನಾವಳಿಯೇ, ದುಃಖವಂ ಪೊಂದಬೇಡ " ಎಂದು ಅವಳನ್ನು ಆಲಿಂಗಿಸಿ, ಧಾರಾಳವಾಗಿ ಕಣ್ಣೀರುಗಳಂ ಬಿಡುತ್ತಿರಲು ; ರಾಯನು—" ಉತ್ತಮವಾದ ವಂಶದಲ್ಲಿ ಪುಟ್ಟಿದ ವಿಕ್ರಮಬಾಹುರಾಯನ ಮಗಳಾದ ರತ್ನಾವಳಿಯೇ ? " ಎಂದು ಬೆಸಗೊಳಲು ; ವಿದೂಷಕನು ತನ್ನ ಕತ್ತಿನಲ್ಲಿದ್ದ ರತ್ನಮಾಲೆಯಂ ಮುಟ್ಟಿ ನೋಡಿ—" ನಾನು ಮೊದಲೇ ಈ ಸಾಗರಿಕೆಯು ಮಹತ್ತರವಾದ ಸದ್ವಂಶದಲ್ಲಿ ಪುಟ್ಟಿದವಳಾಗಿರಬೇಕು. ಇಲ್ಲವಾದಲ್ಲಿ ಅಮೂಲ್ಯವಾದ ಇಂಥ ರತ್ನಮಾಲೆಯು ಸಾಧಾರಣವಾದ ಜನರಿಗೆ ದೊರಕತಕ್ಕುದಲ್ಲವೆಂದು ನಿಶ್ಚಯಿಸುತ್ತಿದ್ದೆನು " ಎಂದು ತನ್ನ ಮನದಲ್ಲಿ ಆಲೋಚಿಸುತ್ತಿರಲು ; ವಸುಭೂತಿಯು ವಾಸವದತ್ತಾದೇವಿಯಂ ನೋಡಿ, " ಎಲೌ ದೇವಿಯೇ, ನಿನ್ನ ತಂಗಿಯಾದ ರತ್ನಾವಳಿಗೆ ಇಂಥ ಅವಸ್ಥೆಯು ದೊರಕಬಹುದೇ ! " ಎನಲು ; ರಾಯನು ಸಿಂಹಳೇಶ್ವರನ ಪುತ್ರಿ ಎಂದು ನಿಶ್ಚಯಿಸಿ—" ಎಲೌ ವಾಸವದತ್ತಾದೇವಿಯೇ, ನಿನ್ನ ತಂಗಿಯಾದ ರತ್ನಾವಳಿಯು ಅಧಿಕವಾದ ದುಃಖವಂ ಹೊಂದುತ್ತಿರುವಳು. ನೀನು ಜಾಗ್ರತೆಯಿಂದ ಬಂದು ಆಲಿಂಗನವಂ ಗೆಯ್ದು ಇವಳ ವ್ಯಸನವಂ ಪರಿಹರಿಸುವಳಾಗು " ಎಂದು ನುಡಿಯಲು ; ವಾಸವದತ್ತೆಯು ರಾಯನ ಮುಖವಂ ನೋಡುವುದಕ್ಕೂ ವಸುಭೂತಿಗೆ ಪ್ರತ್ಯುತ್ತರವಂ ಪೇಳುವುದಕ್ಕೂ ಸಹ ಲಜ್ಜೆಯಂ ಪೊಂದುತ್ತಿರುವೆನೆಂದು ತನ್ನ ಮನದಲ್ಲಿ ಯೋಚಿಸಿ, ರತ್ನಾವಳಿಯಂ ನೋಡಿ ಕಣ್ಣೀರುಗಳಂ ಬಿಡುತ್ತ, ತನ್ನ ಬಾಹುಗಳಂ ನೀಡಿ " ಎಲೆ ತಂಗಿಯಾದ ರತ್ನಾವಳಿಯೇ, ಅತಿನಿಷ್ಠುರಳಾದ ಎನಗೆ ಪ್ರತ್ಯುತ್ತರವಂ ನುಡಿಯುತ್ತ ಆಲಿಂಗನವಂ ಗೆಯ್ಯುವಳಾಗು. " ಎಂದು ನುಡಿದು, ಅವಳ ಕಂಠಾಲಿಂಗನವಂ ಗೆಯ್ಯಲು; ಆ ರತ್ನಾವಳಿಯು ಮುಗ್ಗುತ್ತ ಎದ್ದು, ವಾಸವದತ್ತಾದೇವಿಯಂ ಆಲಿಂಗಿಸಲು ; ವಾಸವದತ್ತಾದೇವಿಯು ವಸುಭೂತಿಯಂ ಪೊರದಟ್ಟಿ ರಾಯನಂ ಕುರಿತು, " ಎಲೈ ರಾಜೇಂದ್ರನೇ, ಎನಗೆ ಬಲವಾಗಿ ನಾಚಿಕೆಯುಂಟಾಗುತ್ತಿರುವುದು. ನೀನು ಜಾಗ್ರತೆಯಿಂದ ಈ ರತ್ನಾವಳಿಯ ಪಾದಗಳಲ್ಲಿರುವ ಸಂಕಲೆಯಂ ತೆಗೆಯುವನಾಗು " ಎಂದು ಬಿನ್ನೈಸಲು ; ರಾಯನು—" ನೀನು ಪೇಳಿದಂತೆ ಮಾಡುವೆನು " ಎಂದು ಆ ರತ್ನಾವಳಿಯ ಪಾದಬಂಧನವಂ ತೆಗೆಯಲು ; ರತ್ನಾವಳಿಯು ರಾಯನನ್ನು ನೋಡಿ ಲಜ್ಜೆಯನ್ನೂ ಭೀತಿಯನ್ನೂ ಸಂತೋಷವನ್ನೂ ಸಹ ಪೊಂದುತ್ತಿರಲು ; ವಾಸವದತ್ತೆಯು ವಸುಭೂತಿಯಂ ಕುರಿತು,—" ಎಲೈ ಮಂತ್ರಿಶ್ರೇಷ್ಠನೇ, ಕೇಳು. ನಮ್ಮ ಮಂತ್ರಿಯಾದ

ಯೌಗಂಧರಾಯಣನಿಂದ ನಾನು ಈ ರೀತಿಯಾದ ದುರ್ಜನಕೆ ಒಳಗಾದೆನು. ಎನ್ನ ಸಮೀಪಕ್ಕೆ ಈ ರತ್ನಾವಳಿಯನ್ನು ಕರೆದುಕೊಂಡು ಬಂದ ಕಾಲದಲ್ಲಿ ಇವಳ ವೃತ್ತಾಂತವನ್ನು ತಿಲಮಾತ್ರವಾದರೂ ತಿಳುಹಿಸದೆ ಪೋದನು. ನಾನಾದರೋ ಇವಳ ವೃತ್ತಾಂತವನ್ನು ಕೇಳಿ ಬಲ್ಲೆನಲ್ಲದೆ ಬಾಲ್ಯದಿಂದ ಇವಳನ್ನು ಒಂದು ಬಾರಿಯೂ ಕಂಡವಳಲ್ಲ. ಸಾಧಾರಣರಾದ ಸ್ತ್ರೀಯರಲ್ಲಿ ಇವಳು ಒಬ್ಬಳೆಂದು ಕಂಡು ಯಾವುದೋ ಒಂದು ಅಪರಾಧಕ್ಕೋಸುಗವಾಗಿ ತಕ್ಕ ಶಿಕ್ಷೆಯನ್ನುಂಟುಮಾಡಬೇಕಾಗಿ ಬಂದಿತು " ಎಂದು ಪಶ್ಚಾತ್ತಾಪಯುಕ್ತಳಾಗಿ ಪೇಳುತಿರ್ದಳು.

ಎಂಬಲ್ಲಿಗೆ
ಶ್ರೀಕೃಷ್ಣರಾಜ ಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಹದಿನೇಳನೆಯ ಗುಚ್ಛಂ ಸಂಪೂರ್ಣಮ್.

## ಹದಿನೆಂಟನೆಯ ಗುಚ್ಛಂ.

ಅನಂತರದಲ್ಲಿ ಯೌಗಂಧರಾಯಣನು ರಾಜಕಾರ್ಯಗಳನ್ನು ವಿಜ್ಞಾಪಿಸುವುದಕ್ಕೋಸುಗವಾಗಿ ಅಂತಃಪುರವಂ ಕುರಿತು ಬರುತ್ತ " ವಾಸವದತ್ತಾದೇವಿಯು ಎನ್ನ ವಚನವನ್ನು ಕೇಳಿ ತನ್ನ ಪತಿಯಾದ ರಾಜೇಂದ್ರನಲ್ಲಿ ಮನಸ್ತಾಪವಂ ಪಡೆದು ಕೆಲವು ದಿವಸದವರೆಗೂ ವಿಯೋಗವನ್ನು ಅನುಭವಿಸುವಳಾದಳು. ಯಾವ ರತ್ನಾವಳಿಯನ್ನು ರಾಯನಿಗೆ ಪತ್ನಿಯಂ ಗೆಯ್ಯಲೋಸುಗ ನಾನು ಅತಿದುಃಖವಂ ಪೊಂದಿದೆನೋ, ಅಖಂಡಭೂಮಂಡಲಾಧಿಪತ್ಯವು ಆ ರತ್ನಾವಳಿಯ ಪಾಣಿಗ್ರಹಣದಿಂದ ಉಂಟಾಗುತಿದೆ ಎಂಬ ವಾರ್ತೆಯನ್ನು ಕೇಳುವುದಕ್ಕೆ ಮೊದಲೇ ನಮ್ಮ ರಾಯನು ಅವಳಲ್ಲಿ ಹೇರಳವಾದ ಪ್ರೀತಿಯನ್ನು ಮಾಡುವುದರಲ್ಲಿ ಸಂದೇಹವೇ ಇಲ್ಲ. ಆದರೂ ಆ ರತ್ನಾವಳಿಯ ವೃತ್ತಾಂತವನ್ನು ದೇವಿಗೆ ಪೇಳದೆ ಇಂತು ಅನರ್ಥವನ್ನುಂಟುಮಾಡಿದೆನು. ಈಗ ಮುಖವನ್ನು ತೋರಿಸುವುದಕ್ಕೆ ಲಜ್ಜೆಯಂ ಪೊಂದುವೆನು " ಎಂದು ಕ್ಷಣಮಾತ್ರ ಯೋಚಿಸಿ, " ಆದರೂ ನಾನು ಬಲವತ್ತರವಾದ ಸ್ವಾಮಿಭಕ್ತಿಯಿಂದ ಈ ಕಾರ್ಯವಂ ನಡೆಯಿಸಿರುವೆನಾದುದರಿಂದ ಎನಗೆ ಭಯವಿಲ್ಲವು " ಎಂದು ಮುಂದಕೆ ಅಡಿಯಿ

ಒಂದುವೇಳೆಯಲ್ಲಾದರೂ ಪೇಳಬಾರದೆ !" ಎನಲು ; ವಿದೂಷಕನು—" ಮಂತ್ರಿಯ ಅಭಿಪ್ರಾಯಮಂ ತಿಳಿದ ಬಳಿಕ ಮರಳಿ ಚರ್ವಿತಚರ್ವಣೆಯಿಂದ ಫಲವಿಲ್ಲವು" ಎನಲು ;

ದೇವಿಯು—" ರತ್ನಾವಳಿಯೇ, ಈಗಲಾದರೂ ಎನ್ನ ತಂಗಿಯೆಂಬ ಅಭಿಮಾನದಿಂದ ಎನ್ನಲ್ಲಿ ಮಿತ್ರತ್ವವನ್ನುಂಟುಮಾಡುವಳಾಗು" ಎಂದು ಅವಳನ್ನು ತನ್ನ ಹಸ್ತದಿಂ ಪಿಡಿದು, ಸಮಸ್ತವಾದ ತನ್ನ ರತ್ನಾಭರಣಗಳಿಂದ ಅಲಂಕರಿಸಿ, ರಾಯನ ಸಮೀಪವಂ ಸೇರಿ—" ಎಲೈ ರಾಜೋತ್ತಮನೇ, ನನ್ನ ತಂಗಿಯನ್ನು ಪರಿಗ್ರಹಿಸುವನಾಗು" ಎಂದು ನುಡಿಯಲು ; ರಾಯನು ಅಧಿಕಾನಂದ ಭರಿತನಾಗಿ, " ಎಲೈ ಪ್ರಾಣಕಾಂತೆಯೇ, ಯಾವಾಗಲು ನಿನ್ನ ವಾಕ್ಯವನ್ನು ಮೀರಿ ನಡೆದವನಲ್ಲ" ಎಂದು ಎರಡು ಹಸ್ತಗಳಂ ನೀಡಿ, ರತ್ನಾವಳಿಯಂ ಪರಿಗ್ರಹಿಸಲು ;

ವಸುಭೂತಿಯು ರಾಯನಂ ಕುರಿತು—" ಅಯ್ಯಾ ರಾಜೇಂದ್ರನೇ, ಇನ್ನು ಮೇಲೆ ಸಮಸ್ತ ಬಂಧುಗಳು ಕೂಡಿ ವಿದಿತವಾಗಿ ವಿವಾಹವಂ ರಚಿಸಬೇಕು" ಎಂದು ಬಿನ್ನೈಸಲು ;

ವಿದೂಷಕನು ರಾಯನಂ ಕುರಿತು—" ಅಯ್ಯಾ ರಾಜೇಂದ್ರನೇ, ಈ ವಸುಭೂತಿಯು ಹೇಳುವ ವಾಕ್ಯವನ್ನು ಕೇಳಿದೆಯಾ ? ಸಮಸ್ತ ಬಂಧುಗಳೂ ಬಂದು ವಿಧ್ಯುಕ್ತವಾಗಿ ವಿವಾಹವಾಗಬೇಕಲ್ಲದೆ ರತ್ನಾವಳಿಯನ್ನು ಇಚ್ಛೆ ಬಂದಂತೆ ಪರಿಗ್ರಹಿಸಕೂಡದೆಂಬ ತಾತ್ಪರ್ಯವನ್ನು ಅಂತರಂಗದಲ್ಲಿರಿಸಿ ಈ ವಾಕ್ಯವನ್ನು ಪೇಳುತ್ತಿರುವನು" ಎಂದು ರಹಸ್ಯವಾಗಿ ಪೇಳುತ್ತಿರಲು ;

ಅಷ್ಟರಲ್ಲೇ ದ್ವಾರಪಾಲಕಿಯು ವೇಗದಿಂ ಬಂದು, ಯೌಗಂಧರಾಯಣನಂ ಕುರಿತು—" ಅಯ್ಯಾ ಮಂತ್ರಿಗಳೇ, ಸಮುದ್ರತೀರದಲ್ಲಿರುವ ಧನಗುಪ್ತನೆಂಬ ವರ್ತಕನ ಮನೆವಾರ್ತೆಯ ವಸುಗುಪ್ತನು ನಿನ್ನ ಹೆಸರಿಗೆ ಒಂದು ಪತ್ರಿಕೆಯನ್ನು ಬರೆದು ಒಬ್ಬ ಚಾರನನ್ನು ಕಳುಹಿಸಿಕೊಟ್ಟಿರುವನು" ಎಂದು ಬಿನ್ನೈಸಲು ;

ಆ ವಾಕ್ಯವಂ ಕೇಳ್ದ ರಾಯನು ಮಂತ್ರಿಯಂ ಕುರಿತು—" ಅಯ್ಯಾ ಮಂತ್ರಿಯೇ, ಇಲ್ಲಿಗೆ ಆ ಪತ್ರಿಕೆಯನ್ನು ತೆಗೆದುಕೊಂಡು ಬರುವಂತೆ ಪೇಳುವನಾಗು" ಎಂದು ಅಪ್ಪಣೆಯನೀಯಲು ;

ಆ ದ್ವಾರಪಾಲಕಿಯು, " ಆಜ್ಞೆಯಾದಂತೆ ನಡೆದುಕೊಳ್ಳುವೆನು" ಎಂದು ಪೋಗಿ ಪತ್ರಿಕೆಯನ್ನು ತೆಗೆದುಕೊಂಡು ಬಂದ ಜಂಘಾಲನೆಂಬ ಚಾರನಿಂದೊಡಗೂಡಿಬರಲು ಆ ಚಾರನು ರಾಯನ ಪುರೋಭಾಗದಲ್ಲಿ ಪತ್ರಿಕೆಯಂ ಮಡಗಿ, ನಮಸ್ಕಾರವಂ ಗೆಯ್ದು ನಿಂದಿರಲು ;

ಯೌಗಂಧರಾಯಣನು ಆ ಪತ್ರಿಕೆಯಂ ತೆಗೆದುಕೊಂಡು ಮುದ್ರೆಯ ಒಡೆದು ಓದಲು ; ಅದರ ಒಕ್ಕಣೆ:—" ಮಹಾರಾಜೇಂದ್ರನಿಗೆ ಪ್ರೇಮಪಾತ್ರನಾದ ಯೌಗಂಧರಾಯಣನ ಸನ್ನಿಧಿಗೆ ವಸುಗುಪ್ತನು ಮಾಡುವ ವಿಜ್ಞಾಪನೆಯು:—ಈಗ ಸಿಂಹಳಾಧಿಪತಿ

ಯಾದ ವಿಕ್ರಮಬಾಹುರಾಯನ ಪುತ್ರರಾದ ವಿಂದಾನುವಿಂದರು ಸಮಸ್ತಸೇನೆಗಳಿಂ ದೊಡಗೂಡಿ ನಮ್ಮ ವತ್ಸರಾಜೇಂದ್ರನ ಸಂದರ್ಶನವಂ ತೆಗೆದುಕೊಳ್ಳುವುದಕೋಸುಗ ವಾಗಿ ಬಂದು ಇಂದಿನ ದಿನ ಸಮುದ್ರತೀರದಲ್ಲಿ ಹಡಗುಗಳನ್ನು ಇಳಿದು ಕಟಕರಚನೆ ಯಂ ಗೆಯ್ದು ಇದ್ದಾರೆ" ಎಂದು ಬರೆದಿರುವುದೆಂದು ಪೇಳಲು ;

ಆ ವಾಕ್ಯವಂ ಕೇಳ್ದ ರತ್ನಾವಳಿಯು ಅತ್ಯಂತವಾದ ಸಂತೋಷವನ್ನು ಪೊಂ ದುತ್ತಿರಲು ;

ವಸುಭೂತಿಯು ಎದ್ದು—" ಎಲೈ ರಾಜೇಂದ್ರನೇ, ನಮ್ಮ ರಾಜೇಂದ್ರನ ಪುತ್ರ ರುಗಳು ಬಂದಿರುವಲ್ಲಿ ನಾನು ಎದುರುಗೊಂಡು ಪೋಗುವೆನು " ಎಂದು ಅಪ್ಪಣೆಯಂ ತೆಗೆದುಕೊಂಡು ಪೋಗಲು ;

ವಿದೂಷಕನು— " ಅಯ್ಯಾ ರಾಜೇಂದ್ರನೇ, ವಿಂದಾನುವಿಂದರೆಂಬವರು ಮಹಾಕೋಪಶಾಲಿಗಳೆಂದು ಕೇಳಿರುವೆನು. ಅವರು ಇಲ್ಲಿಗೆ ಬಂದಲ್ಲಿ ರತ್ನಾ ವಳಿಯ ವಿವಾಹಕ್ಕೆ ಏನು ವಿಘ್ನವನ್ನುಂಟುಮಾಡುವರೋ ತಿಳಿಯದು" ಎಂದು ನುಡಿಯಲು; ರಾಯನು—" ಅಯ್ಯಾ ಯೌಗಂಧರಾಯಣನೇ, ನೀನು ಶೀಘ್ರ ವಾಗಿ ಪೋಗಿ ರಾಜಪುತ್ರರಿಗೆ ಯೋಗ್ಯವಾದ ಬಿಡದಿಯಂ ಬಿಡಿಸಿ ಎದುರುಗೊಂಡು ಕರೆದುಕೊಂಡು ಬರುವುದು " ಎಂದು ಅಪ್ಪಣೆಯನ್ನೀಯುತ್ತಿರಲು ;

ಅಷ್ಟರಲ್ಲೇ ವಿಜಯಸೇನೆಯೆಂಬ ದ್ವಾರಪಾಲಕಿಯು ಬಂದು—" ಎಲೈ ರಾ ಜೇಂದ್ರನೇ, ಸಿಂಹಳದೇಶದ ರಾಜಪುತ್ರರುಗಳು ಸಮಸ್ತ ಸೇನೆಗಳಿಂದೊಡಗೂಡಿ ನಮ್ಮ ಕೌಶಾಂಬೀನಗರಿಯ ಬಹಿರ್ಭಾಗದಲ್ಲಿರುವ ಸುಂದರವನದ ಸಮೀಪವಂ ಕುರಿ ತು ಬಂದರೆಂದು ಗೂಢಚಾರನಾದ ಸಿಂಹವರ್ಮನು ವಿಜ್ಞಾಪಿಸುವನು " ಎನಲು ;

ರಾಯನು ಯೌಗಂಧರಾಯಣನಂ ಕರೆದು—" ಅಯ್ಯಾ ಮಂತ್ರಿಯೇ, ಶೀಘ್ರ ದಿಂದ ಕಲಶಕನ್ನಡಿ ಮುಂತಾದ ಮಂಗಳದ್ರವ್ಯಗಳನ್ನೂ ಸಮಸ್ತ ಸೇನೆಗಳನ್ನೂ ತೆಗೆ ದುಕೊಂಡು ಪೋಗುವನಾಗು " ಎಂದು ಅಪ್ಪಣೆಯನ್ನಿತ್ತು ಕಳುಹಿಸಿ, ವಾಸವದತ್ತೆ ರತ್ನಾವಳಿ ಇಬ್ಬರೂ ಇವರಿಂದಲೂ ವಿದೂಷಕನಿಂದಲೂ ಯುಕ್ತನಾಗಿ ತನ್ನ ವಾಸ ಭವನಮಂ ಕುರಿತು ಬರುತ್ತಿರಲು ; ವಾಸವದತ್ತೆಯು—" ಅಯ್ಯಾ ವಿದೂಷಕನೇ, ಆ ಸಿಂಹಳದೇಶದ ರಾಜಪುತ್ರರುಗಳು ಬರುವಲ್ಲಿ ನಾವಿಬ್ಬರು ಇರುವುದು ಯುಕ್ತವಲ್ಲ. ರಾಯನ ಆಜ್ಞೆಯಾದಲ್ಲಿ ಅಂತಃಪುರದಲ್ಲಿ ಇರುವೆವು " ಎಂದು ನುಡಿಯಲು ; ರಾಯ ನು ಯುಕ್ತವೆಂದು ಅಪ್ಪಣೆಯನ್ನಿತ್ತು ಕಳುಹಿಸಿ, ವಿದೂಷಕನನ್ನು ಕುರಿತು—" ಅ ಯ್ಯಾ ಮಿತ್ರನೇ, ರತ್ನಾವಳಿಯು ಎನ್ನ ವಶಳಾದಳೆಂಬುವಷ್ಟರಲ್ಲೇ ಯಾವುದಾದರೂ ಒಂದು ವಿಘ್ನವು ದೊರೆಯುತ್ತಲೇ ಇರುವುದು " ಎಂದು ನುಡಿಯುತ್ತ ಸಭಾಸ್ಥಾನ ವಂ ಕುರಿತು ಬಂದು ರತ್ನಪುಂಜದಿಂದ ಮಂಜುಳವಾದ ಸಿಂಹಾಸನದಲ್ಲಿ ಕುಳಿತು, ಸಮಸ್ತಸೇನೆಗಳಿಂದಲೂ ಸಾಮಂತರಾದ ದೊರೆಗಳಿಂದಲೂ ಸಾಮಾಜಿಕರಿಂದಲೂ

ಯುಕ್ತನಾಗಿ, ವಿರಾಜಿಸುತ್ತಿರಲು ;

ಅಷ್ಟರಲ್ಲೇ ಯೌಗಂಧರಾಯಣನು ಎದುರುಗೊಂಡು ಆ ವಿಂದಾನುವಿಂದರುಗಳನ್ನು ಸಭಾಸ್ಥಾನಕೆ ಕರೆದುಕೊಂಡು ಬರಲು ; ಅವರು ದೂರದಲ್ಲಿ ವಾಹನಗಳನ್ನು ಇಳಿದು ಭಯಭಕ್ತಿಯುಕ್ತರಾಗಿ ಆಯುಧಗಳಿಂದ ವಿಭೂಷಿತರಾಗಿ ತಮ್ಮ ಹಸ್ತಗಳಲ್ಲಿ ಪ್ರಶಸ್ತವಾದ ರತ್ನಂಗಳನ್ನು ಕೈಗಾಣಿಕೆಯಾಗಿ ಪಿಡಿದು, ನಳಕೂಬರ ಜಯಂತರಂತೆ, ಚಂದ್ರಸೂರ್ಯರಂತೆ, ಅಶ್ವಿನೀದೇವತೆಗಳಂತೆ, ರಾಜಿಸುತ್ತ ಬಂದು, ಸಿಂಹಪೀಠದಲ್ಲಿ ವಿರಾಜಿಸುವ ವತ್ಸರಾಜನಂ ಕಂಡು, ಆತನ ಪಾದಪದ್ಮಗಳಲ್ಲಿ ರತ್ನಗಳನ್ನು ಇರಿಸಿ, ನಮಸ್ಕರಿಸಿ, ಅವನ ಅಜ್ಞೆಯಿಂದ ಬತ್ತಿನಲ್ಲಿ ಇರುವ ರತ್ನಪೀಠದಲ್ಲಿ ಕುಳಿತಿರಲು ;

ವಿದೂಷಕನು ರಾಯನಂ ಕುರಿತು—“ ಅಯ್ಯಾ ರಾಜೇಂದ್ರನೇ, ವೀರರಸವೇ ಮೈಗೊಂಡಂತೆ ಪೊಳೆಯುವ ಈ ರಾಜಪುತ್ರರಂ ನೋಡಿ ಎನಗೆ ಹೃದಯದಲ್ಲಿ ತಲ್ಲಣವುಂಟಾಗಿರುವುದು. ಇವರು ರತ್ನಾವಳಿಯ ವಿವಾಹಕ್ಕೆ ವಿಘ್ನವನ್ನುಂಟುಮಾಡದೆ ಬಿಡರು” ಎಂದು ನುಡಿಯಲು ; ರಾಯನು—“ ಯಾವ ಕಾರ್ಯವನ್ನಾದರೂ ಸಹವಾಸದಿಂದಲೂ ಅವರ ನಡೆನುಡಿಗಳಿಂದಲೂ ವ್ಯಕ್ತವಾಗಿ ತಿಳಿಯಬೇಕಾಗಿರುವುದು ” ಎಂದು, ರಾಜಪುತ್ರರಿಗೆ ಅಭಿಮುಖನಾಗಿ, “ ಅಯ್ಯಾ ವಿಂದಾನುವಿಂದರುಗಳಿರಾ, ನಿಮ್ಮ ಸಂದರ್ಶನದಿಂದ ಅಧಿಕಾನಂದವುಂಟಾಗುವುದು ನೀವು ಯಾವಾಗಲೂ ನಮ್ಮ ದೇಶಕೆ ಬಂದವರಲ್ಲ. ಏನೋ ಒಂದು ಬಲವತ್ತರವಾದ ಕಾರ್ಯಗೌರವದಿಂದಲೋ, ಇಲ್ಲವಾದಲ್ಲಿ ಬಹುದಿನದಿಂದ ಪೊಂದಿ ಬಂದ ಬಂಧುತ್ವವೃದ್ಧಿಯಂ ಪೊಂದಿಸಬೇಕೆಂತಲೋ ಇಲ್ಲಿಗೆ ಬಂದಿರುವುದಾಗಿ ತೋರುತ್ತಿರುವುದು ” ಎಂದು ನುಡಿಯಲು ; ಜ್ಯೇಷ್ಠನಾದ ವಿಂದನು—“ ಎಲೈ ರಾಜೇಂದ್ರನೇ, ತಾವು ಅಪ್ಪಣೆಯನ್ನೀಯುವ ಅಭಿಪ್ರಾಯವು ವ್ಯಕ್ತವಾಗಿ ತಿಳಿದಿರುವುದು. ಸಮುದ್ರದರ್ಶನಕೋಸುಗವಾಗಿ ಹಡಗನ್ನೇರಿ ಬರುತ್ತ ಇದ್ದ ನಮ್ಮ ತಂಗಿಯಾದ ರತ್ನಾವಳಿಯು ಹಡಗು ಒಡೆದು ದೈವಸಂಯೋಗದಿಂದ ನಿಮ್ಮ ಅಂತಃಪುರವನ್ನು ಸೇರಿರುವುದಾಗಿ ನಮ್ಮ ತಂದೆಯಾದ ವಿಕ್ರಮಬಾಹುರಾಯಂಗೆ ಮಂತ್ರಿಯಾದ ವಸುಭೂತಿಯು ಬರೆದ ಪತ್ರಿಕಾಮುಖದಿಂದ ವಿದಿತವಾದುದರಿಂದ ನಿಮ್ಮ ಸಂದರ್ಶನವನ್ನೂ ಅಕ್ಕಯ್ಯನಾದ ವಾಸವದತ್ತಾದೇವಿಯ ಸಂದರ್ಶನವನ್ನೂ ತೆಗೆದುಕೊಂಡು, ನಮ್ಮ ರತ್ನಾವಳಿಯಂ ನಮ್ಮ ಪಟ್ಟಣಕ್ಕೆ ಕರೆದುಕೊಂಡು ಪೋಗಲೋಸುಗವಾಗಿ ಇಲ್ಲಿಗೆ ಬಂದೆವು” ಎಂದು ಬಿನ್ನೈಸಲು ;

ವಿದೂಷಕನು ಏಕಾಂತವಾಗಿ ರಾಯನಂ ಕುರಿತು “ ಅಯ್ಯಾ ರಾಜೇಂದ್ರನೇ, ಈ ರಾಜಪುತ್ರರು ಪೇಳುವ ವಾಕ್ಯದಿಂದ ಸರ್ವಕಾರ್ಯದಲ್ಲೂ ವಿರಾಮವೇ ತೋರುತ್ತಿರುವುದು. ವಸುಭೂತಿಯು ಯಾರಿಗೂ ತಿಳಿಯಿಸದೆ ಪತ್ರಿಕೆಯ ಬರೆದು ಈ ರಾಜ

ಪುತ್ರರುಗಳನ್ನು ಇಲ್ಲಿಗೆ ಕರೆಸಿದನು. ಮುಂದೆ ನಿನ್ನ ಅಭಿಪ್ರಾಯವು ಹೇಗೆ ಇರುವುದು?” ಎನಲಾ ರಾಯನು ಕೋಪವಂ ತಾಳಿ, “ಎಲ್ಲೈ ಹಾರುವರ ಹುಡುಗನೇ, ಕೇಳು. ಯುಕ್ತವಾದ ನಡೆತೆಯಿಂದ ಈ ರತ್ನಾವಳಿಯನ್ನು ಕೊಟ್ಟು ವಿವಾಹವಂ ಗೆಯ್ದುರಂತೂ ಸರಿ. ಇಲ್ಲವಾದಲ್ಲಿ ಸಿಂಹಳ ದೇಶವನ್ನು ಸಮುದ್ರದಲ್ಲಿ ಕಲಸಿ, ಕಲವಾಣಿಯಾದ ಆ ಕಾಂತೆಯನ್ನು ಕೈವಶಳಂ ಗೆಯ್ಯದಿದ್ದೆನಾದರೆ ನಿರ್ಮಲವಾದ ಚಂದ್ರಕುಲದಲ್ಲಿ ಪುಟ್ಟಿದುದಕ್ಕೆ ಫಲವೇನು?” ಎಂದು ನುಡಿದು—“ಎಲೈ ರಾಜಪುತ್ರರುಗಳಿರಾ, ಮಾರ್ಗಾಯಾಸವಂ ಪರಿಹರಿಸುವರಾಗಿರಿ” ಎಂದು ನುಡಿಯಲು;

ಯೌಗಂಧರಾಯಣನು ಸಮಸ್ತ ವಸ್ತುಗಳಿಂದ ಸಂಪೂರ್ಣವಾದ ಬಿಡದಿಯ ಮನೆಗೆ ಆ ರಾಜಪುತ್ರರುಗಳನ್ನು ಕರೆದುಕೊಂಡು ಪೋಗಲಾರಾಜಪುತ್ರರುಗಳು ತಮ್ಮ ಮಂತ್ರಿಯಾದ ವಸುಭೂತಿಯಂ ಕರೆದು—“ಅಯ್ಯಾ ಮಂತ್ರಿಯೇ, ನಮ್ಮ ರತ್ನಾವಳಿಯು ನಮ್ಮ ಅರಮನೆಯಲ್ಲಿರುವುದಕ್ಕೆ ಯೋಗ್ಯಳಲ್ಲದೆ ಅಲ್ಲಿರುವುದು ಯುಕ್ತವಲ್ಲ. ಈ ವಾಕ್ಯವನ್ನು ಪೂಜ್ಯಳಾದ ವಾಸವದತ್ತಾದೇವಿಗೆ ವಿಜ್ಞಾಪನೆಯಂ ಗೆಯ್ದು ಕೆಲವು ಸಮೀಪವರ್ತಿಗಳಾದ ರತ್ನಾವಳಿಯನ್ನು ಇಲ್ಲಿಗೆ ಕರೆದುಕೊಂಡು ಬರುವುದು” ಎಂದು ನುಡಿಯಲು; ಆ ಮಂತ್ರಿಯು ಅವರು ಪೇಳಿದ ದುಡುಕುತನದ ಮಾತಂ ಕೇಳಿ, ಮನನೊಂದು, “ಪ್ರಥಮಚುಂಬನದಲ್ಲೇ ಹಲ್ಲುಮುರಿದ ರೀತಿಯನ್ನು ಮಾಡುತ್ತಲಿರುವರು. ಇನ್ನೂ ಬಂದು ನಾಲ್ಕು ಗಳಿಗೆಯಿಲ್ಲದೆ ಇದ್ದರೂ ಇವರು ಮಾಡುವ ಪಾರುಪತ್ಯವು ಬಲವಾಗಿರುವುದು. ವತ್ಸರಾಜನಾದರೋ, ರಾಜಾಧಿರಾಜನಾಗಿ ಶೂರಾಗ್ರೇಸರನಾಗಿರುವನು. ಮುಂದೆ ರಾಜಕಾರ್ಯಗಳು ವಿರೋಧವಾಗಿ ಹೇಗೆ ಪರಿಣಮಿಸುತ್ತಿರುವುವೋ ತಿಳಿಯೆನು” ಎಂದು ಕಳವಳವಂ ಪೊಂದುತ್ತ ಬಂದು, ಯೌಗಂಧರಾಯಣನಿಗೆ ಈ ವಾರ್ತೆಯನ್ನು ರಹಸ್ಯವಾಗಿ ತಿಳಿಸಲು; ಅವನು ನಸುನಗುತ್ತ—“ಅಯ್ಯಾ ಮಂತ್ರಿಗಳೇ, ನಿಮ್ಮ ರಾಜಪುತ್ರರುಗಳು ಅವರ ಬಾಲಭಾವಕ್ಕೆ ತಕ್ಕಂಥ ಕಾರ್ಯಗಳನ್ನು ನಡೆಸುತ್ತ ಬರುವರು” ಎಂದು ನುಡಿದು, ಸಭಾಸ್ಥಾನದಿಂದೆದ್ದು ಬರುತ್ತಿರುವ ವತ್ಸರಾಜನ ಕಿವಿಯಲ್ಲಿ ವಿಂದಾನುವಿಂದರು ಪೇಳಿದ ವಾಕ್ಯವನ್ನು ಪೇಳಲು: ರಾಯನು ಕ್ರೋಧವನ್ನೂ ವಿಷಾದವನೂ ಸಹ ಪೊಂದಿ, ಮುತ್ತಿನ ಹಜಾರವಂ ಕುರಿತು ಬಂದು, ಯೌಗಂಧರಾಯಣ ವಸುಭೂತಿ ವಾಸವದತ್ತೆಯರಂ ಬರುವಂತೆ ಮಾಡಿ, ವಾಸವದತ್ತೆಯಂ ಕುರಿತು—“ಎಲೆ ದೇವಿಯೇ, ನಿನ್ನ ತಮ್ಮಂದಿರಾದ ವಿಂದಾನುವಿಂದರುಗಳು ಪೇಳಿದ ವಾಕ್ಯವನ್ನು ಕೇಳಿದೆಯಾ? ನಮ್ಮ ಅಂತಃಪುರದಲ್ಲಿ ರತ್ನಾವಳಿಯು ಇನ್ನು ಮೇಲೆ ಇರುವುದಕ್ಕೆ ಯೋಗ್ಯಳಲ್ಲವೆಂತಲೂ ಜಾಗ್ರತೆಯಿಂದ ಸಿಂಹಳದೇಶಕ್ಕೆ ಕರೆದುಕೊಂಡು ಪೋಗಬೇಕೆಂತಲೂ ಇನ್ನೂ ಬಹಳವಾದ ದುರಾಲೋಚನೆಯಂ ಗೆಯ್ದಿರುವಂತೆಯೂ ತೋರುತ್ತಿರುವುದು. ಮುಂದೆ ರತ್ನಾವಳಿಯನ್ನು ಕಳುಹಿಸತಕ್ಕುದೋ ಇಲ್ಲೇ

ಇರಿಸಿಕೊಂಡು ವಿವಾಹಾದಿಗಳಂ ನಡೆಸತಕ್ಕುದೋ ನಿಮ್ಮ ಬುದ್ಧಿಗಳಿಗೆ ಹೇಗೆ ತೋರುತ್ತಿರುವುದು, ಚೆನ್ನಾಗಿ ಆಲೋಚಿಸಿ ಉತ್ತರವಂ ಪೇಳಬಹುದು?" ಎಂದು ಅಪ್ಪಣೆಯನ್ನೀಯಲು ;

ವಿದೂಷಕನು—"ಅಯ್ಯಾ ಮಂತ್ರಿಗಳೇ, ಎನ್ನ ಬುದ್ಧಿಗೆ ತೋರುವ ವಾಕ್ಯವನ್ನು ಪೇಳುವೆನು, ಕೇಳಿ. ಈ ರತ್ನಾವಳಿಯನ್ನು ಇಲ್ಲಿಂದ ಸಿಂಹಳದೇಶಕೆ ಕಳುಹಿಸಬೇಕಾದಲ್ಲಿ ನಮ್ಮ ರಾಜೇಂದ್ರನಿಗೆ ವಿವಾಹವಂ ವಿರಚಿಸಿ ಆ ಬಳಿಕ ಕಳುಹಿಸುವುದು ಯುಕ್ತವಾಗಿರುವುದು. ಇಲ್ಲವಾದಲ್ಲಿ ಈ ರಾಜಪುತ್ರರುಗಳು ಆರಟ್ಟದೇಶಾಧಿಪತಿಯ ಪುತ್ರನಾದ ಕೀರ್ತಿವರ್ಮನಿಗೆ ಕೊಟ್ಟು ವಿವಾಹವಂ ಗೆಯ್ಯಬೇಕೆಂದು ಆಲೋಚಿಸಿ ಇದ್ದರೆಂಬ ಸಂಗತಿಯು ಮೊದಲೇ ವ್ಯಕ್ತವಾಗಿದೆಯಷ್ಟೆ. ಹೀಗಿರುವಲ್ಲಿ ತಿಳಿದೂ ತಿಳಿದೂ ಕಳುಹಿಸತಕ್ಕುದು ಎಷ್ಟು ಮಾತ್ರಕ್ಕೂ ನೀತಿಗೆ ಹಿತವಾದ ಕಾರ್ಯವಲ್ಲವು" ಎಂದು ನುಡಿಯಲು ; ರಾಯನು—"ವಿದೂಷಕನು ಯುಕ್ತವಾಗಿಯೇ ಪೇಳಿರುವನು" ಎಂದು ನುಡಿಯುತ್ತಿರಲು ; ವಾಸವದತ್ತಾದೇವಿಯು—"ಎಲೈ ಮಹಾರಾಜೇಂದ್ರನೇ, ಕೇಳು. ನಾನು ಆ ವಿಂದಾನುವಿಂದರುಗಳ ಅಭಿಪ್ರಾಯಮಂ ತಿಳಿದು ಆ ಬಳಿಕ ನಿಮಗೆ ಪ್ರತ್ಯುತ್ತರವಂ ವಿಜ್ಞಾಪಿಸುವೆನು. ನೀವು ಸ್ನಾನಭೋಜನಕೆ ಬಿಜಯಂ ಗೆಯ್ಯಬಹುದು" ಎಂದು ಅರಿಕೆಯಂಗೆಯ್ಯಲು ;

ವಿದೂಷಕನು—"ಮೊದಲಾಗಿ ಭೋಜನವಾಗಿದ್ದಲ್ಲಿ ಆಬಳಿಕ ಇಂಥ ರತ್ನಾವಳಿಯಂಥ ನೂರುಮಂದಿ ಸ್ತ್ರೀಯರನ್ನು ಸಂಪಾದಿಸಬಹುದು" ಎಂದು ನುಡಿದು ಎಲ್ಲರಿಗೂ ಮಂದಹಾಸವನ್ನುಂಟುಮಾಡುತ್ತಿರಲು ;

ರಾಯನು ಅಲ್ಲಿಂದೆದ್ದು ಚಂದ್ರಕಾಂತಶಿಲೆಗಳಿಂದ ಸುಂದರವಾಗಿ ಶೀತಕೆ ವಾಸಭೂಮಿಯಾಗಿರುವ ಮಜ್ಜನಗೃಹವಂ ಕುರಿತು ಬರುತ್ತಿರಲು ; ದೇವಿಯು—"ಅಯ್ಯಾ ಯೌಗಂಧರಾಯಣನೇ, ನೀನು ಪೋಗಿ ವಿಂದಾನುವಿಂದರನು ಭೋಜನವಾದ ಬಳಿಕ ಎನ್ನ ಅಂತಃಪುರಕ್ಕೆ ಕರೆದುಕೊಂಡು ಬರುವುದು" ಎಂದು ಅಪ್ಪಣೆಯನ್ನೀಯಲು ;

ಇತ್ತಲು, ರಾಯನು ಕಳವಳವಂ ಪೊಂದಿ, ವಿದೂಷಕನಂ ಕರೆದು—"ಅಯ್ಯಾ ಮಿತ್ರನೇ, ಅಂತಃಪುರದಲ್ಲಿ ವಾಸವದತ್ತಾ ಮುಂತಾದವರೆಲ್ಲಾ ಒಟ್ಟುಗೂಡುವರು. ಅಲ್ಲಿ ವಿಶೇಷವಾದ ವಾರ್ತೆಯು ಏನು ನಡೆಯುವುದೋ ಅದನ್ನು ತಿಳಿದುಕೊಂಡು ಬರುವನಾಗು" ಎಂದು ನುಡಿಯಲವನು ರಹಸ್ಯವಾಗಿ ಬಂದು ಯಾರೂ ಕಾಣದ ಮುತ್ತಿನ ಹಜಾರದಲ್ಲಿ ಬಾಗಿಲ ಹಿಂಬಾಗವಂ ಸೇರಲು ;

ಯೌಗಂಧರಾಯಣನು ವಿಂದಾನುವಿಂದರುಗಳನ್ನು ಕರೆದುಕೊಂಡು ಬರುತ್ತ "ಅಯ್ಯಾ ರಾಜಪುತ್ರರೇ, ಇತ್ತಲು ಬಿತ್ತರವಾಗಿ ಕೆತ್ತಿದ ಮುತ್ತಿನ ಗದ್ದುಗೆಯಲ್ಲಿ ರಾಜೋತ್ತಮನ ಪತ್ನಿಯಾದ ವಾಸವದತ್ತಾದೇವಿಯು ಮಂಡಿಸಿರುವಳು" ಎಂದು

ಬಿನ್ನೈಸಲು; ಅವರಿರ್ವರೂ ಭಯಭಕ್ತಿಯುಕ್ತರಾಗಿ ಬಂದು ಕಾಣಿಕೆಯನ್ನಿತ್ತು ದೇವಿಯ ಆಜ್ಞೆಯಿಂ ಒಂದಿನಿಸು ದೂರದಲ್ಲಿ ಕುರುವಿಂದಮಣಿಯ ಪೀಠದಲ್ಲಿ ಕುಳಿತಿರಲು ; ದೇವಿಯು ವಿಕ್ರಮಬಾಹುರಾಯ ಕಮಲಾವಳಿ ಮುಂತಾದವರ ಯೋಗಕ್ಷೇಮವಂ ಬೆಸಗೊಂಡ ಬಳಿಕ ರತ್ನಾವಳಿಯ ವೃತ್ತಾಂತವಂ ಪೇಳುತ್ತ, ತನ್ನ ಪತಿಗೆ ಈ ರತ್ನಾವಳಿಯನ್ನು ವಿವಾಹವಂ ಗೆಯ್ಯಬೇಕೆಂದು ನಿಶ್ಚಯಿಸಿರುವ ಸಮಯಕ್ಕೆ ಸರಿಯಾಗಿ ನೀವು ಇಲ್ಲಿಗೆ ಬಂದುದು ಅತ್ಯಂತ ಸಂತೋಷವಾದುದು ಎಂದು ನುಡಿಯಲು ; ರಾಜಪುತ್ರರುಗಳು ಅಂತರಂಗದಲ್ಲಿ ಸುಣ್ಣದ ಹರಳಿಗೆ ನೀರುಬಿಟ್ಟಂತೆ ಕುದಿಗೊಂಡು ಕೊನೆವಿಾಸೆಗಳನ್ನು ಕುಣಿಯಿಸುತ್ತ, ಕಣ್ಣುಗಳಂ ಕೆಂಪುಗೆಯ್ದು ಒಬ್ಬರೊಬ್ಬರ ಮುಖವಂ ನೋಡುತ್ತ, ದೇವಿಯಂ ಕುರಿತು ಅನುವಿಂದನು—" ಎಲೌ ಅಕ್ಕಯ್ಯಾ, ಕೇಳು. ನೀನು ಆದಿಲಕ್ಷ್ಮಿಯಂತೆ ಅತಿಸುಂದರಳಾಗಿ ನೂತನ ಯೌವನದಿಂದ ಭೂಷಿತಳಾಗಿರುವಲ್ಲಿ, ಈ ನಮ್ಮ ರತ್ನಾವಳಿಯನ್ನು ವತ್ಸರಾಜನಿಗೆ ವಿವಾಹವಂ ಗೆಯ್ಯುವುದು ನ್ಯಾಯವಲ್ಲ" ಎನಲು ; ವಿಂದನು—" ಪೂಜ್ಯಳೇ, ಕೇಳು. ಇನ್ನೊಬ್ಬನಿಗೆ ನಿಶ್ಚಯವಾಗಿರುವ ಈ ರತ್ನಾವಳಿಯು ವತ್ಸರಾಜನಿಗೆ ಹೇಗೆ ಪತ್ನಿಯಾಗುವಳು? ಬರಿಯ ಮಾತುಗಳಿಂದ ಪ್ರಯೋಜನವಿಲ್ಲ. ಆದರೂ ಫಲವಾದ ವೃಕ್ಷಕೆ ಪಕ್ಷಿಗಳು ಮುತ್ತುವಂತೆ ಸುಂದರವಾದ ಕನ್ನಿಕೆಯಿರುವ ಸ್ಥಾನಕ್ಕೆ ಬಹುಜನಗಳು ಬಂದು ಕೇಳುವುದು ನ್ಯಾಯವಾಗಿರುವುದು. ಈಶ್ವರಸಂಕಲ್ಪವು ಹೇಗಿರುವುದೋ ತಿಳಿಯದು" ಎಂದು ನುಡಿಯಲು ; ಯೌಗಂಧರಾಯಣನು, ತಾನು ಮಾಡಿದ ಪ್ರಯತ್ನಗಳನ್ನು ಈ ರಾಜಪುತ್ರರುಗಳು ಕ್ಷಣಮಾತ್ರದಲ್ಲಿ ವ್ಯರ್ಥವಂಗೆಯ್ಯುವಂತೆ ತೋರುವುದೆಂದು ಯೋಚಿಸಿ, " ಆದರೂ ಈಗ ರಾಜಪುತ್ರರು ಪೇಳುವ ವಾಕ್ಯವು ಯುಕ್ತವೇ ಸರಿ. ಆದರೆ ಅವರಿಗೂ ನನಗೂ ಪೂಜ್ಯನಾದ ವಿಕ್ರಮಬಾಹುರಾಯನ ಅನುಮತಿಯು ಎಂತಿರುವುದೋ, ಆ ರೀತಿಯಿಂದ ನಾವು ನೀವೆಲ್ಲರೂ ನಡೆದುಕೊಳ್ಳಬೇಕಾಗಿರುವುದು" ಎನಲು ; ವಿಂದನು ಕೋಪದಿಂದೊಡಗೊಂಡು—" ಅಯ್ಯಾ ಮಂತ್ರಿಯೇ, ಕೇಳು. ನಮ್ಮ ಪಿತೃವಾಕ್ಯಾನುಸಾರವಾಗಿಯೇ ನಾವು ಇಲ್ಲಿಗೆ ಬಂದಿರುವಲ್ಲಿ ಮರಳಿ ಇನ್ನೊಂದು ಬಾರಿ ಪಿತೃವಾಕ್ಯವನ್ನು ಕೇಳತಕ್ಕ ಪ್ರಕೃತವು ತೋರಲಾರದು" ಎಂದು ವಕ್ರವಾಕ್ಯವಂ ಗೆಯ್ಯುತ್ತಿರಲು ;

ರತ್ನಾವಳಿಯು ಕಾಂಚನಮಾಲೆಯೊಡಗೊಂಡು ಬರುತ್ತ, ದೇವಿಯೊಡನೆ ಮಾತುಗಳನ್ನಾಡುವ ವಿಂದಾನುವಿಂದರಂ ದೂರದಲ್ಲೇ ಕಂಡು, ಏನು ಮಾತನಾಡುವರೋ ಎಂದು ಮರೆಗೊಂಡು, ಅವರು ಅತಿವಕ್ರದಿಂದ ನುಡಿಯುವ ವಾಕ್ಯವಂ ಕೇಳಿ, ಪೆಟ್ಟುಬಿದ್ದ ಸರ್ಪದಂತೆ ಅತಿಕೋಪದಿಂ ನಿಟ್ಟುಸಿರುಗಳಂ ಬಿಟ್ಟು, ದೇವಿಗೂ ಅಣ್ಣಂದಿರಾದ ವಿಂದಾನುವಿಂದರಿಗೂ ಸಹ ನಮಸ್ಕಾರವಂಗೆಯ್ದು, ಮನ್ಮಥನ ಕಬ್ಬಿನ ಬಿಲ್ಲುಗಳ ಮುರಿದ ಭಾವವಂ ತೋರಿಸುವುವೋ ಎಂಬಂತೆ ಹುಬ್ಬುಗಳಂ ಗಂಟಿಕ್ಕಿ,

“ ಎಲೈ ಅಣ್ಣಂದಿರುಗಳಿರಾ, ನಿಮ್ಮ ಹೃದಯಗತವಾದ ಅಭಿಪ್ರಾಯವು ಈಗ ನೀವಾಡಿದ ಮಾತುಗಳಿಂದ ವ್ಯಕ್ತವಾದುದು. ಬರಿಯ ದುರಾಲೋಚನೆಯಂ ಗೆಯ್ದುದರಿಂದ ಲೋಕಾಪವಾದವೊಂದೇ ಫಲವಲ್ಲದೆ ಇನ್ನೊಂದು ಪ್ರಯೋಜನವನ್ನೂ ಕಾಣೆನು. ಲೋಕದಲ್ಲಿ ಪಿತೃವಾಕ್ಯವಂ ಮೀರಿದ ಪುತ್ರನನ್ನೂ ಪತಿಗೆ ದ್ರೋಹವಂ ಗೆಯ್ಯುವ ಸ್ತ್ರೀಯನ್ನೂ ದೊರೆಗೆ ದ್ರೋಹವಂ ಗೆಯ್ಯುವ ಭೃತ್ಯನನ್ನೂ ವಿಚಾರಣೆಯಂ ಗೆಯ್ಯಬೇಕೆಂದು ನೀತಿಯಂ ಬಲ್ಲವರು ಪೇಳುವರು. ನಾನು ತಂದೆತಾಯಿಗಳ ಅಭಿಮತವು ಯಾವ ರೀತಿಯಾಗಿರುವುದೋ ಅದಕ್ಕೆ ಸ್ವಲ್ಪವಾದರೂ ವ್ಯತ್ಯಾಸವು ಸಂಭವಿಸದಂತೆ ನಡೆಯುವೆನು ” ಎಂದು ನುಡಿಯಲು ;

ವಿದೂಷಕನು ಆ ರತ್ನಾವಳಿಯ ವಾಕ್ಯಕೆ ಆನಂದವಂ ಹೊಂದಿ, “ ಎಲೌ ರತ್ನಾವಳಿಯೇ, ಎಲ್ಲರ ಮಾನವನ್ನೂ ಉಳಿಯಿಸಿದೆ ” ಎಂದು ತನ್ನೊಳು ತಾನು ನುಡಿದುಕೊಳ್ಳುತ್ತಿರಲು ;

ವಸುಭೂತಿಯು—“ ಈಗ ರತ್ನಾವಳಿಯು ಶಾಸ್ತ್ರಕ್ಕೂ ಲೋಕಾಚಾರಕ್ಕೂ ಸಹಸಮ್ಮತವಾದ ವಾಕ್ಯವನ್ನು ಪೇಳಿದಳು ” ಎಂದು ನುಡಿಯಲು ;

ದೇವಿಯು ಆ ರತ್ನಾವಳಿಯನ್ನು ತನ್ನ ಒತ್ತಿನಲ್ಲಿ ಕುಳ್ಳಿರಿಸಿಕೊಂಡು ಮುಂಡೆಯಂ ಸವರುತ್ತ, “ ಎಲೆ ತಂಗಿಯೇ, ನಿನ್ನನ್ನು ನಿನ್ನ ಅಣ್ಣಂದಿರು ಸಿಂಹಳದೇಶಕ್ಕೆ ಕರೆದುಕೊಂಡು ಹೋಗುತ್ತಲಿರುವರು. ನಿನ್ನ ಸಂದರ್ಶನವು ಎನಗೆ ದುರ್ಲಭವಾಗಿರುವುದು ” ಎಂದು ನುಡಿಯಲು ;

ಕಾಂಚನಮಾಲೆಯು —“ ದೈವಕಟಾಕ್ಷದಿಂದ ವತ್ಸರಾಜನಿಗೂ ಇವಳಿಗೂ ವಿವಾಹ ತಪ್ಪಿದರೆ ಉತ್ತಮವಾಗಿರುವುದು. ಇಲ್ಲದೆ ಇವಳೇ ರಾಜಪತ್ನಿಯಾದಲ್ಲಿ ಇವಳ ವಿಚಾರವಾಗಿ ದೇವಿಗೆ ಅನೇಕ ಕ್ಷುದ್ರವನ್ನು ಪೇಳುವ ಎನಗೆ ಏನು ಗತಿಯನ್ನು ಕಲ್ಪಿಸುವಳೋ ತಿಳಿಯದು ” ಎಂದು ಯೋಚಿಸುತ್ತಿರಲು ;

ರತ್ನಾವಳಿಯು ದೇವಿಯಂ ಕುರಿತು,—“ ಎಲೌ ಪೂಜ್ಯಳೇ, ಕೇಳು. ನೀನು ಅಪ್ಪಣೆಯನ್ನಿತ್ತ ವಾಕ್ಯದ ಅಭಿಪ್ರಾಯವು ಎನ್ನ ಮನಸ್ಸಿಗೆ ಬಂದುದು. ಆದರೆ ನಿನ್ನ ಆಭರಣಗಳಿಂದ ಎನ್ನನ್ನು ಅಲಂಕರಿಸಿ ಯಾರ ಹಸ್ತಕ್ಕೆ ಒಪ್ಪಿಸಿದೆಯೋ ಆ ನಿನ್ನ ಕಾರ್ಯಕೆ ಎಲ್ಲಿಗೆ ಹೋದರೂ ಹಾನಿಯು ಸಂಭವಿಸಲಾರದು ” ಎಂದು ನುಡಿಯಲು ;

ದೇವಿಯು ರತ್ನಾವಳಿಯು ಪೇಳುವ ವಾಕ್ಯವು ಸಿಂಹಳದೇಶಕ್ಕೆ ಹೋಗಬೇಕೆಂಬ ಅಭಿಪ್ರಾಯವನ್ನು ಸೂಚಿಸುತ್ತಲಿರುವುದೆಂದು ಯೋಚಿಸುತ್ತಿರಲು ;

ಅನುವಿಂದನು—“ ಅಯ್ಯಾ ಮಂತ್ರಿಯೇ, ಮುಖ್ಯವಾಕ್ಯವನ್ನು ಪೇಳುವೆನು ; ಕೇಳು. ಯಾವ ಶುಭಕಾರ್ಯಗಳನ್ನು ನಡೆಸಬೇಕಾದರೂ ನಮ್ಮದೇಶದಲ್ಲಿ ನಡೆಯಿಸುವೆವಾದುದರಿಂದ ಈ ರತ್ನಾವಳಿಯನ್ನು ನಮ್ಮ ಸಂಗಡ ಕಳುಹಿಸುವುದು ಯುಕ್ತವಾಗಿರುವುದು ” ಎನಲು ;

ರತ್ನಾವಳಿಯು—“ ಅಯ್ಯಾ ಯೌಗಂಧರಾಯಣನೇ, ಸ್ತ್ರೀಯರಿಗೆ ಎಷ್ಟು ಬಡವರಾಗಿದ್ದರೂ ತೌರುಮನೆಯು ಪ್ರಾಣಗಳಿಗಿಂತಲೂ ಪ್ರಿಯಕರವಾಗಿರುವುದು. ಹೀಗಿರುವಲ್ಲಿ ಮಾತಾಪಿತೃಗಳೂ ಸಮಸ್ತ ಐಶ್ವರ್ಯವೂ ಇರುವಲ್ಲಿ ಇನ್ನು ವಿಶೇಷವಾಗಿ ಹೇಳತಕ್ಕುದೇನಿರುವುದು ? ” ಎಂದು ನುಡಿಯಲು ;

ದೇವಿಯು—“ ಇವಳ ಅಭಿಪ್ರಾಯವೇ ತಿಳಿಯುವುದಕ್ಕಾಗದೇ ಇರುವುದು. ತನ್ನ ಪಟ್ಟಣಕೆ ಹೋಗುವುದಕ್ಕೆ ನಿಶ್ಚಯಿಸಿರುವಳು. ಆದರೂ ತಂದೆಯ ಮನೆಯಲ್ಲೇ ವಿವಾಹವಾಗಬೇಕೆಂದು ಯೋಚಿಸುತ್ತಿರಬಹುದು. ಅದಕ್ಕೆ ನಾನು ವಿರೋಧವಂ ಗೆಯ್ಯುವುದು ನ್ಯಾಯವಲ್ಲವು ” ಎಂದು ನಿಶ್ಚಯಿಸಿ, “ ಎಲೆ ರತ್ನಾವಳಿಯೇ ನಿನ್ನ ಅಭಿಪ್ರಾಯವು ತಿಳಿಯಬಂದುದು. ನಿನಗೆ ಅಪ್ತಳಾದ ಸುಸಂಗತೆ ಮುಂತಾದ ಸಖಿಯರನ್ನು ನಿನ್ನ ಸಂಗಡ ಕಳುಹಿಸುತ್ತೇನೆ ” ಎಂದು ಅನೇಕರಾದ ಸಖಿಯರನ್ನೂ ವಸ್ತ್ರಾಭರಣ ಮುಂತಾದ ಸಾಮಗ್ರಿಯನ್ನೂ ಕೊಟ್ಟು ವಿಂದಾನುವಿಂದರುಗಳಿಗೆ ಅನೇಕ ಭೂಷಣಾಂಬರಗಳಿಂದ ಬಹುಮಾನವನ್ನಂಟುಮಾಡಿ ಅವರು ಇಳಿದಿರುವ ಅರಮನೆಗೆ ರತ್ನಾವಳಿಯನ್ನು ಕಳುಹಿಸಿಕೊಡಲು ;

ವಿದೂಷಕನು—“ ದೇವಿಯು ಬಹಳವಾಗಿ ಅನುಚಿತವಾದ ಕಾರ್ಯವಂ ನಡೆಯಿಸಿದಳು. ಇನ್ನು ರಾಜನಿಗೆ ಏನೆಂದು ಪ್ರತ್ಯುತ್ತರವಂ ಪೇಳಿ ಸಂತೋಷವಂ ಪೊಂದಿಸಲಿ ” ಎಂದು ಅಲ್ಲಿಂದೆದ್ದು ರಾಜನಿರುವ ಸ್ಥಾನವಂ ಕುರಿತು ಬರುತ್ತಿರಲು ;

ರಾಯನು—“ ವಿದೂಷಕನು ಹೋಗಿ ಬಹಳ ಹೊತ್ತಾದುದು. ರತ್ನಾವಳಿಯನ್ನು ದುಷ್ಟರಾದ ವಿಂದಾನುವಿಂದರುಗಳು ಸಂಗಡ ಕರೆದುಕೊಂಡುಹೋದರೋ, ಅಂತಃಪುರದಲ್ಲೇ ನಿಲ್ಲಿಸಿದರೋ ತಿಳಿಯೆನು ” ಎಂದು ಪಾದರಸದಂತೆ ಚಂಚಲವಾದಂಥ ಹೃದಯವಂ ತಾಳಿ ಇರುತ್ತ, ಎದುರಾಗಿ ಬರುವ ವಿದೂಷಕನಂ ಕಂಡು, ಕೈ ಬೀಸಿ ಕರೆದು, ಅವನಿಂದ ಸಮಸ್ತ ವೃತ್ತಾಂತವಂ ತಿಳಿದು, ಕ್ಷಣಮಾತ್ರವು ಮೂರ್ಛೆಯಂ ತಾಳಿ, ಎಚ್ಚರಿತು, “ ಎಲೈ ವಿದೂಷಕನೇ, ಈ ವಿಂದಾನುವಿಂದರುಗಳನ್ನು ಈ ಕ್ಷಣದಲ್ಲೇ ಯಮನಗರಕ್ಕೆ ಕಳುಹಿಸುತ್ತೇನೆ ” ಎಂದು ಕರದಲ್ಲಿ ಖಡ್ಗವಂ ಹಿಡಿದು, ಝಳಪಿಸುತ್ತ ನಿಲ್ಲಲು ; ವಿದೂಷಕನು ಭಯದಿಂದ ನಡಗುತ್ತ, “ ಆಸೆಯು ಮಧ್ಯಸ್ಥಕೆ ಹಾರಿವಾಳದ ಪಕ್ಷಿಯು ಹೋದಂತಾದುದು. ಮುಂದೆ ಗತಿ ಏನು ? ” ಎಂದು ನಿಟ್ಟುಸಿರಂ ಬಿಟ್ಟು ಸ್ವಲ್ಪವಾಗಿ ಧೈರ್ಯವಂ ಪಡೆದು, “ ಅಯ್ಯಾ ರಾಜೇಂದ್ರನೇ, ಕೇಳು. ಸತ್ಪುರುಷರಾದವರು ಲೋಕಾಪವಾದಕ್ಕೆ ಭಯವಂ ಪೊಂದಿ ನಡೆಯಬೇಕು. ಈಗ ಮಾಡುವ ಕಾರ್ಯವನ್ನು, ವಿಂದಾನುವಿಂದರು ರತ್ನಾವಳಿಯನ್ನು ತಮ್ಮ ದೇಶಕ್ಕೆ ಕರೆದುಕೊಂಡುಹೋಗಿ ನಿನಗೆ ವಿವಾಹವಂ ಮಾಡದ ಇಷ್ಟೊಬ್ಬ ರಾಯನಿಗೆ ಕೊಡುತ್ತ ಇದ್ದ ಕಾಲದಲ್ಲಿ, ಆಗ ಮಾಡಬಹುದು. ಆದರೂ ಅಲ್ಲಿಯ ವೃತ್ತಾಂತವನ್ನು ಚೆನ್ನಾಗಿ ತಿಳಿದು ಬರುತ್ತೇನೆ ” ಎಂದು ಅವನ ಕರದಲ್ಲಿದ್ದ ಕತ್ತಿಯಂ ಕಿತ್ತು ಇರಿಸಿ, “ ನಾನು

ಬರುವವರೆಗೂ ಸ್ವಸ್ಥಚಿತ್ತನಾಗಿರುವುದು” ಎಂದು ನುಡಿದು, ಅಲ್ಲಿಂದ ಬರುತ್ತ ಬೀಸುವ ದೊಣ್ಣೆಗೆ ತಲೆತಪ್ಪಿದರೆ ಸಾಸಿರಬರಿಸವೆಂಬ ಗಾದೆಯು ಈಗ ಯುಕ್ತ ವಾಯಿತು. ರಾಯನಿಗೆ ಬರಿಯ ಪೌರುಷವನ್ನು ಪೇಳಿ ಬಂದೆನು. ಬಂಗಿಯಂ ತಿಂದಂತೆ ಕಣ್ಣುಗಳಂ ಕೆಂಪುಗೂಡಿಸಿರುವ ಪಿಂಡಾಸುಪಿಂದರುಗಳ ಸಮೀಪಕೆ ಹೇಗೆ ಪೋಗಬೇಕು?” ಎಂದು ಯೋಚಿಸುತ್ತ, ಬರುತಿರ್ದನು.

ಎಂಬಲ್ಲಿಗೆ
ಶ್ರೀಕೃಷ್ಣರಾಜಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕ ಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ಹದಿನೇಟನೆಯ ಗುಚ್ಛಂ ಸಂಪೂರ್ಣಂ.

## ಹತ್ತೊಂಭತ್ತನೆಯ ಗುಚ್ಛಂ.

ಅನಂತರದಲ್ಲಿ ಬಹಳವಾಗಿ ವಿದೂಷಕನು ಯೋಚಿಸುತ್ತ ಬರುತ್ತಿರಲು; ಸುಸಂಗತೆಯು ಅನೇಕವಾದ ಆಭರಣಗಳಿಂದ ವಿಭೂಷಿತಳಾಗಿ ಅತ್ಯಂತ ಸಂತೋಷ ದಿಂದ ಕೂಡಿ ಪಿಂಡಾಸುಪಿಂದರಿರುವ ಮನೆಯಿಂದ ಪೊರಟುಬರುತ್ತ, ಚಿಂತಾಕ್ರಾಂತ ನಾಗಿ ಬರುವ ವಿದೂಷಕನಂ ಕಂಡು, “ಎಲೈ ವಸಂತಕನೇ, ಏನು ಕಾರಣದಿಂ ಚಿಂ ತೆಯಿಂದೊಡಗೂಡಿ ಬರುವನಂತೆ ತೋರುತ್ತಿರುವೆ?” ಎನಲು; ಅವನು ಉದ್ದವಾಗಿ ಉಸಿರಂ ಬಿಟ್ಟು, “ಎಲೆ ಕಾಂತೆಯೇ, ಕೇಳು. ರಾಜಸೇವೆಯೇ ಬಹಳ ಕಷ್ಟ ವಾಗಿರುವುದು ಅದರಲ್ಲೂ ಸ್ತ್ರೀಯರ ಮಧ್ಯಸ್ಥವು ಮತ್ತೂ ಪ್ರಾಣಕಷ್ಟವಾದುದು. ಈಗ ರಾಯನು ಪಿಂಡಾಸುಪಿಂದರುಗಳ ಶಿರಸ್ಸನ್ನು ಛೇದಿಸುತ್ತೇನೆಂದು ಖಡ್ಗವಂ ಕರದಲ್ಲಿ ಪಿಡಿದಿರುವನು. ರಾಯನಲ್ಲಿ ರತ್ನಾವಳಿಯು ಅನುರಾಗವಂ ಬಿಟ್ಟು ತನ್ನ ಅಣ್ಣಂದಿರಂ ಸೇರಿ ಸಿಂಹಳದೇಶಕ್ಕೆ ಹೇಗೆ ಪೋಗುತ್ತಲಿರುವಳೆಂದು ಕಾಲರುದ್ರ ನಂತೆ ಕುಳಿತು ಇದ್ದಾನೆ. ನಾನು ಆ ರತ್ನಾವಳಿಯ ಅಭಿಪ್ರಾಯವಂ ಚೆನ್ನಾಗಿ ತಿಳಿ ದು ಬರುತ್ತೇನೆಂದು ಬಂದೆನು. ಮುಂದೆ ರಾಜಕಾರ್ಯಗಳು ಹೇಗೆ ವಿರೋಧವಂ ಪೊಂದುವುವೋ ತಿಳಿಯದು. ನಾನು ಎಲ್ಲಿಗಾದರೂ ಕಾಲಿಗೆ ಬುದ್ಧಿ ಪೇಳಬೇಕೆಂದು ಇದ್ದೇನೆ. ಈಗ ಯಾವುದಾದರೂ ಒಂದು ಉಪಾಯವಂ ಗೆಯ್ದು ರಾಯನಂ ಸಂ ತೈಸಬೇಕು” ಎಂದು ನುಡಿಯಲು; ಸುಸಂಗತೆಯು—“ಅಯ್ಯಾ ವಿದೂಷಕನೇ,

ಕೇಳು. ಸೂರ್ಯನು ಪಶ್ಚಿಮದಲ್ಲಿ ಉದಯಿಸಿದರೂ ನಮ್ಮ ರತ್ನಾವಳಿಯು ರಾಯನಲ್ಲಿ ಅನುರಾಗವಂ ಬಿಟ್ಟಿರಳು. ಈಗ ಪೇಳಿರುವ ಅಭಿಪ್ರಾಯವು ಇದೆ" ಎಂದು ಸಮಸ್ತ ಸಂಗತಿಯನ್ನೂ ಅವನ ಕಿವಿಯಲ್ಲಿ ಪೇಳಿ, "ನೀನು ಈ ಸಂಗತಿಯನ್ನು ರಾಯನಿಗೆ ಬಿನ್ನೈಸಲು ಪೋಗುವನಾಗು, ನಾನು ದೇವಿಗೆ ವಿಜ್ಞಾಪಿಸುವೆನು" ಎಂದು ಪೋಗಲು;

ಅವನು ಅಧಿಕಹೃಷ್ಟನಾಗಿ ರಾಯನ ಸಮೀಪವಂ ಸೇರಿ, ನಗುತ್ತ, "ಎಲೈ ರಾಜೇಂದ್ರನೇ, ಯಾವ ಕಾರ್ಯವನ್ನಾಗಲಿ ಯೋಚಿಸದೆ ಮಾಡಿದಲ್ಲಿ ಬಹಳ ವಿಪತ್ತಿಗೆ ಕಾರಣವಾಗುವುದು. ಈಗ ರತ್ನಾವಳಿಯು ದೇವಿಗೆ ವಿಜ್ಞಾಪಿಸುವಂತೆ ಸುಸಂಗತೆ ಯೊಡನೆ ಪೇಳಿ ಕಳುಹಿಸಿರುವುದೇನೆಂದರೆ—'ಯಾವಾಗ ನೀವು ಸ್ವಂತವಾದ ಆಭರಣಗಳಿಂದ ಅಲಂಕರಿಸಿ ರಾಜೇಂದ್ರನ ಹಸ್ತಕೆ ಒಪ್ಪಿಸಿದಿರೋ ಆಗಲೇ ನಾನು ಪತ್ನೀಪದವಿಯಂ ಪಡೆದೆ ಈಗ ರಾಯನಂ ಹೊರತು ಈ ಭೂಮಂಡಲದಲ್ಲಿರುವ ದೊರೆಗಳೇ ಮೊದಲಾದ ಗಂಡುಪ್ರಾಣಿಗಳು ಎನಗೆ ತಂದೆಗಳೆಂತಲೂ ಸಹೋದರರೆಂತಲೂ ನಿಶ್ಚಯಿಸಿ ಇದ್ದೇನೆ. ಆದರೂ ಲೋಕದಲ್ಲಿ ಜನನಿಯೂ ಜನ್ಮಭೂಮಿಯೂ ಪ್ರಾಣಗಳಿಗಿಂತಲೂ ಪ್ರೇಮಾಸ್ಪದಗಳೆಂದು ಪೇಳುವ ವಾಕ್ಯವು ಸತ್ಯವಾದುದರಿಂದಲೂ, ಸಿಂಹಳದೇಶದಲ್ಲಿರುವ ವೈಭವಗಳೆಲ್ಲವನ್ನೂ ನಿಮಗೆ ತೋರಿಸಿ ವಿಧ್ಯುಕ್ತವಾಗಿ ವಿವಾಹವಾಗಿ ರಾಯನೊಡನೆ ಕೂಡಿದ ನಿಮ್ಮ ಪಾದಪೂಜೆಯನ್ನು ನಮ್ಮ ಅರಮನೆಯಲ್ಲಿ ಮಾಡಬೇಕೆಂಬ ಕುತೂಹಲವು ಬಲವತ್ತರವಾಗಿರುವುದರಿಂದಲೂ, ಈಗ ಸಿಂಹಳದೇಶಕ್ಕೆ ಪೋಗಲಿಚ್ಛೈಸಿರುವೆನು. ಇದರಮೇಲೆ ಆಜ್ಞೆಯಾದಂತೆ ನಡೆದುಕೊಳ್ಳುವೆನು' ಎಂದು ಪೇಳಿರುವ ವಾರ್ತೆಯನ್ನು ಸುಸಂಗತೆಯು ಪೇಳಿದಳು" ಎಂದು ಬಿನ್ನೈಸುತ್ತಿರುವಷ್ಟರಲ್ಲೇ ವಾಸವದತ್ತಾದೇವಿಯು ಸುಸಂಗತೆಯ ಕೈಲಾಗವಂ ಪಿಡಿದು ರಾಯನಿರುವ ಆಸ್ಥಾನವಂ ಕುರಿತು ಬಂದು ರತ್ನಾವಳಿಯ ಅಭಿಪ್ರಾಯಗಳೆಲ್ಲವನ್ನೂ ಬಿನ್ನೈಸಿ—"ಮಹಾರಾಜೇಂದ್ರನೇ, ಸ್ತ್ರೀಯರಿಗೆ ತೌರುಮನೆಯಲ್ಲಿ ಬಲವಾದ ಅಭಿಮಾನವಿರುವುದರಿಂದಲೂ, ವಿಕ್ರಮಬಾಹುರಾಯನು ಒಹುದೇಶಕೆ ಅಧಿಪತಿಯಾಗಿರುವುದರಿಂದಲೂ ವಿಧ್ಯುಕ್ತವಾಗಿ ವಿವಾಹವಾಗುವುದು ಯುಕ್ತವಾಗಿರುವುದು. ರತ್ನಾವಳಿಯು ಸಿಂಹಳದೇಶಕೆ ಪೋಗುವಂತೆ ಅಪ್ಪಣೆಯನ್ನೀಯುವನಾಗು" ಎಂದು ಬೇಡಿಕೊಳ್ಳಲು; ರಾಯನು—"ಎಲೆ ಕಾಂತೆಯೇ, ನಿನ್ನ ಚಿತ್ತಕೆ ಹೇಗೆ ಅಭಿಮತವೋ ಆ ರೀತಿಯಿಂದ ಕಾರ್ಯಗಳನ್ನು ನಡೆಸಬಹುದು" ಎಂದು ದಾಕ್ಷಿಣ್ಯವನ್ನು ಮೀರಲಾರದೆ ನುಡಿಯಲು;

ಅಷ್ಟರಲ್ಲೇ ವಿಂದಾನುವಿಂದರು ಸಿಂಹಳದೇಶಕ್ಕೆ ಪೋಗುವಂತೆ ಅಪ್ಪಣೆಯಂ ಕೇಳಬೇಕೆಂದು ರಾಯನ ಸಮೀಪಕೆ ರತ್ನಾವಳಿಯನ್ನು ಕರೆದುಕೊಂಡುಬರಲು, ರಾಯನು ದೂರದಲ್ಲಿ ಮಿಂಚಿನ ಬಳಿಯು ಕೈಕಾಲುಗಳಂ ಪಡೆದು ಬರುವುದೋ

ಎಂಬಂತೆ ಮೂರು ಲೋಕವಂ ಸೂರೆಗೊಳುತ್ತ ಬರುವ ರತ್ನಾವಳಿಯುಂ ಕಂಡು ಇಂಥ ಕಾಂತೆಯನ್ನು ಅಗಲಿ ಎಂತು ಪ್ರಾಣಧಾರಣೆಯಂ ಮಾಡಬಹುದೆಂದು ಆಲೋಚಿಸುತ್ತಿರಲು ;

ಅಷ್ಟರಲ್ಲೀ ರತ್ನಾವಳಿಯು, ವಿಂದಾನುವಿಂದರು ಅಪ್ಪಣೆಯಂ ಕೇಳಿ ಹೊರಸಾರಿದ ಬಳಿಕ ಮುಂದು ಸಾರಿಬಂದು, ಬಳುಕುವ ನಡುವಿನಿಂದಲೂ ಕುಲುಕುವ ಕುಚಗಳಿಂದಲೂ ತುಳುಕುವ ಅನುರಾಗದಿಂದಲೂ ಯುಕ್ತಳಾಗಿ, ತೋರಮಲ್ಲಿಗೆಯ ಹಾರಗಳು ಕುಚದಿಂದ ಮುಂದುದೋರಿ ಪರಿಮಳವ ಉಬ್ಬೇರಿಸುವಂತೆ ಮಂಡಿಗಳನ್ನೂರಿ ವೈಯ್ಯಾರವಂ ತೋರಿ ಅದೇನೋ ಒಂದು ಹೊಸಪರಿಯಾದ ವೈಖರಿಯುಂ ಬೀರಿ ನಮಸ್ಕಾರವಂ ಗೆಯ್ದು ಸುಸಂಗತೆಯು ಹಿಂಬಾಗವಂ ಸೇರಿ ಮೂರುಮಾರುದ್ದಗಳಾಗಿ ಕಾಮನ ಕಮಲಶರಂಗಳಾಕಾರಮಂ ಬೀರುತ್ತಲಿರುವ ಓರೆನೋಟಗಳಂ ಬೀರುತ್ತ ನಿಂದು, ವಾಸವದತ್ತಾದೇವಿಯುಂ ಕುರಿತು, "ಎಲೌ ಪೂಜ್ಯಳಾದ ದೇವಿಯೇ, ರಾಯನ ಅಪ್ಪಣೆಯುಂ ಕೊಡಿಸಿದಲ್ಲಿ ಸಿಂಹಳದೇಶಕ್ಕೆ ಪೋಗಿ ಇದೊಂದು ಬಾರಿ ಮಾತಾಪಿತೃಗಳಿಗೆ ಹೇರಳವಾದ ಉತ್ಸವವಂ ಬೀರಿ ಬರುವೆನು" ಎಂದು ಮೃದುಮಧುರವಾಕ್ಯವಂ ಪೇಳಲಾದೇವಿಯು—"ಎಲೆ ರತ್ನಾವಳಿಯೇ, ಮಹಾರಾಜೇಂದ್ರನೇ ಪುರೋಭಾಗದಲ್ಲಿ ಪರಿಶೋಭಿಸುತ್ತಿರುವಲ್ಲಿ ಎನ್ನನ್ನು ಕುರಿತು ಏಕೆ ಉತ್ತರವಂ ಕೇಳುತ್ತಲಿರುವೆ?" ಎಂದು ನುಡಿಯಲಾರತ್ನಾವಳಿಯು ರಾಯನಂ ಕುರಿತು ವಿಜ್ಞಾಪಿಸುವುದಕ್ಕೆ ವಿಶೇಷವಾದ ಲಜ್ಜೆಯುಂ ಪೊಂದಿ ನಿಂದಿರಲಾರಾಯನು ಅವಳ ಅಭಿಪ್ರಾಯಮಂ ತಿಳಿದು, ವಾಸವದತ್ತಾದೇವಿಯುಂ ಕುರಿತು—"ಎಲೆ ಕಲ್ಯಾಣಿಯೇ, ರತ್ನಾವಳಿಯು ಸಮುದ್ರವನ್ನು ದಾಂಟಿ ಬಹುದೂರವಾಗಿ ಪೋಗಬೇಕಾಗಿರುವುದು. ಎನ್ನಿಂದ ಏಕೆ ತಡವುಂಟಾಗಬೇಕು, ಅಪ್ಪಣೆಯನ್ನಿತ್ತು ಕಳುಹಿಸಬಹುದು. ಮತ್ತು ತನ್ನ ತೌರುಮನೆಗೆ ಪೋಗುವುದಕ್ಕೆ ನಮ್ಮ ಅಪ್ಪಣೆಯುಂ ಕೇಳುವ ಪ್ರಕೃತವಿಲ್ಲ, ಲೋಕದಲ್ಲಿ ಸ್ತ್ರೀಯರುಗಳು ಸ್ವಕಾರ್ಯಗಳಲ್ಲಿ ನಿಪುಣರಾಗಿ ಪರರ ಸಂತಾಪವನ್ನು ತಿಳಿದರೂ ತಿಳಿಯದಂತೆ ನಟಿಸುವುದು ಸ್ವಧರ್ಮವಾಗಿರುವಲ್ಲಿ ವಿಶೇಷವಾಗಿ ಪೇಳತಕ್ಕುದೇನಿರುವುದು?" ಎಂದು ನುಡಿಯಲು; ರತ್ನಾವಳಿಯು—"ಎಲೈ ಅಕ್ಕೈಯ್ಯನೇ, ಕೇಳು. ಸ್ವಕಾರ್ಯಗಳಲ್ಲಿ ನಿರತರಾಗಿರುವುದು ಸ್ತ್ರೀಯರೋ ಪುರುಷರೋ ಎಂಬುವಂಥದು ಕಾರ್ಯಾಂತರದಲ್ಲಿ ಕಾಣಬೇಕು. ಆದರೆ ಈಗ ಅಣ್ಣಂದಿರುಗಳು ಎನ್ನ ಆಗಮನವನ್ನು ಇದಿರು ನೋಡುತ್ತ ಕಾದಿರುವರು" ಎಂದು ನುಡಿಯಲು; ದೇವಿಯು ಕಾಂಚನಮಾಲೆಯು ತಂದ ಗಂಧ ತಾಂಬೂಲ ಪುಷ್ಪ ಕುಂಕುಮಗಳಿಂದ ರತ್ನಾವಳಿಯನ್ನು ಅಲಂಕರಿಸಿ, ಪಿಡುಮುತ್ತಿನ ಅಕ್ಷತೆಯುಂ ಅವಳ ಶಿರದಲ್ಲಿ ತಳಿದು, "ಎಲೆ ಭದ್ರಾಂಗೀ, ನೀನು ಬಯಸಿರುವ ಬಯಕೆಯು ವಿಘ್ನವಿಲ್ಲದೆ ಕೊನೆಮುಟ್ಟಲಿ!" ಎಂದು ಆಶೀರಾದವಂ ಗೆಯ್ಯಲು; ವಿದೂಷಕನು—"ಎಲೌ ದೇವಿಯೇ,

ಈಗ ನೀನು ಆಶೀರ್ವಾದವಂ ಗೆಯ್ದುದು ಬಹುಸೊಗಸಾದುದು. ಬ್ರಾಹ್ಮಣನಾದ ನಾನು ಆರಸುವೆನು " ಎಂದು ತಟ್ಟೆಯಲ್ಲಿದ್ದ ಮುತ್ತುಗಳಂ ಕರದಲ್ಲಿ ಪಿಡಿದು,—" ಎಲೆ ಕನಕಾಂಗಿಯಾದ ರತ್ನಾವಳಿಯೇ, ಕನಸಿನಲ್ಲೂ ಯಾವ ಪುರುಷನಂ ಕುರಿತು ಕನವರಿಸುತ್ತಿರುವೆಯೋ ಆ ಮಹಾರಾಜನ ಕರವಂ ಪಿಡಿದು ಮರಳಿ ಬಡಹಾರುವನಾದ ಎನಗೆ ದರ್ಶನವಂ ಕೊಡುವಳಾಗು " ಎಂದು ಹರಸಿ, ಮುತ್ತಿನ ಮಂತ್ರಾಕ್ಷತೆಯನ್ನು ಅವಳ ಮಸ್ತಕದಲ್ಲಿ ಚೆಲ್ಲಲು; ರತ್ನಾವಳಿಯು ದೇವಿಗೂ ರಾಯನಿಗೂ ವಸಂತಕನಿಗೂ ಸಹ ವಂದನೆಯಂ ಗೆಯ್ದು ಹಿಂದಿರುಗಿ ಮುಂದಮುಂದವಾಗಿ ಪಾದಗಳನ್ನಿಡುತ್ತ ಎರಡುಮೂರು ಹಜ್ಜೆಗೆ ಒಂದುವೇಳೆ ಏನೋ ಒಂದು ಮರೆತಿರುವ ವಸ್ತುವನ್ನು ನೋಡುವಂತೆ ಹಿಂದಿರುಗಿ ರಾಯನಂ ನೋಡುತ್ತ, ಪಾದಾಭರಣಗಳನ್ನು ಸಜ್ಜುಗೊಳಿಸುವಂತೆ ಬಾಗುತೋರಿಕೆಯಾಗಿರುವ ಓರೆದೃಷ್ಟಿಗಳಂ ಬೀರುತ್ತ ಪೋಗಲು;

ದೇವಿಯು—" ರತ್ನಾವಳಿಯಂ ಸಾಗಿ ಕಳುಹಿಸಿ ಬರುವೆನು " ಎಂದು ಕಾಂಚನಮಾಲೆಯ ಕರವಂ ಪಿಡಿದು ಪೋಗಲು; ವಿದೂಷಕನು ಹಿಂದು ಸಾರಿಪೋಗುವ ಮಂದಗಮನೆಯಂ ಕುರಿತು,—" ಎಲೆ ಕಾಂತೆಯೇ, ಕಲ್ಯಾಣಮಂಟಪಕ್ಕೆ ಕಾಗೆ ಸುಳಿದಂತೆ ಕಾರ್ಯದ ಪರಿಪಕ್ವಕಾಲಕೆ ಸರಿಯಾಗಿ ಪಾಪಿಗಳಾದ ಈ ವಿಂದಾನುವಿಂದರುಗಳು ಬಂದು ನೀನು ಮಾಡಿದ ಪ್ರಯತ್ನಗಳನ್ನು ವ್ಯರ್ಥವಂ ಗೆಯ್ದಿರುವರು. ಈಗಲೂ ಈ ರತ್ನಾವಳಿಯ ಸಂಗಡಲೇ ಪೋಗುತ್ತಿರುವ ನಿನ್ನ ಕೈಯಲ್ಲಿ ನಮ್ಮ ರಾಜೇಂದ್ರನ ಹಾನಿವೃದ್ಧಿಗಳು ತಗಲಿಕೊಂಡಿರುವುವು. ಕೀರ್ತಿಯಂ ಸಂಪಾದಿಸಲು ಕುತೂಹಲವುಳ್ಳ ನಿನಗೆ ಹೆಚ್ಚಾಗಿ ಪೇಳುವುದು ಏನಿರುವುದು?" ಎಂದು ನುಡಿಯಲು; ಆವಳು—" ಎಲೈ ವಸಂತಕನೇ, ಲೋಕದಲ್ಲಿ ನೀಚರಾದವರು ಬರಿಯ ಮಾತುಗಳಂ ಬೊಗಳುವರು. ರಾಯನ ಮನೋಗತನಾದ ಕಾರ್ಯವನ್ನು ಮಾಡಿ ತೋರಿಸುವೆನು. ಆದುವರೆಗೂ ರಾಜೇಂದ್ರನಿಗೆ ಧೈರ್ಯವಂ ಪೇಳುತ್ತ ಇರುವನಾಗು" ಎಂದು ನುಡಿಯಲಾ ವಸಂತಕನು ರಾಯನಿರುವ ಮಣಿಹಜಾರವಂ ಕುರಿತು ಬರುತ್ತಿರಲು;

ಅಷ್ಟರಲ್ಲೇ ವತ್ಸರಾಜನು ಕಳವಳವಂ ಪೊಂದಿ ಕಾಂತಿಹೀನನಾಗಿ ಮುಖವಂ ಸೊರಗಿಸಿ ಕುಳಿತಿರ್ದು, ವಿದೂಷಕನಂ ಕಂಡು, " ಎಲೈ ಮಿತ್ರನೇ, ಕೇಳು ಲೋಕದಲ್ಲಿ ಭಾಗ್ಯಹೀನನಾದ ಪುರುಷನಿಗೆ ಚಿನ್ನವು ದೊರಕಿದರೂ ಮಣ್ಣಾಗಿ ಕಾಣುವುದು, ದಿವ್ಯರತ್ನವು ಗಾಜಿನಂತೆ ತೋರುವುದು, ಪಿಡಿದ ಕಾರ್ಯಗಳೆಲ್ಲವೂ ಕೈಗೂಡದೆ ಭಂಗವಂ ಪೊಂದುವುದು ಯುಕ್ತವಾಗಿರುವುದು. ಈಗ ನಿಮ್ಮ ಮಾತುಗಳಿಗೆ ಮರುಳಾಗಿ ಮಾರನ ಮದ್ದಾನೆಯಂತೆ ಕಟ್ಟಾಣಿಯ ಮಣಿಯಂತೆ ಕಂದದ ಕಮಲದಂತೆ ಕಾಮಿತಾರ್ಥದ ಕಣಿಯಂತೆ ಕಲ್ಪವೃಕ್ಷದ ಬಳ್ಳಿಯಂತೆ ತ್ರೈಲೋಕ್ಯ ಮೋಹನವಿದ್ಯೆಯಂತೆ ಕಾಂತಿಗೆ ಅಭಿಮಾನ ದೇವತೆಯಂತೆ ಸುಖದ ಸೊನೆಯಂತೆ ಶೃಂಗಾರದೇವತೆಯಂತೆ ಆನಂದರಸಪ್ರವಾಹದಂತೆ ಆಶ್ಚರ್ಯಕೆ ಜನ್ಮಸ್ಥಾನದಂತೆ

ಸೌಭಾಗ್ಯಕೆ ಭರಣಿಯುಂತೆ ಕಲ್ಯಾಣಗುಣದ ಮಂಡಪದಂತೆ ಕಾಮಿತಾರ್ಥದ ಕೈಬೊಕ್ಕಸದಂತೆ ಕುಶಲವಿದ್ಯೆಗಳಿಗೆ ಕುಶಲಗೃಹದಂತೆ ಒಪ್ಪುತಿರ್ದ ರತ್ನಾವಳಿಯಂ ಸಿಂಹಳದೇಶಕೆ ಕಳುಹಿಸಿ ಈ ರೀತಿಯಾದ ವಿಯೋಗದುಃಖವನ್ನು ಹೊಂದಬೇಕಾಗಿರುವುದು. ಇಲ್ಲವಾದಲ್ಲಿ ಆ ವಿಂದಾನುವಿಂದರುಗಳ ದೇಹವನ್ನು ದಿಗ್ಬಲಿಯಂ ಗೆಯ್ದು ಮುಗ್ಧಾಕ್ಷಿಯಾದ ರತ್ನಾವಳಿಯುಲ್ಲಿ ಪರಿಪರಿಯಾದ ಸುಖವಂ ಹೊಂದಿ ಸುಖದಿಂದಿರುವೆನು" ಎಂದು ನುಡಿಯುಲಾ ವಸಂತಕನು—"ಅಯ್ಯಾ ರಾಜೇಂದ್ರನೇ, ಚಿತ್ತದಲ್ಲಿ ಕೋಪವಂ ಹೊಂದದೆ ಇದ್ದರೆ ಕೆಲವು ವಾಕ್ಯವನ್ನು ಬಿನ್ನೈಸುವೆನು, ಕೇಳು. ಲೋಕದಲ್ಲಿ ಪ್ರಜೆಗಳು ದೊರೆಯಾದವನು ಪಾಪಿಯಾದರೆ ಅವರು ಪಾಪವಂ ಗೆಯ್ಯುವರು, ಕಾಮಿಯಾದರೆ ಅವರು ಕಾಮುಕರಾಗುವರು, ಧರ್ಮಾತ್ಮನಾದರೆ ಅವರು ಧರ್ಮಿಷ್ಠರಾಗುವರು. ಹೇಗೆಹೇಗೆ ಪ್ರಭುತ್ವವಂ ಮಾಡುವನು ಆಗುತ್ತಲಿರುವನೋ ಆರೀತಿಯಾಗಿ ಪ್ರಜೆಗಳೂ ಅನುವರ್ತಿಸುತ್ತಿರುವರು. ಮತ್ತು ಬೃಹಸ್ಪತಿ ಶುಕ್ರಾಚಾರ್ಯರು ಮೊದಲಾದ ನೀತಿಶಾಸ್ತ್ರವಂ ಬಲ್ಲವರು ಪ್ರಭುವಾದವನು ಜಿತೇಂದ್ರಿಯನಾಗಿಯೂ, ಶೂರನಾಗಿಯೂ, ಪ್ರಜಾರಂಜಕನಾಗಿಯೂ, ನೀತಿಶಾಸ್ತ್ರಜ್ಞನಾಗಿಯೂ, ಧರ್ಮಾಧರ್ಮಗಳನ್ನು ಬೇರ್ಪಡಿಸುವಲ್ಲಿ ಸಮರ್ಥನಾಗಿಯೂ, ಕೀರ್ತಿಯಂ ಕಾಮಿಸುವನಾಗಿಯೂ, ಲೋಕಾಪವಾದದಲ್ಲಿ ಭೀತಿಯುಳ್ಳವನಾಗಿಯೂ, ಶತ್ರುಭಯಂಕರನಾಗಿಯೂ, ತ್ಯಾಗಿಯಾಗಿಯೂ, ಮಂತ್ರಿಸಮ್ಮತನಾಗಿಯೂ, ದಯಾಪರನಾಗಿಯೂ, ಗಾಂಭೀರ್ಯಯುಕ್ತನಾಗಿಯೂ, ಉತ್ಸಾಹಪ್ರಿಯನಾಗಿಯೂ, ವಿಚಕ್ಷಣನಾಗಿಯೂ, ಇಂಗಿತಜ್ಞನಾಗಿಯೂ, ಇವು ಮೊದಲಾದ ಅನಂತ ಕಲ್ಯಾಣಗುಣಗಳಿಂದ ವಿಭೂಷಿತನಾಗಿಯೂ ಇರಬೇಕೆಂತಲೂ, ಯಾವುದೊಂದು ತನ್ನ ರಹಸ್ಯಕಾರ್ಯವನ್ನೂ ಪರರಿಗೆ ತೋರ್ಪಡಿಸದೆ ಯಾವ ಕೆಲಸವನ್ನಾದರೂ ಬಾಯಿಂದಾಡದೆ ಮಾಡಿತೋರಿಸುತ್ತ, ಮರೆತಾದರೂ ಅನುಚಿತವಾಕ್ಯವಂ ನುಡಿಯದೆ, ಪರಿಪರಿಯಾದ ವಿಪತ್ತುಗಳು ಬಂದು ಒದಗಿದರೂ ಧೈರ್ಯವಂ ಬಿಡದೆ, ಮಿತಭಾಷಿಯಾಗಿ ಮಿತಾಹಾರಿಯಾಗಿ ಪ್ರಜೆಗಳೇ ತನ್ನ ಪುತ್ರರೆಂದು ತಿಳಿದು ಅವರಿಗೆ ಅಡ್ಡೈಸುವ ಕೋಟಲೆಗಳನ್ನು ಒರಿಗೆಯ್ಯುತ್ತ, ತುಂಬಿಯು ಪುಷ್ಪವು ಕಂದದಂತೆ ಮಕರಂದರಸವಂ ಹೀರುವಂತೆ ಪಣಗಳಂ ಗಳಿಸುತ್ತ, ದ್ರವ್ಯಾಢ್ಯನಾಗಿರಬೇಕೆಂತಲೂ ಪೇಳುತ್ತಿರುವರು. ಈಗ ನೀನು ಒಬ್ಬ ರತ್ನಾವಳಿಗೋಸ್ಕರವಾಗಿ ನಿನಗೆ ಸಮಾನನಾದ ವಿಕ್ರಮಬಾಹುರಾಯನ ಪುತ್ರರಾದ ವಿಂದಾನುವಿಂದರಂ ಸಂಹರಿಸಿದಲ್ಲಿ ಲೋಕಾಪವಾದವು ಬಲವಾಗಿ ಬರುತ್ತಿರ್ಪುವುದು. ಲೋಕದಲ್ಲಿ ಅಪಕೀರ್ತಿಗಿಂತಲೂ ಮೃತ್ಯುವಿಲ್ಲ. ಯಾವುದೊಂದು ನೆವದಿಂದಾದರೂ ಸ್ವಲ್ಪವಾದರೂ ಅಪಕೀರ್ತಿಯು ಪ್ರಾಪ್ತವಾದಲ್ಲಿ ಮರಣಾಂತವಾಗಿ ಹೋಗುವುದೇ ಹೇಳು? ಕೋಪ ಬಂದಲ್ಲಿ ಕ್ಷಮೆಯುಂ, ವಿಪತ್ತುಬಂದಲ್ಲಿ ಧೈರ್ಯವಂ, ಪರರು ಕ್ಷುದ್ರವಂ ಪೇಳಿದಲ್ಲಿ ವಿಚಾರವಂ, ಲೋಕಾಪವಾದದಲ್ಲಿ ಭೀತಿಯುಂ, ಪ್ರಜೆಗ

ಳಲ್ಲಿ ಅನುರಾಗವಂ, ಶತ್ರುಗಳಲ್ಲಿ ಪರಾಕ್ರಮವಂ, ದೇವಬ್ರಾಹ್ಮರಲ್ಲಿ ಭಕ್ತಿಯಂ, ಸುಖದುಃಖಗಳಲ್ಲಿ ಸಮಾನಬುದ್ಧಿಯಂ, ಸಹ ತಾಳಿ ರಾಜ್ಯಭಾರವಂ ಗೆಯ್ಯುವನೇ ಉತ್ತಮನಾದ ದೊರೆಯೆಂದು ಪ್ರಸಿದ್ಧಿಯಂ ಪೊಂದುವನು. ಎನಗೆ ಬಾಲ್ಯದಿಂದಲೂ ಬಲವತ್ತರವಾದ ಸಲುಗೆಯು ಇರುತ್ತಿರುವ್ರದರಿಂದ ಈರೀತಿಯಾದ ವಾಕ್ಯವನ್ನು ಪೇಳಿರುವೆನು. ಲೋಕದಲ್ಲಿ ದೊರೆಯಾದವನಿಗೆ ನೀತಿಗೂಡಿ ಮುಂದಕೆ ಹಿತವಾದ ವಾಕ್ಯವಂ ಪೇಳುವ ಪುರುಷನು ದುರ್ಲಭನು. ಅಥವಾ ಪೇಳಿದಾಗ್ಯೂ ಆ ವಾಕ್ಯವು ಹಿತಕರವಾದುದು ಎಂದು ತಿಳಿದು ನಡೆಯುವ ದೊರೆಯು ದುರ್ಲಭನಾಗಿರುವನು. ಯುಕ್ತವಾಗಲಿ ಅಯುಕ್ತವಾಗಲಿ ಯಾವ ಕಾರ್ಯವನ್ನು ಪ್ರಭುವಾದವನು ಪೇಳುವನೋ ಪ್ರತಿಧ್ವನಿಯನ್ನೀಯುವ ದೇವಾಲಯಗಳಂತೆ ಸರ್ವಜನರೂ ಆ ವಾಕ್ಯವನ್ನೇ ಶ್ಲಾಘನೆಯಂ ಗೆಯ್ಯುತ್ತಿರುವರು. ಈಗ ಸಿಂಹಳದೇಶಕ್ಕೆ ಪೋಗಿ ರತ್ನಾವಳಿಯಂ ನಿನಗೆ ಕೊಟ್ಟು ವಿವಾಹವಂ ಗೆಯ್ಯದೆ ಇನ್ನೊಬ್ಬ ದೇಶದ ರಾಯನಿಗೆ ಕೊಡುತ್ತ ಇದ್ದಲ್ಲಿ ಆ ವಾರ್ತೆಯನ್ನು ಆಕ್ಷಣದಲ್ಲೇ ಬರೆದು ಕಳುಹಿಸುವಂತೆ ಗೂಢಚಾರರಂ ಕಳುಹಿಸುವುದಲ್ಲದೆ ಈಗ ಊಳಿಗವಂ ಗೆಯ್ಯುವುದಕೆಂದು ಸುಸಂಗತೆ ಮೊದಲಾದ ಹೆಣ್ಣುಗಳಂ ಕಳುಹಿಸಿದಂತೆ ಬೆನ್ನುಗಾವಲಿಗೆಂದು ಶೂರರಾದ ಕೆಲವು ಸೇನೆಯನ್ನು ಜತೆಗೊಳಿಸಿ ಕಳುಹಿಸಿ, ಒಳಗುಟ್ಟಿನಲ್ಲಿ ರತ್ನಾವಳಿಯನ್ನು ಇನ್ನೊಬ್ಬ ರಾಯನಿಗೆ ಕೊಡುತ್ತ ಇದ್ದಲ್ಲಿ ಆ ಕಾರ್ಯಕೆ ನಿರೋಧವಂ ಗೆಯ್ದು ಇಲ್ಲಿಗೆ ವಾರ್ತೆಯಂ ಕಳುಹಿಸುವಂತೆಯೂ ಅದುವರೆಗೂ ಅಲ್ಲೇ ಇರುವಂತೆಯೂ ಪೇಳಿ ಕಳುಹಿಸುವುದು ಯುಕ್ತವಾಗಿರುವುದು" ಎಂದು ಬಿನ್ನೈಸಲು; ರಾಯನು ವಿದೂಷಕನು ಪೇಳಿದ ವಾಕ್ಯವನು ಯುಕ್ತವೆಂದು ತಿಳಿದು ಅವನಂ ಕುರಿತು, "ಅಯ್ಯಾ ವಿದೂಷಕನೇ, ಈಗ ನೀನು ಪೇಳಿದಂತೆ ಕೇಳುವೆನು. ಕೆಲವು ಸೇನೆಯಂ ಕಳುಹಿಸುವಂತೆ ಮಂತ್ರಿಯಾದ ಯೌಗಂಧರಾಯಣನಿಗೆ ಪೇಳುವುದು" ಎಂದು ಅಪ್ಪಣೆಯನ್ನೀಯಲು; ಅವನು ಅದೇ ರೀತಿಯಿಂದ ಮಂತ್ರಿಯಂ ಕುರಿತು ಪೇಳಲೋಸುಗ ಪೋಗಲು;

ರಾಯನು ರತ್ನಾವಳಿಯನ್ನೇ ಹೃದಯದಲ್ಲಿ ಸ್ಮರಿಸುತ್ತ ಒಂದು ದಿನವನ್ನು ಯುಗವನ್ನಾಗಿ ಕಳೆಯುತ್ತಿರಲು;

ಇತ್ತಲು, ರತ್ನಾವಳಿಯು ಜ್ಯೇಷ್ಠರಾದ ವಿಂದಾನುವಿಂದರುಗಳಂ ಪೊಂದಿ ಹಡಗನ್ನೇರಿ ಸಮುದ್ರಮಧ್ಯದಲ್ಲಿರುವ ಸಿಂಹಳದ್ವೀಪವೆಂಬ ಪದಕಕ್ಕೆ ಮಧ್ಯನಾಯಕಮಣಿಯಂತೆ ಮೆರೆಯುವ ರತ್ನಪುರವಂ ಪೊಂದಿ, ಕಮಲಾವಳಿ ವಿಕ್ರಮಬಾಹುರಾಯರ ಪಾದಪದ್ಮಂಗಳಿಗೆ ನಮಸ್ಕಾರವಂ ಗೆಯ್ದು ನಿಂದಿರಲಾವಿಕ್ರಮಬಾಹುರಾಯನು ಸಂತೋಷಸಮುದ್ರದಲ್ಲಿ ಮುಳುಗಿ, ಆದಿಲಕ್ಷ್ಮಿಯಂತೆ ಒತ್ತಿನಲ್ಲಿ ಒಪ್ಪುತಿರ್ದ ಮಗಳನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಮುಡಿಯನ್ನು ತಡಹುತ್ತ, ಇಲ್ಲಿಂದ ಪೋದುದು ಮೊದಲಾಗಿ ಮರಳಿ ಬರುವವರೆಗೂ ನಡೆದ ವೃತ್ತಾಂತವನ್ನೂ ವತ್ಸರಾಜ

ನೊಬ್ಬನಲ್ಲದೆ ಕಡಮೆಯಾದ ಭೂಪತಿಯರ ವಿವಾಹವಾಗುವುದಿಲ್ಲವೆಂಬ ರತ್ನಾವಳಿಯ ಪ್ರತಿಜ್ಞೆಯನ್ನೂ ಸಹ ವಿಂದಾನುವಿಂದರುಗಳಿಂದ ಕೇಳಿ, ಮನದಲ್ಲಿ ಅಧಿಕವಾದ ಆನಂದವಂ ಪೊಂದಿ, ಮಗಳಂ ಕುರಿತು, “ ಎಲೆ ಕಲ್ಯಾಣಿಯಾದ ರತ್ನಾವಳಿಯೇ ಏನು ವಿಪತ್ತುಗಳು ಬಂದಾಗ್ಯೂ ಧೈರ್ಯವಂ ಜಿಡದೆ ನಿನ್ನ ಪಾತಿವ್ರತ್ಯವಂ ಸಂರಕ್ಷಿಸಿ ವತ್ಸರಾಜನನ್ನೇ ಒಪ್ಪಿಕೊಂಡಿರುವ ನಿನ್ನ ಮನೋನಿಶ್ಚಯವು ನಮ್ಮ ವಂಶಕ್ಕೆ ಬಹಳವಾದ ಪ್ರತಿಷ್ಠೆಯನ್ನುಂಟುಮಾಡಿದುದು ” ಎಂದು ನುಡಿಯಲು ; ಕಮಲಾವಳಿಯು ವಿಂದಾನುವಿಂದರಂ ಕುರಿತು—“ ಎಲೈ ಪುತ್ರರುಗಳಿರಾ, ನಿಮ್ಮ ತಂಗಿಯಾದ ರತ್ನಾವಳಿಗೆ ವತ್ಸರಾಜನ ವಿವಾಹವನ್ನು ಈ ನಮ್ಮ ರತ್ನಪುರಿಯಲ್ಲೇ ಮಾಡಬೇಕೆಂಬ ಕುತೂಹಲದಿಂದ ಇವಳನ್ನು ಇಲ್ಲಿಗೆ ಕರೆದುಕೊಂಡುಬಂದಿರುವುದಾಗಿ ತೋರುವುದು ” ಎನಲು ; ಮಂತ್ರಿಯಾದ ವಸುಭೂತಿಯು—“ ಎಲೌ ದೇವಿಯೇ ಕೇಳು, ವಿವಾಹವಾಗತಕ್ಕಂಥ ವರನು ಹೆಣ್ಣಿನವರ ಮನೆಗೆ ಬಂದು ಮದುವೆಯಾಗುವುದು ಲೋಕದಲ್ಲಿ ಯುಕ್ತವಾಗಿರುವುದು. ದರಿದ್ರರಾದ ಜನರು ತಮ್ಮಲ್ಲಿ ಹುಟ್ಟಿದ ಕನ್ಯೆಯನ್ನು ಗಂಡಿನ ಮನೆಗೆ ಕಳುಹಿಸಿ ಮದುವೆಯನ್ನು ಆಗಮಾಡಿಸುತ್ತಿರುವರು ” ಎಂದು ಬಿನ್ನೈಸಲು ; ವಿಕ್ರಮಬಾಹುರಾಯನು ಹರ್ಷಭರಿತನಾಗಿ, “ ಎಲೈ ಮಂತ್ರಿಶ್ರೇಷ್ಠನೇ, ಶುಭಸ್ಯಶೀಘ್ರವೆಂಬ ನ್ಯಾಯವಿರುವುದರಿಂದ ವತ್ಸರಾಜನು ರತ್ನಾವಳಿಯ ವಿವಾಹಕೋಸುಗವಾಗಿ ಶುಭದಿವಸದಲ್ಲಿ ನಮ್ಮ ರತ್ನಪುರಿಗೆ ಬಂದು ಸೇರುವಂತೆ ಮಾನದೊಡಗೂಡಿ ಎನ್ನ ಹೆಸರಿಗೆ ಒಂದು ಪತ್ರಿಕೆಯನ್ನು ಬರೆಯುವನಾಗು ” ಎಂದು ಅಪ್ಪಣೆಯನ್ನಿತ್ತು, ಮಗಳ ಹಸ್ತವಂ ಪಿಡಿದು ಕಮಲಾವಳಿಯೊಡಗೂಡಿ ಭೋಜನಾರ್ಥವಾಗಿ ಪಾಕಶಾಲೆಯಂ ಕುರಿತು ಬರುತ್ತ, ದ್ವಾರಪಾಲಕಿಯಂ ಕುರಿತು, “ ಎಲೆ ಮದವತಿಯೇ, ನೀನು ಪೋಗಿ ನಮ್ಮ ಪುರಾಧಿಪತಿಯಾದ ವೀರಕೇತುವಿಗೆ ನಮ್ಮ ರತ್ನಪುರಿಯನ್ನು ರತ್ನತೋರಣಗಳಿಂದ ಅಲಂಕರಿಸುವುದೆಂದು ಎನ್ನ ಆಜ್ಞೆಯನ್ನು ಪೇಳುವಳಾಗು ” ಎಂದು ಅಪ್ಪಣೆಯನ್ನೀಯಲು ;

ಅವಳು—“ ಹೇಗೆ ಆಜ್ಞೆಯಾಗುವುದೋ ಆ ರೀತಿಯಿಂದ ನಡೆದುಕೊಳ್ಳುವೆನು ” ಎಂದು ಪೋಗಲು ;

ಇತ್ತಲು, ವತ್ಸರಾಜನು ರತ್ನಾವಳಿಯನ್ನೇ ಹೃದಯದಲ್ಲಿ ಸ್ಮರಿಸಿ, ಅಧಿಕವಾದ ಸಂತಾಪವಂ ಪೊಂದುತ್ತ, ಬಿಳಿದಾಳೆಯ ಗರಿಯಂತೆ ಬಿಳ್ಪೇರಿದ ಮುಖವುಳ್ಳವನಾಗಿ, ರಾಜ್ಯವಿಚಾರಣೆಯಂ ಬಿಟ್ಟು, ಮನ್ಮಥನಿಗೆ ಮನವಂ ಕೊಟ್ಟು, ಅನುರಾಗವೆಂಬ ಕವಚವಂ ತೊಟ್ಟು, ಸಮಸ್ತ ವಸ್ತುವನ್ನೂ ರತ್ನಾವಳಿಯನ್ನಾಗಿಯೇ ಪರಿಭಾವಿಸುತ್ತ, ಶುಕಪಿಕಗಳ ಶಬ್ದಗಳಿಗೆ ಮುಳಿಸುಗೊಂಡು ಪಂಜರಗಳಂ ದೂರದಲ್ಲಿ ಕಟ್ಟಿರೆಂದು ಊಳಿಗದವರಿಗೆ ಕಟ್ಟುಮಾಡುತ್ತ, ಆಹಾರದಲ್ಲಿಯೂ ನಿದ್ರೆಯಲ್ಲಿಯೂ ಅಪೇಕ್ಷೆಯಂ ಪೊಂದದೆ, ದಿನಕ್ಕೆ ಒಂದು ಪರಿಯಾಗಿ ಸಣ್ಣನಾಗುತ್ತ, ಸೇವಕ ಜನಗಳಮೇಲೆ ನಿಮಿ

ತ್ತವಿಲ್ಲದೆ ಕೋಪಿಸುತ್ತ, ಕ್ಷಣಕೊಂದುವೇಳೆ, " ಗಳಿಗೆ ಎಷ್ಟಾದುದು ? " ಎಂದು ಕೇಳುತ್ತ, ತನ್ನ ವಿರಹವಿಕಾರವಂ ತಿಳಿಯುವರೆಂದು ಸಮೀಪದಲ್ಲಿದ್ದವರಿಗೆ ಒಂದು ಕಾರ್ಯವಂ ಹೇಳಿ ಹೊರಡಿಸುತ್ತ, ತಂಗಾಳಿಯು ಸೋಂಕಿಗೆ ತಲ್ಲಣಿಸುತ್ತ, ಚಂದ್ರನ ಕಾಂತಿಯಂ ನೋಡಲು ನೇತ್ರಜ್ವರವುಂಟಾದಂತೆ ಅಳುಕುತ್ತ, ಆಪ್ತವಚನವನ್ನು ಅಲ್ಲಗಳೆಯುತ್ತ, ಮಾನ್ಯರನ್ನು ಮನ್ನಿಸದ ನೆಟ್ಟದೃಷ್ಟಿಯಿಂದಲೂ ದಟ್ಟವಾಗಿ ಹುಟ್ಟಿದ ರೋಮಾಂಚದಿಂದಲೂ ಪುಟ್ಟಿಹಾರಿದ ನಿಟ್ಟುಸಿರಿನಿಂದಲೂ ಕಟ್ಟಿಗೆ ಸೇರದ ಚಿತ್ತವೃತ್ತಿಯಿಂದಲೂ ಯುಕ್ತವಾಗಿ ಹಾಸಿಗೆಯಲ್ಲಿ ಹೊರಳುತ್ತ, ಗಾಸಿಯಾಗುತ್ತಿರಲು ;

ಈ ವೃತ್ತಾಂತವನ್ನು ವಿದೂಷಕನ ಮುಖವಚನದಿಂದ ಕೇಳಿದ ವಾಸವದತ್ತಾದೇವಿಯು ಮಂತ್ರಿಯಾದ ಯೌಗಂಧರಾಯಣನಿಂದೊಡಗೂಡಿ ರಾಯನ ಶಯ್ಯಾಗೃಹವಂ ಪೊಂದಲು ; ರಾಯನು ಏನೋ ಒಂದು ಆಯಾಸವನ್ನು ಸೂಚಿಸುತ್ತ, ಶಿರೋವೇದನೆಯು ಬಲವಾಗಿರುವುದೆಂದು ಮಂಡೆಗೆ ಪಟ್ಟನ್ನು ಹತ್ತಿಸಬೇಕೆಂದು ಪೇಳುತ್ತ, ದೇವಿಯಂ ಕಾಣದವನಂತೆ ಇದ್ದು, ಆಬಳಿಕ ತಿರುಗಿನೋಡಲು ; ದೇವಿಯು ನಮಸ್ಕಾರವಂ ಗೆಯ್ದು, ಒತ್ತಿನಲ್ಲಿರುವ ರನ್ನದ ಕಂಬಳಿಯಮೇಲೆ ಕುಳಿತು, ದೇಹಕ್ಕೆ ಆಯಾಸವಾಗಿರುವ ಪರಿಯಂ ತಿಳಿದರೂ ಅದನ್ನು ಮನದಲ್ಲೇ ಇರಿಸಿ, ಮರಳಿ ದೇಹಕ್ಕೆ ಉಪದ್ರವೇನೆಂದು ರಾಯನಂ ಬೆಸಗೊಳುತ್ತಿರಲು ; ಯೌಗಂಧರಾಯಣನು ನಮಸ್ಕರಿಸಿ ದೂರದಲ್ಲೇ ಕುಳಿತಿರಲು ;

ಅಷ್ಟರಲ್ಲೇ ಬಾಗಿಲು ಕಾವಲುಗಾರೆಯಾದ ವಸುಂಧರೆಯು ಬೇಗದಿಂ ಬಂದು, " ಅಯ್ಯಾ ಮಹಾರಾಜೇಂದ್ರನೇ, ಸಿಂಹಳದೇಶದಿಂದ ಮಂತ್ರಿಯಾದ ವಸುಭೂತಿಯು ನೀರಾಜಿಯು ಗೌಸುಹಾಕಿದ ಒಂದು ಕಾಗದವನ್ನು ಕರದಲ್ಲಿ ಪಿಡಿದು ನಿನ್ನ ಚರಣಕಮಲದ ಸಂದರ್ಶನವು ಆಗಬೇಕೆಂಬ ಕುತೂಹಲದಿಂದ ಬಂದು ಅಂತಃಪುರದ ಬಾಗಿಲಲ್ಲಿ ನಿಂದಿರುವನು " ಎಂದು ಬಿನ್ನೈಸಲು ;

ವತ್ಸರಾಜನು ಧಾತುವಾದಿಗೆ ಸುವರ್ಣಸಿದ್ಧಿಯಾದಂತೆ, ಪುತ್ರನಂ ಪಡೆದ ವೃದ್ಧನಂತೆ, ಕಣ್ಣುಗಳು ಬಂದ ಹುಟ್ಟುಕುರುಡನಂತೆ, ಮೇಘಧ್ವನಿಯಂ ಕೇಳಿದ ನವಿಲಿನಂತೆ, ಸುಭೋಜನವಾರ್ತೆಯಂ ಕೇಳಿದ ಬ್ರಾಹ್ಮಣನಂತೆ, ರಾಜಪಾದಸೇವೆಯಂ ಪಡೆದ ಸದ್ಭೃತ್ಯನಂತೆ, ಅಧಿಕವಾಗಿ ಪೇಳಲು ಅಸದಳವಲ್ಲದ ಸಂತೋಷದಿಂದ " ಎಲ್ಲಿ ಎಲ್ಲಿ ? " ಎಂದು ಹಾಸಿಗೆಯಿಂದೆದ್ದು, " ಎಲೆ ವಸುಂಧರೆಯೇ, ಶೀಘ್ರದಿಂದ ಕರೆದುಕೊಂಡು ಬರುವಳಾಗು " ಎಂದು ಅಜ್ಞೆಯನ್ನೀಯಲು ;

ಅವಳು ಅದೇರೀತಿಯಿಂದ ಪೊರಡಲು ;

ದೇವಿಯು ಮನದಲ್ಲಿ ಸಂತೋಷವಂ ಪೊಂದಿ, " ಎಲೈ ಯೌಗಂಧರಾಯಣನೇ, ಈಗ ಮರಳಿ ವಸುಭೂತಿಯು ಬಂದಿರುವುದು ಊಹಿಸಿದಲ್ಲಿ ನಮ್ಮ ರಾಜೇಂ

ದ್ರನನ್ನು ರತ್ನಾವಳಿಯ ವಿವಾಹಕ್ಕೋಸ್ಕರವಾಗಿ ಸಿಂಹಳದೇಶಕೆ ಕರೆದುಕೊಂಡು ಪೋಗುವಂತೆ ತೋರುವುದು. ಇನ್ನುಮೇಲೆ ನಮ್ಮ ಸ್ವಾಮಿಗೆ ಸಮಸ್ತವಾದ ಆಯಾಸಗಳು ಪರಿಹಾರವಾಗಿ ಆರೋಗ್ಯವುಂಟಾಗುವುದು " ಎಂದು ನುಡಿಯಲು ; ರಾಯನು ನಸುನಗುತ್ತ, " ಎಲೆ ದೇವಿಯೇ, ಯಾವಾಗಲೂ ಇಲ್ಲದ ಆಸೆಯಂ ಪುಟ್ಟಿಸಿ ವಿನೋದವಂ ಗೆಯ್ಯುವುದು ಯುಕ್ತವೇ? " ಎಂದು ನುಡಿಯುತ್ತಿರಲು ;

ಅಷ್ಟರಲ್ಲೇ ವಸುಭೂತಿಯು ವಸುಂಧರೆಯಿಂದೊಡಗೂಡಿ ಬಂದು ರಾಯನಿಗೆ ನಮಸ್ಕಾರವಂ ಗೆಯ್ದು, ತಾನು ತಂದಿರುವ ಪತ್ರಿಕೆಯನ್ನು ಮುಂದಿರಿಸಲು ; ರಾಯನು ಆ ಪತ್ರಿಕೆಯಂ ತೆಗೆದುಕೊಳ್ಳುವಂತೆ ತನ್ನ ಮಂತ್ರಿಗೆ ಸನ್ನೆಯಂ ಗೆಯ್ದು, ವಸುಭೂತಿಯಂ ಕುರಿತು—" ಎಲೈ ಮಂತ್ರಿಶ್ರೇಷ್ಠನೇ, ನೀನು ಮರಳಿ ಇಲ್ಲಿಗೆ ಬಂದುದಂ ನೋಡಿದುದಲ್ಲಿ ಏನೋ ಹೊಸದಾದ ಒಂದು ಹೊಸಕಾರ್ಯ ತೋರುತ್ತಲಿರುವುದು " ಎಂದು ನುಡಿಯಲು ; ಅವನು—" ಎಲೈ ಮಹಾರಾಜೇಂದ್ರನೇ, ಪತ್ರಿಕೆಯಂ ಪರಾಂಬರಿಸಿದಲ್ಲಿ ಸಮಸ್ತವು ಚಿತ್ತಕೆ ವೇದ್ಯವಾಗುವುದು " ಎಂದು ಬಿನ್ನೈಸಲು ; ಯೌಗಂಧರಾಯಣನು ಆ ಪತ್ರಿಕೆಯ ನೀರಾಜಿಯ ಮೇಲುಮುಸುಕಂ ತೆಗೆದು ಮುದ್ರೆಯನ್ನೊಡೆದು ನೋಡುತ್ತಿರಲು ; ಆ ಪತ್ರಿಕೆಯಲ್ಲಿ—

" ಸ್ವಸ್ತಿಶ್ರೀ ಕೌಶಾಂಬೀನಗರಕ್ಕಲಂಕಾರರಾಗಿ ಸಮಸ್ತ ಸಾಮಂತರಾಯರಿಂದ ಕಪ್ಪವಂ ಒಪ್ಪಿಸಿಕೊಳುತ್ತ ರಾಜಾಧಿರಾಜನೆಂಬ ಬಿರುದನ್ನು ವಹಿಸಿರುವ ವತ್ಸರಾಜನ ಸನ್ನಿಧಿಗೆ:—ಸಿಂಹಳ ದೇಶಾಧಿಪತಿಯಾದ ವಿಕ್ರಮಬಾಹುರಾಯನು ವಿರಚಿಸುವ ಆಶೀರ್ವಾದ. ನೀವು ನಮ್ಮಲ್ಲಿ ಬಂಧುತ್ವವನ್ನು ಬಳೆಯಿಸಿದಾರಭ್ಯವಾಗಿ ನಮ್ಮ ದೇಶಕ್ಕೆ ಬಿಜಯಂಗೆಯ್ದು ನಮ್ಮ ಮನಸ್ಸಿಗೆ ಸಂತೋಷವನ್ನುಂಟುಮಾಡಲಿಲ್ಲವಾದುದರಿಂದ ಈಗ ನಮ್ಮ ಮೇಲಣ ಪೂರ್ಣಾಭಿಮಾನದಿಂದ ವಾಸವದತ್ತಾದೇವಿಯಿಂದಲೂ ಮಂತ್ರಿಮುಖ್ಯವಾದ ಚತುರಂಗಸೇನೆಯಿಂದಲೂ ಸಿಂಹಳದೇಶಕೆ ಬಿಜಯಂಗೆಯ್ದು ಕೂಡಿದ ಬಂಧುತ್ವವನ್ನು ಹೆಚ್ಚಾಗಿ ಅಭಿವೃದ್ಧಿಯಂ ಪೊಂದಿಸಿ ಮಹಾವಿಷ್ಣುವು ಶ್ರೀದೇವಿ ಭೂದೇವಿಯರ ಸೌಖ್ಯವನ್ನು ಪೊಂದುವಂತೆ ನೀವು ಒಂದಕೆ ಎರಡಾದ ಸಂತೋಷವನ್ನು ಪೊಂದಿ ಪೋಗಬಹುದು. ಆದುದರಿಂದಲೇ ಮಂತ್ರಿಯಾದ ವಸುಭೂತಿಯನ್ನು ನಿಮ್ಮ ಸನ್ನಿಧಿಗೆ ಕಳುಹಿಸಿ ಇದ್ದೇನೆ. ಸರ್ವಜ್ಞರಾದವರಿಗೆ ಪತ್ರಿಕಾಮುಖದಿಂದ ಶ್ರುತಪಡಿಸತಕ್ಕ ಪ್ರಕೃತವಿಲ್ಲವು "

ಎಂದು ಬರೆದಿರುವ ಅಭಿಪ್ರಾಯಮಂ ಕೇಳಿ ಸಂತೋಷವಂ ಪೊಂದಿ, ವಿದೂಷಕನು ರಾಯನಂ ಕುರಿತು, "ಎಲೈ ಮಹಾರಾಜೇಂದ್ರನೇ, ವಿಷ್ಣುವಿನಂತೆ ಒಂದಕೆ ಎರಡಾದ ಸೌಖ್ಯವನ್ನು ಪೊಂದಬೇಕೆಂದು ಬರೆದ ವಾಕ್ಯಕೆ ತಾತ್ಪರ್ಯವೇನು? " ಎಂದು ಬೆಸಗೊಳಲು; ವಸುಭೂತಿಯು—" ಎಲೈ ವಿದೂಷಕನೇ, ಸ್ವಲ್ಪದಿವಸದಲ್ಲೇ ಪ್ರತ್ಯಕ್ಷವಾಗಿ ನೋಡುತಿರುವಲ್ಲಿ ಏಕೆ ಪ್ರಶ್ನೆಯಂ ಗೆಯ್ಯುತ್ತಿರುವೆ? " ಎನಲು ;

ವಾಸವದತ್ತೆಯು—"ಎಲೈ ಯೌಗಂಧರಾಯಣನೇ, ಶುಭಕಾರ್ಯಕೆ ತಡಗೆಯ್ಯಬಾರ ದಾದುದರಿಂದ ಸಮಸ್ತ ವಸ್ತುಗಳನ್ನೂ ಸೇನೆಯನ್ನೂ ಸಹ ಸಜ್ಜುಗೊಳಿಸುವನಾಗು" ಎಂದು ಹೇಳಲು; ಯೌಗಂಧರಾಯಣನು—"ಅಯ್ಯಾ ಪೂಜ್ಯನಾದ ವಸುಭೂ ತಿಯೇ, ವಿಕ್ರಮಬಾಹುರಾಯನು ಬರೆದು ಕಳುಹಿಸಿದ ರೀತಿಯಿಂದಲೇ ನಾವೆಲ್ಲರೂ ಬರುತ್ತಿರುವೆವು. ಈ ವಾರ್ತೆಯನ್ನು, ಮೊದಲಾಗಿ ಹೋಗಿ, ನಿಮ್ಮ ರಾಯಂಗೆ ವಿಜ್ಞಾ ಪಿಸುವನಾಗು" ಎಂದು ಹೇಳಲಾವಸುಭೂತಿಯು ರಾಯನಿಂದಲೂ ದೇವಿಯಿಂ ದಲೂ ಅಪ್ಪಣೆಯಂ ತೆಗೆದುಕೊಂಡು ತನ್ನ ದೇಶಕ್ಕೆ ತೆರಳಿ, ಈ ವಾರ್ತೆಯೆಲ್ಲವನ್ನು ವಿಸ್ತಾರವಾಗಿ ವಿಕ್ರಮಬಾಹುರಾಯನಿಗೂ ಕಮಲಾವಳಿಗೂ ಸಹ ಬಿನ್ನೈಸಲು;

ಇತ್ತಲು, ವತ್ಸರಾಜನು ಎಣಿಸುವುದಕ್ಕೆ ಅಳವಲ್ಲದ ಸೇನೆಯಿಂದಲೂ ವಾಸವ ದತ್ತಾದೇವಿಯಿಂದಲೂ ಒಡಗೊಂಡು, ಮಂತ್ರಿಯಾದ ಯೌಗಂಧರಾಯಣನಲ್ಲಿ ಸಮಸ್ತವಾದ ರಾಜ್ಯವನ್ನೂ ಇರಿಸಿ, ಸಿಂಹಳದೇಶಾಭಿಮುಖನಾಗಿ ತೆರಳಿ ಬರುತ್ತ, ಸಮುದ್ರತೀರದಲ್ಲಿ ತನ್ನ ಸೇನಾಸಮುದ್ರವನ್ನು ನಿಲಿಸಿ, ಅನೇಕವಾದ ಹಡಗುಗಳನ್ನು ತರಿಸುವಂತೆ ಧನಗುಪ್ತನೆಂಬ ವರ್ತಕನಿಗೆ ಆಜ್ಞೆಯನ್ನೀಯಲು; ವಿದೂಷಕನು ಬೆಟ್ಟಬೆಟ್ಟಗಳಂತೆ ಪುಟ್ಟಿಬರುವ ತೆರೆಗಳಿಂದಲೂ, ಮೈನಾಕಪರ್ವತಗಳೇ ತೇಲಿಬರು ವಂತೆ ತೋರುವ ಮೀನು ಮುಂತಾದ ಜಲಚರಗಳಿಂದಲೂ, ಅನೇಕವಾದ ಕೈಲಾಸ ಪರ್ವತಗಳಂತೆ ತೋರುವ ನೊರೆಗಳ ತಂಡಗಳಿಂದಲೂ ಮುಂತಿಸಿ ಜನ್ನಾನಗಳಿಗೆ ಗೋಚರವಲ್ಲದ ಮಹಿಮೆಯಿಂದ ಯುಕ್ತವಾದ ಸಮುದ್ರವಂ ಕಂಡು, "ಅಯ್ಯಾ ರಾಜೇಂದ್ರನೇ, ರತ್ನಾವಳಿಯು ನಿನಗೆ ಪತ್ನಿಯಾಗುವಳು. ಆ ಮದುವೆಯ ಕಾಲ ದಲ್ಲಿ ಅನೇಕ ದಕ್ಷಿಣೆಗಳನ್ನೂ ಬಹುಮಾನವನ್ನೂ ಪಡೆಯಬೇಕೆಂದು ಎನಗೆ ಪುಟ್ಟಿದ್ದ ಆಸೆಯು ಈ ಸಮುದ್ರವನ್ನು ನೋಡಲಾಗಿ ಇಂಗಿ ಹೋದುದು. ಎನಗೆ ಅಪ್ಪಣೆ ಯನ್ನ ಕೊಟ್ಟೆಯಾದರೆ ಸ್ವಸ್ಥವಾಗಿ ಕೌಶಾಂಬೀಪುರವಂ ಸೇರಿ ಸುಖದಲ್ಲಿರುವೆನು. ಎಷ್ಟುದೂರವಾಗಿ ನೋಡಿದರೂ ನೀರಿನ ಪಾರವನ್ನೇ ಕಾಣುವುದಕ್ಕಾಗದೆ ಇರುವ ಈ ಸಮುದ್ರವನ್ನು ದಾಂಟಿ ಬರುವುದು ಬಹು ಕಷ್ಟವಾಗಿರುವುದು" ಎಂದು ನುಡಿ ಯಲಾ ವಾಕ್ಯಕ್ಕೆ ವತ್ಸರಾಜನು ನಸುನಗೆಯಿಂದೊಡಗೂಡಿ ಇರುತಿರ್ದನು.

ಎಂಬಲ್ಲಿಗೆ
ಶ್ರೀ ಕೃಷ್ಣರಾಜಕಂಠೀರವರಿಂ ಲೋಕೋಪಕಾರಾರ್ಥವಾಗಿ
ನವರಸಭರಿತವಾಗಿ ಕರ್ಣಾಟಕ ಭಾಷೆಯಿಂದ ವಿರಚಿಸಲ್ಪಟ್ಟ
ಶ್ರೀಕೃಷ್ಣರಾಜ ಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್
ವತ್ಸರಾಜನ ಕಥೆಯಲ್ಲಿ
ಹತ್ತೊಂಬತ್ತನೆಯ ಗುಚ್ಛಂ ಸಂಪೂರ್ಣಂ.

# ಇಪ್ಪತ್ತನೆಯ ಗುಚ್ಛಂ.

ಅನಂತರದಲ್ಲಿ ವತ್ಸರಾಜನ ಆಜ್ಞೆಯಿಂದ ಧನಗುಪ್ತನು ಇಂದ್ರನ ಭಯದಿಂದ ಅಡಗಿರ್ದು ಭೂದೇವೇಂದ್ರನಾದ ವತ್ಸರಾಜನ ದರ್ಶನಕೋಸುಗವಾಗಿ ಎದ್ದು ಬಂದಿರುವ ಅನೇಕವಾದ ಪರ್ವತಗಳೋ ಎಂಬಂತೆ ಒಪ್ಪುತಿರುವ ಹಡಗುಗಳಂ ಜತೆಗೊಳಿಸಿ, ಸಮಸ್ತ ಸೈನ್ಯಜನಗಳನ್ನೂ ಹಡಗುಗಳ ಮೇಲೆ ಕುಳ್ಳಿರಿಸಲು; ವತ್ಸರಾಜನು ಸುವರ್ಣಧ್ವಜಪಟದಿಂ ಸುಂದರವಾಗಿರುವ ಒಂದು ಹಡಗನ್ನು ವಾಸವದತ್ತಾದೇವಿಯಿಂದಲೂ ವಿದೂಷಕ ಮೊದಲಾದ ಆಪ್ತರಾದ ಸೇವಾಜನ ಸಖೀಜನರಿಂದಲೂ ಯುಕ್ತನಾಗಿ ಹತ್ತಿ, ಪೋಗಿ, ಸಿಂಹಳದೇಶದ ಎಲ್ಲೆಗಟ್ಟಿನಲ್ಲಿ ಕಟಕರಚನೆಯಂ ಗೆಯ್ದಿರಲು;

ಆ ವಾರ್ತೆಯನ್ನು ಅಂತ್ಯಪಾಲದುರ್ಗದ ಸೇನಾಪತಿಯು ಪೋಗಿ ವಿಕ್ರಮಬಾಹುರಾಯನಿಗೆ ವಿಜ್ಞಾಪಿಸಲು; ಆ ರಾಯನು ಮಂಗಳಕರದ್ರವ್ಯಗಳಿಂದ ಯುಕ್ತವಾದ ಸುವಾಸಿನಿಯರಿಂದಲೂ ಪುರಜನ ಪರಿಜನರಿಂದಲೂ ಸಮಸ್ತ ಸೇನಾಬೃಂದದಿಂದಲೂ ಯುಕ್ತನಾಗಿ ಎದುರುಬಂದು, ಅನಂತವಾಗಿ ವಸ್ತ್ರಾಭರಣಗಳನ್ನಿತ್ತು, ವಾಸವದತ್ತಾದೇವಿಯಂ ಮನ್ನಿಸಿ, ವತ್ಸರಾಜನಂ ಗಜರಥಾರೋಹಣವಂ ಗೆಯ್಩ಿಸಿ, ರತ್ನಪುರಿಗೆ ಕರೆದುಕೊಂಡು ಬಂದು, ಸುಧರ್ಮಸಭೆಗಿಂತಲೂ ಸುಂದರವಾಗಿರುವ ಅರಮನೆಯಲ್ಲಿ ಇಳಿಸಲು;

ರತ್ನಾವಳಿಯು ಸುಸಂಗತೆ ಮುಂತಾದ ಆಪ್ತಸಖಿಯರಿಂದೊಡಗೂಡಿ ಚಂದ್ರಶಾಲೆಯನ್ನೇರಿ, ಉಬ್ಬುವ ರೋಮಾಂಚನದಿಂ ಹಬ್ಬುವ ಅನುರಾಗದಿಂ ತಬ್ಬಿಬ್ಬಾಗುವ ಚಿತ್ತವೃತ್ತಿಯಿಂ ಕೂಡಿ, ಇವನ ಪಾಣಿಗ್ರಹಣ ಯಾವಾಗ ಕೈಗೂಡುವುದೋ ಎಂದು ಚಿಂತಿಸುತ್ತ, ಆ ವತ್ಸರಾಜನು ಬರುವ್ಯೈಖರಿಯನ್ನೂ ಭೂಮಿಯಗಲಕೆ ಮೇಲೆ ಸಮುದ್ರವು ಮೇರೆದಪ್ಪಿ ಬರುವುದೋ ಎಂಬ ಸಂದೇಹವನ್ನುಂಟುಮಾಡುವ ಅವನ ಸೇನಾಜಾಲವನ್ನೂ ಸಹ ನೋಡುತಿರ್ದು, ಆ ರಾಯನು ಅರಮನೆಗೆ ಬಂದುದನ್ನು ತಿಳಿದು, ಸುಸಂಗತೆಯಂ ಕುರಿತು—“ ಎಲೆ ಕಾಂತೆಯೇ, ಈಗ ಕಂತು ಜಯಂತ ವಸಂತಕರಂತೆ ಒಪ್ಪುತ್ತಿರುವ ಪ್ರಾಣಕಾಂತನಾದ ಆ ವತ್ಸರಾಜೇಂದ್ರನ ಸಂದರ್ಶನಕ್ಕೆ ಪೋಗಬಹುದು. ಆದರೆ ನೋಡಿದವರು ಎನ್ನನ್ನು ಲಜ್ಜೆಗೆಟ್ಟವಳೆಂದು ದೂರುವರಾದುದರಿಂದ ಇಂದಿನ ದಿನ ಪೂಜ್ಯಳಾದ ವಾಸವದತ್ತಾದೇವಿಯ ದರ್ಶನಕ್ಕೆ ಪೋಗಿ, ಒರುವೆನು. ಈಗ ಈ ಫಲಪುಷ್ಪಗಳ ತಟ್ಟೆಗಳನ್ನು ಕೊಂಡು ಪೋಗುವುದು ” ಎಂದು ಹೇಳಿ ಸವಿಯಾದ ಮಾವಿನ ಹಣ್ಣು, ಕಿತ್ತಲೆಯ ಹಣ್ಣು, ದ್ರಾಕ್ಷೆ, ಖರ್ಜೂರ, ಅರೆಬಿರಿದ ಮಲ್ಲಿಗೆಯ ಹಾರ ಪದಕ ಮೊದಲಾದ ಮಾಲೆಗಳಿಂದಲೂ, ಹದಗಟ್ಟಿ ದುಂಡುಗೆಯ್ದ ಅಡಕೆಗಳಿಂದಲೂ, ತಾಳೆಯ ಗರಿಗೆ ಸಮಾನವಾದ ಬಿಳಿಯೆಲೆಗಳಿಂದಲೂ ಪತ್ತು

ದಿಕ್ಕನ್ನೂ ವ್ಯಾಪಿಸುತ್ತಿರುವ ಪರಿಮಳದಿಂದ ಗಂಭೀರವಾದ ಗಂಧದಿಂದಲೂ ಪೂರಿತವಾದ ತಟ್ಟೆಗಳನ್ನು, ಪಿಡಿದರೆ ಒಡೆಯುವಂತೊಪ್ಪುವ ಮೈಬಿಗುಹಿನಿಂದೊಪ್ಪಿ ಸೊನೆದೋರುವ ಪ್ರಾಯವುಳ್ಳ ಊಳಿಗದ ಪೆಣ್ಣುಗಳ ಕೈಗಳಲ್ಲಿ ಕೊಟ್ಟು, ಅವಳಂ ಗೊತ್ತುಗೆಯ್ದು ಕಳುಹಿಸಲು;

ಆ ಸುಸಂಗತೆಯು ಕಾಲುಸರ ಗೆಜ್ಜೆಗಳ ಧ್ವನಿಗಳಿಂದ ಮಣಿಹಜಾರದಲ್ಲಿ ಪ್ರತಿಧ್ವನಿಯಂ ಪುಟ್ಟಿಸುತ್ತ, ತಾರಹಾರಗಳು ಪೇರ್ಮೊಲೆಗಳ ಮೇಲುಗಡೆಯಲ್ಲಿ ಸ್ವಲ್ಪವಾಗಿ ಹಾರುವಂತೆ ಜಗ್ಗುಗೂಡಿ ಅಡಿಯಿಡುತ್ತ, ವಾಸವದತ್ತಾದೇವಿಯ ಸಮ್ಮುಖವಂ ಸೇರಲು ;

ಅಷ್ಟರಲ್ಲೇ ರಾಯನು ವಿದೂಷಕನಂ ಕುರಿತು—“ ಅಯ್ಯಾ ಮಿತ್ರನೇ, ಈ ಸ್ಥಳಕೆ ಬಂದಾಗ್ಯೂ ಮಂದಗಮನೆಯಾಗಿ ಬಾಲೇಂದುಫಾಲೆಯಾಗಿ ಇರತಕ್ಕಂಥ ರತ್ನಾವಳಿಯ ಯೋಗಕ್ಷೇಮಗಳೇ ತೋರಲಿಲ್ಲ. ಸುಸಂಗತೆಯಿರುವ ಸ್ಥಳವನ್ನಾದರೂ ಗೊತ್ತುಗೆಯ್ದಲ್ಲಿ ಅವಳ ಮುಖದಿಂದ ಎಲ್ಲಾ ವೃತ್ತಾಂತವನ್ನೂ ತಿಳಿಯಬಹುದು ” ಎಂದು ಸಲ್ಲಾಪವಂ ಗೆಯ್ಯುತ್ತಲಿರಲವಳು ಹಜಾರವಂ ಕುರಿತು ಬಂದು ದೇವಿಗೆ ನಮಸ್ಕರಿಸಿ, ಎದುರಾಗಿ ಕೈಗಳಂ ಜೋಡಿಸಿಕೊಂಡು ರತ್ನಾವಳಿಯ ವೃತ್ತಾಂತವನ್ನೇ ಚಿತ್ತೈಸುತ್ತಿರುವ ಸುಸಂಗತೆಯನ್ನು ಕಂಡು, ಆರೋಗ್ಯವಂ ಪೊಂದಿದ ದೀರ್ಘರೋಗಿಯಂತೆ, ನಿಜಪತಿಯಂ ಕಂಡ ಪತಿವ್ರತಾಸ್ತ್ರೀಯಂತೆ, ಚಂದ್ರನಂ ಕಂಡ ಚಕೋರಪಕ್ಷಿಯಂತೆ, ಅರುಣಕಿರಣವಂ ನೋಡಿದ ಚಕ್ರವಾಕದಂತೆ, ಕಮಲವನವಂ ಕಂಡ ರಾಜಹಂಸೆಯಂತೆ, ಸಿದ್ಧರಸವಂ ಕಂಡ ಧಾತುವಾದಿಯಂತೆ, ಮಾವಿನ ಚಿಗುರಂ ಕಂಡ ಕೋಗಿಲೆಯಂತೆ, ಬಾಲತೃಣವಂ ಕಂಡ ಗೋವಿನಂತೆ, ಪ್ರಾಣಕಾಂತೆಯಂ ಕಂಡ ಕಾಮಿಯಂತೆ, ಆನಂದಸಮುದ್ರದಲ್ಲಿ ಮುಳುಗಿ,—“ ಅಯ್ಯಾ ವಿದೂಷಕನೇ, ಇಂದುಮುಖಿಯಾಗಿ ಮುಂದುಗಡೆಯಲ್ಲಿ ನಿಂದಿರುವ ಸುಸಂಗತೆಯಂ ಕಂಡೆನು. ಇನ್ನುಮೇಲೆ ಇವಳ ಮುಖವಚನದಿಂದ ಸಕಲ ವೃತ್ತಾಂತವನ್ನು ಕರತಲಾಮಲಕದಂತೆ ವ್ಯಕ್ತವಾಗಿ ತಿಳಿಯಬಹುದು. ಆದರೆ ದೇವಿಯು ಇದಿರಾಗಿ ಇರುವಲ್ಲಿ ಹೇರಳವಾಗಿ ರತ್ನಾವಳಿಯ ವೃತ್ತಾಂತವನ್ನು ಬೆಸಗೊಳ್ಳುವುದಕೆ ಮನದಲ್ಲಿ ನಾಚಿಕೆಯು ತೋರುತ್ತಲಿದೆ. ನೀನು ಯಾವ ತೆರದಿಂದಲಾದರೂ ಆ ಸ್ಥಳವಂ ತಪ್ಪಿಸಿ ಈ ರತ್ನಮಂಟಪದ ಮೊಗಸಾಲೆಗೆ ಆ ಸೊಗಸುಗಾತಿಯನ್ನು ಕರೆದುಕೊಂಡು ಒರುವನಾಗು ” ಎಂದು ಪೇಳುತ್ತಿರುವಷ್ಟರಲ್ಲೇ ವಾಸವದತ್ತಾದೇವಿಯು ರತ್ನಾವಳಿ ಮುಂತಾದವರ ಯೋಗಕ್ಷೇಮವಂ ಬೆಸಗೊಂಡು,—“ ಎಲೆ ಸುಸಂಗತೆಯೇ, ಫಲಪುಷ್ಪ ಗಂಧಗಳಿಂದ ಸುಂದರವಾದ ತಟ್ಟೆಗಳನ್ನು ಹೊರಹಜಾರದಲ್ಲಿರುವ ಮಹಾರಾಜನಂ ಪೊಂದಿಸು ” ಎಂದು ಅಪ್ಪಣೆಯನ್ನೀಯಲು ; ಕನಸಿನಲ್ಲಿ ಕಂಡ ಕಾರ್ಯವು ಕೈಗೂಡಿದಂತೆ ಸಂತೋಷವಂ ಪೊಂದಿ, ಊಳಿಗದ ಹೆಣ್ಣುಗಳಿಂದೊಡಗೂಡಿ ಬರುತ್ತ,

ಸದ್ದುದೋರದೆ ಮುದ್ದಾದ ಮೊಗಸಾಲೆಯಲ್ಲಿ ವಿದೂಷಕನಿಂ ಯುಕ್ತನಾದ ರಾಯನಂ ಕಂಡು, ಜಾರಿದ ಸೀರೆಯ ಸೆರಗನ್ನು ಕುಚತಟಕೆ ಸೇರಿಸುತ್ತ, ಹುಬ್ಬುಗಳಂ ಕೊಂಕುಗೂಡಿಸಿ, ಅದೇನೋ ಒಂದು ಬಗೆಯಾದ ವಿಲಾಸವಂ ಪೊಂದಿ, ಮನದಲ್ಲಿ ಅಧಿಕವಾದ ಸಂತೋಷವಂ ತಾಳಿ,—“ ಎಲೆ ಬಾಲೆಯರುಗಳಿರಾ, ಇದೋ ಮುಂದುಗಡೆಯಲ್ಲಿ ನಮ್ಮ ರಾಜೇಂದ್ರನಿರುವನು. ಸಲಿಗೆಯಂ ಪೊಂದದೆ ಭಯಭಕ್ತಿಯಿಂದೊಡಗೂಡಿ ತಟ್ಟೆಗಳಂ ಪಿಡಿದು ನಡೆಯಿರಿ ” ಎಂದು ಪೇಳುತ್ತ ಪೋಗಿ, ರಾಯನಿಗೆ ನಮಸ್ಕಾರವಂ ಗೆಯ್ದು, ತಟ್ಟೆಗಳಂ ನಾಲಾಗಿ ಮಡಗಿ, ಕರಗಳಂ ಜೋಡಿಸಿಕೊಂಡು ನಿಂದಿರಲು ;

ರಾಯನು ಬೆಡಗುಗೂಡಿದ ಊಳಿಗದ ಹೆಣ್ಣುಗಳ ಮುಖರಸವಂ ನೋಡಿ, “ ಅಯ್ಯಾ ವಿದೂಷಕನೇ ಈ ಸಿಂಹಳದೇಶದ ಹೆಣ್ಣುಗಳ ತೋರಿಯೇ ಇದೊಂದು ತೀರಾಗಿರುವುದು ” ಎಂದು, “ ಎಲೆ ಸುಸಂಗತೆಯೇ, ಕ್ಷೇಮವೆ? ನಮ್ಮ ರತ್ನಾವಳಿಯ ರೋಗಕ್ಲೇಶಂಗಳೂ ಅವಳ ಮನೋವೃತ್ತಿಯೂ ಸಹ ಎಂತಿರುವುವು? ” ಎಂದು ಬೆಸಗೊಳಲು ; ಸುಸಂಗತೆಯು—“ ಎಲೈ ಮಹಾರಾಜೇಂದ್ರನೇ, ಬಹುವಚನಗಳಿಂದ ಫಲವೇನು? ಸ್ವಪ್ನದಲ್ಲಿಯೂ ನಿನ್ನ ನಾಮಾಮೃತವೇ ಜೀವನವಾಗಿರುವಳು. ಯಾವಾಗ ವಿವಾಹವು ಕೈಗೂಡುವುದೋ ಎಂದು ಒಂದು ಕ್ಷಣವನ್ನು ಯುಗವಾಗಿ ಕಳೆಯುತ್ತಿರುವಳು ” ಎಂದು ಬಿನ್ನೈಸುತ್ತಿರುವಷ್ಟರಲ್ಲೇ ವಿಕ್ರಮಬಾಹುರಾಯನು ಮಂತ್ರಿಯಾದ ವಸುಭೂತಿಯಿಂದೊಡಗೂಡಿ ಮದುವೆಯ ಲಗ್ನವನ್ನು ನಿಶ್ಚಯಿಸಿ ಕಲ್ಯಾಣಮಂಟಪವನ್ನು ರತ್ನಾಂಬರಗಳಿಂದ ಅಲಂಕರಿಸಿ, ವತ್ಸರಾಜನಂ ವಾಸವದತ್ತೆಯನ್ನು ಸಹ ಕಂಡು ಲಗ್ನನಿಶ್ಚಯವನ್ನು ಪೇಳಿ, ಕುಶಲಪ್ರಶ್ನೆಯಂಗೆಯ್ದು ಬರುವೆನೆಂದು ಬಂದು, ಮುಂದುಗಡೆಯಲ್ಲಿ ಸಭಾಸ್ಥಾನದಲ್ಲಿ ಕುಳಿತಿರುವ ದ್ವಾರಪಾಲಕಿಯಾದ ಮಂಜುನೇತ್ರೆಯೆಂಬ ಕಾಂತೆಯಂ ಕರೆದು, ಸುಸಂಗತೆಯೊಡನೆ ತಾನು ಬಂದಿರುವೆನೆಂದು ಪೇಳಿಸಲು; ವತ್ಸರಾಜನು ಆ ವಾಕ್ಯವಂ ಕೇಳಿ—“ ಅಯ್ಯಾ ವಿದೂಷಕನೇ, ನಾವಿರುವ ಸಭಾಸ್ಥಾನಕೆ ವಿಕ್ರಮಬಾಹುರಾಯನು ಬಂದಿರುವಲ್ಲಿ ನಾವಿಲ್ಲಿರುವುದು ನ್ಯಾಯವಲ್ಲ ” ಎಂದು ಅವನ ಕೈಲಾಗವಂ ಪಿಡಿದು, ಆ ಸಭಾಸ್ಥಾನವಂ ಕುರಿತು ಪೋಗಲಾವಿಕ್ರಮಬಾಹುರಾಯನು ಇದಿರೆದ್ದು ಬಂದು, ವತ್ಸರಾಜನನ್ನು ಆಲಿಂಗಿಸಿ, “ ಎಲೈ ರಾಜೇಂದ್ರನೇ, ಪೂರ್ವಪುಣ್ಯದಿಂದ ನಮ್ಮ ದೇಶಕ್ಕೆ ಬರುವನಾದೆ ” ಎಂದು ಸ್ತೋತ್ರವಂ ಗೆಯ್ಯಲು ; ವತ್ಸರಾಜನು ನಮಸ್ಕರಿಸುತ್ತಿರುವಷ್ಟರಲ್ಲೇ ಅವನ ಶಿರವನ್ನು ಎತ್ತಿ, “ ನೀನು ರಾಜಾಧಿರಾಜನಾಗಿ ನಮ್ಮಂಥವರುಗಳಿಗೆ ನಮಸ್ಕಾರಕೆ ಯೋಗ್ಯನೆ? ” ಎಂದು ನುಡಿದು, ವತ್ಸರಾಜನ ಕೈಯ್ಯಂ ಪಿಡಿದು, ಪೀಠದಲ್ಲಿ ಕುಳ್ಳಿರಿಸಿ, ತಾನೊಂದು ಪೀಠದಲ್ಲಿ ಕುಳಿತು, ದೇಶಕೋಶಗ ಅಭಿವೃದ್ಧಿಯನ್ನೂ ಪ್ರಜೆಗಳ ಹೆಚ್ಚುಗೆಯನ್ನೂ ಸೇವಾಜನರುಗಳ ಅನ್ಯೋನ್ಯ

ಮಿತ್ರತ್ವವನ್ನೂ, ಮಂತ್ರಿಯು ಸಮ್ಮತನಾಗಿ ಪ್ರಜಾರಂಜಕನಾಗಿ ನೀತಿಯೊಡಗೂಡಿರುವ ಪರಿಯನ್ನೂ ಸಹ, ವತ್ಸರಾಜನನ್ನು ಕೇಳಲಾ ರಾಯನು “ ತಮ್ಮಂಥ ಪೂಜ್ಯರ ಅನುಗ್ರಹವು ಎನಗೆ ವಜ್ರಕವಚವಾಗಿರುವಲ್ಲಿ ನೀವು ಬೆಸಗೊಂಡ ಪ್ರಶ್ನೆಗೆ ಸ್ವಲ್ಪವಾದರೂ ಕಡಮೆಯಿಲ್ಲದೆ ಇರುವುದು ” ಎಂದು ನುಡಿಯಲು ; ವಸುಭೂತಿಯು—“ ಅಯ್ಯಾ, ರಾಜೇಂದ್ರನೇ, ವಾಸವದತ್ತಾದೇವಿಯನ್ನು ಕಾಣಬೇಕೆಂಬ ಕುತೂಹಲವು ನಮ್ಮ ರಾಜೇಂದ್ರನಿಗೆ ಬಲವತ್ತರವಾಗಿರುವುದು ” ಎನಲಾವತ್ಸರಾಜನು ಆ ಕ್ಷಣದಲ್ಲೇ ಪೀಠದಿಂದೆದ್ದು ವಿಕ್ರಮಬಾಹುರಾಯನ ಕೈಲಾಗವಂ ಪಿಡಿದು, ಅಂತಃಪುರವಂ ಕುರಿತು ಬರುತ್ತಿರಲು ;

ಅಷ್ಟರಲ್ಲೇ ಸುಸಂಗತೆಯು ದೇವಿಯ ಸಮೀಪವಂ ಪೊಂದಿ ವಿಕ್ರಮಬಾಹುರಾಯನು ಬರುವ ವಾರ್ತೆಯನ್ನು ಬಿತ್ತರಿಸಲು ; ಆ ದೇವಿಯು ಸಂಭ್ರಮದಿಂದೊಡಗೂಡಿ, ಒಂದು ರತ್ನಪೀಠವಮಂ ಹಾಕಿ, ಗುಂಪುಗೂಡಿರುವ ಊಳಿಗದ ಹೆಣ್ಣುಗಳನು ಹೊರಸಾರಿ ಪೋಗುವಂತೆ ಮಾಡಿ, ಸುಸಂಗತೆಯೊಡನೆ ವಿಕ್ರಮಬಾಹುರಾಯನ ಗುಣಾತಿಶಯದ ಪ್ರಸಕ್ತಿಯಂ ಗೆಯ್ಯುತ್ತಿರಲು ;

ಅಷ್ಟರಲ್ಲೇ ವಿಕ್ರಮಬಾಹುರಾಯನೂ ವತ್ಸರಾಜನೂ ವಿದೂಷಕನೂ ಸಹ ಬರಲು ; ದೇವಿಯು ಭಯಭಕ್ತಿಯಿಂದ ಯುಕ್ತಳಾಗಿ ಬಂದು, ಚಿಕ್ಕಪ್ಪನಾದ ವಿಕ್ರಮಬಾಹುರಾಯನ ಪಾದಗಳಿಗೆ ನಮಸ್ಕಾರವಂ ಗೆಯ್ದು ನಿಂದಿರಲು ; ನಮಸ್ಕಾರೂ ಕುಳಿತುಕೊಳ್ಳಲು ; ವಾಸವದತ್ತಾದೇವಿಯಂ ಕುರಿತು ವಿಕ್ರಮಬಾಹುರಾಯನು “ ಪುತ್ರಿಯೇ, ನಿನ್ನನ್ನು ನೋಡಬೇಕೆಂಬುವ ಕುತೂಹಲವು ಬಲವಾಗಿ ಎನ್ನ ಹೃದಯವನ್ನು ಬಾಧಿಸುತಿರ್ದುದು. ಇಂದಿನ ದಿನದಲ್ಲಿ ಎನಗೆ ಅಧಿಕಾನಂದವುಂಟುಮಾಡಿದೆ ” ಎಂದು ಸರಸಸಲ್ಲಾಪವಂ ಗೆಯ್ಯುತ್ತಿರ್ದು, ವಿವಾಹವೃತ್ತಾಂತವನ್ನು ವಿಸ್ತರಿಸಬೇಕೆಂದು ಯೋಚಿಸಿ, ವತ್ಸರಾಜನ ವದನವಂ ನೋಡಿ ಸುಮ್ಮನಾಗಲು ; ವತ್ಸರಾಜನು ಭಾವಜ್ಞನಾದುದರಿಂದ ಆ ವಿಕ್ರಮಬಾಹುರಾಯನ ತಾತ್ಪರ್ಯವಂ ತಿಳಿದು, ವಿದೂಷಕನಂ ನೋಡಿ, “ ಅಯ್ಯಾ ಮಿತ್ರನೇ, ಕೌಶಾಂಬೀನಗರಕೆ ಸಂಗಡ ಬಂದಿರುವ ಕೆಲವು ಸೇನೆಯನ್ನು ಕಳುಹಿಸಬೇಕಾಗಿದ್ದ ಕಾರ್ಯವಂ ಮರೆತಿದ್ದೆನು ” ಎಂದು ಅಲ್ಲಿಂದ ಎದ್ದು ಪೋಗಲು ;

ವಿಕ್ರಮಬಾಹುರಾಯನು ದೇವಿಯಂ ಕುರಿತು,—“ ಎಲೆ ಪುತ್ರಿಯೇ, ನಮ್ಮ ರತ್ನಾವಳಿಯನ್ನು ನಿನ್ನ ಪತಿಯಾದ ವತ್ಸರಾಜನಿಗೆ ವಿವಾಹವಂ ಗೆಯ್ಯಬೇಕೆಂದು ನನ್ನ ಮನಸ್ಸಿನಲ್ಲಿ ಬಲವಾದ ಕುತೂಹಲವು ಇರುವುದಾಗಿ ಮಂತ್ರಿಯ ಮುಖವಚನದಿಂದ ಕೇಳಿದಾಗ್ಯೂ ಈಗ ಪ್ರತ್ಯಕ್ಷವಾಗಿ ಕೇಳಲಿಚ್ಛೈಸುತ್ತಿರುವೆನು. ಒಂದಿನಿಸಾದರೂ ವಂಚಿಸದೆ ನಿನ್ನ ಮನದಲ್ಲಿ ಇರುವ ವೃತ್ತಾಂತವನ್ನು ಪೇಳುವಳಾಗು. ನಿನಗೆ ಅಭಿಮತವಲ್ಲದ ಕಾರ್ಯವನ್ನು ಎಂದಿಗೂ ಮಾಡತಕ್ಕವನಲ್ಲ. ಇನ್ನೂ ನೂ

ತನ ವಯಸ್ಸಿನಿಂದ ಯುಕ್ತಳಾಗಿ ಆದಿಲಕ್ಷ್ಮಿಯಂತೆ ನೀನಿರುವಲ್ಲಿ ನಮ್ಮ ರತ್ನಾವಳಿಯಂ ನಿನ್ನ ಪತಿಗೆ ವಿವಾಹವಂ ಗೆಯ್ಯುವುದಕ್ಕೆ ನನ್ನ ಮನವು ಒಡಂಬಡದು " ಎಂದು ಪೇಳಲಾದೇವಿಯು—" ಎಲೈ ಪೂಜ್ಯನಾದ ತಂದೆಯೇ, ಕೇಳು. ರಾಜಹಂಸ ಸ್ತ್ರೀಯು ಕಮಲವನವಂ ಪೊಂದುವುದು ಯುಕ್ತವಲ್ಲದೆ ದತ್ತೂರಿಗಳ ಗುಂಪನ್ನು ಸೇರುವುದು ಯುಕ್ತವಲ್ಲ. ನಮ್ಮ ರತ್ನಾವಳಿಯು ಸುಂದರತ್ವಕ್ಕೆ ಗುಣಾತಿಶಯಕ್ಕೆ ಸಹ ನಮ್ಮ ರಾಜೇಂದ್ರನೇ ವರನಾಗಿರುವನಲ್ಲದೆ ಇನ್ನೊಬ್ಬನೂ ಈ ಭೂಮಂಡಲ ದಲ್ಲಿ ಇರಲಾರನೆಂದು ನಿಶ್ಚಯಿಸಿರುವೆನು. ದೊರೆಗಳಾದವರು ಬಹುಜನ ಸ್ತ್ರೀಯ ರಿಗೆ ವಲ್ಲಭರೆಂದು ನೀತಿವಾಕ್ಯವಿರುವುದರಿಂದ ನಮ್ಮಂಥ ಸಹಸ್ರಜನಸ್ತ್ರೀಯರಿ ದ್ದರೂ ರತ್ನಾವಳಿಯನ್ನು ನಮ್ಮ ರಾಜೇಂದ್ರನಿಗೆ ಕೊಡತಕ್ಕದು. ಮತ್ತು ಈ ರತ್ನಾವಳಿಯು ಲೋಕದಲ್ಲಿ ಇರುವ ಪುರುಷರಲ್ಲಿ ನಮ್ಮ ರಾಜೇಂದ್ರನೊಬ್ಬನೇ ತ ನಗೆ ಪ್ರಾಣಕಾಂತನೆಂತಲೂ ಉಳಿದವರೆಲ್ಲರೂ ತಂದೆಗಳೆಂತಲೂ ದೃಢವಾದ ಪ್ರತಿ ಜ್ಞೆಯಂ ಗೆಯ್ದಿರುವಳು. ನಮ್ಮ ರಾಜೇಂದ್ರನು ಈ ರತ್ನಾವಳಿಯನ್ನು ಯಾವ ದೇ ಶದ ಅರಸಾಗಲಿ ವಿವಾಹವಂ ಗೆಯ್ಯುವೆನೆಂದು ಯತ್ನವಂ ಗೆಯ್ವಲ್ಲಿ ಅವನ ಶಿರ ವನ್ನು ಯುದ್ಧಭೂಮಿಯಲ್ಲಿ ಚೆಂಡಾಡುವೆನೆಂದು ವೀರವ್ರತವಂ ವಿರಚಿಸಿರುವನು. ಇಂತಿರುವಲ್ಲಿ ಇವರಿರ್ವರಿಗೆ ವಿವಾಹವನ್ನು ತಪ್ಪಿಸುವುದಕ್ಕೆ ಬ್ರಹ್ಮನಿಂದಲೂ ಆಗ ದೆಂದು ನಿಶ್ಚಯಿಸಿರುವೆನು. ನೀವು ಈ ಕಾರ್ಯವನ್ನು ಶೀಘ್ರದಲ್ಲಿ ಬಳೆಯಿಸಿದಲ್ಲಿ ಅಧಿಕ ವಾದ ಸಂತೋಷವು ಎನಗೆ ಉಂಟಾಗುತಿರುವುದು " ಎಂದು ಏಕಾಂತವಾಗಿ ಬಿನ್ನೈ ಸಲು ; ವಿಕ್ರಮಬಾಹುರಾಯನು ವಾಸವದತ್ತಾದೇವಿಯ ಅಭಿಪ್ರಾಯಮಂ ತಿಳಿದು ಸಂತೋಷಮಂ ಗೊಂಡು,—" ದೇವಿಯೇ, ಇನ್ನು ಮೇಲೆ ಕ್ಷಿಪ್ರದಿಂ ಪ್ರಸ್ತವನ್ನು ಆಗ ಮಾಡಿಸುತ್ತೇನೆ " ಎಂದು, ಅಲ್ಲಿಂದ ಪೊರಮಟ್ಟು, ತನಗೆ ಆಪ್ತರಾದ ಬಂಧುಗಳಿಗೂ ದೊರೆಗಳಿಗೂ ಸಹ ಪತ್ರಿಕೆಗಳನ್ನು ಬರೆದು ಕಳುಹಿಸಿ ಕರೆಯಿಸಿ, ಶುಭಮುಹೂರ್ತ ದಲ್ಲಿ ನಿಶ್ಚಿತಾರ್ಥ ಕಂಕಣಧಾರಣೆ ಮೊದಲಾದ ಶುಭಕಾರ್ಯಗಳಂ ನಡೆಯಿಸಿ, ಪಾಣಿ ಗ್ರಹಣಕ್ಕೋಸುಗವಾಗಿ ವತ್ಸರಾಜನನ್ನು ಗಜಾರೋಹಣವಂ ಗೆಯ್ಸಿ, ಭೇರಿ ತಮ್ಮಟೆ ಮೃದಂಗ ಕಾಹಳೆ ಮೊದಲಾದ ವಾದ್ಯಧ್ವನಿಗಳು ದಿಕ್ತಟಗಳನ್ನು ತುಂಬುತ್ತಿ ರಲು ಸಮಸ್ತರಾದ ಪರಿಜನ ಪುರಜನಂದಲೂ ಅಖಿಲಧರಣೀಪಾಲಕರುಗಳಿಂದಲೂ ವೇದವೇದಾಂಗಪಾರಂಗತರಾದ ಬ್ರಾಹ್ಮಣೋತ್ತಮರುಗಳಿಂದಲೂ ಯುಕ್ತನಾಗಿ ದೇವೇಂದ್ರನು ಐರಾವತವನ್ನೇರಿ ದೇವಸಮೂಹದಿಂದ ಪರಿವೃತನಾಗಿ ಭೂಮಿಯ ಸೌಭಾಗ್ಯವಂ ನೋಡುವುದಕೆ ಬಂದಿರುವನೋ ಎಂಬ ಸಂದೇಹವು ಹಬ್ಬುವಂತೆ ಬೀದಿಬೀದಿಯಲ್ಲಿ ಮೆರವಣಿಗೆಯಂ ಗೆಯ್ಸಿ ಕರೆದುಕೊಂಡು ಬರುತ್ತಿರಲು ;

ಆ ಸಮಯದಲ್ಲಿ ಆ ಪಟ್ಟಣದಲ್ಲಿರುವ ಯೌವನಸ್ಥರಾದ ಸ್ತ್ರೀಯರುಗಳು ವತ್ಸರಾಜನೆಂಬುವನು ವಸಂತ ಜಯಂತ ಕಂತು ಮುಂತಾದವರಗಿಂತಲೂ ಕಾಂತ

ನಾಗಿ, ಸುದಂತೆಯಾಗಿ ಶುಭೋದಂತೆಯಾಗಿ ಕಮಲದಳನೇತ್ರಾಂತೆಯಾಗಿ ನಮ್ಮ ಭೂಕಾಂತನಿಗೆ ಪ್ರಾಣಕಾಂತೆಯಾದ ಕಮಲಾವಳಿಯ ಗರ್ಭವೆಂಬ ಮುತ್ತಿನ ಚಿಪ್ಪಿಗೆ ಕೆನ್ನೀರಮುತ್ತಿನಂತೆ ಮೆರೆಯುವ ರತ್ನಾವಳಿಯ ಪಾಣಿಗ್ರಹಣವಂ ಗೆಯ್ಯಲೋಸುಗ ಗಜಾರೋಹಣವಂ ಗೆಯ್ಯುತ್ತ ಬರುವನು. ಅವನನ್ನು ನೋಡಿ ನೇತ್ರಾನಂದವನ್ನು ಪೊಂದಬೇಕು ಎಂದು ಮೇಘಮಂಡಲದ ಒತ್ತಿನಲ್ಲಿ ಒಪ್ಪುತ್ತಿರುವ ಉಪ್ಪರಿಗೆಯನ್ನೇರಿ, ಬೆಡಗುಗಳಂ ಬೀರಿ, ಬಗಸೆಗಳಂ ಮೀರಿ ಅನುರಾಗವಂ ತೋರುತ್ತಿರುತ ಕೊಂಕು ಗೂಡಿ ಬಳ್ಳಿವರಿದು ಬಗೆಬಗೆಯಾದ ದೃಷ್ಟಿಗಳಿಂದ ಶ್ರೇಷ್ಠನಾದ ವತ್ಸರಾಜನನ್ನು ನೋಡಿನೋಡಿ ತೃಪ್ತಿಹೊಂದದೆ, "...ಇವನ ಕೈಪಿಡಿಯುವ ರತ್ನಾವಳಿಯು ಜನ್ಮಾಂತರದಲ್ಲಿ ಯಾವ ನೋಂಪಿಯನ್ನು ನೋಂತಳೋ ತಿಳಿಯದು. ಅವಳ ಭಾಗ್ಯವನ್ನು ಎಷ್ಟೆಂದು ಬಣ್ಣಿಸಲಿ...ಅವಳ ಪುಣ್ಯವು ಶಿಙೇಂದ್ರೇಣಿಗೂ ಇಲ್ಲವಾಗಿರುವುದು..." ಎಂದು ಒತ್ತಿನಲ್ಲಿರುವ ನಾರಿಯರೊಡನೆ ಪೇಳಿ ಹಂಬಲಿಸುತ್ತಿದ್ದರು.

ಇಂತು ಪುರದ ನಾರಿಯರೆಲ್ಲರೂ ಪರಿಪರಿಯಾದ ಸರಸೋಕ್ತಿಗಳನ್ನು ಬೀರುತ್ತ, ಆ ವತ್ಸರಾಜನನ್ನು ರೆಪ್ಪೆಗಳನ್ನು ಮುಚ್ಚದೆ ಅನಿಮಿಷಸ್ತ್ರೀಯರಂತೆ ಅಂಬರಮಂ ಚುಂಬಿಸುತ್ತಿರುವ ಚಂದ್ರಶಾಲೆಗಳಲ್ಲಿ ನಿಂತು ನೋಡುತ್ತಿರಲು ;

ಮುಂಭಾಗದಲ್ಲಿರುವ ವಿಕ್ರಮಬಾಹುರಾಯನ ಅರಮನೆಯ ಮೇಲ್ಗಡೆಯಲ್ಲಿ ಎಣಿಕೆಗೆ ಅಳವಿಡದ ಗುಂಪುಗೂಡಿ ಚಿನ್ನದ ಗೊಂಬೆಗಳಂತೆ ಸನ್ನುತರಾಗಿ ನಿಂತಿರುವ ಅಂತಃಪುರ ಸ್ತ್ರೀಜನವಂ ಕಂಡು ವಿದೂಷಕನು,—" ಅಯ್ಯಾ ರಾಜೇಂದ್ರನೇ, ನಿನ್ನ ಒತ್ತಿನಲ್ಲಿ ನಾನು ಕುಳಿತು ಗಜಾಂತವಾದ ಐಶ್ವರ್ಯವನ್ನು ಅನುಭವಿಸಿದೆನು, ಎಂಬ ಸಂತೋಷವೇ ಬಲವಾಗಿದ್ದುದು. ಈಗ ಮುಂದುಗಡೆಯಲ್ಲಿ ನಿಂತಿರುವ ನಿಮ್ಮ ಮಾವನ ಮನೆಯ ಊಳಿಗದ ಹೆಣ್ಣುಗಳನ್ನು ನೋಡಲಾಗಿ, ಅದಕ್ಕಿಂತಲೂ ಅತಿಶಯವಾದ ಹರ್ಷವು ಪ್ರಾಪ್ತವಾದುದು. ನೀನು ಈ ಬಾಲೆಯರ ಗುಂಪನ್ನು ಸೇರಿದ ಮೇಲೆ ಎನ್ನ ಸ್ಮರಣೆಯು ಉಂಟಾಗುವುದಿಲ್ಲವೆಂಬುವ ಸಂದೇಹವು ತೋರುತ್ತಿರುವುದು " ಎಂದು ವಿನೋದವಚನಗಳನ್ನು ನುಡಿಯುತ್ತಿರಲು ;

ಇತ್ತಲು, ವಿಕ್ರಮಬಾಹುರಾಯನ ಪತ್ನಿಯಾದ ರತ್ನಾವಳಿಯ ಮಾತೆಯಾದ ಕಮಲಾವಳಿಯು ತನ್ನ ಪುತ್ರಿಯಾದ ರತ್ನಾವಳಿಯನ್ನು ಅಲಂಕರಿಸುವಂತೆ ಆಜ್ಞೆಯನ್ನೀಯಲು; ಸಂತೋಷದಿಂದ ಸಂಗತರಾದ ಸಖಿಯರುಗಳು ರತ್ನಾವಳಿಯನ್ನು ಅಲಂಕಾರಮಂಟಪಕ್ಕೆ ಕರೆತಂದು ರತ್ನಪೀಠದಲ್ಲಿ ಕುಳ್ಳಿರಿಸಿ—ಒರ್ವ ಚಂಚಲಾಕ್ಷಿಯು ಆಮೆಗಳಿಗಿಂತಲೂ ಅತಿಸುಂದರಳಾಗಿ ಕೆಂದಾವರೆಯ ಅಂದವಂ ನಿಂದಿಸುತ್ತ ರಕ್ತವಂ ಮುಕ್ಕುಳಿಸಿದಂತೆ ಒಪ್ಪುತ್ತ ಮೃದುಗಳಾದಚರಣಗಳಿಗೆ ಬಿರುದು ಕಡಗಗಳಂ ತೊಡಿಸುವಳೋ ಎಂಬಂತೆ ರತ್ನಮಯಗಳಾಗಿ ಮೇಲಾದ ಕಾಲುಸರಗಳನ್ನು ತೊಡಿಸಲು; ಇನ್ನೊರ್ವ ವಿಶಾಲಾಕ್ಷಿಯು ಕಮಲನಾಳದ ನೂಲಿನಂತೆ ಒಪ್ಪಿ ದೃಷ್ಟಿಗೆ ಗೋಚರವ

ಲ್ಲದೆ ಇರುವ ಮಧ್ಯಭಾಗವನ್ನು ಪದ್ಮರಾಗದ ಒಡ್ಯಾಣದಿಂದ ಅಲಂಕರಿಸಲು; ಮತ್ತೊರ್ವ ಕಂಬುಕಂಠಿಯು ನಾಭಿಯೆಂಬ ಪಾತಿಯಿಂದೆದ್ದು ಬೆಳೆದ ರೋಮರಾಜಿಯೆಂಬ ಲತೆಗೆ ಫಲಗಳಂತೆ ಮೆರೆಯುತ್ತ, ಹೃದಯದಲ್ಲಿರುವ ಮನ್ಮಥಮಹಾರಾಜನ ಮದ್ದಾನೆಯ ಕುಂಭಸ್ಥಳಗಳಂತೆ ತೋರುತ್ತ, ಲೋಕದಲ್ಲಿರುವ ಯೌವನಪುರುಷರನ್ನು ವಂಚಿಸಲೋಸುಗ ಮನ್ಮಥನೆಂಬ ಸಿದ್ಧಪುರುಷನು ಮೋಹವೆಂಬ ಚೂರ್ಣವನ್ನು ತುಂಬಿ ಮಡಗಿರುವ ಸುವರ್ಣದ ಭರಣಿಗಳೋ ಎಂಬಂತೆ ಪೊಳೆಯುತ್ತ, ಹೃದಯವೆಂಬ ಕೊಳದಿಂದ ಮೇಲಕ್ಕೆ ಎದ್ದಿರುವ ತಾವರೆಯ ಮೊಗ್ಗುಗಳೋ ಎಂಬಂತೆ ರಾಜಿಸುತ್ತ, ರತ್ನಾವಳಿಯು ದೇಹವೆಂಬ ಸುವರ್ಣಭೂಮಿಯಲ್ಲಿ ಮನ್ಮಥಮಹಾರಾಜನಿಗೆ ಪಟ್ಟಾಭಿಷೇಕವಂ ಗೆಯ್ಯಲೋಸುಗ ಯೌವನವೆಂಬ ಪುರೋಹಿತನಿಂದ ತಂದಿರಿಸಿರುವ ಅಮೃತಕಲಶಗಳೋ ಎಂಬಂತೆ ಕಣ್ಗೊಳಿಸುತ್ತ, ಮುಖಚಂದ್ರನ ಭಯಕೆ ಅಡಗಿರುವ ಚಕ್ರವಾಕಪಕ್ಷಿಗಳೋ ಎಂಬಂತೆ ಎಸೆಯುತ್ತ, ಕಠಿನವಾದ ಮುನಿಜನರ ಮನವೆಂಬ ದುರ್ಗವನ್ನು ಭೇದಿಸಲೋಸುಗ ಮನ್ಮಥನೆಂಬ ಶೂರನು ತಂದಿರಿಸಿರುವ ಪಿರಂಗಿಯ ಚಿನ್ನದ ಗುಂಡುಗಳೋ ಎಂಬಂತೆ ಪೊಳೆಯುತ್ತ, ಪಟುವಾಗಿ ಒಟುವಾಗಿ ಮಿಂಚುದೋರಿ ನುಣುಪಾಗಿ ಒತ್ತಾಗಿ ಮೊತ್ತವಾಗಿ ಎತ್ತರವಾಗಿ ಬಿತ್ತರವಾಗಿ ಮುಳುಗಿದ ಮೊನೆಗಳಾಗಿರುವ ದುಂಡುಮೊಲೆಗಳಿಗೆ ಕಾಮನ ಕೈಕಠಾರಿಗಳಿಗೆ ಒರೆಗಳನ್ನು ತೊಡಿಸುವಳೋ ಎಂಬಂತೆ ಸರಿಗೆಯಿಂ ಮಿರುಗುವ ಕುಪ್ಪಸವಂ ತೊಡಿಸಲು; ಮತ್ತೊರ್ವ ಬೆಡಗುಗಾತಿಯು ಘನವಾದ ಸ್ತನಗಳೆಂಬ ಹಿಮಗಿರಿಯಿಂದಿಳಿದು ಬರುವ ದೇವಗಂಗೆಯ ಶಂಕೆಯನ್ನುಂಟುಮಾಡುವಳೋ ಎಂಬಂತೆ, ಕಂಠವೆಂಬ ಶಂಖದೊಡಹುಟ್ಟಿದ ಮುತ್ತುಗಳನ್ನು ಒಂದು ಸ್ಥಾನಕೆ ಸೇರಿಸುವಳೋ ಎಂಬಂತೆ, ಮೊತ್ತವಾದ ಮುತ್ತಿನ ಹಾರವನ್ನು ಕುಚಾಗ್ರಗಳನ್ನು ಸೇರುವಂತೆ ಕತ್ತಿಗೆ ಅಳವಡಿಸಿ ನಿಂತು ನೋಡುತ್ತಿರಲು; ಇನ್ನೊರ್ವ ಸನ್ನುತಾಂಗಿಯಾದ ಕನ್ನೆಯು ರತೀದೇವಿಯು ಕೈಕನ್ನಡಿಯಂತೆ ಕಳಂಕವನ್ನು ಬಿಟ್ಟ ಪೌರ್ಣಮಿಯ ಚಂದ್ರನಂತೆ ಅಮೃತಸರೋವರದಲ್ಲಿ ಪುಟ್ಟಿದ ಕಮಲದಂತೆ ಸೌಂದರ್ಯರಸಕ್ಕೆ ಸ್ಥಾನದಂತೆ ಒಪ್ಪುತಿರುವ ಮುಖವನ್ನು ಪನ್ನೀರಿನಿಂದ ನನೆದ ಹಸ್ತಸಾವಡೆಯಿಂದ ಹದವರಿತು ಒರಸಿ ಕನ್ನಡಿಯಂತೆ ತಳತಳಿಸುತ್ತಿರುವ ಕಪೋಲದಲ್ಲಿ ನಯವಾಗಿ ಮಕರಿಕಾಪತ್ರಗಳಂ ಬರೆದು ಸಂಪಗೆ ಮೊಗ್ಗಿನ ತುದಿಯಲ್ಲಿ ಸೊಂಪಾದ ಅರಳಿದ ಮಲ್ಲಿಗೆಯು ಪುಟ್ಟಿರುವುದೋ ಎಂಬ ಸಂದೇಹವನ್ನುಂಟುಮಾಡುವಳೋ ಎಂಬಂತೆ ಎರಡುಕಣ್ಣುಗಳ ಮಧ್ಯದಲ್ಲಿ ಸೆಟ್ಟ ಎಲ್ಲೆಗಲ್ಲೋ ಎಂಬಂತೆ ಒಪ್ಪುತಿರುವ ನಾಸಿಕವನ್ನು ವಜ್ರದ ಮೂಗುತಿಯಿಂದ ಶೃಂಗರಿಸಿ, ಅಷ್ಟಮಿಯ ಚಂದ್ರನಂತೆ ಮನ್ಮಥನ ಜಯಪತ್ರಿಕೆಯಂತೆ ಒಪ್ಪುತ್ತಿರುವ ಹಣೆಯಲ್ಲಿ ಕಳಂಕವನ್ನುಂಟುಮಾಡುವಳೋ ಎಂಬಂತೆ ಯೌವನಪುರುಷರ ಎದೆಯಂ ಭೇದಿಸುವಂತೆ ಮಾರನ ಬಾಣಗಳಿಗೆ ಅಲಗನ್ನು ತಿದ್ದುವಳೋ ಎಂಬಂತೆ ಮುದ್ದಾಗಿ

ಕಸ್ತೂರಿಯ ತಿಲಕವಂ ತಿದ್ದಿ ಕಾಮನ ಬಿಲ್ಲುಗಳಂತೆ ಕಮನೀಯವಾಗಿರುವ ಹುಬುಗಳ ಮಧ್ಯದಲ್ಲಿ ಕುರುವಿಂದದ ಹಿಡಿಯನ್ನಿಂಟುಮಾಡುವಳೋ ಎಂಬಂತೆ ಕುಂಕುಮದ ಚಿಕ್ಕೆಯ ಬೊಟ್ಟನ್ನಿಟ್ಟು, ಮಟ್ಟುಮೀರಿದ ಆನಂದವನ್ನು ಹೊಂದುತ್ತಿರಲು; ಮತ್ತೊರ್ವ ಮಂದಯಾನೆಯು ಶ್ರೀಕಾರಗಳಂತೆ ರಾಜಿಸುವ ಕರ್ಣಗಳಲ್ಲಿ ಚಂದ್ರಮಂಡಲಗಳಂತೆ ಕಾಂತಿಯಂ ಬೀರುತ್ತಿರುವ ವಜ್ರದ ಕುಂಡಲಗಳನ್ನು ಸೇರಿಸಿ ಚೀವರತ್ನದ ಬಾವುಲಿ ಹೊನ್ನಹೂವು ಬುಗುಡಿಗಳನ್ನೂ ಜತೆಗೊಳಿಸಿ ಕಾಮನ ಅಂಬುಗಳಂತೆ ಇಂಬಾಗಿ ಮೀನುಗಳ ಮಾನಗಳಂ ಬರಿಗೆಯ್ದು ಕಮಲದಳದ ಕಾಂತಿಯಂ ಕಂದಿಸಿ ಮೆರೆಯುವ ಕಣ್ಣುಗಳಿಗೆ ಓರೆನೋಟದ ದಾರಿಯಂ ತೋರಿಸುವಳೋ ಎಂಬಂತೆ ಕಾಡಿಗೆಯಿಂದ ಕಿವಿಗಳು ಸೋಕುವಂತೆ ಸೋಗೆಯಂ ತಿದ್ದಿ ದೂರವಾಗಿ ಬಂದು ನಿಂತು ನೋಡುತ್ತಿರಲು; ಇನ್ನೊರ್ವ ಸೊನೆಯೇರಿದ ಪ್ರಾಯದ ಬಾಲೇಂದುಘಾಲೆಯು ಕಲ್ಪವೃಕ್ಷದ ಚಿಗುರುಗಳಂತಿರುವ ಬೆರಳುಗಳಿಗೆ ವಜ್ರ ಪಚ್ಚೆ ಮುಂತಾದ ಉಂಗುರಗಳನ್ನು ತೊಡಿಸಿ ಶೀಘ್ರವಾಗಿ ವತ್ಸರಾಜನ ಕೈಯ್ಯಂ ಪಿಡಿಯುವಳಾಗೆಂದು ನುಡಿಯುತ್ತಿರಲು; ಮತ್ತೊರ್ವ ಸುಕೇಶಿಯು ಕಾರ್ಮುಗಿಲಂತೆ ಕಂಗೊಳಿಸುತ್ತಿರುವ ಕೇಶಗಳನ್ನು ನಕ್ಷತ್ರಗಳಂತಿರುವ ದುಂಡುಮಲ್ಲಿಗೆಯ ಮಾಲೆಯಿಂದ ಅಲಂಕರಿಸುತ್ತಿರಲು; ಇನ್ನೊರ್ವ ಕಲವಾಣಿಯು ಕಮನೀಯವಾಗಿ ಸುವರ್ಣದ ಲತೆಯಂತೊಪ್ಪುತ್ತಿರುವ ದೇಹಕೆ ಮಿಂಚಿನ ಬಳ್ಳಿಯ ಸಂಚರಿದು, ಎಳವಿಸಿಲನ್ನು ಉಡಿಸುವಳೋ ಎಂಬಂತೆ ಸರಿಗೆಗಳಿಂ ಮಿರುಗುತ್ತಿರುವ ಸೀರೆಯನ್ನುಡಿಸಿ ನೆರೆಯಂ ಸರಿದು ಆದೊಂದು ಪರಿಯಾಗಿ ಅಲಂಕರಿಸುತ್ತಿರಲು;

ವಾಸವದತ್ತಾದೇವಿಯು ಬಂದು ಸರ್ವಾಲಂಕಾರಭೂಷಿತಳಾಗಿರುವ ರತ್ನಾವಳಿಯಂ ನೋಡಿ ದೃಷ್ಟಿತಾಗುವುದೆಂದು ಒತ್ತಿನಲ್ಲಿ ಗುಂಪಾಗಿ ನಿಂತಿರುವ ಊಳಿಗದ ಹೆಣ್ಣುಗಳ ಮೇಲೆ ಕೆಂಡದಂತೆ ಕಣ್ಣುಗಳಂ ಕೆಂಪುಗೂಡಿಸುತ್ತಿರಲು;

ವತ್ಸರಾಜೇಂದ್ರನು ಭೂದೇವೇಂದ್ರನಂತೆ ಗಜಾರೋಹಣವಂ ಗೆಯ್ದು ಅರಮನೆಯ ಬಾಗಿಲವರೆಗೂ ಬಂದು ನಿಲ್ಲಲು;

ಅನಂತರದಲ್ಲಿ ವಿಕ್ರಮಬಾಹುರಾಯನು ಸಮಸ್ತವಿಭವದಿಂದೊಡಗೂಡಿ ಬಾಗಿಲವರೆಗೆ ಬಂದು, ವತ್ಸರಾಜನನ್ನು ಹಸ್ತಲಾಗವನ್ನು ಕೊಡುತ್ತ ವಿವಾಹಮಂಟಪವನ್ನು ಸೇರಿಸಿ, ಯಥಾವಿಧಿಯಾಗಿ ವಿವಾಹವನ್ನು ವಿರಚಿಸಿ, ಬ್ರಾಹ್ಮಣಶ್ರೇಷ್ಠರಿಗೂ ದೇಶಾಧಿಪತಿಗಳಿಗೂ ಸಹ ಮನ ದಣಿಯುವಂತೆ ಬಹುಮಾನವನ್ನಿಂಟುಮಾಡುತ್ತಿರಲು;

ವತ್ಸರಾಜನು ಶ್ರೀದೇವಿ ಭೂದೇವಿಯರಿಂದ ವಿರಾಜಿಸುವ ಮಹಾವಿಷ್ಣುವಿನಂತೆ ವಾಸವದತ್ತಾ ರತ್ನಾವಳಿಯರಿಂದೊಡಗೂಡಿ ಸುಖವಾಗಿರುತ್ತಿದ್ದನು.

ಎಂಬಲ್ಲಿಗೆ

ಚಂಡಕರಮಂಡಲೋಚ್ಚಂಡತೇಜಃಪ್ರಕಾಂಡ ಕಾಂಡಷಂಡಖಂಡಿತಾಖಂಡಶೌರ್ಯಮಂಡಿತಭಂಡನೋದ್ದಂಡಾರಿಮಂಡಲಕಂಡೂಲದೋರ್ದಂಡಪಾಂಡಿತ್ಯ ಪಾಂಡುರುಚಿಖಂಡಡಿಂಡೀರಪುಂಡರೀಕಪರಿಪಾಂಡುರಯಶಃಪಿಚಂಡಿಲಬ್ರಹ್ಮಾಂಡಭಾಂಡೋದ್ಭಟಕಾಲಕೂಟಕಪಟಪಟುನಿಶಾಟಕೂಟಪಾಟನಲಂಪಟ ನಿಟಿಲಪುಟಘಟಿತವಿಕಟಕೃಪೀಟಯೋನಿತ್ರುಟಿತಮೋಹಾಂಧಕಾರಚ್ಛಟಾವಿಘಟನಪಟು ನಟನ್ಮಹಾನಟಮುಕುಟತಟಪರ್ಯಟತ್ತಟಿನೀತಟಾಂತರಂಗರಿಂಗದಭಂಗೋತ್ತುಂಗತರಂಗ ಸಂಗರಭಂಗದ ಸಂಭ್ರಮೋಜ್ಜೃಂಭಮಾಣಗಂಭೀರವಾಗ್ಗುಂಭಸಂಭಾವಿತ ಗರನಗರವರನಿಲಯ ಚಂದ್ರಚೂಡ ಚರಣಾರವಿಂದಸೇವಾಮರಂದನಿರಂತರನಿಷೇವಣ ಸ್ವಯಂವೃತಕವಿತಾವಧೂರತ್ನ ರಾಜಾಧಿರಾಜ ಶ್ರೀಚಾಮರಾಜೇಂದ್ರಪುತ್ರಾತ್ರೇಯಸಗೋತ್ರಪವಿತ್ರಚರಿತ್ರ ಕೆಂಪನಂಜಮಾಂಬಾಗರ್ಭಕ್ಷೀರಪಾರಾವಾರರಾಕಾಸುಧಾಕರಾಯಮಾಣ ಶಂಖಚಕ್ರಮಕರಮತ್ಸ್ಯಶರಭಸಾಳ್ವ ಗಂಡಭೇರುಂಡಧರಣೀವರಾಹ ಹನುಮದ್ಗರುಡಕಂಠೀರವಾದ್ಯನೇಕಬಿರುದಾಂಕಿತ ಬಿರುದಂತೆಂಬರಗಂಡ ಪ್ರತಾಪಮಾರ್ತಂಡ ಶ್ರೀಚಾಮುಂಡಿಕಾವರಪ್ರಸಾದಲಬ್ಧಮಹೀಶೂರಮಹಾಸಂಸ್ಥಾನಮಧ್ಯವಿದ್ಯೋತಮಾನಹೃದ್ಯಾನವದ್ಯಕುಲಕ್ರಮಾಗತದಿವ್ಯಸಿಂಹಾಸನಾರೂಢೋಭಯಕವಿತಾಲಕ್ಷಣವಿಚಕ್ಷಣ ಶ್ರೀಕೃಷ್ಣರಾಜಕಂಠೀರವರಿಂ ಕರ್ಣಾಟಕಭಾಷೆಯಿಂ ಸರಸಜನಾನಂದಕರವಾಗಿ, ಲೋಕೋಪಕಾರಾರ್ಥವಾಗಿ, ನವರಸಭರಿತವಾಗಿ, ವಿರಚಿಸಲ್ಪಟ್ಟ ಶ್ರೀಕೃಷ್ಣರಾಜಸೂಕ್ತಿಮುಕ್ತಾವಳಿಯೆಂಬ ಗ್ರಂಥದೊಳ್

ವತ್ಸರಾಜನ ಕಥೆಯಲ್ಲಿ ರತ್ನಾವಳೀವಿವಾಹಂ ಸಮಾಪ್ತಂ.

ಇಪ್ಪತ್ತೆನಯ ಗುಚ್ಛಂ ಸಂಪೂರ್ಣಂ.

( ಪ್ರಥಮಭಾಗಂ ಸಂಪೂರ್ಣಂ. )